# ಕನ್ನಡ ಭಾಷಾ ಪಠ್ಯವಸ್ತು

## ಪ್ರಥಮ ಭಾಷೆ ಕನ್ನಡ

### ೧, ೨, ೩, ೪, ೫, ೬ ಮತ್ತು ೭ನೆಯ ತರಗತಿ

# ರಾಜ್ಯ ಪಠ್ಯವಸ್ತು ರಚನಾ ಸಮಿತಿ

## ಪ್ರಥಮ ಭಾಷೆ ಕನ್ನಡ (ಒಂದರಿಂದ ಏಳನೆಯ ತರಗತಿ)

ಅಧ್ಯಕ್ಷರು

**ಡಾ. ಸಿ.ಎಸ್. ರಾಮಚಂದ್ರ**

ಪ್ರವಾಚಕರು, ಭಾಷಾವಿಜ್ಞಾನ
ಭಾಷಾವಿಜ್ಞಾನ ಅಧ್ಯಯನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570 006

ಸದಸ್ಯ – ನಿರ್ವಾಹಕ

**ಆರ್. ಡಿ. ರವೀಂದ್ರ**

ಸಹಶಿಕ್ಷಕ, ಸರ್ಕಾರಿ ಸಂಯುಕ್ತ ಪ್ರೌಢಶಾಲೆ ಬಾಳಗಡಿ
ಕೊಪ್ಪ ತಾಲೂಕು
ಚಿಕ್ಕಮಗಳೂರು ಜಿಲ್ಲೆ – 577 126

**ಸದಸ್ಯರು**

**ಸುಶೀಲ**

ಸಮೂಹ ಸಂಪನ್ಮೂಲ ವ್ಯಕ್ತಿ
ಕಿರುಗಾವಲು ಕ್ಲಸ್ಟರ್, ಮಳವಳ್ಳಿ ತಾಲೂಕು
ಮಂಡ್ಯ ಜಿಲ್ಲೆ – 571 430

**ನೀಲಾವರ ಸುರೇಂದ್ರ ಅಡಿಗ**

ಕ್ಷೇತ್ರ ಸಂಪನ್ಮೂಲ ವ್ಯಕ್ತಿ
ಕ್ಷೇತ್ರ ಸಂಪನ್ಮೂಲ ಕೇಂದ್ರ
ಉಡುಪಿ – 576 101

**ಸಿ.ಬಿ. ವೀರಭದ್ರಾಚಾರಿ**

ಕನ್ನಡ ಭಾಷಾ ಅಧ್ಯಾಪಕರು
ಸರ್ಕಾರಿ ಪದವಿ ಪೂರ್ವಕಾಲೇಜು
ಮಾಲೂರು ತಾಲೂಕು, ಕೋಲಾರ ಜಿಲ್ಲೆ 563 130

**ವೀರೇಶ್ ಕೌಲಗಿ**

ಸಹ ಶಿಕ್ಷಕ
ಸರ್ಕಾರಿ ಪ್ರಾಥಮಿಕ ಶಾಲೆ ಮರ್ಲೆ
ಚಿಕ್ಕಮಗಳೂರು ತಾಲೂಕು – 577 101

**ವಿದ್ಯಾಲಕ್ಷ್ಮಿ ಎನ್. ಡಬೀರ್**

ಸಹಶಿಕ್ಷಕಿ
ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ
ಪೇಠ ಅಮ್ಮಾಪುರ, ಸುರಪುರ ತಾಲೂಕು, ಗುಲ್ಬರ್ಗ ಜಿಲ್ಲೆ

*ಸಂಯೋಜಕರು*

**ಶ್ರೀಮತಿ ಉಷಾ ಗಂಜಿಗಟ್ಟಿ**

ಹಿರಿಯ ಸಹಾಯಕ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು – 560 085

*ಸಹಾಯ*

**ವೆಂಕಟೇಶ್**

ತಾಂತ್ರಿಕ ಸಹಾಯಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು – 560 085

# ಪ್ರಥಮ ಭಾಷೆ – ಕನ್ನಡ ಪಠ್ಯವಸ್ತು

# ಒಂದನೇ ತರಗತಿ

- ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ
- ಅವಧಿ ಹಂಚಿಕೆ ಕೋಷ್ಠಕ
- ಸಾಮಾನ್ಯ ಸೂಚನೆ
- ಕ್ರೋಢೀಕೃತ ಸಾಮರ್ಥ್ಯ ಪಟ್ಟಿ
- ಸಾಮರ್ಥ್ಯವಾರು ಪಠ್ಯವಸ್ತು

## ಪ್ರಥಮ ಭಾಷೆ – ಕನ್ನಡ – ೧ ರಿಂದ ೪ನೇ ತರಗತಿ

**ಸಾಮಾನ್ಯ ಗುರಿ**

* ಮಗು ದೈನಂದಿನ ಜೀವನದಲ್ಲಿ ಬೇರೆ ಬೇರೆ ಸನ್ನಿವೇಶಗಳಲ್ಲಿ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಭಾಷಾ ಕೌಶಲಗಳಾದ ಆಲಿಸುವುದು. ಮಾತನಾಡುವುದು, ಓದುವುದು ಮತ್ತು ಬರೆಯುವುದು – ಇವನ್ನು ಸಮರ್ಥವಾಗಿ ಕಲಿಯಬೇಕು.

**ನಿರ್ದಿಷ್ಟ ಗುರಿ**

೧. ಮಗು ಅರ್ಥ ಮಾಡಿಕೊಂಡು ಗಮನವಿಟ್ಟು ಆಲಿಸುವುದು
೨. ಅರ್ಥಪೂರ್ಣ ಹಾಗೂ ಸ್ಪಷ್ಟ ಉಚ್ಚಾರಣೆಯೊಡನೆ ಸರಿಯಾಗಿ ಮಾತನಾಡುವುದು
೩. ತನ್ನ ಭಾವನೆ, ಆಲೋಚನೆ, ಅನಿಸಿಕೆಗಳನ್ನು ಸ್ವಂತ ಮಾತುಗಳಲ್ಲಿ ಅಭಿವ್ಯಕ್ತಪಡಿಸುವುದು
೪. ಕನ್ನಡದ ವರ್ಣಮಾಲೆಯ ಬಳಕೆಯಲ್ಲಿರುವ ಎಲ್ಲ ಅಕ್ಷರಗಳ ಪರಿಚಯ ಮತ್ತು ಅವುಗಳನ್ನು ಗುರುತಿಸುವ ಶಕ್ತಿಯನ್ನು ಪಡೆಯುವುದು
೫. ಗುಣಿತಾಕ್ಷರ, ಸಜಾತಿ ಮತ್ತು ವಿಜಾತಿ ಒತ್ತಕ್ಷರಗಳನ್ನು ಸರಿಯಾಗಿ ಅರಿತು ಬಳಸುವ ಸಾಮರ್ಥ್ಯ ಪಡೆಯುವುದು
೬. ನಿತ್ಯದ ವ್ಯವಹಾರದಲ್ಲಿ ಬಳಸುವ ಪದಗಳನ್ನು ಪರಿಚಯ ಮಾಡಿಕೊಳ್ಳುವುದು
೭. ಪದ, ಪದಸಮೂಹ, ಸರಳ ಸಣ್ಣವಾಕ್ಯ, ಚಿತ್ರಕಥೆ, ಸರಳಕಥೆ, ಪಠ್ಯಪುಸ್ತಕದ ಪಾಠ – ಇವನ್ನು ಅರ್ಥಮಾಡಿಕೊಂಡು ಓದುವುದು
೮. ಉಚ್ಚಾರ, ಒತ್ತು, ಸ್ವರಭಾರದೊಡನೆ ಸರಿಯಾಗಿ ಓದುವುದು
೯. ಅಂದವಾಗಿ, ಸ್ಪಷ್ಟವಾಗಿ, ಕ್ರಮಬದ್ಧವಾಗಿ ತಪ್ಪಿಲ್ಲದೆ ಬರೆಯುವುದು
೧೦. ಸರಳ ಶಿಶುಗೀತೆಗಳನ್ನು ಪ್ರಾಸಬದ್ಧವಾಗಿ ಅಭಿನಯದೊಡನೆ ಹಾಡುವುದು

## ಪಠ್ಯ ಬರೆಯಲು ಕೆಲವು ಸಾಮಾನ್ಯ ಸೂಚನೆ

೧. ಪ್ರಸ್ತುತ ಪಠ್ಯವಸ್ತು ತಯಾರಿಸುವಾಗ ರಾಜ್ಯಪಠ್ಯಕ್ರಮ ೨೦೦೧-೦೨ ಮತ್ತು ಎನ್.ಸಿ.ಎಫ್. ೨೦೦೫ ಇವೆರಡನ್ನೂ ಗಮನಿಸಿದೆ

೨. ಕಲಿಕೆಯ ಕನಿಷ್ಠಮಟ್ಟ ಆಧರಿಸಿ ಮೂಲ ಸಾಮರ್ಥ್ಯಗಳನ್ನು ಪ್ರಸಕ್ತ ಎನ್.ಸಿ.ಎಫ್. ೨೦೦೫ರ ನೆಲೆಯಲ್ಲಿ ಪರಿಷ್ಕರಿಸಿದೆ

೩. ಶಿಶುಕೇಂದ್ರಿತ, ಸಾಮರ್ಥ್ಯಾಧಾರಿತ, ಚಟುವಟಿಕೆ ಮತ್ತು ಸಂತಸದಾಯಕ ಸನ್ನಿವೇಶವನ್ನು ಆಧರಿಸಿ ಪಠ್ಯವಸ್ತುವನ್ನು ರೂಪಿಸಿದೆ

೪. ಮಗು ಶಾಲೆಯಲ್ಲಿ ಪಡೆದ ಜ್ಞಾನವನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಲು ಅನುವು ಮಾಡಿದೆ

೫. ಮಗುವಿನ ಮನೆಭಾಷೆ, ಸ್ಥಳೀಯ ಭಾಷೆಯನ್ನು ಯಥಾವತ್ತಾಗಿ ಸ್ವೀಕರಿಸಲು ಅವಕಾಶ ಮಾಡಿಕೊಟ್ಟಿದೆ

೬. ರಾಷ್ಟ್ರೀಯ ಮೌಲ್ಯ ಹಾಗೂ ಭಾವೈಕ್ಯತೆಯನ್ನು ಪಠ್ಯವಸ್ತುವಿನಲ್ಲಿ ಅಳವಡಿಸಿದೆ

೭. ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಜೋಡಿಸಿದೆ

೮. ಪಠ್ಯವಸ್ತುವಿನಲ್ಲಿಯೇ ಮೌಲ್ಯಮಾಪನ ಹಾಗೂ ಪಠ್ಯದ ವಿಸ್ತಾರ ಎಷ್ಟಿರಬೇಕೆಂದು ವಿವರಿಸಿದೆ

೯. ಅವಧಿಯನ್ನು ನಿರ್ಧರಿಸಿ ಅದಕ್ಕೆ ತಕ್ಕಂತೆ ಪಠ್ಯವಸ್ತುವನ್ನು ಸಿದ್ಧಪಡಿಸಿದೆ

೧೦. ಭಾಷಾ ಅಭಿವೃದ್ಧಿಯೊಂದಿಗೆ ಭಾಷಾಕೌಶಲಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಕಲಿಕೆಯ ನಿರೀಕ್ಷಿತ ಫಲಗಳನ್ನು ಪರಿಗಣಿಸಿದೆ

೧೧. ಭಾಷಾವಿಜ್ಞಾನದ ತಳಹದಿಯ ಮೇಲೆ ರೂಪಿತವಾಗಿದ್ದರೂ ಪ್ರಾದೇಶಿಕ ಭಾಷಾ ವೈವಿಧ್ಯವನ್ನು ಮೈಗೂಡಿಸಿಕೊಂಡಿದೆ

೧೨. ರಾಷ್ಟ್ರೀಯ ಶಿಕ್ಷಣನೀತಿ ೧೯೮೬ರಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಸನದ ಅಗತ್ಯತೆಯ ತತ್ತ್ವಗಳನ್ನಾಧರಿಸಿ ಪಠ್ಯವಸ್ತುವನ್ನು ತಯಾರಿಸಿದೆ

೧೩. ನಗರ ಮತ್ತು ಗ್ರಾಮಾಂತರ ಶೈಕ್ಷಣಿಕ ಅಂತರವನ್ನು ಕಡಿಮೆಗೊಳಿಸಲು ಹೆಚ್ಚು ಒತ್ತು ನೀಡಿದೆ. ಮಕ್ಕಳ ಮನೋವಿಕಾಸ ಭೂಮಿಕೆಗೂ ಸಮಾನ ಪ್ರಾತಿನಿಧ್ಯ ನೀಡಿದೆ

೧೪. ಪರಿಣಾಮಕಾರಿ ಕಲಿಕೆಯಲ್ಲಿ ಚಟುವಟಿಕೆ ಮತ್ತು ಇನ್ನಿತರ ಸಮಗ್ರ ವಿಧಾನಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

# ಅವಧಿ ಹಂಚಿಕೆ ಕೋಷ್ಟಕ

## ಸಾಮರ್ಥ್ಯಾಧಾರಿತ ಅವಧಿ ಕೋಷ್ಟಕ

| ಕ್ಷೇತ್ರ | | ನಿಗದಿಪಡಿಸಿದ ಅವಧಿ |
|---|---|---|
| ೧. | ಆಲಿಸುವುದು | ೧೦೭ |
| ೨. | ಮಾತನಾಡುವುದು | ೧೧೩ |
| ೩. | ಓದುವುದು | ೯೪ |
| ೪. | ಬರೆಯುವುದು | ೮೮ |
| | ಶಾಲಾ ವಾತಾವರಣಕ್ಕೆ ಹೊಂದಿಸಲು ಮಾಡುವ ಪೂರ್ವಸಿದ್ಧತಾ ಚಟುವಟಿಕೆ | ೫೩ |
| | ಒಟ್ಟು | ೪೫೫ |

## ಪಠ್ಯಪುಸ್ತಕ ರಚನಾಧಾರಿತ ಅವಧಿ ಕೋಷ್ಟಕ

| ಪಠ್ಯದ ವಿಭಾಗ | ಸಂಖ್ಯೆ | ನಿಗದಿಪಡಿಸಿದ ಅವಧಿ |
|---|---|---|
| ಸಾಮರ್ಥ್ಯಾಧಾರಿತ ಗದ್ಯಪಾಠ | ೧೦ | ೨೫೦ |
| ಸಾಮರ್ಥ್ಯಾಧಾರಿತ ಪದ್ಯಪಾಠ | ೮ | ೧೫೨ |
| ಶಾಲಾ ವಾತಾವರಣಕ್ಕೆ ಹೊಂದಿಸಲು ಮಾಡುವ ಪೂರ್ವಸಿದ್ಧತಾ ಚಟುವಟಿಕೆ | – | ೫೩ |
| ಒಟ್ಟು | | ೪೫೫ |

## ಪ್ರತಿ ಗದ್ಯ / ಪದ್ಯಕ್ಕೆ ಅವಧಿ ಹಂಚಿಕೆ

| ಕ್ರ.ಸಂ. | ಹಂತ | ಗದ್ಯ | ಪದ್ಯ |
|---|---|---|---|
| ೧. | ಪೂರ್ವಸಿದ್ಧತೆ / ಕಲಿಕಾಪೂರ್ವ | ೩ | ೨ |
| ೨. | ಕಲಿಕಾಂಶ | ೮ | ೬ |
| ೩. | ಅಭ್ಯಾಸ / ಬಳಕೆಯ | ೮ | ೬ |
| ೪. | ಮೌಲ್ಯಮಾಪನ | ೪ | ೩ |
| ೫. | ಪರಿಹಾರ ಬೋಧನೆ / ಪುನರ್‌ಬಲನ | ೨ | ೨ |
| | ಒಟ್ಟು | ೨೫ | ೧೯ |

## ಪಠ್ಯ ಬರೆಯಲು ಕೆಲವು ಸಾಮಾನ್ಯ ಸೂಚನೆ

೧. ಗದ್ಯಪಾಠ ೧೦ ಇರಲಿ

೨. ಪದ್ಯಪಾಠ ೦೮ ಇರಲಿ

೩. ಗದ್ಯಪಾಠ ಮಗುವಿನ ಸುತ್ತಮುತ್ತಲಿನ ಸನ್ನಿವೇಶಕ್ಕೆ ಅನುಗುಣವಾಗಿದ್ದು, ಸರಳ ಪರಿಚಿತ ಪದಗಳನ್ನು ಒಳಗೊಂಡಿರಬೇಕು

೪. ಜನಪ್ರಿಯ ಸರಳ ಚಿತ್ರಕಥೆ, ನೀತಿಪ್ರಧಾನ ಕಥೆ, ಕುಟುಂಬ ಮತ್ತು ಶಾಲಾ ಸನ್ನಿವೇಶದಲ್ಲಿ ನಡೆಯುವ ಸರಳ ಸಂಭಾಷಣೆಗಳ ಗದ್ಯಗಳಿರಬೇಕು

೫. ಚಿತ್ರಸಹಿತ ಪದಗಳು ಹೆಚ್ಚಾಗಿದ್ದು ವರ್ಣ ಸಹಿತವಾಗಿರಬೇಕು

೬. ಹೆಚ್ಚು ಬಳಕೆಯಲ್ಲಿರುವ ಜನಪ್ರಿಯ ಪ್ರಾಸ, ಗೀತೆ ಮತ್ತು ಹಾಡುಗಳನ್ನು ಪದ್ಯಗಳಾಗಿ ಅಳವಡಿಸಬೇಕು. ಇವು ೮ ರಿಂದ ೧೨ ಸಾಲಿನೊಳಗೆ ಇರಬೇಕು

೭. ಪ್ರತಿ ಗದ್ಯ / ಪದ್ಯ ಪಾಠಗಳಿಗೆ ನೀಡುವ ಅಭ್ಯಾಸ ಚಟುವಟಿಕೆಗಳು ಸಾಮರ್ಥ್ಯಗಳ ಬೆಳವಣಿಗೆಗೂ ಪೂರಕವಾಗಿರಬೇಕು

೮. ಪ್ರತಿ ಗದ್ಯ / ಪದ್ಯದ ಅಭ್ಯಾಸ ಚಟುವಟಿಕೆಗಳು ಹಿಂದಿನ ಸಾಮರ್ಥ್ಯಗಳ ಪುನರ್ಬಲನಕ್ಕಾಗಿ ಕೆಲವು ಪೂರಕ ಚಟುವಟಿಕೆಗಳನ್ನು ರೂಪಿಸಬೇಕು

೯. ಮೌಲ್ಯಮಾಪನ ಚಟುವಟಿಕೆಗಳ ಬಗ್ಗೆ ಪಠ್ಯಪುಸ್ತಕಗಳಲ್ಲಿ ಸೂಚನೆ ಇರಬೇಕು

**ಕ್ರೋಢೀಕೃತ ಸಾಮರ್ಥ್ಯ ವಿವರ ಪಟ್ಟಿ** **ತರಗತಿ : ೧**

| ಆಲಿಸುವುದು | ಮಾತನಾಡುವುದು | ಓದುವುದು | ಬರೆಯುವುದು |
|---|---|---|---|
| ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ, ಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವುದು. | ಸರಳ ವಾಕ್ಯಗಳನ್ನು ಯಥಾವತ್ತಾಗಿ ಉಚ್ಚರಿಸುವುದು. | ವರ್ಣಮಾಲೆಯ ಅಕ್ಷರ, ಗುಣಿತಾಕ್ಷರಗಳನ್ನು ಬಿಡಿ ಮತ್ತು ಅನುಕ್ರಮವಾಗಿ ಗುರುತಿಸುವುದು. | ಸ್ವರ, ವ್ಯಂಜನ ಮತ್ತು ಗುಣಿತಾಕ್ಷರ ಹಾಗೂ ಒತ್ತಕ್ಷರಗಳನ್ನು ನಕಲು ಮಾಡುವುದು. |
| ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವುದು. | ಸರಳ ಪ್ರಾಸ, ಪದ್ಯ ಮತ್ತು ಹಾಡುಗಳನ್ನು ಹಾವಭಾವ, ಅಭಿನಯದ ಮೂಲಕ ಸಾಮೂಹಿಕವಾಗಿ ಹಾಡುವುದು. | ಕಪ್ಪು ಹಲಗೆ ಮತ್ತು ಮಿಂಚು ಪಟ್ಟಿಗಳ ಮೇಲೆ ಬರೆದ ಕೈಬರೆಹ ಹಾಗೂ ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು. | ಉಕ್ತಲೇಖನದ ಮೂಲಕ ವರ್ಣಮಾಲೆ ಮತ್ತು ಗುಣಿತಾಕ್ಷರಗಳನ್ನು ಬರೆಯುವುದು. |
| ಪರಿಚಿತ ಸನ್ನಿವೇಶಗಳ ಸೂಚನೆ ಮತ್ತು ಮೌಖಿಕ ಬೇಡಿಕೆಗಳನ್ನು ಅರ್ಥ ಮಾಡಿಕೊಳ್ಳುವುದು. | ಸರಳ ಪ್ರಶ್ನೆಗಳಿಗೆ ಹೌದು / ಅಲ್ಲ ಎನ್ನುವುದರ ಮೂಲಕ ಉತ್ತರಿಸುವುದು. | ಮೂರು ಅಕ್ಷರಗಳಿಗೆ ಮೀರದ ಸರಳ ಹಾಗೂ ತಿಳಿದ ಪದಗಳನ್ನು ಗಟ್ಟಿಯಾಗಿ ಓದುವುದು. | ಪರಿಚಿತ ಸರಳ ಪದ ಮತ್ತು ವಾಕ್ಯಗಳನ್ನು ಬರೆಯುವುದು. |
| ಪಠ್ಯದ ಸರಳ ಮಾಹಿತಿಯನ್ನು ನೆನಪಿಸಿಕೊಳ್ಳುವುದು. | ಪ್ರಶ್ನಿಸುವ ಕೌಶಲ ಬೆಳೆಸಿಕೊಳ್ಳುವುದು. | ಸುಮಾರು ೧೫೦೦ ಪದಗಳನ್ನು ಓದಿ ಗ್ರಹಿಸುವುದು. | ಪದಗಳ ಅಂತ್ಯಾಕ್ಷರದ ಆಧಾರದಿಂದ ಪದಗಳ ನಡುವೆ ಇರುವ ಸಾಮ್ಯತೆಯನ್ನು ಅರಿತು ಬರೆಯುವುದು. |
| ಆಲಿಸಿದ ನಂತರ ಯಾರು ? ಯಾವಾಗ? ಮತ್ತು ಎಲ್ಲಿ ?– ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವುದು. | ವಿನಯಪೂರ್ವಕವಾಗಿ ಮಾತನಾಡುವುದು. | | |

| ಆಲಿಸುವುದು | ಸಾಮರ್ಥ್ಯವಾರು ಪಠ್ಯವಸ್ತು | | | | |
|---|---|---|---|---|---|
| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
| 1 | * ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ, ಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜತೆಗೆ ಅರ್ಥಮಾಡಿಕೊಳ್ಳುವುದು. | * ಆಲಿಸುವ ಕೌಶಲವನ್ನು ಕ್ರಮಬದ್ಧಗೊಳಿಸುವುದು.<br>* ಪ್ರಾಸ ಮತ್ತು ಗೀತೆಗಳನ್ನು ಪುನರುಚ್ಚರಿಸುವುದು.<br>* ಸರಳ, ಚಿಕ್ಕ ಕಥೆಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದು. | * ಹೆಚ್ಚು ಬಳಕೆಯಲ್ಲಿರುವ ಜನಪ್ರಿಯ ಪ್ರಾಸಯುಕ್ತ ಗೀತೆ.<br>* ಪದ್ಯಪಾಠ | * ಪ್ರಾಸಗೀತೆಗಳನ್ನು ಹಾವ ಭಾವ ಅಭಿನಯದೊಂದಿಗೆ ಹೇಳಿಕೊಡುವುದು.<br>* ಮಕ್ಕಳಿಗೆ ತಿಳಿದ ಪ್ರಾಸ ಮತ್ತು ಗೀತೆಗಳನ್ನು ರಾಗವಾಗಿ ಹೇಳಿಕೊಡುವುದು.<br>* ಸರಳ, ಚಿಕ್ಕಕಥೆಗಳನ್ನು ಹೇಳಿಕೊಡುವುದು. | * ಪ್ರಾಸ ಮತ್ತು ಗೀತೆಗಳನ್ನು ಮಕ್ಕಳಿಂದ ಹೇಳಿಸುವುದು.<br>* ಮಕ್ಕಳಿಗೆ ತಿಳಿದಿರುವ ಕಥೆಗಳನ್ನು ಹೇಳಿಸುವುದು.<br>* ಪ್ರಾಸ, ಗೀತೆ, ಕಥೆಗಳಿಗೆ ಅನುಗುಣವಾಗಿ ಮೌಖಿಕ ಪ್ರಶ್ನೆ ಕೇಳಿ ಉತ್ತರ ಪಡೆಯುವುದು. **(ಅವಧಿ : 19)** |
| 2. | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವುದು. | * ಏಕಕಾಲದಲ್ಲಿ ಇಬ್ಬರು ಮಾತನಾಡುವುದನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>* ಸಂಭಾಷಣೆಯಲ್ಲಿನ ವಿಷಯವನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>* ಒಂದು ವಿಷಯದ ಬಗ್ಗೆ ನಡೆಯುವ ಸರಳ ಸಂವಾದವನ್ನು ಅರ್ಥೈಸಿಕೊಳ್ಳುವುದು. | * ಕುಟುಂಬದಲ್ಲಿ ನಡೆಯುವ ಚಿಕ್ಕ ಸಂಭಾಷಣೆಯಿರುವ ಗದ್ಯ.<br>ಉದಾ :<br>ಎ. ತಾಯಿ – ಮಗು<br>ಬಿ. ಅಜ್ಜಿ – ಮೊಮ್ಮಗು<br>ಸಿ. ಅಣ್ಣ – ತಂಗಿ<br>* ಗದ್ಯಪಾಠ | * ಸಂಭಾಷಣೆಯನ್ನು ಪಾತ್ರಕ್ಕೆ ಪೂರಕವಾಗಿ ಮಾತನಾಡಿ, ಆಲಿಸಲು ಅವಕಾಶ ಕಲ್ಪಿಸುವುದು.<br>* ಮಕ್ಕಳಿಂದಲೇ ಸಂಭಾಷಣೆಯನ್ನು ಮಾಡಿಸುವುದು.<br>* ಸುತ್ತಮುತ್ತ ನಡೆಯುವ ಬೇರೆ ಬೇರೆ ವಿಷಯಗಳ ಬಗ್ಗೆ ಸಂಭಾಷಣೆ ಮತ್ತು ಸಂವಾದಗಳನ್ನು ಮಕ್ಕಳಿಂದ ಮಾಡಿಸಿ ಉಳಿದ ಮಕ್ಕಳು ಆಲಿಸುವಂತೆ ಮಾಡುವುದು.<br>ಉದಾ : ವೈದ್ಯ – ರೋಗಿ<br>ವ್ಯಾಪಾರಿ–ಕೊಂಡುಕೊಳ್ಳುವವ (ಗ್ರಾಹಕ) | * ಆಲಿಸಿದ ಸಂಭಾಷಣೆಯ ಬಗ್ಗೆ ಮೌಖಿಕ ಪ್ರಶ್ನೆಗಳನ್ನು ಕೇಳುವುದು.<br>* ಮಕ್ಕಳಿಂದಲೇ ಸಂಭಾಷಣೆಯನ್ನು ಮಾಡಿಸುವುದು.<br>* ಮಗುವಿನ ಅನುಭವಕ್ಕೆ ಬಂದಿರುವ ಸರಳ, ಚಿಕ್ಕ ಸಂಭಾಷಣೆಯನ್ನು ಮಾಡಿಸುವುದು.<br>**(ಅವಧಿ : 25)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಪರಿಚಿತ ಸನ್ನಿವೇಶ ಸೂಚನೆ ಮತ್ತು ಮೌಖಿಕ ಬೇಡಿಕೆಗಳನ್ನು ಅರ್ಥಮಾಡಿಕೊಳ್ಳುವುದು. | * ಸರಳ ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.<br>* ಸೂಚನೆ ಮತ್ತು ಬೇಡಿಕೆಗಳನ್ನು ಆಲಿಸಿ ಅರ್ಥಮಾಡಿಕೊಂಡು ಪ್ರತಿಕ್ರಿಯಿಸುವುದು. | * ಹೆಚ್ಚು ಪ್ರಚಲಿತವಿರುವ ಆಟದ ಬಗ್ಗೆ ಸರಳ, ಚಿಕ್ಕ ಗದ್ಯ.<br>ಉದಾ: ಕಣ್ಣುಮುಚ್ಚಾಲೆ ಆಟ, ಟೋಪಿ ಆಟ<br>* ಗದ್ಯಪಾಠ | * ಪಠ್ಯದಲ್ಲಿ ನೀಡಲಾದ ಸೂಚನೆ ಮತ್ತು ಬೇಡಿಕೆಗಳನ್ನು ಅರ್ಥೈಸುವುದು.<br>* ಪರಿಚಯವಿರುವ ಪ್ರಾದೇಶಿಕ ಆಟಗಳನ್ನು ಆಡಲು ಸೂಚನೆ ನೀಡುವುದು.<br>* ದೈನಂದಿನ ಶಾಲಾ ವಾತಾವರಣದಲ್ಲಿ ಸೂಚನೆಗಳನ್ನು ನೀಡುವುದು.<br>* ಶಾಬ್ದಿಕ ಮತ್ತು ಆಂಗಿಕ ಸೂಚನೆಗಳನ್ನು ನೀಡುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಶಾಲಾ ವಾತಾವರಣದಲ್ಲಿ ನೀಡುವ ಸೂಚನೆಯನ್ನು ಪಾಲಿಸುವುದನ್ನು ಗಮನಿಸುವುದು.<br>**(ಅವಧಿ : 25)** |
| 4. | * ಪಠ್ಯದಲ್ಲಿನ ಸರಳ ಮಾಹಿತಿಯನ್ನು ನೆನಪಿಸಿಕೊಳ್ಳುವುದು. | * ಹೇಳಿದ ಪಠ್ಯದಲ್ಲಿರುವ ಹೊಸ ಅಂಶವನ್ನು ಗ್ರಹಿಸುವುದು.<br>* ಪಠ್ಯದಲ್ಲಿ ಇಷ್ಟವಾದ ಅಂಶವನ್ನು ಅಭಿವ್ಯಕ್ತಗೊಳಿಸುವುದು. | * ಪರಿಚಿತ ಕಥೆಯನ್ನು ಆಧರಿಸಿದ ಪದ್ಯ<br>ಉದಾ :<br>ಮೂರ್ಖ ಆಮೆ<br>ನರಿ ಮತ್ತು ದ್ರಾಕ್ಷಿ<br>* ಪದ್ಯಪಾಠ | * ಪಠ್ಯವನ್ನು ಹಾವಭಾವ, ಅಭಿನಯದೊಂದಿಗೆ ರಾಗವಾಗಿ ಹೇಳಿಕೊಡುವುದು.<br>* ಪದ್ಯದ ಸಾರಾಂಶವನ್ನು ಸರಳ ವಾಕ್ಯಗಳಲ್ಲಿ ಅರ್ಥೈಸುವುದು.<br>* ಸರಳ ಹಾಗೂ ಚಿಕ್ಕ ಕಥೆಗಳನ್ನು ಹೇಳುವುದು.<br>* ಜನಪ್ರಿಯ ಶಿಶುಪ್ರಾಸ ಹಾಗೂ ಗೀತೆಗಳನ್ನು ಹೇಳಿಕೊಡುವುದು | * ಪದ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಹೇಳಿದ ಕಥೆ, ಶಿಶುಪ್ರಾಸ, ಗೀತೆಗಳ ಬಗ್ಗೆ ಮೌಖಿಕ ಪ್ರಶ್ನೆ ಕೇಳುವುದು.<br>**(ಅವಧಿ : 19)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 5. | * ಆಲಿಸಿದ ನಂತರ ಯಾರು? ಯಾವಾಗ? ಮತ್ತು ಎಲ್ಲಿ? – ಪ್ರಶ್ನೆಗಳಿಗೆ ಉತ್ತರಿಸುವುದು. | * ಪದ್ಯ / ಗದ್ಯವನ್ನು ಆಲಿಸಿದ ನಂತರ ಮುಖ್ಯಾಂಶ ಗಳನ್ನು ಗ್ರಹಿಸಿ ಕೇಳುವ ಸರಳ ಪ್ರಶ್ನೆಗಳಿಗೆ ಸ್ಮರಿಸಿ ಉತ್ತರಿಸುವುದು.<br>* ಯಾವುದೇ ಸರಳ ವಿಷಯ ವನ್ನು ಆಲಿಸಿದ ನಂತರ ಯಾರು? ಯಾವಾಗ ? ಎಲ್ಲಿ? – ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸುವುದು. | * ವ್ಯಕ್ತಿ / ಪ್ರಾಣಿ / ಪಕ್ಷಿ ಕುರಿತಾದ ಸರಳ ಪದ್ಯ<br>* ಸಾಮರ್ಥ್ಯಕ್ಕೆ ಪೂರಕವಾಗಿ ಪ್ರಶ್ನೆಗಳಿಗೆ ಉತ್ತರ ಬರುವ ಹಾಗೆ ವಿಷಯವನ್ನೊಳ ಗೊಂಡ ಪದ್ಯ.<br>* ಪದ್ಯಪಾಠ | * ಪದ್ಯವನ್ನು ರಾಗವಾಗಿ ಅಭಿನಯದೊಂದಿಗೆ ಹೇಳಿ ಕೊಡುವುದು.<br>* ಪದ್ಯದ ಅರ್ಥವನ್ನು ಸರಳ ವಾಕ್ಯಗಳಲ್ಲಿ ಹೇಳಿ ಕೊಡುವುದು.<br>* ಪದ್ಯಕ್ಕೆ ಪೂರಕವಾಗಿ ಯಾರು? ಯಾವಾಗ ಎಲ್ಲಿ? ಪ್ರಶ್ನೆಗಳಿಗೆ ಉತ್ತರಿಸುವ ಕೌಶಲವನ್ನು ಬೆಳೆಸುವುದು.<br>* ಸುತ್ತಮುತ್ತಲಿನ ಹಾಗೂ ಕೌಟುಂಬಿಕ ವಿಷಯಗಳ ಬಗ್ಗೆ ಪ್ರಶ್ನೆ ಕೇಳುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು<br>* ಬೇರೆ ಬೇರೆ ಪದ್ಯ ಮತ್ತು ಗದ್ಯಗಳಿಗೆ ಸಂಬಂಧಿಸಿದಂತೆ ಯಾರು? ಯಾವಾಗ? ಎಲ್ಲಿ? – ಪ್ರಶ್ನೆಗಳಿಗೆ ಉತ್ತರ ಪಡೆಯುವುದು.<br><br>**(ಅವಧಿ : 19)** |

**ಮಾತನಾಡುವುದು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ಸರಳ ವಾಕ್ಯಗಳನ್ನು ಯಥಾವತ್ತಾಗಿ ಪುನರುಚ್ಚರಿಸುವುದು. | * ಆಲಿಸಿದ ಸರಳ ವಾಕ್ಯಗಳನ್ನು ಪುನರುಚ್ಚರಿಸುವ ಕೌಶಲ ಬೆಳೆಸುವುದು.<br>* ಮಾತನಾಡಲು ಪ್ರೇರೇಪಿಸುವುದು.<br>* ಸ್ವತಂತ್ರವಾಗಿ ಸರಳ ವಾಕ್ಯಗಳಲ್ಲಿ ಹೇಳುವ ಕೌಶಲ ಬೆಳೆಸುವುದು. | * ಹೆಚ್ಚು ಒತ್ತಕ್ಷರಗಳಿಲ್ಲದ ಪ್ರತಿ ಸಾಲು ಅರ್ಥಕೊಡುವ ಸರಳ ಪದ್ಯ.<br>**ಉದಾ :**<br>ಅಣ್ಣನು ಮಾಡಿದ ಗಾಳಿಪಟ<br>* ಪದ್ಯ ಚಿಕ್ಕದಾಗಿರಲಿ<br>* ಪದ್ಯಪಾಠ | * ಪದ್ಯದ ಸಾಲುಗಳನ್ನು ಸ್ಪಷ್ಟವಾಗಿ ಹೇಳಿಕೊಡುವುದು.<br>* ಪ್ರತಿ ಮಗುವಿನಿಂದ ಪದ್ಯದ ಪ್ರತಿ ಸಾಲನ್ನು ಹೇಳಿಸುವುದು.<br>* ಕುಟುಂಬದಲ್ಲಿ ಇರುವವರ ಮತ್ತು ವಸ್ತುಗಳ ಬಗ್ಗೆ ಪೂರ್ಣ ಸರಳ ವಾಕ್ಯಗಳಲ್ಲಿ ಹೇಳಿಕೊಡುವುದು.<br>ಉದಾ :<br>1. ನಮ್ಮ ಮನೆಯಲ್ಲಿ ನಾಯಿ ಇದೆ.<br>2. ನಮ್ಮ ಅಪ್ಪ ಗದ್ದೆಗೆ ಹೋಗಿದ್ದಾರೆ. | * ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ತನ್ನ ಸುತ್ತಮುತ್ತಲಿನ, ಕುಟುಂಬದಲ್ಲಿರುವವರ, ವಸ್ತುಗಳ ಬಗ್ಗೆ (ಹೇಳಿಸುವುದರ ಮೂಲಕ) ಸರಳ ವಾಕ್ಯಗಳನ್ನು ಹೇಳಿಸಿ ಮೌಲ್ಯಮಾಪನ ಮಾಡುವುದು.<br>**(ಅವಧಿ : 19)** |
| 2. | * ಸರಳ ಪ್ರಾಸ, ಪದ್ಯ ಮತ್ತು ಹಾಡುಗಳನ್ನು ಹಾವಭಾವ, ಅಭಿನಯದ ಮೂಲಕ ಸಾಮೂಹಿಕವಾಗಿ ಹಾಡುವುದು. | * ಪ್ರಾಸ, ಪದ್ಯ, ಹಾಡುಗಳನ್ನು ಸಾಮೂಹಿಕವಾಗಿ ಹೇಳುವುದರ ಮೂಲಕ ಹಿಂಜರಿಕೆ ಹೋಗಲಾಡಿಸುವುದು.<br>* ಹಾವಭಾವ, ಅಭಿನಯದೊಂದಿಗೆ ಸಾಮೂಹಿಕ | * ಸರಳ ಹಾಗೂ ಜನಪ್ರಿಯವಾದ ಒಂದು ಚಿಕ್ಕ ಜನಪದ ಗೀತೆ (ಲಭ್ಯವಿದ್ದಲ್ಲಿ) ಅಥವಾ<br>* ಪ್ರತಿ ಸಾಲಿನಲ್ಲಿ 2–3 ಪದಗಳಿರುವಂತಹ ಪ್ರಾಸಯುಕ್ತ ಗೀತೆ<br>* ಪದ್ಯಪಾಠ | * ಪದ್ಯವನ್ನು ಹಾವಭಾವ ಅಭಿನಯದೊಂದಿಗೆ ರಾಗವಾಗಿ ಹೇಳಿಕೊಡುವುದು.<br>* ಪ್ರಾದೇಶಿಕವಾಗಿ ಪ್ರಚಲಿತವಿರುವ ಶಿಶುಪ್ರಾಸಗಳನ್ನು ಅಭಿನಯದೊಂದಿಗೆ | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಮಕ್ಕಳಿಗೆ ತಿಳಿದಂತಹ ಪ್ರಾಸ, ಪದ್ಯ ಮತ್ತು ಹಾಡುಗಳನ್ನು ಹೇಳಿಸುವುದು. |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | | ಮತ್ತು ವೈಯಕ್ತಿಕವಾಗಿ ಪ್ರಾಸ ಹಾಗೂ ಪದ್ಯ, ಹಾಡುಗಳನ್ನು ಹೇಳಿಸಿ ನೆನಪಿಟ್ಟುಕೊಳ್ಳುವಂತೆ ಮಾಡುವುದು.<br>* ಸರಳ ಪ್ರಾಸ, ಪದ್ಯ ಮತ್ತು ಹಾಡುಗಳನ್ನು ಹಾಡುವುದರ ಮೂಲಕ ಆನಂದವನ್ನುಂಟುಮಾಡುವುದು. | | ಸಾಮೂಹಿಕವಾಗಿ ಹೇಳಿಸುವುದು. | * ವೈಯುಕ್ತಿಕ ಹಾಗೂ ಸಾಮೂಹಿಕವಾಗಿ ಹೇಳಿಸುವುದು.<br>**(ಅವಧಿ : 19)** |
| 3. | * ಸರಳ ಪ್ರಶ್ನೆಗಳಿಗೆ ಹೌದು/ಅಲ್ಲ ಎನ್ನುವುದರ ಮೂಲಕ ಉತ್ತರಿಸುವುದು. | * ಸರಳ ಪ್ರಶ್ನೆಗಳನ್ನು ಆಲಿಸಿ ಅರ್ಥೈಸಿಕೊಳ್ಳುವುದು.<br>* ಪಠ್ಯದಲ್ಲಿ ಕೇಳಿದ ಪ್ರಶ್ನೆಗಳನ್ನು ಗ್ರಹಿಸಿ ಹೌದು/ಅಲ್ಲ ಉತ್ತರವನ್ನು ನೀಡುವುದು.<br>* ಕೇಳಿದ ಪ್ರಶ್ನೆಗಳು ಸರಿ ಇಲ್ಲವೇ ತಪ್ಪಾ ಎಂದು ಆಲೋಚಿಸುವಂತೆ ಮಾಡುವುದು.<br>* ದೈನಂದಿನ ಜೀವನದಲ್ಲಿ ಕೇಳುವ ಸರಳ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉತ್ತರಿಸುವ ಕೌಶಲ ಬೆಳೆಸುವುದು. | * ನೀತಿ ಪ್ರಧಾನ ಸರಳ ಚಿಕ್ಕ ಕಥೆಯಿರುವ ಗದ್ಯ.<br>* ಗದ್ಯಪಾಠ | * ಪಠ್ಯದಲ್ಲಿ ಕೊಟ್ಟಿರುವ ಕಥೆಯನ್ನು ಅರ್ಥೈಸುವುದು.<br>* ಮುಖ್ಯಾಂಶಗಳಿಗೆ ಪೂರಕವಾಗಿ ಹೌದು/ಅಲ್ಲ – ಉತ್ತರ ಬರುವ ಹಾಗೆ ಪ್ರಶ್ನೆಗಳನ್ನು ರೂಪಿಸಿ ವೈಯಕ್ತಿಕವಾಗಿ ಪ್ರಶ್ನಿಸುವುದು.<br>* ಇತರೆ ಗದ್ಯ ಮತ್ತು ಪದ್ಯಗಳಲ್ಲಿಯೂ ಇಂತಹ ಪ್ರಶ್ನೆಗಳನ್ನು ಕೇಳುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಸುತ್ತಮುತ್ತಲಿನ ಪರಿಸರಕ್ಕೆ ಪೂರಕವಾಗಿ ಸರಳ ಪ್ರಶ್ನೆಗಳನ್ನು ಕೇಳುವುದು.<br>* ನೀತಿ ಪ್ರಧಾನ ಕಥೆ ಪುಸ್ತಕಗಳನ್ನು ಒದಗಿಸಿ ಓದಲು ಹೇಳಿ, ತರಗತಿಯಲ್ಲಿ ಓದಿದ ಕಥೆ ಹೇಳಲು ತಿಳಿಸುವುದು.<br>**(ಅವಧಿ : 25)1** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **4.** | * ಪ್ರಶ್ನಿಸುವ ಕೌಶಲ ಬೆಳೆಸಿಕೊಳ್ಳುವುದು. | * ಮಕ್ಕಳಲ್ಲಿ ಪ್ರಶ್ನೆ ಕೇಳಿ ಉತ್ತರ ಪಡೆಯುವ ಕೌಶಲ ಬೆಳೆಸುವುದು.<br>* ಪ್ರಶ್ನೆ ಕೇಳುವ ಮೂಲಕ ತನ್ನ ಸುತ್ತಮುತ್ತಲಿನ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು. | * ಮಗುವಿನ ಅನುಭವಕ್ಕೆ ಬರುವಂತಹ ದೇಹದ ಸ್ವಚ್ಛತೆ ಕುರಿತಾದ ಸಂಭಾಷಣೆಯಿರುವ ಗದ್ಯ.<br>* ಮಗು ಪ್ರಶ್ನೆ ಕೇಳಿ ಉತ್ತರ ಬರುವ ಹಾಗೆ ಸಂಭಾಷಣೆ ಇರಲಿ. ಇದು ಚಿಕ್ಕದಾಗಿದ್ದು, ಸರಳ ವಾಕ್ಯಗಳಿಂದ ಕೂಡಿರಬೇಕು.<br>* ಗದ್ಯಪಾಠ | * ಪಠ್ಯ ವಿಷಯದಲ್ಲಿರುವ ಮುಖ್ಯ ವಿಷಯವನ್ನು ಅರ್ಥೈಸುವುದು.<br>* ಪಠ್ಯದಲ್ಲಿ, ಮಗು ಪ್ರಶ್ನಿಸುವ ಹಾಗೆ ಪ್ರತಿ ವಿದ್ಯಾರ್ಥಿ ಪ್ರಶ್ನೆ ಕೇಳುವ ಹಾಗೆ ಕಥೆ ಹೇಳಿ ಪ್ರಶ್ನಿಸಲು ತಿಳಿಸುವುದು.<br>* ಸುತ್ತಮುತ್ತಲಿನ ವಿಷಯಗಳ ಬಗ್ಗೆ ಪ್ರಶ್ನೆ ಕೇಳುವ ಹಾಗೆ ಪ್ರೇರಣೆ ನೀಡುವುದು. | * ಪಠ್ಯಾಧಾರಿತ ಮೌಲ್ಯ ಮಾಪನ ಮಾಡುವುದು.<br>* ಪ್ರಶ್ನೆ ಕೇಳುವ ರೀತಿಯನ್ನು ಗಮನಿಸುವುದು.<br>* ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಶ್ನೆ ಮಾಡುವುದನ್ನು ಅವಲೋಕಿಸುವುದು.<br>**(ಅವಧಿ : 25)** |
| **5.** | * ವಿನಯಪೂರ್ವಕವಾಗಿ ಮಾತನಾಡುವುದು. | * ವಿನಯದಿಂದ ಮಾತ ನಾಡುವ ಉಪಯೋಗ ವನ್ನು ಅರಿಯುವುದು.<br>* ಗುರು ಹಿರಿಯರೊಡನೆ ಮಾತನಾಡುವಾಗ ಗೌರವ ಸೂಚಕ ಪದಗಳನ್ನು ಬಳಸುವಂತೆ ಮಾಡುವುದು.<br>* ಸ್ನೇಹಿತರೊಡನೆ ಸೌಜನ್ಯ ದಿಂದ ವರ್ತಿಸುವುದರ ಅನುಕೂಲಗಳನ್ನು ತಿಳಿಸು ವುದು. | * ನೀತಿ ಪ್ರಧಾನ, ಮಾಹಿತಿ ಸಂಗ್ರಹಿಸುವ ಹಾಗೆ ಇರುವ ಚಿಕ್ಕ ಸಂಭಾಷಣೆ.<br>* ಸಂಭಾಷಣೆಯಲ್ಲಿ 3–4 ಪಾತ್ರಗಳಿರಲಿ.<br>* ನೆರೆಹೊರೆಯವರೊಡನೆ ಮಾತನಾಡುವಂತೆ ಸಂಭಾಷಣೆ ಇರಲಿ.<br>* ಗದ್ಯಪಾಠ | * ಪಠ್ಯದಲ್ಲಿ ವಿನಯದಿಂದ ಮಾತನಾಡಿರುವ ಅಂಶಗ ಳನ್ನು ಅರ್ಥೈಸುವುದು.<br>* ಶಾಲೆ ಮತ್ತು ಮನೆಯಲ್ಲಿ ಗುರುಹಿರಿಯರೊಡನೆ ಮಾತನಾಡುವಾಗ ಬಳಸುವ ಪದಗಳ ಬಗ್ಗೆ ತಿಳಿಸುವುದು.<br>* ಸ್ನೇಹಿತರೊಡನೆ ಮಾತ ನಾಡುವಾಗ ಬಳಸುವ ಪದ ಸೂಚಕಗಳನ್ನು ಪರಿಚಯಿ ಸುವುದು. | * ವಿದ್ಯಾರ್ಥಿ ಶಿಕ್ಷಕರೊಡನೆ, ಹಾಗೂ ಸಹಪಾಠಿಗಳೊಡನೆ ಮಾತನಾಡುವುದನ್ನು ಗಮನಿಸು ವುದು.<br>* ದೈನಂದಿನ ಶಾಲಾ ಸನ್ನಿವೇಶ ದಲ್ಲಿ ವಿದ್ಯಾರ್ಥಿ ನಡೆದು ಕೊಳ್ಳುವ ರೀತಿಯನ್ನು ಅವಲೋಕಿಸುವುದು.<br>**(ಅವಧಿ : 25)** |

## ಓದುವುದು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ವರ್ಣಮಾಲೆಯ ಅಕ್ಷರ, ಗುಣಿತಾಕ್ಷರಗಳನ್ನು ಬಿಡಿ ಬಿಡಿಯಾಗಿ ಮತ್ತು ಅನುಕ್ರಮವಾಗಿ ಗುರುತಿಸುವುದು. | * ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಗುರುತಿಸಿ ಓದುವುದು.<br>* ವರ್ಣಮಾಲೆಯ ಅಕ್ಷರಗಳನ್ನು ಅನುಕ್ರಮವಾಗಿ ಜೋಡಿಸಿ ಓದುವುದು.<br>* ಚಿತ್ರಸಹಿತ ಪದಗಳನ್ನು ಓದುವುದು.<br>* ಪರಿಚಿತ ಹಾಗೂ ಸರಳ ಪದಗಳನ್ನು ಓದುವುದು.<br>* ಸರಳ ವಾಕ್ಯಗಳನ್ನು ಓದುವುದು. | * ವರ್ಣಮಾಲೆಯ 49 ಅಕ್ಷರಗಳು.<br>* ಈ ಅಕ್ಷರಗಳಿಂದ ಪ್ರಾರಂಭವಾಗುವ ಚಿತ್ರ ಸಹಿತ ಪದಗಳು.<br>* ಸರಳ ಹಾಗೂ ಪರಿಚಿತ ಪದಗಳು.<br>* ವರ್ಣಮಾಲೆಯ ಅಕ್ಷರಗಳನ್ನು 10 ಹಂತಗಳಲ್ಲಿ ಗುಂಪು ಮಾಡಿ ನಲಿಕಲಿ ವಿಧಾನದಲ್ಲಿ ಗದ್ಯ ರಚಿಸುವುದು.<br>* ಗದ್ಯಪಾಠ | * 10 ಹಂತಗಳಲ್ಲಿರುವ ಅಕ್ಷರಗಳನ್ನು ಒಂದೊಂದಾಗಿ ಕಲಿಸುವುದು.<br>* ಪ್ರತಿಹಂತದಲ್ಲಿ ಕಲಿಸಿದ ಅಕ್ಷರಗಳನ್ನೇ ಬಳಸಿ ಪದ ಮತ್ತು ಸರಳ ವಾಕ್ಯಗಳನ್ನು ರಚಿಸಿ ಓದಿಸುವುದು. | * ಪ್ರತಿ ಹಂತದ ಅಕ್ಷರಗಳನ್ನು ಉಕ್ತಲೇಖನದ ಮೂಲಕ ಬರೆಸಿ, ಓದಿಸುವುದು.<br>* ಪ್ರತಿ ಹಂತದ ಪದ ಮತ್ತು ವಾಕ್ಯಗಳನ್ನು ಓದಿಸುವುದು.<br>* ಚಿತ್ರ ತೋರಿಸಿ ಅದಕ್ಕೆ ಪೂರಕವಾದ ಪದವನ್ನು ಬರೆಸುವುದು ಮತ್ತು ಓದಿಸುವುದು.<br><br>**(ಅವಧಿ : 25)** |
| 2. | * ಕಪ್ಪುಹಲಗೆ ಮತ್ತು ಮಿಂಚುಪಟ್ಟಿಗಳ ಮೇಲೆ ಬರೆದ ಕೈಬರೆಹ ಮತ್ತು ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು. | * ವರ್ಣಮಾಲೆಯ 49 ಅಕ್ಷರಗಳನ್ನು ಗುರುತಿಸಿ, ಸ್ಪಷ್ಟವಾಗಿ ಓದುವುದು. | * ಒತ್ತಕ್ಷರಗಳಿಲ್ಲದ ಅಕ್ಷರ ಮತ್ತು ಗುಣಿತಾಕ್ಷರಗಳನ್ನು ಬಳಸಿ ರಚಿಸಲಾದ ಸರಳ ಹಾಗೂ ಚಿಕ್ಕ ಪದ್ಯ.<br>* ಪದ್ಯ ಅರ್ಥಕೊಡುವ ಹಾಗೆ ಇರಲಿ<br>* ಪದ್ಯಪಾಠ | * ಪದ್ಯವನ್ನು ಹಾವಭಾವ, ಅಭಿನಯದೊಂದಿಗೆ ಹೇಳಿಕೊಡುವುದು.<br>* ಕಪ್ಪುಹಲಗೆಯ ಮೇಲೆ ಪದ್ಯವನ್ನು ಬರೆದು ಓದುವುದು, ನಂತರ ಮಕ್ಕಳಿಂದ ಅನುಕರಣೆ ಮಾಡಿಸುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ಮಿಂಚುಪಟ್ಟಿಗಳ ಮೇಲೆ ಬರೆದ ಬಿಡಿಬಿಡಿ ಅಕ್ಷರಗಳನ್ನು ಓದಿಸುವುದು.<br>* ನಿಯತಕಾಲಿಕೆ ಹಾಗೂ ಇತರ ಸಾಹಿತ್ಯಗಳಲ್ಲಿ ದಪ್ಪವಾಗಿ ಮುದ್ರಿತವಾಗಿರುವ ಅಕ್ಷರಗಳನ್ನು ಓದಿಸುವುದು.<br><br>**(ಅವಧಿ : 19)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | | | | * ಬೇರೆ ಪದ್ಯ / ಗದ್ಯವನ್ನು ಓದುವುದು.<br>* ಮಿಂಚುಪಟ್ಟಿಗಳ ಮೇಲೆ ಬಿಡಿಬಿಡಿಯಾಗಿ ಅಕ್ಷರಗಳನ್ನು ಬರೆದು ಓದುವುದು.<br>* ವೃತ್ತಪತ್ರಿಕೆ, ವಾರಪತ್ರಿಕೆ ಇತ್ಯಾದಿಗಳಲ್ಲಿ ದಪ್ಪವಾಗಿ ಮುದ್ರಿತವಾಗಿರುವ ಅಕ್ಷರಗಳನ್ನು ಓದುವುದು. | |
| **3.** | * ಮೂರು ಅಕ್ಷರಗಳಿಗೆ ಮೀರದ ಸರಳ ಹಾಗೂ ತಿಳಿದ ಪದಗಳನ್ನು ಗಟ್ಟಿಯಾಗಿ ಓದುವುದು. | * ಸರಳ ಪದಗಳನ್ನು ಗಟ್ಟಿಯಾಗಿ ಓದುವ ಕೌಶಲ ಬೆಳೆಸುವುದು.<br>* ಅರ್ಥಗ್ರಹಿಕೆಯೊಂದಿಗೆ ಪದಗಳನ್ನು ಓದುವುದು.<br>* ಓದಿದ ಪದಗಳನ್ನು ನಕಲು ಮಾಡುವುದು. | * ಗುಣಿತಾಕ್ಷರ ಮತ್ತು ಒತ್ತಕ್ಷರಗಳಿಲ್ಲದ ಪರಿಚಿತ ಸರಳ ಚಿತ್ರಸಹಿತ ಪದಗಳಿರುವ ಚಿಕ್ಕ ಗದ್ಯ.<br>* ಗದ್ಯಪಾಠ | * ಚಿತ್ರ ಸಹಿತ ಪದಗಳನ್ನು ಓದಿಸುವುದು.<br>* ಚಿತ್ರ ಸಹಿತ ಪದಗಳ ಪಟ್ಟಿ ತಯಾರಿಸಿಕೊಂಡು ಓದಿಸುವುದು.<br>* ಕಪ್ಪುಹಲಗೆಯ ಮೇಲೆ ಬರೆದು ಓದಿಸುವುದು.<br>* ಪಠ್ಯದಲ್ಲಿ ನೀಡಲಾದ ಪದಗಳನ್ನು ಓದಿಸಿ, ನಕಲು ಮಾಡಿಸುವುದು. | * ಪಠ್ಯಾಧಾರಿತ ಮೌಲ್ಯ ಮಾಪನ ಮಾಡುವುದು.<br>* ಕಪ್ಪುಹಲಗೆ ಮತ್ತು ಮಿಂಚು ಪಟ್ಟಿಗಳಲ್ಲಿರುವ ಸರಳ ಪದಗಳನ್ನು ಓದಿಸುವುದು.<br><br>**(ಅವಧಿ : 25)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **4.** | * ಸುಮಾರು 1500 ಪದಗಳನ್ನು ಓದಿ ಗ್ರಹಿಸುವುದು. | * ಪದಗಳನ್ನು ಸ್ವತಂತ್ರವಾಗಿ ಓದಿ ಅರ್ಥಗ್ರಹಿಸುವ ಕೌಶಲ ಬೆಳೆಸುವುದು.<br>* ಪದಗಳನ್ನು ಸ್ಪಷ್ಟವಾಗಿ ಓದುವ ಕೌಶಲವನ್ನು ರೂಢಿಸುವುದು. | * ಒತ್ತಕ್ಷರಗಳು ಸಾಧ್ಯವಾದಷ್ಟು ಕಡಿಮೆ ಇರುವ ಹಾಗೂ ಪರಿಚಿತ ಹೊಸ ಪದಗಳು ಇರುವ ಗದ್ಯ.<br>* ಗದ್ಯಪಾಠ | * ಪಠ್ಯದಲ್ಲಿರುವ ಪದಗಳನ್ನು ಓದಿ ಅರ್ಥೈಸುವುದು.<br>* ಅರ್ಥಸಹಿತ ಪದಕೋಶಿಯಲ್ಲಿರುವ ಪದಗಳನ್ನು ಓದುವುದು.<br>* ಬೇರೆ ಪದ್ಯ / ಗದ್ಯಗಳನ್ನು ಓದುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು<br>* ಮಿಂಚುಪಟ್ಟಿಗಳಲ್ಲಿ ಬರೆದ ಪದಗಳನ್ನು ಓದಿಸಿ ನಕಲು ಮಾಡಿಸುವುದು.<br><br>**(ಅವಧಿ : 25)** |

**ಬರೆಯುವುದು**

| | **ಸಾಮರ್ಥ್ಯ** | **ಉದ್ದೇಶ** | **ವ್ಯಾಪ್ತಿ ಮತ್ತು ಪ್ರಕಾರ** | **ವಿಧಾನ** | **ಮೌಲ್ಯಮಾಪನ** |
|---|---|---|---|---|---|
| **1.** | * ಸ್ವರ, ವ್ಯಂಜನ ಮತ್ತು ಗುಣಿತಾಕ್ಷರಗಳನ್ನು ನಕಲು ಮಾಡುವುದು. | * ಅಕ್ಷರಗಳ ಆಕಾರ ಮತ್ತು ಗಾತ್ರಕ್ಕೆ ಅನುಗುಣವಾಗಿ ಬರೆಯುವುದು.<br>* ವ್ಯಂಜನಗಳಿಗೆ ಸ್ವರಚಿಹ್ನೆ ಹಚ್ಚಿದಾಗ ಉಂಟಾಗುವ ಅಕ್ಷರಗಳ ಸ್ವರೂಪವನ್ನು ಗುರುತಿಸಿ ಓದಿ ನಂತರ ಬರೆಯುವುದು. | * ಒತ್ತಕ್ಷರಗಳಿಲ್ಲದ ಅಕ್ಷರ ಮತ್ತು ಗುಣಿತಾಕ್ಷರಗಳನ್ನು ಒಳಗೊಂಡ ಪಾಠ<br>* ವಿಶೇಷ ಪಾಠವಾಗಿ ಒತ್ತಕ್ಷರಗಳ ಪರಿಚಯವನ್ನು ಒಂದೆಡೆ ಸೇರಿಸುವುದು.<br>* ಗದ್ಯಪಾಠ | * ಅಕ್ಷರಗಳನ್ನು ಬರೆಯುವ ಕ್ರಮಕ್ಕೆ ಅನುಗುಣವಾಗಿ ಬರೆಯುವ ಅಭ್ಯಾಸ ಮಾಡಿಸುವುದು.<br>* ಅಕ್ಷರಗಳ ಗಾತ್ರ ಮತ್ತು ಆಕಾರಕ್ಕೆ ಹೆಚ್ಚು ಒತ್ತು ಕೊಟ್ಟು ಕಲಿಸುವುದು.<br>* ಅಕ್ಷರಗಳಿಗೆ ಗುಣಿತ ಚಿಹ್ನೆಗಳನ್ನು ಹಚ್ಚುವ ಕ್ರಮವನ್ನು ಅಭ್ಯಾಸ ಮಾಡಿಸುವುದು. | * ಪಠ್ಯಾಧಾರಿತ ಮೌಲ್ಯ ಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳಬೇಕು.<br>* ನಕಲು ಮಾಡುವಾಗ ಗಾತ್ರ ಮತ್ತು ಆಕಾರವನ್ನಾಧರಿಸಿ ಬರೆಯುವುದನ್ನು ಅವಲೋಕಿಸಿ, ತಪ್ಪುಗಳನ್ನು ಸರಿಪಡಿಸುವುದು.<br>**(ಅವಧಿ : 25)** |
| **2.** | * ಉಕ್ತಲೇಖನದ ಮೂಲಕ ವರ್ಣಮಾಲೆ ಮತ್ತು ಗುಣಿತಾಕ್ಷರಗಳನ್ನು ಬರೆಯುವುದು. | * ಅಕ್ಷರ ಮತ್ತು ಗುಣಿತಾಕ್ಷರಗಳ ಕಲಿಕೆಯನ್ನು ದೃಢೀಕರಣಗೊಳಿಸುವುದು.<br>* ಗಾತ್ರ ಮತ್ತು ಆಕಾರಕ್ಕೆ ಅನುಗುಣವಾಗಿ ಸರಿಯಾಗಿ ಬರೆಯುವುದನ್ನು ಅಭ್ಯಾಸ ಮಾಡಿಸುವುದು.<br>* ಸ್ಮರಣ ಶಕ್ತಿಯನ್ನು ಹೆಚ್ಚಿಸುವುದು. | ಕಡಿಮೆ ಒತ್ತಕ್ಷರವಿರುವ ಹಾಗೂ ರಾಷ್ಟ್ರೀಯ ಹಬ್ಬವನ್ನಾಚರಿಸುವ ಒಂದು ಗದ್ಯ<br>ಉದಾ :<br>* ಮಕ್ಕಳ ದಿನಾಚರಣೆ<br>* ಗಾಂಧಿ ಜಯಂತಿ<br>* ಗದ್ಯಪಾಠ | * ನೀಡಿದ ಪಠ್ಯವನ್ನು ಅರ್ಥೈಸುವುದು. ಪಾಠದಲ್ಲಿ ಬಂದಿರುವ ಹೊಸ ಪದಗಳನ್ನು ಉಕ್ತಲೇಖನ ನೀಡುವುದು.<br>* ಸರಳ ಪದಗಳ ಪಟ್ಟಿ ತಯಾರಿಸಿಕೊಂಡು ಉಕ್ತಲೇಖನ ನೀಡಿ ಬರೆಸುವುದು.<br>* ವಿರಳವಾಗಿ ಬಳಸುವ ಅಕ್ಷರಗಳನ್ನು ಉಕ್ತಲೇಖನ ನೀಡುವುದು.<br>ಉದಾ : ಐ.ಔ.ಖ.ಢ. ...... | * ಪಠ್ಯಾಧಾರಿತ ಮೌಲ್ಯ ಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಅಕ್ಷರ ಮತ್ತು ಪದಗಳ ಉಕ್ತಲೇಖನ ನೀಡುವುದು.<br>**(ಅವಧಿ : 25)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಪರಿಚಿತ ಸರಳ ಪದ ಮತ್ತು ವಾಕ್ಯಗಳನ್ನು ಬರೆಯುವುದು. | * ಅರ್ಥಗ್ರಹಿಕೆಯೊಂದಿಗೆ ಸರಳ ಪದ ಮತ್ತು ವಾಕ್ಯಗಳನ್ನು ಬರೆಯುವ ಅಭ್ಯಾಸ ಮಾಡಿಸುವುದು. | * ಪ್ರಾಣಿ ಅಥವಾ ಪಕ್ಷಿ (ಕುರಿತಾದ ಸರಳ ಪದ್ಯ)<br>* ಪದ್ಯಪಾಠ | * ಪದ್ಯವನ್ನು ರಾಗವಾಗಿ, ಅಭಿನಯದೊಂದಿಗೆ ಹೇಳಿಕೊಡುವುದು.<br>* ಪದ್ಯದ ಅರ್ಥವನ್ನು ಸರಳ ವಾಕ್ಯಗಳಲ್ಲಿ ಅರ್ಥೈಸುವುದು.<br>* ಪದ್ಯದ ಸಾಲುಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಮಕ್ಕಳು ನಕಲು ಮಾಡುವಂತೆ ತಿಳಿಸುವುದು.<br>* ಪಠ್ಯ ಪುಸ್ತಕದಲ್ಲಿರುವ ಇತರ ಗದ್ಯ ಮತ್ತು ಪದ್ಯಗಳಲ್ಲಿರುವ ಓದಿ-ತಿಳಿ, ಗಮನಿಸಿ-ಹೇಳಿ ಶೀರ್ಷಿಕೆಯಲ್ಲಿರುವ ಪದಗಳನ್ನು ಓದಿ ಬರೆಯಲು ತಿಳಿಸುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಉಕ್ತಲೇಖನದ ಮೂಲಕ ಸರಳ ಪದ ಮತ್ತು ವಾಕ್ಯಗಳನ್ನು ಬರೆಸುವುದು.<br>**(ಅವಧಿ : 19)** |
| 4. | * ಪದಗಳ ಅಂತ್ಯಾಕ್ಷರದ ಆಧಾರದಿಂದ ಪದಗಳ ನಡುವೆ ಇರುವ ಸಾಮ್ಯತೆಯನ್ನು ಅರಿಯುವುದು. | * ಉಚ್ಚಾರಣೆಯಲ್ಲಿ ಸಾಮ್ಯತೆ ಕಂಡುಬಂದರೂ ಅರ್ಥ ವ್ಯತ್ಯಾಸವಾಗುವುದನ್ನು ಗುರುತಿಸಿ ಓದುವುದು ಮತ್ತು ಬರೆಯುವುದು.<br>* ಪ್ರಾಸಪದಗಳನ್ನು ಗುರುತಿಸುವ ಕೌಶಲವನ್ನು ಬೆಳೆಸುವುದು. | * ಸರಳ ಪ್ರಾಸ ಪದಗಳು ಬರುವಂತಹ ಶಿಶುಪ್ರಾಸ. (ಅಂದರೆ ಒಂದು ಪದ್ಯ)<br>* ಪದ್ಯಪಾಠ | * ಪ್ರಾಸಗೀತೆಯನ್ನು ಹಾವಭಾವದೊಂದಿಗೆ ಹೇಳಿಕೊಡುವುದು.<br>* ಪದ್ಯವನ್ನು ಕಪ್ಪುಹಲಗೆಯ ಮೇಲೆ ಬರೆದು ಪದ್ಯದಲ್ಲಿರುವ ಪ್ರಾಸ ಪದಗಳನ್ನು ಗುರುತಿಸಿ, ಓದುವುದು.<br>* ಪ್ರಾಸ ಪದ ಬರೆದು ಅದಕ್ಕೆ ಪೂರಕವಾದ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಓದಿಸಿ, ನಕಲು ಮಾಡಿಸುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಒಂದು ಪ್ರಾಸಪದ ಹೇಳಿ ಅದಕ್ಕೆ ಪೂರಕ ಪ್ರಾಸಪದ ಹೇಳಿಸುವುದು.<br>ಉದಾ :<br>ಮರ – ಸರ – ಗರ – ದರ<br>**(ಅವಧಿ : 19)** |

# ಪ್ರಥಮ ಭಾಷೆ – ಕನ್ನಡ ಪಠ್ಯವಸ್ತು

# ಎರಡನೇ ತರಗತಿ

- ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ
- ಅವಧಿ ಹಂಚಿಕೆ ಕೋಷ್ಠಕ
- ಪಠ್ಯ ಬರೆಯಲು ಕೆಲವು ಸಾಮಾನ್ಯ ಸೂಚನೆ
- ಕ್ರೋಢೀಕೃತ ಸಾಮರ್ಥ್ಯ ಪಟ್ಟಿ
- ಸಾಮರ್ಥ್ಯವಾರು ಪಠ್ಯವಸ್ತು

# ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ

೧. ಪ್ರಸ್ತುತ ಪಠ್ಯವಸ್ತು ತಯಾರಿಸುವಾಗ ರಾಜ್ಯ ಪಠ್ಯಕ್ರಮ ೨೦೦೧-೨೦೦೨ ಮತ್ತು ಎನ್.ಸಿ.ಎಫ್. ೨೦೦೫ ಇವೆರಡನ್ನೂ ಗಮನಿಸಿದೆ

೨. ಮೂಲ ಕ.ಕ.ಮ. ಆರಿಸಿ ಮೂಲ ಸಾಮರ್ಥ್ಯಗಳನ್ನು ಪ್ರಸ್ತುತ ಎನ್.ಸಿ.ಎಫ್ ೨೦೦೫ ರ ನೆಲೆಯಲ್ಲಿ ಪರಿಷ್ಕರಿಸಿದೆ

೩. ಪಠ್ಯವಸ್ತುವನ್ನು ಶಿಶುಕೇಂದ್ರಿತ, ಸಾಮರ್ಥ್ಯಾಧಾರಿತ, ಚಟುವಟಿಕೆ ಮತ್ತು ಸಂತಸದಾಯಕ ಸನ್ನಿವೇಶವನ್ನು ಆಧರಿಸಿ ರೂಪಿಸಿದೆ.

೪. ಮಗುವಿನ ಮನೆ ಹಾಗೂ ಸ್ಥಳೀಯ ಭಾಷೆಯನ್ನು ಯಥಾವತ್ತಾಗಿ ಸ್ವೀಕರಿಸಲು ಅವಕಾಶ ಮಾಡಿಕೊಟ್ಟಿದೆ

೫. ಮಗು ಶಾಲೆಯಲ್ಲಿ ಪಡೆದ ಜ್ಞಾನವನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ

೬. ರಾಷ್ಟ್ರೀಯ ಮೌಲ್ಯ ಮತ್ತು ಭಾವೈಕ್ಯತೆಗೆ ಸಂಬಂಧಿಸಿದ ಅಂಶಗಳನ್ನು ಪಠ್ಯವಸ್ತುವಿನಲ್ಲಿ ಅಳವಡಿಸಿದೆ

೭. ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಜೋಡಿಸಿದೆ

೮. ಪಠ್ಯವಸ್ತುವಿನಲ್ಲಿಯೇ ಮೌಲ್ಯಮಾಪನ ಹಾಗೂ ಪಠ್ಯದ ವಿಸ್ತಾರ ಎಷ್ಟಿರಬೇಕೆಂದು ವಿವರಿಸಿದೆ

೯. ಅವಧಿಯನ್ನು ನಿರ್ಧರಿಸಿ ಅದಕ್ಕೆ ತಕ್ಕಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೦. ಆಡುಭಾಷೆಯಿಂದ ಹಂತ ಹಂತವಾಗಿ ಗ್ರಾಂಥಿಕ ಭಾಷೆಯೆಡೆಗೆ ಮಗು ಸಾಗುವಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೧. ರಾಷ್ಟ್ರ, ಸಮಾಜ, ವೃತ್ತಿ ಅಪೇಕ್ಷಿತ ಹಾಗೂ ನಿರೀಕ್ಷಿತ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸಲು ಅವಕಾಶ ಮಾಡಿಕೊಟ್ಟಿದೆ

೧೨. ಭಾಷಾ ಅಭಿವೃದ್ಧಿಯೊಂದಿಗೆ ಭಾಷಾ ಕೌಶಲಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಕಲಿಕೆಯ ನಿರೀಕ್ಷಿತ ಫಲಗಳನ್ನು ಪರಿಗಣಿಸಿದೆ

೧೩. ಶೈಕ್ಷಣಿಕ ಕ್ಷೇತ್ರದಲ್ಲಿನ ಹೊಸಹೊಸ ಸಂಶೋಧನೆ, ಪ್ರಯೋಗ ಮತ್ತು ನವೀಕರಣದ ಫಲಿತಾಂಶಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

೧೪. ಭಾಷಾವಿಜ್ಞಾನದ ತಳಹದಿಯ ಮೇಲೆ ರೂಪಿತವಾಗಿದ್ದರೂ ಪ್ರಾದೇಶಿಕ ಭಾಷಾ ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿದೆ

೧೫. ರಾಷ್ಟ್ರೀಯ ಶಿಕ್ಷಣನೀತಿ ೧೯೮೬ರಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವವಿಕಸನದ ಅಗತ್ಯತೆಯ ತತ್ತ್ವಗಳನ್ನಾಧರಿಸಿ ಪಠ್ಯವಸ್ತುವನ್ನು ತಯಾರಿಸಿದೆ

೧೬. ನಗರ ಮತ್ತು ಗ್ರಾಮಾಂತರ ಶೈಕ್ಷಣಿಕ ಅಂತರವನ್ನು ಕಡಿಮೆಗೊಳಿಸಲು ಹೆಚ್ಚು ಒತ್ತುನೀಡಿದೆ. ಮಕ್ಕಳ ಮನೋವಿಕಾಸ ಭೂಮಿಕೆಗೂ ಸಮಾನ ಪ್ರಾತಿನಿಧ್ಯ ನೀಡಿದೆ

೧೭. ಪರಿಣಾಮಕಾರಿ ಕಲಿಕೆಯಲ್ಲಿ, ಚಟುವಟಿಕೆ ಮತ್ತು ಇನ್ನಿತರ ಸಮಗ್ರ ವಿಧಾನಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

# ಅವಧಿ ಹಂಚಿಕೆ ಕೋಷ್ಟಕ

## ಸಾಮರ್ಥ್ಯಾಧಾರಿತ ಅವಧಿ ಕೋಷ್ಟಕ

| ಕ್ಷೇತ್ರ | ನಿಗದಿಪಡಿಸಿದ ಅವಧಿ |
|---|---|
| ೧. ಆಲಿಸುವುದು | ೧೧೩ |
| ೨. ಮಾತನಾಡುವುದು | ೧೦೭ |
| ೩. ಓದುವುದು | ೯೪ |
| ೪. ಬರೆಯುವುದು | ೯೪ |
| | ೪೦೮ |
| ೫. ಸೇತುಬಂಧ | ೪೭ |
| ಒಟ್ಟು | **೪೫೫** |

## ಪಠ್ಯಪುಸ್ತಕ ರಚನಾಧಾರಿತ ಅವಧಿ ಕೋಷ್ಟಕ

| ಪಠ್ಯದ ವಿಭಾಗ | ಸಂಖ್ಯೆ | ನಿಗದಿಪಡಿಸಿದ ಅವಧಿ |
|---|---|---|
| ಸಾಮರ್ಥ್ಯಾಧಾರಿತ ಗದ್ಯಪಾಠ | ೧೧ | ೨೭೫ |
| ಸಾಮರ್ಥ್ಯಾಧಾರಿತ ಪದ್ಯಪಾಠ | ೭ | ೧೩೩ |
| ಸಾಮರ್ಥ್ಯಾಧಾರಿತ ಸೇತುಬಂಧ | – | ೪೭ |
| ಒಟ್ಟು | | **೪೫೫** |

## ಪ್ರತಿ ಗದ್ಯ / ಪದ್ಯದ ಅವಧಿ ಹಂಚಿಕೆ

| ಕ್ರಸಂ. | ಹಂತ | ಗದ್ಯ | ಪದ್ಯ |
|---|---|---|---|
| ೧. | ಪೂರ್ವಸಿದ್ಧತೆ / ಕಲಿಕಾಪೂರ್ವ | ೩ | ೨ |
| ೨. | ಕಲಿಕಾಂಶ | ೮ | ೬ |
| ೩. | ಅಭ್ಯಾಸ / ಬಳಕೆಯ | ೮ | ೬ |
| ೪. | ಮೌಲ್ಯಮಾಪನ | ೪ | ೩ |
| ೫. | ಪರಿಹಾರ ಬೋಧನೆ / ಪುನರ್‌ಬಲನ | ೨ | ೨ |
| | ಒಟ್ಟು | **೨೫** | **೧೯** |

## ಪಠ್ಯ ಬರೆಯಲು ಕೆಲವು ಸಾಮಾನ್ಯ ಸೂಚನೆ

೧. ಗದ್ಯಪಾಠ ೧೧ ಇರಲಿ

೨. ಪದ್ಯಪಾಠ ೭ ಇರಲಿ

೩. ಸಣ್ಣಕಥೆ, ಚಿತ್ರಸಹಿತ ಕಥೆ, ಮಾಡಿ–ಕಲಿ, ವಿವರಣೆ, ಸರಳ ಸಂಭಾಷಣೆ, ಚಿತ್ರಸರಣಿ – ಇವುಗಳನ್ನು ಒಳಗೊಂಡಿರಬೇಕು

೪. ಗದ್ಯಪಾಠ ಸರಳ ಪದಗಳಿಂದ ಕೂಡಿರಬೇಕು

೫. ಪ್ರಾರಂಭದ ಗದ್ಯಪಾಠಗಳಲ್ಲಿ ಒತ್ತಕ್ಷರಗಳು ಕಡಿಮೆ ಇರಲಿ

೬. ಗದ್ಯಪಾಠದಲ್ಲಿ ಬಳಸುವ ಪದಗಳು ಸಾಧ್ಯವಾದಷ್ಟು ಪರಿಚಿತವಾಗಿರಲಿ

೭. ಪ್ರತಿಯೊಂದು ಪಾಠವೂ ೭೦ ರಿಂದ ೧೬೦ ಪದಗಳಲ್ಲಿರಲಿ

೮. ಅಕ್ಷರಗಳ ಗಾತ್ರ ದೊಡ್ಡದಾಗಿರಲಿ

೯. ಪಾಠಗಳು ನೀತಿ ಪ್ರಧಾನವಾಗಿರಲಿ

೧೦. ಪಾಠದ ಕೊನೆಯಲ್ಲಿ ಸರಳ ಭಾಷಾ ಆಟಗಳಿರಬೇಕು

೧೧. ಅರ್ಥಸಹಿತ ಪದಕೋಶ ಇರಲಿ

೧೨. ಪಾಠದ ಕೊನೆಗೆ ಪಾಠದ ನೀತಿಯನ್ನು ಬೇರೆ ಬಣ್ಣದಲ್ಲಿ ಬರೆದಿರಬೇಕು

೧೩. ಅಭ್ಯಾಸ ಚಟುವಟಿಕೆಗಳು ಸಾಮರ್ಥ್ಯಕ್ಕೆ ಪೂರಕವಾಗಿರಲಿ

೧೪. ಸ್ವಕಲಿಕೆಯ ಮೂಲಕ ಕಲಿಯಲು ಅವಕಾಶ ಕಲ್ಪಿಸುವಂತಿರಬೇಕು

೧೫. ಅಭಿನಯ, ಸಂವಾದ, ವಿವರಣೆ, ಕಥೆ ಹೇಳುವಿಕೆ, ಭಾಷಾ ಆಟ ಮೊದಲಾದ ಚಟುವಟಿಕೆಗಳು ಬಳಕೆಯಾಗುವಂತಿರಲಿ

೧೬. ಗದ್ಯದಲ್ಲಿ ಹೆಚ್ಚು ಸ್ಪಷ್ಟವಾದ ಬಹುವರ್ಣಗಳಿಂದ ಕೂಡಿದ ಕನಿಷ್ಠ ೨ ರಿಂದ ೩, ಪದ್ಯದಲ್ಲಿ ಕನಿಷ್ಠ ೧ ರಿಂದ ೨ ಚಿತ್ರಗಳಿರಲಿ

೧೭. ಕಥೆಗಳನ್ನು ಆರಿಸಿಕೊಳ್ಳುವಾಗ ರೋಚಕತೆಗೆ, ಕುತೂಹಲಕ್ಕೆ, ಕಲ್ಪನೆಗೆ, ಅದ್ಭುತ ರಮ್ಯತೆಗೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು

೧೮. ಅಭ್ಯಾಸಗಳಲ್ಲಿ ಎಲ್ಲಾ ವಿಧದ ಪ್ರಶ್ನೆಗಳಿಗೆ ಮೌಲ್ಯಮಾಪನ ಸಾಧನಗಳಿಗೆ (ಪ್ರಶ್ನೋತ್ತರ ವಿವರಣೆ, ಉದಾಹರಣೆ, ಸಂಬಂಧ ಕಲ್ಪಿಸುವಿಕೆ, ಸರಿತಪ್ಪು ಗುರುತಿಸುವಿಕೆ, ಹೊಂದಿಸಿ ಬರೆಯುವಿಕೆ, ಗುಂಪಿಗೆ ಸೇರದ ಪದಗಳನ್ನು ಆರಿಸಿ ಬರೆಯುವಿಕೆ, ಪದಕ್ರೀಡೆ, ಪದಬಳ್ಳಿ, ಅಂತ್ಯಾಕ್ಷರಿ, ಮಾದರಿಯಂತೆ ಕೂಡಿಸಿ, ಬಿಡಿಸಿ ಬರೆಯುವುದು, ಮಾದರಿಯಂತೆ ಬರೆಯುವುದು) ಪ್ರಾತಿನಿಧ್ಯ ನೀಡಬೇಕು

೧೯. ಮಗುವಿನ ಆಡುಭಾಷೆಗೆ ಪ್ರಾಧಾನ್ಯತೆ ನೀಡಿ ಅದೇ ಭಾಷೆಯಲ್ಲಿ ಮಾತನಾಡಲು, ಬರೆಯಲು ಪ್ರಾರಂಭಿಕ ಹಂತದಲ್ಲಿ ಅವಕಾಶ ನೀಡಬೇಕು.

೨೦. ಮೌಲ್ಯಮಾಪನದಲ್ಲಿ ಕೇವಲ ಪಠ್ಯವಿಷಯಕ್ಕೆ ಪ್ರಾಧಾನ್ಯತೆ ನೀಡದೆ, ಸಾಮರ್ಥ್ಯ ಆಧಾರಿತ ಮೌಲ್ಯಮಾಪನಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು (ಪಠ್ಯಪುಸ್ತಕದ).

೨೧. ಪಠ್ಯ, ಅಭ್ಯಾಸ ಮತ್ತು ಮೌಲ್ಯಮಾಪನ ಚಟುವಟಿಕೆಗಳನ್ನು ವೇಗದ ಕಲಿಕೆ–ಮುಂದುವರಿಕೆ ಹಾಗೂ ಕಲಿಕೆಯಲ್ಲಿ ಹಿಂದುಳಿದ ಮಕ್ಕಳೆಲ್ಲರನ್ನು ಗಮನದಲ್ಲಿರಿಸಿಕೊಂಡು ರಚಿಸಲ್ಪಟ್ಟಿರಬೇಕು

೨೨. ಪದ್ಯಪಾಠ, ಪ್ರಾಸಗೀತೆ, ಶಿಶುಗೀತೆ, ಕಥನಕವನ, ಹಾಡಲು ಯೋಗ್ಯವಾದ ಗೀತೆಗಳನ್ನು ಒಳಕೊಂಡಿರಲಿ

೨೩. ಪದ್ಯ ೩/೪ ಚರಣಗಳನ್ನು ಒಳಗೊಂಡಿರಲಿ ಅಥವಾ ೧೬ ಸಾಲುಗಳ ಮಿತಿಯಲ್ಲಿರಲಿ

೨೪. ಮಕ್ಕಳಿಗಾಗಿ ಬರೆದ ಜನಪ್ರಿಯ ಗೀತೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ

೨೫. 'ತಟ್ಟು ಚಪ್ಪಾಳೆ ಪುಟ್ಟ ಮಗು' ಈ ಪುಸ್ತಕದಲ್ಲಿರುವ ಕವನಗಳು ಹಿರಿಯ ಸಾಹಿತಿಗಳು ಮಕ್ಕಳಿಗಾಗಿ ಬರೆದ ಕವನಗಳ ಸಂಕಲನ, ಅದನ್ನು ಪರಿಶೀಲಿಸಿ ಆಯ್ಕೆ ಮಾಡುವುದು ಸೂಕ್ತ

**ಕ್ರೋಢೀಕೃತ ಸಾಮರ್ಥ್ಯ ವಿವರಪಟ್ಟಿ** **ತರಗತಿ : ೨**

| ಆಲಿಸುವುದು | ಮಾತನಾಡುವುದು | ಓದುವುದು | ಬರೆಯುವುದು |
|---|---|---|---|
| * ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜತೆಗೆ ಅರ್ಥಮಾಡಿ ಕೊಳ್ಳುವುದು. | * ಅಕ್ಷರಗಳನ್ನು ಸರಿಯಾಗಿ ಉಚ್ಚರಿಸುವುದು. | * ವಿರಳವಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರುತಿಸುವುದು. | * ಸಂಯುಕ್ತಾಕ್ಷರ, ಪದ ಮತ್ತು ವಾಕ್ಯಗಳನ್ನು ನಕಲು ಮಾಡುವುದು. |
| * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿ ಕೊಳ್ಳುವುದು. | * ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಹಾಗೂ ಒಂಟಿಯಾಗಿ ಹಾಡುವುದು. | * ದೊಡ್ಡ ಮತ್ತು ಸಣ್ಣ ಗಾತ್ರದ ಮುದ್ರಿತ ಅಕ್ಷರಗಳನ್ನು ಓದುವುದು. | * ಉಕ್ತಲೇಖನದ ಮೂಲಕ ಸಂಯುಕ್ತಾಕ್ಷರ ಮತ್ತು ಪರಿಚಿತ ಪದಗಳನ್ನು ಬರೆಯುವುದು. |
| * ಪರಿಚಿತ ಸನ್ನಿವೇಶಗಳಲ್ಲಿನ ಸೂಚನೆ ಮತ್ತು ಮೌಖಿಕ ಬೇಡಿಕೆ, ಆದೇಶ ಮತ್ತು ಪ್ರಶ್ನೆಗಳನ್ನು ಅರ್ಥಮಾಡಿ ಕೊಳ್ಳುವುದು. | * ಸರಳ ಪ್ರಶ್ನೆಗಳಿಗೆ ಪೂರ್ಣ ವಾಕ್ಯಗಳಲ್ಲಿ ಉತ್ತರಿಸುವುದು. | * ಪ್ರಾಸಪದ್ಯ, ಹಾಡು ಮತ್ತು ಸರಳ ಕಥೆಗಳನ್ನು ಗಟ್ಟಿಯಾಗಿ ಓದುವುದು. | * ಸೂಚನೆಗಳನ್ನು ಅನುಸರಿಸಿ ಸರಳ ವಾಕ್ಯಗಳನ್ನು ಬರೆಯುವುದು. |
| * ಪಠ್ಯದಲ್ಲಿನ ಘಟನೆಗಳನ್ನು ಅನುಕ್ರಮವಾಗಿ ನೆನಪಿಸಿಕೊಳ್ಳುವುದು. | * ಪರಿಚಿತ ವಸ್ತುಗಳ ಬಗ್ಗೆ ಮಾಹಿತಿಯನ್ನು ಕೇಳುವುದು.<br>* ವಿನಯಪೂರ್ವಕವಾಗಿ ಮಾತನಾಡುವುದು. | * ಸುಮಾರು ೨೦೦೦ ಪದಗಳನ್ನು ಗ್ರಹಿಸುವುದು. | * ಕೊಟ್ಟಿರುವ ಪದಕ್ಕೆ ಆರಂಭ ಅಥವಾ ಅಂತ್ಯದಲ್ಲಿ ಅಕ್ಷರಗಳನ್ನು ಸೇರಿಸಿ ಹೊಸ ಪದಗಳನ್ನು ರಚಿಸುವುದು. |
| * ಆಲಿಸಿದ ನಂತರ ಏನು ? ಮತ್ತು ಹೇಗೆ? – ಪ್ರಶ್ನೆಗಳಿಗೆ ಉತ್ತರಿಸುವುದು. | | | |

**ಆಲಿಸುವುದು** **ಸಾಮರ್ಥ್ಯವಾರು ಪಠ್ಯವಸ್ತು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ಸರಳ ಹಾಗೂ ಬಳಕೆಯಲ್ಲಿರದ ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜತೆಗೆ ಅರ್ಥವಾಡಿಕೊಳ್ಳುವುದು. | * ಕಲಿಕೆಯಲ್ಲಿ ಆಸಕ್ತಿ ಉಂಟು ಮಾಡುವುದು.<br>* ಆಲಿಸುವ ಕೌಶಲವನ್ನು ಕ್ರಮಬದ್ಧಗೊಳಿಸವುದು.<br>* ಅಪರಿಚಿತ ಪ್ರಾಸಪದ ಹಾಗೂ ಅಪರಚಿತ ಪದಗಳನ್ನು ಆಲಿಸಿ, ಗ್ರಹಿಸುವಂತೆ ಮಾಡುವುದು. | * ಹೆಚ್ಚು ಬಳಕೆಯಲ್ಲಿರದ ಶಿಶುಗೀತೆ.<br>* ಪರಿಚಯವಿಲ್ಲದ ಶಿಶುಗೀತೆ<br>* ಸರಳ ಪದಗಳಿಂದ ಕೂಡಿರಲಿ.<br>* ಪದ್ಯಪಾಠ | * ಶಿಕ್ಷಕರು ಅಭಿನಯುದ ಮೂಲಕ ಶಿಶುಪ್ರಾಸಗೀತೆಗಳನ್ನು ಹೇಳಿಕೊಟ್ಟು ಮಕ್ಕಳಿಂದ ಹೇಳಿಸುವುದು ಪೂರಕ ಪ್ರಶ್ನೆಕೇಳಿ ಉತ್ತರ ಪಡೆಯುವುದು.<br>* ಧ್ವನಿ ಸುರುಳಿ ಬಳಸಿ ಬಳಕೆಯಲ್ಲಿರದ ಕಥೆ/ ಪ್ರಾಸಗೀತೆಗಳನ್ನು ಮಕ್ಕಳಿಗೆ ಕೇಳಿಸಿ ನಂತರ ಪ್ರಶ್ನೆ ಕೇಳಿ ಉತ್ತರ ಪಡೆಯುವುದು | * ಆಲಿಸಿದ ಕಥೆ, ಶಿಶುಗೀತೆಗಳಿಗೆ ಪೂರಕವಾದ ಪ್ರಶ್ನೆಗಳನ್ನು ಮೌಖಿಕವಾಗಿ ಕೇಳಿ ಉತ್ತರ ಪಡೆಯುವುದು.<br>**(ಅವಧಿ : 19)** |
| **2.** | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವುದು. | * ಏಕಕಾಲದಲ್ಲಿ ಒಬ್ಬರಿಗಿಂತ ಹೆಚ್ಚು ಜನ ಮಾತನಾಡುವಾಗ ಆಲಿಸುವ ಕೌಶಲವನ್ನು ಅಭಿವೃದ್ಧಿಗೊಳಿಸುವುದು<br>* ಸಂವಾದ ಮತ್ತು ಸಂಭಾಷಣೆಗಳನ್ನು ಮಾಡುವ ಕ್ರಮವನ್ನು ಅವಲೋಕಿಸುವುದು. ಅದನ್ನು ಅರ್ಥವಾಡಿಕೊಳ್ಳುವ ಕೌಶಲವನ್ನು ಅಭಿವೃದ್ಧಿಪಡಿಸುವುದು. | * ಪರಿಚಿತ ಸನ್ನಿವೇಶ– (ಶಾಲೆ, ಮನೆ, ಸುತ್ತಮುತ್ತ) ಒಂದು ವಿಷಯ ಕುರಿತು ಇಬ್ಬರು ನಡೆಸುವ ಸಂವಾದ.<br>* ಗದ್ಯಭಾಗ | * ಕುಟುಂಬ, ಶಾಲೆ, ಪರಿಸರಕ್ಕೆ ಸಂಬಂಧಿಸಿದ ಸಂವಾದದ ತುಣುಕುಗಳನ್ನು ಧ್ವನಿ ಸುರುಳಿ ಮೂಲಕ ಕೇಳಿಸುವುದು.<br>* ಅಣಕು ಸನ್ನಿವೇಶವನ್ನು ತರಗತಿಯಲ್ಲಿ ಏರ್ಪಡಿಸುವುದು.<br>* ಆಲಿಸಿದ ಸಂಭಾಷಣೆಗಳನ್ನು ಮೌಖಿಕವಾಗಿ ಅಭಿವ್ಯಕ್ತಿಗೊಳಿಸುವ ಚಟುವಟಿಕೆ ರೂಪಿಸುವುದು. | * ಪೂರಕ ಪ್ರಶ್ನೆಗಳು<br>* ಪರಿಚಿತ ಸನ್ನಿವೇಶಗಳಲ್ಲಿನ ಸಂವಾದಗಳನ್ನು ಆಲಿಸಿದ ನಂತರ ಅದನ್ನು ವ್ಯಕ್ತಪಡಿಸುವುದು.<br>**(ಅವಧಿ : 25)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **3.** | * ಪರಿಚಿತ ಸನ್ನಿವೇಶಗಳಲ್ಲಿನ ಸೂಚನೆ, ಮೌಖಿಕ ಬೇಡಿಕೆ, ಆದೇಶ ಮತ್ತು ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವುದು. | * ಪರಿಚಿತ ಸನ್ನಿವೇಶಗಳಲ್ಲಿ ನಡೆಯುವ ಸಂಭಾಷಣೆ. ಸಂವಾದ, ಮೌಖಿಕ ಬೇಡಿಕೆ, ಆದೇಶ, ಪ್ರಶ್ನೆಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಉಂಟುಮಾಡುವುದು. | * ಮಕ್ಕಳ ದೈನಂದಿನ ಜೀವನಕ್ಕೆ ಅಗತ್ಯವಾದ ಮಾರ್ಗದರ್ಶಿತ ಅಂಶ, ಶಿಸ್ತಿನ ಜೀವನ, ಅನುಕರಣೆ ಅಗತ್ಯವಾದ ಸರಳ ಸೂಚನೆ ಮತ್ತು ಮೌಖಿಕ ಬೇಡಿಕೆಗಳಿರಲಿ –<br>* ಗದ್ಯಪಾಠ | * ಮೌಖಿಕ ಸೂಚನೆಗಳನ್ನು ನೀಡಿ ವಿದ್ಯಾರ್ಥಿಗಳು ಅದನ್ನು ಅನುಸರಿಸುವಂತೆ ಮಾಡುವುದು.<br>* ಸರಳ ಭಾಷಾ ಆಟ ಆಡಿಸುವುದು. (ಪದರಚನೆ, ಅಂತ್ಯಾಕ್ಷರಿ ಆಟ)<br>* ಆಶು ಮೂಕಾಭಿನಯ | * ಮಕ್ಕಳು ದೈನಂದಿನ ಕಾರ್ಯಗಳಲ್ಲಿ ಮಾಡಲೇಬೇಕಾದ ಸೂಚನೆಗಳನ್ನು ಅನುಸರಿಸುವುದನ್ನು ವೀಕ್ಷಿಸುವುದು.<br>**(ಅವಧಿ : 25)** |
| **4.** | * ಪಠ್ಯದಲ್ಲಿನ ಘಟನೆಗಳನ್ನು ಅನುಕ್ರಮವಾಗಿ ನೆನಪಿಸಿಕೊಳ್ಳುವುದು. | * ಯಾವುದೇ ಘಟನೆಗಳನ್ನು ಆಲಿಸಿದ ನಂತರ ಅದನ್ನು ಅನುಕ್ರಮವಾಗಿ ನೆನಪಿಟ್ಟುಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು. | * ಕನಿಷ್ಠ 4–5 ಘಟನೆಗಳಿಂದ ಅದ್ಭುತ ರಮ್ಯಕಥೆ, ಕಥೆಗೆ ಪೂರಕವಾಗಿ ಕನಿಷ್ಠ ಎರಡು ಚಿತ್ರ ಇರಬೇಕು.<br>* ಗದ್ಯಪಾಠ | * ಕಥೆಯನ್ನು ಹೇಳುವುದು. ನಂತರ ಕಥೆಯಲ್ಲಿನ ಮುಖ್ಯಾಂಶಗಳನ್ನು ಗುರುತಿಸುವುದು. ಅವುಗಳನ್ನು ಅನುಕ್ರಮವಾಗಿ ಹೇಳಿಸುವುದು.<br>* ಕನಿಷ್ಠ ಎರಡು ಕಥೆಯನ್ನಾದರೂ ಹೇಳಬೇಕು. ನಂತರ ಆ ಕಥೆಗಳಲ್ಲಿನ ಘಟನೆಗಳನ್ನು ಅನುಕ್ರಮವಾಗಿ ಹೇಳಿಸುವುದು. | * ಆಲಿಸಿದ ನಂತರ ಘಟನೆಗಳನ್ನು ಅನುಕ್ರಮವಾಗಿ ಹೇಳಿಸುವುದು.<br>**(ಅವಧಿ : 25)** |
| **5.** | * ಆಲಿಸಿದ ನಂತರ ಏನು ? ಮತ್ತು ಹೇಗೆ?– ಪ್ರಶ್ನೆಗಳಿಗೆ ಉತ್ತರಿಸುವುದು. | * ಆಲಿಸಿದ ನಂತರ ಏನು ? ಹೇಗೆ? – ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರನ್ನಾಗಿಸುವುದು. | * ಏನು? ಹೇಗೆ ? – ಪ್ರಶ್ನೆಗಳಿಗೆ ಉತ್ತರಿಸಲು ಅನುಕೂಲವಾಗುವ ಶಿಶುಗೀತೆ.<br>* ಕಥನಗೀತೆಯಾಗಿರಲಿ.<br>* ಸರಳವಾಗಿ ಹಾಡಲು ಯೋಗ್ಯವಾಗಿರಬೇಕು.<br>* ಪದ್ಯಪಾಠ | * ಶಿಶುಪ್ರಾಸಗೀತೆ ಹಾಡುವುದು.<br>* ಧ್ವನಿಸುರುಳಿ ಬಳಸಿ ಶಿಶು ಗೀತೆ ಕೇಳಿಸುವುದು.<br>* ನಾಟಕದ ತುಣುಕುಗಳನ್ನು ಕೇಳಿಸುವುದು. ಪಂಚತಂತ್ರದ ಕಥೆ ಕೇಳಿಸುವುದು.<br>* ನಂತರ ಏಕೆ? ಹೇಗೆ?– ಪ್ರಶ್ನೆಗಳಿಗೆ ಉತ್ತರ ಪಡೆಯುವುದು. | * ಶಿಶುಗೀತೆ; ಕಥೆಗಳನ್ನು ಹೇಳಬೇಕು. ನಂತರ ಏಕೆ? ಹೇಗೆ? – ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>**(ಅವಧಿ : 19)** |

**ಮಾತನಾಡುವುದು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ಅಕ್ಷರಗಳನ್ನು ಸರಿಯಾಗಿ ಉಚ್ಚರಿಸುವುದು. | * ವರ್ಣಮಾಲೆಯ ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸುವ ಸಾಮರ್ಥ್ಯವನ್ನು ಬೆಳೆಸುವುದು. | * ವರ್ಣಮಾಲೆಯ ಸ್ವರ, ವ್ಯಂಜನ, ಯೋಗವಾಹಗಳು ಮಹಾಪ್ರಾಣ, ಅಲ್ಪಪ್ರಾಣ, ಅನುನಾಸಿಕ ಅಕ್ಷರಗಳಿಂದ ಸರಳ ಸಂಯುಕ್ತಾಕ್ಷರಗಳು ಬರುವಂತಹ ಪದ್ಯ.<br>* ಪದ್ಯಪಾಠ | * ಪದ್ಯವನ್ನು ಗಟ್ಟಿಯಾಗಿ ಹಾಡಿಸುವುದು.<br>* ನಾಲಿಗೆ ಸುರುಳಿ ಚಟುವಟಿಕೆ ಮಾಡಿಸುವುದು. (ಕುಂದಾಪುರದ ಕೆಂಪು ಕುಂಕುಮ, ಬಸಪ್ಪನ ಮನೆಯಲ್ಲಿ ಗಸಗಸೆ ಪಾಯಸ– ಇಂತಹ ವಾಕ್ಯಗಳನ್ನು ಹೇಳಿಸುವುದು.)<br>* ಪಠ್ಯಭಾಗವನ್ನು ಗಟ್ಟಿಯಾಗಿ ಸ್ವರ ಏರಿಳಿತದೊಂದಿಗೆ ಓದಿಸುವುದು.<br>* ಎಲ್ಲಾ ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸುವಂತೆ ಮಾಡುವುದು. | * ವಿದ್ಯಾರ್ಥಿ ಮಾತನಾಡುವ ಸಂದರ್ಭದಲ್ಲಿ ಉಚ್ಚಾರಣೆಯನ್ನು ಗಮನಿಸುವುದು.<br>* ಪ್ರಶ್ನೆಗಳಿಗೆ ಉತ್ತರಿಸುವಾಗ ಮಗುವಿನ ಉಚ್ಚಾರಣೆಯನ್ನು ಗಮನಿಸುವುದು.<br>**(ಅವಧಿ : 19)** |
| 2. | * ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು. | * ಉಚ್ಚಾರಣೆಯ ಸ್ಪಷ್ಟತೆ ರಾಗವಾಗಿ ಹಾಡುವುದು, ಸಾಮೂಹಿಕವಾಗಿ ಹಾಡುವಾಗ ಗುಂಪನ್ನು ಅನುಸರಿಸುವುದು. | * ಲಯಬದ್ಧ ಸರಳ ಪದಗಳಿರುವ ಹಾಡಲು ಯೋಗ್ಯವಾದ ಶಿಶುಗೀತೆಗಳು<br>* ಮಕ್ಕಳಿಗಾಗಿ ಹಿರಿಯರು ಬರೆದ ಯಾವುದಾದರೊಂದು ಜನಪ್ರಿಯ ಶಿಶುಗೀತೆ.<br>* ಪದ್ಯಪಾಠ | * ರಾಗವಾಗಿ ಪದ್ಯವನ್ನು ಹಾಡಿಸುವುದು.<br>* ಒಂಟಿಯಾಗಿ ಪದ್ಯವನ್ನು ಹಾಡಿಸುವುದು.<br>* ಸಾಮೂಹಿಕವಾಗಿ ಪದ್ಯವನ್ನು ಹಾಡಿಸುವುದು.<br>* ಪಠ್ಯ ಪುಸ್ತಕದ ಶಿಶುಗೀತೆ ಸಹಿತ ಕನಿಷ್ಠ ಎರಡು ಗೀತೆಯನ್ನು ಹಾಡಿಸುವುದು. | * ಶಿಶುಗೀತೆಯನ್ನು ಒಂಟಿಯಾಗಿ ಮತ್ತು ಗುಂಪಿನಲ್ಲಿ ಹಾಡಿಸಿ ಗಮನಿಸುವುದು.<br>**(ಅವಧಿ : 19)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಸರಳ ಪ್ರಶ್ನೆಗಳಿಗೆ ಪೂರ್ಣ ವಾಕ್ಯಗಳಲ್ಲಿ ಉತ್ತರಿಸುವುದು. | * ಕೇಳಿದ ಪ್ರಶ್ನೆಗಳಿಗೆ ಪೂರ್ಣ ವಾಕ್ಯದಲ್ಲಿ ಉತ್ತರಿಸುವ ಸಾಮರ್ಥ್ಯವನ್ನು ಬೆಳೆಸುವುದು. | * ಹಾಡಲು ಯೋಗ್ಯವಾದ ಸರಳ ಪದಗಳಿರುವ ಪದ್ಯ. (ಸೂರ್ಯ, ಚಂದ್ರ ಪರಿಸರ ಇದರ ವರ್ಣನೆ ಇರುವ ಪದ್ಯ)<br>* ಪದ್ಯಪಾಠ | * ಪದ್ಯವನ್ನು ಹಾಡಿಸಿದ ನಂತರ ಸರಳಪ್ರಶ್ನೆಗಳಿಗೆ ಪೂರ್ಣವಾಕ್ಯದಲ್ಲಿ ಉತ್ತರ ಹೇಳಿಸುವುದು.<br>* ಕಥೆ ಹೇಳುವುದು, ನಂತರ ಆ ಕಥೆಗೆ ಪೂರಕವಾದ ಸರಳ ಪ್ರಶ್ನೆಗಳನ್ನು ಕೇಳಿ ಪೂರ್ಣವಾಕ್ಯದಲ್ಲಿ ಉತ್ತರ ಹೇಳಿಸುವುದು. | * ಪೂರ್ಣ ಉತ್ತರ ಬರುವಂತಹ ಪ್ರಶ್ನೆಯನ್ನು ಕೇಳಿ ಉತ್ತರ ಪಡೆಯುವುದು.<br>**(ಅವಧಿ : 19)** |
| 4. | * ಪರಿಚಿತ ವಸ್ತುಗಳ ಬಗ್ಗೆ ಮಾಹಿತಿಯನ್ನು ಕೇಳುವುದು. | * ಪರಿಚಿತ ವಸ್ತುಗಳ ಬಗ್ಗೆ ಮಾಹಿತಿಯನ್ನು ಕೇಳು ವುದರ ಮೂಲಕ ಮಗುವಿನ ಸಂದೇಹವನ್ನು ನಿವಾರಿಸುವುದು.<br>* ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವ ಪ್ರವೃತ್ತಿಯನ್ನು ಅಭಿವೃದ್ಧಿಪಡಿಸುವುದು. | * (ಪರಿಚಿತ ವಸ್ತು, ಪ್ರಾಣಿಪಕ್ಷಿ, ದಿನಬಳಕೆ ವಸ್ತು, ಗೃಹ ಬಳಕೆ ವಸ್ತು, ಇವುಗಳ ಮಾಹಿತಿಗಳಿರುವ ಗದ್ಯಭಾಗ.)<br>* ಪ್ರಾಣಿ–ಪಕ್ಷಿಗಳ ಸಂಭಾಷಣೆ ಗಳನ್ನು ಒಳಗೊಂಡಿರುವ ಗದ್ಯಭಾಗ.<br>* ಗದ್ಯಪಾಠ | * ಚಿತ್ರನೋಡಿ ಮಾಹಿತಿ ಹೇಳುವ ಚಟುವಟಿಕೆ.<br>* ಈರುಳ್ಳಿ ಉಂಡೆ ಚಟುವಟಿಕೆ<br>* ಪರಿಚಿತ ವಸ್ತುಗಳ ಬಗ್ಗೆ ಪೂರ್ಣವಾಕ್ಯಗಳಲ್ಲಿ (ಕನಿಷ್ಠ 3–4 ವಾಕ್ಯಗಳಲ್ಲಿ) ಮಾಹಿತಿ ಹೇಳಿಸುವುದು.<br>* ಪರಿಚಿತ ವಸ್ತುಗಳ ಬಗ್ಗೆ ಆಶುಭಾಷಣ ಮಾಡಿಸುವುದು. | * ಪರಿಚಿತ ವಸ್ತುಗಳ ಬಗ್ಗೆ ಮಾಹಿತಿ ಕೇಳಿ ಉತ್ತರ ಪಡೆಯುವುದು.<br>**(ಅವಧಿ : 25)** |
| 5. | * ವಿನಯಪೂರ್ವಕವಾಗಿ ಮಾತನಾಡುವುದು. | * ಗುರು ಹಿರಿಯರೊಂದಿಗೆ ಹಾಗೂ ಇತರರೊಂದಿಗೆ ಮಾತನಾಡುವಾಗ ವಿನಯಪೂರ್ವಕವಾಗಿ ಮಾತನಾಡುವ ಕೌಶಲ ವನ್ನು ಬೆಳೆಸುವುದು. | * ವಿನಯಪೂರ್ವಕವಾಗಿ ಮಾತನಾಡುವ ಸನ್ನಿವೇಶ, ನುಡಿಮುತ್ತು, ಲೋಕೋಕ್ತಿ ಇತ್ಯಾದಿ.<br>* ಗುರುಭಕ್ತಿ, ದೇಶಪ್ರೇಮ, ಗೌರವಾದರವನ್ನು ಮೂಡಿಸುವ ಕಥೆ.<br>* ಗದ್ಯಪಾಠ | * ಗುರು–ಶಿಷ್ಯರ ಸಂಭಾಷಣೆ<br>* ತಂದೆ–ಮಗನ ಸಂಭಾಷಣೆ<br>* ನಾಟಕಾಭಿನಯ, ಚಟುವಟಿಕೆ ಮಾಡಿಸುವುದು.<br>* ಗೌರವಪೂರ್ವಕವಾಗಿ ಮಾತನಾಡುವ ಚಟುವಟಿಕೆ ರೂಪಿಸುವುದು. | * ಇದು ನಿರಂತರ ಸಾಮರ್ಥ್ಯ ವಾಗಿದ್ದು ಮಗು ಮಾತ ನಾಡುವ ಸಂದರ್ಭದಲ್ಲಿ ವೀಕ್ಷಿಸುವುದು.<br>**(ಅವಧಿ : 25)** |

## ಓದುವುದು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ವಿರಳವಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರುತಿಸುವುದು. | * ಸ್ಪಷ್ಟವಾಗಿ ಓದಲು ಅನುಕೂಲವಾಗುವ ನಿಟ್ಟಿನಲ್ಲಿ ವಿರಳ ಹಾಗೂ ಸಂಯುಕ್ತಾಕ್ಷರಗಳನ್ನು ಗುರುತಿಸಿ ಉಚ್ಚರಿಸುವ ಕೌಶಲ ಬೆಳೆಸುವುದು. | * ವಿರಳವಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳು ಹೆಚ್ಚಾಗಿರುವ (ಕನಿಷ್ಠ 10 ಪದಗಳು) ಗದ್ಯಭಾಗ. ಉದಾ : ಈ, ಐ, ಔ, ಖ, ಘ, ಶ, ಷ, ಣ ಈ ಅಕ್ಷರಗಳಿರುವ ಪದಗಳು.<br>* ಯಾವುದಾದರೂ ಒಂದು ಹಬ್ಬದ ಬಗ್ಗೆ ಸರಳ – ವಿವರಣೆಗಳಿರುವ ಗದ್ಯ ಉದಾ : ದೀಪಾವಳಿ.<br>* ಗದ್ಯಪಾಠ | * ಓದುವ ಆಟ<br>* ಭಾಷಾ ಆಟ<br>* ಪದಗಳ ಅಂತ್ಯಾಕ್ಷರಿ<br>* ವಿರಳವಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರುತಿಸುವ ಚಟುವಟಿಕೆಗಳನ್ನು ಮಾಡಿಸುವುದು.<br>* ಮೀನಿನ ಗಾಳದ ಆಟದ ಚಟುವಟಿಕೆ ಮಾಡಿಸುವುದು. | * ವಿರಳವಾಗಿ ಉಪಯೋಗಿಸುವ ಅಕ್ಷರ / ಸಂಯುಕ್ತಾಕ್ಷರಗಳನ್ನು ಓದಿಸುವುದು. (ಮಿಂಚುಪಟ್ಟಿಗಳನ್ನು ಬಳಸಿಕೊಂಡು).<br>**(ಅವಧಿ : 25)** |
| 2. | * ದೊಡ್ಡ ಮತ್ತು ಸಣ್ಣ ಗಾತ್ರದ ಮುದ್ರಿತ ಅಕ್ಷರಗಳನ್ನು ಓದುವುದು. | * ಯಾವುದೇ ವಿನ್ಯಾಸದ ಅಕ್ಷರಗಳಿರುವ ಮುದ್ರಿತ ರಚನೆಗಳನ್ನು ಓದುವ ಕೌಶಲ ಬೆಳೆಸುವುದು. | * ದೊಡ್ಡ ಮತ್ತು ಸಣ್ಣ ಗಾತ್ರದ ಮುದ್ರಿತ ಅಕ್ಷರಗಳಿರುವ ಗದ್ಯಭಾಗ. (ಜನಪ್ರಿಯ ಚಿತ್ರಸಹಿತ ಕಥೆ ನರಿ ಮತ್ತು ದ್ರಾಕ್ಷಿ, ಟೋಪಿ ವ್ಯಾಪಾರಿ, ಕಾಗೆ ಮತ್ತು ನರಿ ಯಾವುದಾದರೂ ಒಂದು.)<br>* ಗದ್ಯಪಾಠ | * ಮಕ್ಕಳ ಕಥೆಗಳನ್ನು ಓದುವುದು.<br>* ವಾರ್ತಾಪತ್ರಿಕೆಯ ಶಿರೋನಾಮೆಗಳನ್ನು ಓದುವುದು.<br>* ಮುದ್ರಿತ ಅಕ್ಷರಗಳ ಮಿಂಚುಪಟ್ಟಿ ಬಳಸುವುದು.<br>* ಮಕ್ಕಳ ಸಾಹಿತ್ಯವನ್ನು ಓದುವುದು. | * ದಪ್ಪ ಅಕ್ಷರಗಳಿರುವ ಪದಗಳನ್ನು ಓದಿಸುವುದು.<br>* ವಾರ್ತಾಪತ್ರಿಕೆಗಳ ಶಿರೋನಾಮೆಗಳನ್ನು ಓದಿಸುವುದು.<br>* ದೊಡ್ಡ ಮತ್ತು ಸಣ್ಣಗಾತ್ರದ ಮುದ್ರಿತ ಅಕ್ಷರಗಳನ್ನು ಓದಿಸುವುದು.<br>**(ಅವಧಿ : 25)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಪ್ರಾಸಪದ್ಯ, ಹಾಡು ಮತ್ತು ಕಥೆಗಳನ್ನು ಗಟ್ಟಿಯಾಗಿ ಓದುವುದು. | * ಸ್ವರಭಾರ, ಏರಿಳಿತ, ಸ್ಪಷ್ಟ ಉಚ್ಚಾರಣೆಯೊಂದಿಗೆ ತಪ್ಪಿಲ್ಲದೇ ಓದುವ ಕೌಶಲವನ್ನು ಬೆಳೆಸುವುದು. | * ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುವ ಸರಳ ಪದ, ಪ್ರಾಸಪದ, ಸುಲಭವಾಗಿ ಅರ್ಥವಾಗುವ ನೆನಪಿಟ್ಟುಕೊಳ್ಳಲು ಅನುಕೂಲವಾಗುವ ಪದಗಳಿಂದ ಕೂಡಿರುವ ಪದ್ಯ.<br>* ಪದ್ಯಪಾಠ | * ಪ್ರಾಸ ಪದ್ಯಗಳನ್ನು ಹಾಡಿಸುವುದು.<br>* ಅಭಿನಯ ಗೀತೆ ಹಾಡಿಸುವುದು.<br>* ಮಕ್ಕಳ ಕಥೆಗಳನ್ನು ಓದಿಸುವುದು<br>* ಎರಡು ಕನಿಷ್ಠ ಪ್ರಾಸ ಪದ್ಯ ಮತ್ತು ಒಂದು ಕಥೆಯನ್ನು ಮಕ್ಕಳಿಂದ ಗಟ್ಟಿಯಾಗಿ ಓದಿಸುವುದು | * ಶಿಶುಗೀತೆ, ಪ್ರಾಸಗೀತೆ ಪದ್ಯಗಳನ್ನು ರಾಗವಾಗಿ ಹಾಡಿಸುವುದು. ಅಭಿನಯದ ಮೂಲಕವೂ ಹಾಡಿಸುವುದು.<br>**(ಅವಧಿ : 19,))** |
| 4. | * ಸುಮಾರು 2,000 ಪದಗಳನ್ನು ಗ್ರಹಿಸುವುದು. | * ಪದ ಸಂಪತ್ತನ್ನು ಹೆಚ್ಚಿಸುವುದು.<br>* ಸ್ವತಂತ್ರವಾಗಿ ಓದುವ, ಹೊಸಪದಗಳನ್ನು ಗುರುತಿಸಿ ಅವುಗಳ ಅರ್ಥಗ್ರಹಿಸುವ ಸಾಮರ್ಥ್ಯ ಬೆಳೆಸುವುದು. | * ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳಿರುವ ಪಠ್ಯಭಾಗ.<br>* ಈ ಪಠ್ಯಭಾಗದಲ್ಲಿ ಸಮಾನಾರ್ಥಕ, ವಿರುದ್ಧಾರ್ಥಕ ಪದ, ಲಿಂಗ ವಚನ ಕೂಡಿಸಿ ಬರೆಯಲು ಅನುಕೂಲವಾಗುವ ಪದಗಳಿರಲಿ.<br>* ವ್ಯಕ್ತಿ ಚಿತ್ರಣ, ಬಾಲ ಪ್ರತಿಭೆಗಳ ಪರಿಚಯದ ಪಾಠಗಳು.<br>* ಗದ್ಯಪಾಠ | * ಪಾಠ ಓದಿಸುವುದು ಉಕ್ತಲೇಖನ, ಹೊಸ ಪದಗಳನ್ನು ಗುರುತಿಸುವುದು.<br>* ಪದಗಳ ಅರ್ಥ ತಿಳಿಸುವುದು ಸ್ವಂತ ವಾಕ್ಯರಚನೆ.<br>* ವಚನ ಬದಲಾಯಿಸುವುದು, ಪದಗಳನ್ನು ಕೂಡಿಸಿ ಹೊಸ ಪದಗಳ ರಚನೆ.<br>* ಅಂತ್ಯಾಕ್ಷರಿ ಆಟ<br>* ವಿರುದ್ಧಾರ್ಥಕ ಪದಗಳ ಪರಿಚಯಮಾಡಿಕೊಡುವುದು. | * ಈ ಸಾಮರ್ಥ್ಯವನ್ನು ನಿರಂತರವಾಗಿ ಮೌಲ್ಯ ಮಾಪನ ಮಾಡಬೇಕಾಗಿದೆ. ಆದುದರಿಂದ ಪ್ರತಿ ಪಾಠದಲ್ಲಿ ಪದಗಳನ್ನು ಕೂಡಿಸಿ ಬರೆಯುವುದು. ಪದಗಳ ಅರ್ಥ ತಿಳಿಸುವುದು. ವಚನ ಬದಲಾಯಿಸುವುದು. ಇದಕ್ಕೆ ಸಂಬಂಧಿಸಿದ ಹಾಗೆ ಮೌಲ್ಯ ಮಾಪನ ಚಟುವಟಿಕೆಯನ್ನು ರೂಪಿಸುವುದು.<br>**(ಅವಧಿ : 25)** |

## ಬರೆಯುವುದು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ಸಂಯುಕ್ತಾಕ್ಷರ, ಪದ ಮತ್ತು ವಾಕ್ಯಗಳನ್ನು ನಕಲು ಮಾಡುವುದು. | * ತಪ್ಪಿಲ್ಲದಂತೆ ಪದ ಹಾಗೂ ವಾಕ್ಯಗಳನ್ನು ನಕಲು ಮಾಡುವ ಕೌಶಲವನ್ನು ಬೆಳೆಸುವುದು. | * ಸರಳ ಪದಗಳು<br>* ವಾಕ್ಯಗಳು<br>* ವಾಕ್ಯಗಳಲ್ಲಿ ಸಾಧ್ಯವಾದಷ್ಟು ಸಜಾತಿ ಸಂಯುಕ್ತಾಕ್ಷರಗಳು ಇರಲಿ.<br>* 'ಊರಿನ ಜಾತ್ರೆ' ಕುರಿತಾದುದು<br>* ಗದ್ಯಪಾಠ | * ಕಾಪಿ ಬರವಣಿಗೆ<br>* ನೋಡಿ ಬರೆಸುವುದು<br>* ಮೇಜುಕಟ್ಟಿನಲ್ಲಿ ಬರವಣಿಗೆ ಮಾಡಿಸುವುದು.<br>* ಅಭ್ಯಾಸದ ಪ್ರಶ್ನೆಗಳಿಗೆ ಉತ್ತರ ಬರೆಸುವುದು | * ವಾಕ್ಯ ಮತ್ತು ಸಂಯುಕ್ತಾಕ್ಷರಗಳನ್ನು ನಕಲು ಮಾಡಿಸುವುದು.<br><br>**(ಅವಧಿ : 25)** |
| 2. | * ಉಕ್ತಲೇಖನದ ಮೂಲಕ ಸಂಯುಕ್ತಾಕ್ಷರ ಮತ್ತು ಪರಿಚಿತ ಪದಗಳನ್ನು ಬರೆಯುವುದು. | * ಯಾವುದೇ ಪರಿಚಿತ ಪದ, ಸಂಯುಕ್ತಾಕ್ಷರಗಳನ್ನು ಹೇಳಿದಾಗ ತಪ್ಪಿಲ್ಲದೆ ಬರೆಯುವ ಕೌಶಲವನ್ನು ಬೆಳೆಸುವುದು. | * ಪರಿಚಿತ ಪದಗಳು ಹೆಚ್ಚಾಗಿರುವ (ಪರಿಚಿತ ಹಾಗೂ ಗೃಹಬಳಕೆ ವಸ್ತುಗಳನ್ನು ಸೂಚಿಸುವ ಹಾಗೂ ಪರಿಚಿತ ಪ್ರಾಣಿ ಪಕ್ಷಿಗಳ ಪದಗಳು) ('ಮೃಗಾಲಯ' ಕುರಿತ ಸರಳವಿವರಣಾತ್ಮಕ ಗದ್ಯ<br>* ಗದ್ಯಪಾಠ | * ಪ್ರತಿದಿನ ಕನಿಷ್ಠ ಹತ್ತು ಪದಗಳ ಉಕ್ತಲೇಖನ ನೀಡುವುದು.<br>* ಪರಿಚಿತ ವಸ್ತುಗಳ ಹೆಸರನ್ನು ಪಟ್ಟಿಮಾಡಿಸುವುದು.<br>* ಚಿತ್ರ ನೋಡಿ ಪದ ಬರೆಸುವುದು<br>* ಪಾಠ ಓದಿದ ನಂತರ ನೋಡದೆ ಕನಿಷ್ಠ ಹತ್ತು ಸಂಯುಕ್ತಾಕ್ಷರ / ಪರಿಚಿತ ಪದಗಳನ್ನು ಬರೆಸುವುದು. | * ಪದಕೋಶ, ಪದ ಅರ್ಥಕೋಶ, ಬಳಸಿಕೊಂಡು ಉಕ್ತಲೇಖನ ನೀಡುವುದು.<br><br>**(ಅವಧಿ : 25)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಸೂಚನೆಗಳನ್ನು ಅನುಸರಿಸಿ ಸರಳ ವಾಕ್ಯಗಳನ್ನು ಬರೆಯುವುದು. | * ಸೂಚನೆಗಳನ್ನು ಅನುಸರಿಸಿ ಸರಳ ವಾಕ್ಯಗಳನ್ನು ಸ್ವತಂತ್ರವಾಗಿ ಬರೆಯುವ ಕೌಶಲವನ್ನು ಅಭಿವೃದ್ಧಿ ಗೊಳಿಸುವುದು. | * ಶಾಲೆ, ಮನೆ, ಪರಿಸರ ಹಾಗೂ ವೈಯಕ್ತಿಕವಾಗಿ ಮಾಡಬಹುದಾದ ಕೆಲಸ ಗಳಿಗೆ ಅನುಕೂಲವಾಗು ವಂತಹ ಸೂಚನೆಗಳು.<br>* ಸರಳ ಆಟ, ಸರಳ ಚಟುವಟಿಕೆಗಳ ಸೂಚನೆ ಗಳು. 'ಶಾಲಾ ಕೈ ತೋಟ' ಕುರಿತ ಸರಳ ವಿವರಣೆ ಗಳಿರುವ ಪಾಠ.<br>* ಗದ್ಯಪಾಠ | * ಸರಳ ಸೂಚನೆಗಳನ್ನು ಅನುಸರಿಸಿ ಸರಳ ವಾಕ್ಯ ಗಳನ್ನು ಬರೆಸುವುದು.<br>* ಗಾದೆಮಾತುಗಳನ್ನು ಬರೆಸುವುದು<br>* ಯೋಚಿಸಿ ಬರೆಯುವ ಚಟುವಟಿಕೆ ರೂಪಿಸು ವುದು. | * ಸರಳ ಸೂಚನೆಗಳನ್ನು ತಿಳಿಸಿ ಸರಳ ವಾಕ್ಯಗಳನ್ನು ಬರೆಸುವುದು.<br>* ಮಗು ಯೋಚಿಸಿ ಸರಳ ವಾಕ್ಯ ಬರೆಯುವ ಸರಳ ಪ್ರಶ್ನೆ ಕೇಳುವುದು.<br>* ಬರೆದ ಉತ್ತರ ಪರಿಶೀಲಿ ಸುವುದು.<br>**(ಅವಧಿ : 25)** |
| 4 | * ಕೊಟ್ಟಿರುವ ಪದಕ್ಕೆ ಆರಂಭ ಅಥವಾ ಅಂತ್ಯದಲ್ಲಿ ಅಕ್ಷರವನ್ನು ಸೇರಿಸಿ ಹೊಸ ಪದಗಳನ್ನು ರಚಿಸುವುದು. | * ಪದದ ಪ್ರಾರಂಭ ಅಥವಾ ಅಂತ್ಯಕ್ಕೆ ಅಕ್ಷರ ಅಥವಾ ಪದಗಳನ್ನು ಸೇರಿಸಿ ಅರ್ಥಪೂರ್ಣ ಪದ ರಚಿಸುವ ಸಾಮರ್ಥ್ಯ ಬೆಳೆಸುವುದು. | * ಪ್ರಾರಂಭ ಅಥವಾ ಅಂತ್ಯ ದಲ್ಲಿ ಅಕ್ಷರ ಅಥವಾ ಪದ ಸೇರಿಸಿದರೆ ಅರ್ಥಪೂರ್ಣ ಪದರಚನೆ ಆಗುವಂತಹ ಪದಗಳು.<br>ಉದಾ : ರಸ, ಸರಸ<br>ಸಮರಸ<br>ಸರ, ಸರಸ<br>ಅವಸರ<br>ಇತ್ಯಾದಿ, ಸರಳ ಹಾಡಲು ಯೋಗ್ಯವಾದ ಪ್ರಾಸ ಪದ ಗಳಿಂದ ಕೂಡಿದ ಪದ್ಯ ಭಾಗ<br>* ಪದ್ಯಪಾಠ | * ಪದಗಳ ಅಂತ್ಯಾಕ್ಷರಿ ಆಟ<br>* ಪ್ರಾಸಪದಗಳ ಪಟ್ಟಿ ಮಾಡಿಸುವುದು.<br>* ಪದದ ಮುಂದೆ ಅಕ್ಷರವೊಂದನ್ನು ಸೇರಿಸಿ ಅರ್ಥ ಬರುವಂತಹ ಹೊಸಪದಗಳ ರಚನೆ.<br>* ಇದೇ ಮಾದರಿಯಲ್ಲಿ ಪದದ ಅಂತ್ಯಕ್ಕೆ ಅಕ್ಷರ ವನ್ನು ಸೇರಿಸಿ ಅರ್ಥ ಬರುವಂತಹ ಹೊಸ ಪದಗಳ ರಚನೆ. | * ಪದಗಳನ್ನು ನೀಡಿ ಆರಂಭ ಮತ್ತು ಅಂತ್ಯದಲ್ಲಿ ಅಕ್ಷರ ಅಥವಾ ಪದ ಸೇರಿಸಿ ಅರ್ಥ ಪೂರ್ಣ ಪದ ರಚಿಸುವುದು.<br>**(ಅವಧಿ : 19)** |

# ಪ್ರಥಮ ಭಾಷೆ – ಕನ್ನಡ ಪಠ್ಯವಸ್ತು

## ಮೂರನೇ ತರಗತಿ

- ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ
- ಪಠ್ಯ ಬರೆಯಲು ಕೆಲವು ಸಾಮಾನ್ಯ ಸೂಚನೆ
- ಅವಧಿ ಹಂಚಿಕೆ ಕೋಷ್ಠಕ
- ಕ್ರೋಢೀಕೃತ ಸಾಮರ್ಥ್ಯ ಪಟ್ಟಿ
- ಸಾಮರ್ಥ್ಯವಾರು ಪಠ್ಯವಸ್ತು

## ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ

೧. ಪ್ರಸ್ತುತ ಪಠ್ಯವಸ್ತು ತಯಾರಿಸುವಾಗ ರಾಜ್ಯ ಪಠ್ಯಕ್ರಮ ೨೦೦೧-೨೦೦೨ ಮತ್ತು ಎನ್.ಸಿ.ಎಫ್. ೨೦೦೫ ಇವೆರಡನ್ನೂ ಗಮನಿಸಿದೆ.

೨. ಮೂಲ ಕ.ಕ.ಮ. ಆಧಾರಿತ ಸಾಮರ್ಥ್ಯಗಳನ್ನು ಪ್ರಸ್ತುತ ಎನ್.ಸಿ.ಎಫ್ ೨೦೦೫ ರ ನೆಲೆಯಲ್ಲಿ ಪರಿಷ್ಕರಿಸಿದೆ.

೩. ಪಠ್ಯವಸ್ತುವನ್ನು ಶಿಶುಕೇಂದ್ರಿತ, ಸಾಮರ್ಥ್ಯಾಧಾರಿತ, ಚಟುವಟಿಕೆ ಮತ್ತು ಸಂತಸದಾಯಕ ಸನ್ನಿವೇಶವನ್ನು ಆಧರಿಸಿ ರೂಪಿಸಿದೆ.

೪. ಮಗುವಿನ ಮನೆ ಹಾಗೂ ಸ್ಥಳೀಯ ಭಾಷೆಯನ್ನು ಯಥಾವತ್ತಾಗಿ ಸ್ವೀಕರಿಸಲು ಅವಕಾಶ ಕಲ್ಪಿಸಿದೆ.

೫. ಮಗು ಶಾಲೆಯಲ್ಲಿ ಪಡೆದ ಜ್ಞಾನವನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ.

೬. ರಾಷ್ಟ್ರೀಯ ಮೌಲ್ಯ ಮತ್ತು ಭಾವೈಕ್ಯತೆಗೆ ಸಂಬಂಧಿಸಿದ ಅಂಶಗಳನ್ನು ಪಠ್ಯವಸ್ತುವಿನಲ್ಲಿ ಅಳವಡಿಸಿದೆ.

೭. ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಜೋಡಿಸಿದೆ.

೮. ಪಠ್ಯವಸ್ತುವಿನಲ್ಲಿಯೇ ಮೌಲ್ಯಮಾಪನ ಹಾಗೂ ಪಠ್ಯದ ವಿಸ್ತಾರ ಎಷ್ಟಿರಬೇಕೆಂದು ವಿವರಿಸಿದೆ.

೯. ಅವಧಿಯನ್ನು ನಿರ್ಧರಿಸಿ ಅದಕ್ಕೆ ತಕ್ಕಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ.

೧೦. ಮಗು ಆಡುಭಾಷೆಯಿಂದ ಹಂತ ಹಂತವಾಗಿ ಗ್ರಾಂಥಿಕ ಭಾಷೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ.

೧೧. ರಾಷ್ಟ್ರ, ಸಮಾಜ, ವೃತ್ತಿ ಅಪೇಕ್ಷಿತ ಹಾಗೂ ನಿರೀಕ್ಷಿತ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸಲು ಅವಕಾಶ ಮಾಡಿಕೊಟ್ಟಿದೆ.

೧೨. ಭಾಷಾ ಅಭಿವೃದ್ಧಿಯೊಂದಿಗೆ ಭಾಷಾ ಕೌಶಲಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಕಲಿಕೆಯ ನಿರೀಕ್ಷಿತ ಫಲಗಳನ್ನು ಪರಿಗಣಿಸಿದೆ.

೧೩. ಶೈಕ್ಷಣಿಕ ಕ್ಷೇತ್ರದಲ್ಲಿನ ಹೊಸಹೊಸ ಸಂಶೋಧನೆ, ಪ್ರಯೋಗ ಮತ್ತು ನವೀಕರಣದ ಫಲಿತಾಂಶಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.

೧೪. ಭಾಷಾವಿಜ್ಞಾನದ ತಳಹದಿಯ ಮೇಲೆ ರೂಪಿತವಾಗಿದ್ದರೂ ಪ್ರಾದೇಶಿಕ ಭಾಷಾ ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿದೆ.

೧೫. ರಾಷ್ಟ್ರೀಯ ಶಿಕ್ಷಣನೀತಿ ೧೯೮೬ರಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಸನದ ಅಗತ್ಯತೆಯ ತತ್ತ್ವಗಳನ್ನಾಧರಿಸಿ ಪಠ್ಯವಸ್ತುವನ್ನು ತಯಾರಿಸಿದೆ.

೧೬. ನಗರ ಮತ್ತು ಗ್ರಾಮಾಂತರ ಶೈಕ್ಷಣಿಕ ಅಂತರವನ್ನು ಕಡಿಮೆಗೊಳಿಸಲು ಹೆಚ್ಚು ಒತ್ತು ನೀಡಿದೆ. ಮಕ್ಕಳ ಮನೋವಿಕಾಸ ಭೂಮಿಕೆಗೂ ಸಮಾನ ಪ್ರಾತಿನಿಧ್ಯ ನೀಡಿದೆ.

೧೭. ಪರಿಣಾಮಕಾರಿ ಕಲಿಕೆಯಲ್ಲಿ, ಚಟುವಟಿಕೆ ಮತ್ತು ಇನ್ನಿತರ ಸಮಗ್ರ ವಿಧಾನಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.

## ಪಠ್ಯ ಬರೆಯಲು ಕೆಲವು ಸಾಮಾನ್ಯ ಸೂಚನೆ

೧. ಪಠ್ಯದಲ್ಲಿ ಬಳಕೆಯಾಗುವ ಪದಗಳು ಮಕ್ಕಳ ವಯೋಮಾನಕ್ಕೆ ತಕ್ಕದಾಗಿರಬೇಕು

೨. ಗದ್ಯ ಸುಮಾರು ೨೫೦ ರಿಂದ ೩೨೦ ಪದಗಳನ್ನು ಒಳಗೊಂಡಿರಬೇಕು

೩. ಪದ್ಯ ೪ ರಿಂದ ೬ ನುಡಿಗಳನ್ನು ಹೊಂದಿದ್ದು ೧೦ ರಿಂದ ೧೬ ಸಾಲನ್ನು ಹೊಂದಿರಬೇಕು

೪. ಪಠ್ಯಪುಸ್ತಕದ ಒಟ್ಟು ೧೨೦ ರಿಂದ ೧೫೦ ಪುಟಗಳ ಮಿತಿಯಲ್ಲಿರಲಿ (ಇದರಲ್ಲಿ ಹಿಮಮಣಿ ಮುನ್ನುಡಿ ಇತ್ಯಾದಿಗಳೆಲ್ಲ ಸೇರಿರಲಿ)

೫. ಓದಿ–ತಿಳಿ, ಮಾಡಿ–ಕಲಿ (ಪದಗಳ ಅರ್ಥ ನೀಡಲು) ವಿಭಾಗದಲ್ಲಿ ಪದಗಳಿಗೆ ಇತರ ಅರ್ಥ ನೀಡುವುದರ ಜತೆಗೆ ಪ್ರತಿ ಪದಕ್ಕೂ ಒಂದೊಂದು ಸರಳ ವಾಕ್ಯ ನೀಡಬೇಕು

೬. ಗದ್ಯದಲ್ಲಿ ಹೆಚ್ಚು ಸ್ಪಷ್ಟವಾದ ಬಹುವರ್ಣಗಳಿಂದ ಕೂಡಿದ ಕನಿಷ್ಠ ೨ / ೩, ಪದ್ಯದಲ್ಲಿ ಕನಿಷ್ಠ ೧ / ೨ ಚಿತ್ರಗಳಿರಬೇಕು

೭. ಪದ್ಯದ ಭಾವಾರ್ಥವನ್ನು ಪದ್ಯದ ಕೊನೆಯಲ್ಲೂ ಕವಿಯ ಪರಿಚಯವನ್ನು ಪದ್ಯದ ಪ್ರಾರಂಭದಲ್ಲೂ ನೀಡಬೇಕು

೮. ಕಥೆಗಳನ್ನು ಆರಿಸಿಕೊಳ್ಳುವಾಗ ರೋಚಕತೆಗೆ, ಕುತೂಹಲ, ಕಲ್ಪನೆ, ಅದ್ಭುತ, ರಮ್ಯತೆಗೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು

೯. ಅಭ್ಯಾಸಗಳಲ್ಲಿ ಎಲ್ಲಾ ವಿಧದ ಪ್ರಶ್ನೆಗಳಿಗೆ ಮೌಲ್ಯಮಾಪನ ಸಾಧನಗಳಿಗೆ (ಪ್ರಶ್ನೋತ್ತರ ವಿವರಣೆ, ಉದಾಹರಣೆ, ಸಂಬಂಧ ಕಲ್ಪಿಸುವಿಕೆ, ಚಿತ್ರಗಳಿಗೆ ವಿವರಣೆ, ಸನ್ನಿವೇಶಕ್ಕೆ ವಿವರಣೆ, ವಾಕ್ಯರಚನೆ, ಸರಿತಪ್ಪು ಗುರುತಿಸುವಿಕೆ ಹೊಂದಿಸಿ ಬರೆಯುವಿಕೆ, ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯುವಿಕೆ, ಪದಬಂಧ, ಪದಕ್ರೀಡೆ, ಪದಚಕ್ರ, ಅಂತ್ಯಾಕ್ಷರಿ, ಸಮಾನಾರ್ಥಕ, ಭಿನ್ನಾರ್ಥಕ, ವಿರುದ್ಧಾರ್ಥಕ, ಪದಬಳ್ಳಿ, ಸಂದರ್ಭ ಸ್ವಾರಸ್ಯ.... ಇತ್ಯಾದಿ) ಪ್ರಾತಿನಿಧ್ಯ ನೀಡಬೇಕು

೧೦. ಅಭಿವ್ಯಕ್ತಿ ಸಂದರ್ಭದಲ್ಲಿ ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕು

೧೧. ಮಗುವಿನ ಆಡುಭಾಷೆಗೆ ಪ್ರಾಧಾನ್ಯತೆ ನೀಡಿ ಅದೇ ಭಾಷೆಯಲ್ಲಿ ಮಾತನಾಡಲು, ಬರೆಯಲು ಪ್ರಾರಂಭಿಕ ಹಂತದಲ್ಲಿ ಅವಕಾಶ ನೀಡಬೇಕು

೧೨. ಸೃಜನಾತ್ಮಕತೆ ಹಾಗೂ ಸ್ವಂತಿಕೆಗೆ ಅಭ್ಯಾಸದಲ್ಲಿ ಹೆಚ್ಚು ಒತ್ತು ನೀಡಬೇಕು

೧೩. ಗಾದೆ, ಒಗಟು, ಕಥೆಗಳನ್ನು ಸ್ಥಳೀಯವಾಗಿ ಸಂಗ್ರಹಿಸಲು, ಸಂಗ್ರಹಿಸಿದ್ದನ್ನು ಬರೆದು ಸಂರಕ್ಷಿಸಲು, ಸಂರಕ್ಷಿಸಿದ್ದನ್ನು ತರಗತಿಯಲ್ಲಿ ಓದಲು ಅವಕಾಶ ಕಲ್ಪಿಸಬೇಕು

೧೪. ಮೌಲ್ಯಮಾಪನದಲ್ಲಿ ಕೇವಲ ಪಠ್ಯವಿಷಯಕ್ಕೆ ಪ್ರಾಧಾನ್ಯತೆ ನೀಡದೆ ಸಾಮರ್ಥ್ಯಾಧಾರಿತ ಮೌಲ್ಯಮಾಪನಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು

೧೫. ಸ್ವಕಲಿಕಾ ಚಟುವಟಿಕೆಗಳಿಗೆ ಅವಕಾಶ ನೀಡಬೇಕು

೧೬. ಪಠ್ಯ, ಅಭ್ಯಾಸ ಮತ್ತು ಮೌಲ್ಯಮಾಪನ ಚಟುವಟಿಕೆಗಳನ್ನು ವೇಗದ ಕಲಿಕೆ–ಮಂದಕಲಿಕೆ ಹಾಗೂ ಕಲಿಕೆಯಲ್ಲಿ ನಿಧಾನಿಸಿದ ಮಕ್ಕಳೆಲ್ಲರನ್ನು ಪರಿಗಣಿಸಿ ರಚಿಸಬೇಕು

# ಅವಧಿ ಹಂಚಿಕೆ ಕೋಷ್ಠಕ

## ಸಾಮರ್ಥ್ಯಾಧಾರಿತ ಅವಧಿ ಕೋಷ್ಠಕ

| | ಕ್ಷೇತ್ರ | ನಿಗದಿಪಡಿಸಿದ ಅವಧಿ |
|---|---|---|
| ೧. | ಆಲಿಸುವುದು | ೮೭ |
| ೨. | ಮಾತನಾಡುವುದು | ೯೯ |
| ೩. | ಓದುವುದು | ೧೧೪ |
| ೪. | ಬರೆಯುವುದು | ೭೮ |
| ೫. | ಸೇತುಬಂಧ | ೪೨ |
| | **ಒಟ್ಟು** | **೪೨೦** |

## ಪಠ್ಯಪುಸ್ತಕ ರಚನಾಧಾರಿತ ಅವಧಿ ಕೋಷ್ಠಕ

| ಪಠ್ಯದ ವಿಭಾಗ | ಸಂಖ್ಯೆ | ನಿಗದಿಪಡಿಸಿದ ಅವಧಿ |
|---|---|---|
| ಸಾಮರ್ಥ್ಯಾಧಾರಿತ ಗದ್ಯಪಾಠ | ೧೩ | ೨೭೩ |
| ಸಾಮರ್ಥ್ಯಾಧಾರಿತ ಪದ್ಯಪಾಠ | ೦೭ | ೧೦೫ |
| ಸಾಮರ್ಥ್ಯಾಧಾರಿತ ಸೇತುಬಂಧ | – | ೪೨ |
| | **ಒಟ್ಟು** | **೪೨೦** |

## ಪ್ರತಿ ಗದ್ಯ / ಪದ್ಯಕ್ಕೆ ಅವಧಿ ಹಂಚಿಕೆ

| ಕ್ರ.ಸಂ. | ಹಂತ | ಗದ್ಯ | ಪದ್ಯ |
|---|---|---|---|
| ೧. | ಪೂರ್ವಸಿದ್ಧತೆ | ೦೨ | ೦೧ |
| ೨. | ಕಲಿಕೆ | ೦೮ | ೦೬ |
| ೩. | ಪುನರ್ಬಲನ | ೦೫ | ೦೪ |
| ೪. | ಮೌಲ್ಯಮಾಪನ | ೦೪ | ೦೩ |
| ೫. | ಪರಿಹಾರ ಬೋಧನೆ / ಪುನರ್‌ಬಲನ | ೦೨ | ೦೧ |
| | **ಒಟ್ಟು** | **೨೧** | **೧೫** |

**ಕ್ರೋಡೀಕೃತ ಸಾಮರ್ಥ್ಯ ವಿವರ ಪಟ್ಟಿ** **ತರಗತಿ : ೩**

| ಆಲಿಸುವುದು | ಮಾತನಾಡುವುದು | ಓದುವುದು | ಬರೆಯುವುದು |
|---|---|---|---|
| * ಕಥನ, ವಿವರಣೆ ಮತ್ತು ಒಗಟುಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವುದು. | * ಸರಿಯಾದ ಉಚ್ಚಾರಣೆಯೊಡನೆ ಮಾತನಾಡುವುದು. | * ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | * ಅಕ್ಷರ ಮತ್ತು ಪದಗಳನ್ನು ಸರಿಯಾದ ವಿನ್ಯಾಸ, ಅನುಕ್ರಮತೆ ಹಾಗೂ ಸೂಕ್ತ ಅಂತರದೊಂದಿಗೆ ಬರೆಯುವುದು. |
| * ಅಪರಿಚಿತ ಸನ್ನಿವೇಶ, ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವುದು. | * ಸರಿಯಾದ ಸ್ವರಭಾರ ಮತ್ತು ಅಭಿನಯದ ಮೂಲಕ ಗೊತ್ತಿರುವ ಸರಳ ಕಥೆಗಳನ್ನು ಹೇಳುವುದು. | * ಸಹಪಾಠಿಗಳ ಬರೆವಣಿಗೆಯನ್ನು ಓದುವುದು. | * ಉಕ್ತಲೇಖನದ ಮೂಲಕ ಅಪರಿಚಿತ ಪದಗಳನ್ನು ಬರೆಯುವುದು. |
| * ಆಟಗಳನ್ನು ಆಡುವ, ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಮೌಖಿಕ ಸೂಚನೆಗಳನ್ನು ಅರ್ಥ ಮಾಡಿಕೊಳ್ಳುವುದು. | * ಪರಿಚಿತ ವಸ್ತುಗಳ ಬಗ್ಗೆ ವಿವರಿಸುವುದು. | * ಸರಳ ಕಥೆಪುಸ್ತಕ ಹಾಗೂ ಮಕ್ಕಳ ಪುಸ್ತಕಗಳನ್ನು ಓದುವುದು. | * ಸೂಚನೆಗಳನ್ನು ಅನುಸರಿಸಿ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. |
| * ಪಠ್ಯದಲ್ಲಿರುವ ಮುಖ್ಯ ವಿಷಯಗಳನ್ನು ಗುರುತಿಸುವುದು. | * ತರಗತಿಯಲ್ಲಿ ನಡೆಯುವ ಸಂವಾದದಲ್ಲಿ ಭಾಗವಹಿಸುವುದು. | * ಸುಮಾರು ೩೦೦೦ ಪದಗಳನ್ನು ಓದಿ ಗ್ರಹಿಸುವುದು. | * ಕೊಟ್ಟಿರುವ ಪದಗಳ ಆಧಾರದಿಂದ ಅರ್ಥಪೂರ್ಣ ವಾಕ್ಯಗಳನ್ನು ರಚಿಸುವುದು. |
| * ಪಠ್ಯವನ್ನು ಆಲಿಸಿದ ನಂತರ ಏಕೆ ? – ಪ್ರಶ್ನೆಗೆ ಉತ್ತರಿಸುವುದು. | * ಗುಂಪಿನಲ್ಲಿ ಮಾತನಾಡುವಾಗ ಸರದಿ ಅನುಸರಿಸುವುದು. | * ಪಠ್ಯವನ್ನು ಓದಿ, ಮುಖ್ಯ ವಿಷಯವನ್ನು ಗುರುತಿಸಿ ಘಟನೆಗಳನ್ನು ಅನುಕ್ರಮವಾಗಿ ಹೇಳುವುದು. | |
| | | * ಪಠ್ಯವನ್ನು ಓದಿದ ಮೇಲೆ ಯಾರು ? ಯಾವಾಗ ? ಎಲ್ಲಿ ? ಏನು ? ಮತ್ತು ಏಕೆ ? ಪ್ರಶ್ನೆಗಳಿಗೆ ಉತ್ತರಿಸುವುದು. | |

**ಆಲಿಸುವುದು** **ಸಾಮರ್ಥ್ಯವಾರು ಪಠ್ಯವಸ್ತು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **1** | * ಕಥನ, ವಿವರಣೆ ಮತ್ತು ಒಗಟುಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವುದು. | * ಆಲಿಸುವ ಸಾಮರ್ಥ್ಯ ಹೆಚ್ಚಿಸುವುದು.<br>* ತಮ್ಮ ಪರಿಸರದಲ್ಲಿ ಆಲಿಸುವ ವಿವಿಧ ಕಥನ, ವಿವರಣೆ, ಹಾಗೂ ಒಗಟುಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವುದು. | * ಸರಳವಾದ, ಹೆಚ್ಚು ಅಪರಿಚಿತವಾಗಿರದ, ಮಕ್ಕಳ ತಿಳಿವಳಿಕೆಯ ವ್ಯಾಪ್ತಿಯೊಳಗಿನ ಪದಗಳನ್ನೊಳಗೊಂಡ ಕಥನ ಗೀತೆ.<br>* ಪದ್ಯಪಾಠ | * ನೀತಿ ಪ್ರಧಾನವಾದ ಸರಳ ಕಥನ ಗೀತೆ.<br>* ವಿನೋದದ ಕಥೆಗಳು (ತೆನಾಲಿ ರಾಮಕೃಷ್ಣ, ಬೀರಬಲ್ಲನ ಕಥೆಗಳು)<br>* ಜನಪದ ಕಥೆಗಳು, ಜನಪದ ಗೀತೆ, ಸರಳ ಮಕ್ಕಳ ಗೀತೆ/ ಕವನಗಳು<br>ಮೇಲಿನವುಗಳಲ್ಲಿ ಯಾವುದಾದರೊಂದನ್ನು ಪಠ್ಯವಾಗಿ ಬಳಸುವುದು.<br>* ಪಠ್ಯವಲ್ಲದೆ ಇತರ ಕಥನ ಗೀತೆ, ಒಗಟು ಮತ್ತು ವಿವರಣೆಗಳನ್ನು ಆಲಿಸಲು ಅವಕಾಶ ಮಾಡಿಕೊಟ್ಟು ಮಕ್ಕಳ ಆಲಿಸುವ ಸಾಮರ್ಥ್ಯವನ್ನು ಹೆಚ್ಚಿಸುವುದು.<br>* ವಿವಿಧ ಪರಿಚಿತ ವಸ್ತುಗಳ ಬಗ್ಗೆ ಶಿಕ್ಷಕರು ವಿವರಿಸಿ ಆಲಿಸುವಂತೆ ಮಕ್ಕಳಿಗೆ ಪ್ರೇರೇಪಿಸುವುದು. | * ಪಠ್ಯವನ್ನು ಆಲಿಸಿದ ಬಗ್ಗೆ ಪ್ರಶ್ನೆಗಳ ಮೂಲಕ ವಿಷಯವನ್ನು ಪುನರುಚ್ಚರಿಸುವ ಮೂಲಕ ಮೌಲ್ಯಮಾಪನ ಮಾಡುವುದು.<br>* ಬೇರೆ ಬೇರೆ ಕಥನ ಹಾಗೂ ಒಗಟುಗಳನ್ನು ಆಲಿಸಲು ಅವಕಾಶ ಮಾಡಿಕೊಟ್ಟು ಆಲಿಸಿ ಅರ್ಥಮಾಡಿಕೊಂಡ ಬಗ್ಗೆ ದೃಢೀಕರಿಸಿಕೊಳ್ಳುವುದು.<br>* ತರಗತಿಯಲ್ಲಿನ ವಿದ್ಯಾರ್ಥಿಗಳಲ್ಲಿ ಒಬ್ಬರಿಂದ ಒಗಟು, ಕಥೆಯನ್ನು ಹೇಳಿಸಿ ಉಳಿದ ಮಕ್ಕಳು ಆಲಿಸಲು ಅವಕಾಶ ಮಾಡಿ ಕೊಟ್ಟು ನಂತರ ಅವರು ಆಲಿಸಿ ಅರ್ಥಮಾಡಿಕೊಂಡ ಬಗ್ಗೆ ದೃಢಪಡಿಸಿಕೊಳ್ಳುವುದು.<br>* ಸ್ಥಳೀಯ ಒಗಟು, ಪದಬಂಧಗಳಿಗೆ ಪ್ರಾಧಾನ್ಯತೆ ನೀಡುವುದು.<br>**(ಅವಧಿ : ೧೫)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **2** | * ಅಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವುದು. | * ಮಗುವಿಗೆ ಅಪರಿಚಿತವಾದ ಸನ್ನಿವೇಶಗಳಲ್ಲಿ ಆಲಿಸುವ ಸಂಭಾಷಣೆ, ಸಂವಾದ ಗಳನ್ನು ಆಲಿಸಿ ಗ್ರಹಿಸುವುದು. | * ಸರಳ ಸಂಭಾಷಣೆ, ಸಂವಾದ ಗಳನ್ನು ಒಳಗೊಂಡ ಐತಿಹಾಸಿಕ/ಕಥನಗಳ ಗದ್ಯ.<br>* ಗದ್ಯಪಾಠ | * ಮಗವಿಗೆ ಅಪರಿಚಿತವಾದ ಆದರೆ ಸರಳ ಸನ್ನಿವೇಶ ಗಳನ್ನೊಳಗೊಂಡ ನಾಟಕ ವನ್ನು ಮಕ್ಕಳಿಂದ ಅಭಿನಯಿಸಿಸುವುದು. ಅಭಿನಯಿಸಿದ ನಾಟಕವನ್ನು ಉಳಿದ ಮಕ್ಕಳು ಆಲಿಸಲು ಅವಕಾಶ ಮಾಡಿಕೊಟ್ಟು ಅವರು ಅರ್ಥ ಮಾಡಿಕೊಳ್ಳಲು ಸನ್ನಿವೇಶ ವನ್ನು ಸೃಷ್ಟಿಸುವುದು.<br>* ಶಿಕ್ಷಕರೇ ಪಾತ್ರಾಭಿನಯವನ್ನು ಮಾಡಿ ಆಲಿಸಲು ಅವಕಾಶ ಮಾಡಿಕೊಡುವುದು.<br>* ಮಕ್ಕಳನ್ನು ಅಪರಿಚಿತ ಲಭ್ಯ (ಆದರೆ) ಸ್ಥಳಗಳಿಗೆ ಕರೆದೊಯ್ದು ಅಲ್ಲಿನ ಸಂಭಾಷಣೆಯನ್ನು ಕೇಳಿಸುವುದು. | * ಪಠ್ಯದಲ್ಲಿನ ವಿವಿಧ ಸಂಭಾಷಣೆ, ಸಂವಾದಗಳನ್ನು ಅರ್ಥ ಮಾಡಿಕೊಂಡ ಬಗ್ಗೆ ವಿವಿಧ ಪ್ರಶ್ನೆ ಹಾಗೂ ಇನ್ನಿತರ ಸಾಧನಗಳನ್ನು ಬಳಸಿ ಮೌಲ್ಯ ಮಾಪನ ಮಾಡುವುದು.<br>* ರೇಡಿಯೋ, ಟೇಪ್ ರೆಕಾರ್ಡರ್ ಬಳಸಿ ಸಂಭಾಷಣೆ, ಸಂವಾದ ಗಳನ್ನು ಕೇಳಿಸಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಪರಿಶೀಲಿಸುವುದು.<br>**(ಅವಧಿ : ೨೧)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3 | * ಆಟಗಳನ್ನು ಆಡುವ ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಮೌಖಿಕ ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು. | * ಮಕ್ಕಳು ದಿನನಿತ್ಯದ ಚಟುವಟಿಕೆ ಹಾಗೂ ಆಟಪಾಠಗಳಲ್ಲಿ ಇತರರು ನೀಡುವ ಸೂಚನೆಗಳನ್ನು ಆಲಿಸಿ ಅರ್ಥಮಾಡಿಕೊಂಡು ಅದರಂತೆ ಕಾರ್ಯನಿರ್ವಹಿಸುವುದು.<br>* ಸೂಚನೆಗಳನ್ನು ಅನುಸರಿಸುವುದರಿಂದಾಗುವ ಅನುಕೂಲಗಳನ್ನು ಅರಿಯುವುದು. | * ಮಗುವಿನ ಮಿತಿಗೊಳಪಟ್ಟು ಸರಳ ಸೂಚನೆಗಳನ್ನು ಹೊಂದಿರುವ ಆಟ.<br>ಉದಾ : ಹಸುಹುಲಿಯ ಆಟ, ಕಣ್ಣುಮುಚ್ಚಾಲೆ ಇತ್ಯಾದಿ.<br>* ಗದ್ಯಪಾಠ | * ಪಠ್ಯದಲ್ಲಿನ ಆಟವನ್ನು ಮಕ್ಕಳಿಂದ ಸೂಚನೆಗನುಸಾರ ಆಡಿಸುವುದು. ಆಟ ಆಡುವಾಗ ಮಕ್ಕಳು ಸೂಚನೆಗಳನ್ನು ಅನುಸರಿಸುವಂತೆ ಮಾಡುವುದು.<br>* ಶಾಲೆಯಲ್ಲಿನ ವಿವಿಧ ಸಂದರ್ಭಗಳಲ್ಲಿ ಮಕ್ಕಳಿಗೆ ಸೂಚನೆಗಳನ್ನು ನೀಡಿ, ಅವುಗಳನ್ನು ಅನುಸರಿಸಿ ಚಟುವಟಿಕೆಗಳನ್ನು ಮಾಡಲು ಅನುವು ಮಾಡಿಕೊಡುವುದು.<br>* ಸೂಚನೆಗಳ ಸರಣಿಗಳನ್ನು ಒಳಗೊಂಡ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸುವುದು. | * ಪಠ್ಯಕ್ಕೆ ಸಂಬಂಧಿಸಿದ ವಿಷಯಗಳ ಜತೆಯಲ್ಲಿ ಮಕ್ಕಳಿಗೆ ವಿವಿಧ ಸಂದರ್ಭಗಳನ್ನು ಸೃಷ್ಟಿಸಿ, ಸೂಚನೆಗಳನ್ನು ನೀಡಿ ಅವರು ಅವನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತಾರೆ ಎಂಬ ಬಗ್ಗೆ ಗಮನಿಸಿ ದೃಢಪಡಿಸಿಕೊಳ್ಳುವುದು.<br>ಉದಾ : * ಹಸುಹುಲಿ ಆಟದ ನಿಯಮಗಳನ್ನು ತಿಳಿಸಿ ಅದರಂತೆ ಆಟ ಆಡಲು ತಿಳಿಸುವುದು.<br>* ಗ್ರಾಮದಲ್ಲಿ ಆಡುವ ಆಟಗಳ ಬಗ್ಗೆ ಒಂದು ಸರಳ ಸಮೀಕ್ಷೆಯನ್ನು ಮಕ್ಕಳಿಂದ ಮಾಡಿಸಿ ಅದರ ಬಗ್ಗೆ ವರದಿ ಮಾಡುವುದು.<br>* ಶಾಲೆಯಲ್ಲಿನ ವಿವಿಧ ಸಂದರ್ಭಗಳಲ್ಲಿ ಮಕ್ಕಳು ಸೂಚನೆಗಳನ್ನು ಅನುಸರಿಸುವುದರ ಬಗ್ಗೆ ಗಮನಿಸಿ ದೃಢಪಡಿಸಿಕೊಳ್ಳುವುದು.<br>**(ಅವಧಿ : ೨೧)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **4** | * ಹೇಳಿದ ಪದ್ಯದಲ್ಲಿರುವ ಮುಖ್ಯ ವಿಷಯಗಳನ್ನು ಗುರುತಿಸುವುದು. | * ಒಂದು ಪದ್ಯವನ್ನು ಆಲಿಸಿದ ನಂತರ ಅದರಲ್ಲಿನ ಮುಖ್ಯಾಂಶಗಳನ್ನು ಗುರುತಿಸುವುದು. | * ರಾಷ್ಟ್ರನಾಯಕರ, ಐತಿಹಾಸಿಕ ಪುರುಷರ, ಸ್ಮರಣೀಯರ ಸರಳ ಜೀವನ ಚಿತ್ರಣಗಳನ್ನು ಒಳಗೊಂಡ ಕ್ಲಿಷ್ಟವಲ್ಲದ ಪದ್ಯ. * ಪದ್ಯ ಸರಳ ಹಾಗೂ ನೀತಿ ಪ್ರಧಾನವಾಗಿರಬೇಕು. ಸರಳ ಪದಗಳನ್ನು ಹೊಂದಿರಬೇಕು. * ಪದ್ಯಪಾಠ | * ಪದ್ಯವನ್ನು ಆಲಿಸಿ ಅದರಲ್ಲಿನ ಪ್ರಧಾನ ವಿಷಯವನ್ನು ಗುರುತಿಸಲು ಅವಕಾಶ ಮಾಡಿಕೊಡಬೇಕು. * ವಾಕ್ಯ ವೃಂದ ಹಾಗೂ ವಿವರಣಾತ್ಮಕ ವಿಷಯಗಳನ್ನು ಒಳಗೊಂಡ ಒಂದು ಪದ್ಯ ಭಾಗವನ್ನು ಆಲಿಸಲು ಅವಕಾಶ ಮಾಡಿಕೊಟ್ಟು ಅದರಲ್ಲಿನ ಮುಖ್ಯಾಂಶಗಳನ್ನು ಪತ್ತೆ ಹಚ್ಚುವುದು ಹೇಗೆಂದು ತಿಳಿಸಿಕೊಡುವುದು. | * ಪದ್ಯದಲ್ಲಿ ಮುಖ್ಯ ವಿಷಯಕ್ಕೆ ಸಂಬಂಧಿಸಿದ ಮೌಲ್ಯಮಾಪನದ ಜತೆಗೆ ಬೇರೆ ಬೇರೆ ವಿಷಯಗಳನ್ನು ಆಲಿಸಲು ಅವಕಾಶ ಮಾಡಿಕೊಟ್ಟು ಅದರಲ್ಲಿನ ಮುಖ್ಯ ವಿಷಯಗಳನ್ನು ಗುರುತಿಸಲು ಅವಕಾಶ ಮಾಡಿಕೊಡಬೇಕು. ಮಕ್ಕಳು ಎಷ್ಟರ ಮಟ್ಟಿಗೆ ಗುರುತಿಸುತ್ತಾರೆಂದು ಪರಿಶೀಲಿಸಿ ಮಾರ್ಗದರ್ಶನ ನೀಡಬೇಕು. **(ಅವಧಿ : ೧೫)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **5** | * ಪಠ್ಯವನ್ನು ಆಲಿಸಿದ ನಂತರ ಏಕೆ?– ಪ್ರಶ್ನೆಗೆ ಉತ್ತರಿಸುವುದು. | * ಪಠ್ಯವನ್ನು ಅಲಿಸಿದ ನಂತರ ಅದನ್ನು ಅರ್ಥ ಮಾಡಿಕೊಂಡು ಏಕೆ ಹೀಗಾಯಿತು? ಏಕೆ ಹಾಗಾಯಿತು ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವುದು. | * ರಾಷ್ಟ್ರೀಯ ಹಬ್ಬ ಮತ್ತು ಭಾವೈಕ್ಯತೆ ಹಾಗೂ ರಾಷ್ಟ್ರ ಪ್ರೇಮಕ್ಕೆ ಸಂಬಂಧಿಸಿದ ಪದ್ಯ. ಉದಾ: ಸ್ವಾತಂತ್ರ್ಯ ದಿನಾಚರಣೆ. ಯುದ್ಧ ರಂಗದಲ್ಲಿ ಮಡಿದ ವೀರ ಸೈನಿಕರ ಬಗೆಗಿನ ಪಾಠಗಳು.<br>* ಗದ್ಯಪಾಠ | * ಮೊದಲು ನೀಡಿದ ಪಠ್ಯವನ್ನು ಆಲಿಸಲು ಅವಕಾಶ ಮಾಡಿಕೊಡಬೇಕು.<br>* ನಂತರ ಅದರಲ್ಲಿನ ಮುಖ್ಯಾಂಶ, ಮುಖ್ಯ ಘಟನೆ, ಅವುಗಳಿಗೆ ಕಾರಣಗಳನ್ನು ಪತ್ತೆ ಹಚ್ಚುವ ಕ್ರಮವನ್ನು ತಿಳಿಸಿಕೊಡಬೇಕು ಅಥವಾ ಅವರೇ ಪತ್ತೆ ಹಚ್ಚಲು ಅವಕಾಶ ಮಾಡಿಕೊಡಬೇಕು.<br>* ಆ ಮೂಲಕ ಪಠ್ಯದಲ್ಲಿ ಮೂಡುವ ಏಕೆ ? – ಪ್ರಶ್ನೆ ಉತ್ತರಿಸಲು ಅವಕಾಶ ಮಾಡಿಕೊಡಬೇಕು. | * ಪಠ್ಯಕ್ಕೆ ಸಂಬಂಧಿಸಿದ ವಿಷಯಗಳ ಜತೆಯಲ್ಲಿ ಮಕ್ಕಳಿಗೆ ವಿವಿಧ ಸಂದರ್ಭಗಳನ್ನು ನೀಡಿ ಅಲ್ಲಿ ಏಕೆ ಹೀಗಾಯಿತು ? ಹಾಗೆ ಆಗಲು ಕಾರಣಗಳೇನು ? – ಪ್ರಶ್ನೆಗಳನ್ನು ಕೇಳಿ ಮೌಲ್ಯಮಾಪನ ಮಾಡುವುದು.<br>ಉದಾ : * ಆಗಸ್ಟ್ ೧೫ ರಂದೇ ಏಕೆ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತೇವೆ ?<br>* ಗಾಂಧೀಜಿ ನಮ್ಮ ಸ್ವಾತಂತ್ರ್ಯ ಚಳವಳಿಯ ನಾಯಕತ್ವ ವಹಿಸದಿದ್ದರೆ ಏನಾಗುತಿತ್ತು ? ಇತ್ಯಾದಿ.<br>* ಒಂದು ವಿಷಯವನ್ನು ಆಲಿಸಲು ಅವಕಾಶ ಮಾಡಿಕೊಟ್ಟು ನಂತರ ಏಕೆ ? – ಪ್ರಶ್ನೆಯನ್ನು ಅವರೇ ಹಾಕಿಕೊಳ್ಳಲು ಅವಕಾಶ ಮಾಡಿಕೊಟ್ಟು ಅವುಗಳಿಗೆ ಅವರಿಂದಲೇ ಉತ್ತರವನ್ನೂ ಪಡೆಯುವುದು.<br>**(ಅವಧಿ : ೧೫)** |

## ಮಾತನಾಡುವುದು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **1** | * ಸರಿಯಾದ ಉಚ್ಚಾರಣೆ ಯೊಂದಿಗೆ ಮಾತನಾಡುವುದು. | * ಮಕ್ಕಳು ಗ್ರಹಿಸಿದ ವಿಷಯ ಗಳನ್ನು ಪದಗಳಲ್ಲಿ ಅಭಿ ವೃದ್ಧಿಸುವಾಗ ಭಾಷೆಯಲ್ಲಿನ ವಿವಿಧ ಸ್ವರ ಧ್ವನಿಗಳನ್ನು ಅರ್ಥೈಸಿಕೊಂಡು ಸ್ಪಷ್ಟವಾದ ಉಚ್ಚಾರಣೆಯೊಂದಿಗೆ ಮಾತನಾಡುವುದು. | * ಮಗುವಿನ ಸುತ್ತಲಿನ ಸಾಮಾನ್ಯ ಪರಿಸರಕ್ಕೆ ಸಂಬಂಧಿಸಿದ ಪಾಠ. ಉದಾ : ಕಾಡು, ನದಿ, ನಮ್ಮೂರ ಜಾತ್ರೆ, ಬಸ್ಸು ನಿಲ್ದಾಣ ಇತ್ಯಾದಿಗಳಿಗೆ ಸಂಬಂಧಿಸಿದ ಪಾಠಗಳು. ಪಾಠ ಸರಳ ಪದಗಳನ್ನು ಒಳಗೊಂಡಿರಬೇಕು.<br>* ಆದರೆ ಭಾಷೆಯ ಎಲ್ಲಾ ಧ್ವನಿಗಳನ್ನೂ ಒಳಗೊಳ್ಳುವಂತೆ ಪಠ್ಯ ರಚನೆಯಾಗಬೇಕು.<br>* ವಸ್ತುವೇ ಮಾತನಾಡುವುದು.<br>* ಗದ್ಯಪಾಠ | * ಪಠ್ಯವನ್ನು ಸ್ಪಷ್ಟವಾದ ಉಚ್ಚಾರಣೆಯೊಂದಿಗೆ ಓದಿ ಮಕ್ಕಳಿಗೆ ಹಾಗೆ ಓದುವುದು ಹೇಗೆ ? ಅದಕ್ಕೆ ಪೂರಕವಾದ ವಿಷಯಗಳು ಯಾವುವು ? ಯಾವ ಅಕ್ಷರವನ್ನು ಹೇಗೆ ಉಚ್ಚರಿಸಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸಿಕೊಡಬೇಕು.<br>* ಮಕ್ಕಳಿಂದ ಅದೇ ರೀತಿಯಲ್ಲಿ ಅಭ್ಯಾಸ ಮಾಡಿಸಬೇಕು.<br>* ನಾಲಿಗೆ ಹೊರಳಿನ ಪದ ಗಳನ್ನು (ಟಂಗ್ ಟ್ವಿಸ್ಟರ್‌ಗಳು) ಬಳಸಿ ಮಕ್ಕಳ ಉಚ್ಚಾರಣೆ ಯನ್ನು ಶುದ್ಧಗೊಳಿಸಬೇಕು. ಉದಾ : * ಕಪ್ಪು ಕುಂಕುಮ ಕೆಂಪು ಕುಂಕುಮ<br>* ಲಾರಿ ಳಾರಿ–ಳಾರಿ ಲಾರಿ. ಇತ್ಯಾದಿ.<br>* ಶಿಕ್ಷಕರು ಸೂಕ್ತ ಸ್ವರಭಾರ ಮತ್ತು ಸರಳ ಅಭಿನಯದ ಮೂಲಕ ಕಥೆ ಹೇಳಬೇಕು. | * ಪಠ್ಯದ ಅಭ್ಯಾಸದಲ್ಲಿ ಮಾತ ನಾಡಲು ಹೆಚ್ಚು ಅವಕಾಶ ಇರುವ ಚಟುವಟಿಕೆಗಳನ್ನು ಮಾಡಿಸಲು ಅವಕಾಶ ಮಾಡಿಕೊಡುವುದು. ಉದಾ : ಪಾಠವನ್ನು ಓದಿಸುವುದು.<br>* ವಸ್ತುಗಳ ಬಗ್ಗೆ ಮಾತನಾಡಿಸು ವುದು.<br>* ವರ್ಣಮಾಲೆಯ ಅಕ್ಷರಗಳನ್ನು ಹೇಳಿಸುವುದು.<br>* ಮಕ್ಕಳ ನಡುವೆ ಸಂಭಾಷಣೆ ಯನ್ನು ಏರ್ಪಡಿಸಿ ಅವರ ಉಚ್ಚಾರಣೆಯನ್ನು ಗಮನಿಸಿ ಸೂಕ್ತ ಮಾರ್ಗದರ್ಶನ ನೀಡುವುದು.<br>* ವಿಶೇಷ ಪದಗಳ ಪಟ್ಟಿಯನ್ನು ತಯಾರಿಸಿ ಮಕ್ಕಳಿಂದ ಅವು ಗಳನ್ನು ಹೇಳಿಸುವುದು.<br>**(ಅವಧಿ : ೨೧)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **2** | * ಸರಿಯಾದ ಸ್ವರಭಾರ ಮತ್ತು ಆಂಗಿಕ ಅಭಿನಯದ ಮೂಲಕ ಗೊತ್ತಿರುವ ಸರಳ ಕಥೆಗಳನ್ನು ಹೇಳುವುದು. | * ಸಮಯ, ಸನ್ನಿವೇಶ, ಪಾತ್ರ, ಸ್ವಭಾವ ಸಂದರ್ಭಕ್ಕೆ ತಕ್ಕಂತಹ ಧ್ವನಿಯಲ್ಲಿನ ಏರಿಳಿತದೊಂದಿಗೆ ಹಾಗೂ ಸರಳ ಅಂಗಿಕ ಅಭಿನಯದ ಮೂಲಕ ಗೊತ್ತಿರುವ ಕಥೆ ಗಳನ್ನು ವಿವರಿಸುವುದು. ಅರ್ಥಪೂರ್ಣ ಹಾಗೂ ಪರಿಣಾಮಕಾರಿಯಾಗಿ ಮಾತನಾಡುವುದು. | * ಒಂದು ಸರಳ ಕುತೂಹಲ ಭರಿತ, ರೋಚಕ ವಿಷಯಗಳ ನ್ನೊಳಗೊಂಡ ನಾಟಕ.<br>* ಪಠ್ಯ ಪಾತ್ರಾಭಿನಯ ಮತ್ತು ವಿವರಣೆಗೆ ಸೂಕ್ತವಾಗಿರಬೇಕು.<br>* ಗದ್ಯಪಾಠ | * ಮಕ್ಕಳಿಗೆ ಗೊತ್ತಿರುವ ವಿವಿಧ ಕಥೆಗಳನ್ನು ಅದೇ ರೀತಿಯಲ್ಲಿ ಕೇಳಿಸಬೇಕು.<br>* ಸರಳ ಅಭಿನಯ ಎಂಬುದು ಅಭ್ಯಾಸಕ್ಕೆ ಎಡೆ ಮಾಡದಂತೆ ಎಚ್ಚರ ವಹಿಸುವ ಬಗ್ಗೆ ವಿವರ ಮಾಹಿತಿ ನೀಡಬೇಕು.<br>* ಸರಳ ಪಾತ್ರಗಳಿರುವ ಕಿರು ನಾಟಕಗಳನ್ನು ಮಕ್ಕಳಿಂದ ಆಡಿಸಿ ಅವರ ಉಚ್ಚಾರಣೆ ಯನ್ನು ಗಮನಿಸಿ ಸೂಕ್ತ ಮಾರ್ಗದರ್ಶನ ನೀಡಬೇಕು.<br>* ಅನೌಪಚಾರಿಕವಾಗಿ ಮಕ್ಕಳ ಸಂಭಾಷಣೆಯನ್ನು ಗಮನಿಸಿ ತಪ್ಪುಗಳನ್ನು ತಿದ್ದಬೇಕು.<br>* ಪಠ್ಯದಲ್ಲಿನ ವಸ್ತುಗಳ ವಿವರಣೆಗೆ ಹೆಚ್ಚು ಒತ್ತು ನೀಡಿ ಶಿಕ್ಷಕರು ವಿವರಿಸುವುದು. | * ಪಠ್ಯವನ್ನು ಮಕ್ಕಳಿಂದ ಹೇಳಿಸು ವುದು.<br>* ಕಥೆ, ಕವನ, ಕಥನ ಕವನಗಳನ್ನು ಯಥಾವತ್ತಾಗಿ ಪುನರುಚ್ಚ ರಿಸರಿಸಲು ಅವಕಾಶವನ್ನು ಒದಗಿಸಿಕೊಡುವುದು.<br>* ಶಾಲೆಯಲ್ಲಿನ ವಿವಿಧ ಕಾರ್ಯ ಕ್ರಮ, ವಿದ್ಯಾರ್ಥಿಗಳ ವಿವಿಧ ಸಮಾರಂಭ, ಸಭೆಗಳಲ್ಲಿ ಸ್ವತಂತ್ರ ನಿರೂಪಣೆ, ಭಾಷಣ, ನಾಟಕಾ ಭಿನಯ ಇತ್ಯಾದಿಗಳಿಗೆ ಅವಕಾಶ ಮಾಡಿಕೊಟ್ಟು, ಮಕ್ಕಳ ಸ್ವರದಲ್ಲಿನ ಸ್ಪಷ್ಟತೆ, ಸರಳ ಅಭಿನಯವನ್ನು ಗಮನಿಸಿ ಮೌಲ್ಯಮಾಪನ ಮಾಡು ವುದು.<br>* ಆಂಗಿಕ ಅಭಿನಯಕ್ಕೆ ಅವಕಾಶ ಇರುವ ವಿಷಯಗಳನ್ನು ಆಧರಿಸಿ ಆಶುಭಾಷಣ ಏರ್ಪಡಿಸುವುದು.<br>**(ಅವಧಿ : ೨೧)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3 | * ಪರಿಚಿತ ವಸ್ತುಗಳ ಬಗ್ಗೆ ವಿವರಿಸುವುದು. | * ಗೊತ್ತಿರುವ ವಸ್ತುಗಳ ಬಗ್ಗೆ ತನ್ನದೇ ರೀತಿಯಲ್ಲಿ ವಿವರಿಸುವುದು. | * ಮಗುವಿಗೆ ಪರಿಚಯವಿರುವ ಸೃಜನಾತ್ಮಕತೆಗೆ ಹೆಚ್ಚು ಒತ್ತು ಕೊಡುವ ವಸ್ತು ಮತ್ತು ಪದಾರ್ಥಗಳಿಗೆ ಸಂಬಂಧಿಸಿದ ಪದ್ಯ. ಉದಾ : ಮಾದರಿ ಶಾಲೆ, ಸಾಂಬಾರ ಪದಾರ್ಥ, ವಾಹನ, ಆಹಾರ ಪದಾರ್ಥ. ಇತ್ಯಾದಿ ವಿಷಯಗಳು.<br>* ಗದ್ಯಪಾಠ | * ಯಾವುದೇ ವಿವರಣೆ ನೀಡುವಾಗ ಗಮನಿಸಬೇಕಾದ ವಿವರವನ್ನು ತಿಳಿಸಿಕೊಡುವುದು (ವಸ್ತು, ವಿಷಯ, ಅವುಗಳ ನಿರ್ಮಾಣ ಮತ್ತು ಉಪಯೋಗ ಇತ್ಯಾದಿ.)<br>* ಮಕ್ಕಳಿಗೆ ಪರಿಚಿತವಿರುವ ವಿವಿಧ ವಸ್ತುಗಳನ್ನು ವಿವರಿಸಿ ತೋರಿಸುವುದು. ಮಕ್ಕಳು ಅದನ್ನು ಆಲಿಸಿ ಅರ್ಥೈಸಿಕೊಳ್ಳುವಂತೆ ಗಮನಿಸಿ ಸೂಕ್ತ ಮಾರ್ಗದರ್ಶನ ನೀಡುವುದು. | * ಪ್ರತ್ಯಕ್ಷಕ್ಕೆ ಸಂಬಂಧಿಸಿದಂತೆ ವಿವಿಧ ರೀತಿಯ ಪ್ರಶ್ನೆಗಳ ಮೂಲಕ ಮೌಖಿಕವಾಗಿ ವಿವರಿಸುವಂತೆ ತಿಳಿಸುವುದು.<br>* ಆಶುಭಾಷಣ, ಕಿರುಪ್ರಬಂಧ ಬರೆಸಿ ಓದಿಸುವುದು.<br>* ಗೊತ್ತಿರುವ ಪರಿಚಿತ ವಸ್ತುಗಳ ಬಗ್ಗೆ ಮಾತನಾಡಿಸುವುದು.<br>* ಚರ್ಚಾಸ್ಪರ್ಧೆ ಏರ್ಪಡಿಸುವುದು. ಇತ್ಯಾದಿ.<br><br>**(ಅವಧಿ : ೧೫)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **4** | * ತರಗತಿಯಲ್ಲಿ ನಡೆಯುವ ಸಂವಾದದಲ್ಲಿ ಭಾಗವಹಿಸುವುದು. | * ಸಂವಾದವನ್ನು ಆಲಿಸಿ, ಅರ್ಥಮಾಡಿಕೊಂಡು, ತರ್ಕಬದ್ಧವಾಗಿ ಅಲೋಚಿಸಿ ಸಂವಾದದಲ್ಲಿ ತಾನೂ ವಿಷಯ ಮಂಡಿಸುವ ಮತ್ತು ಇನ್ನೊಬ್ಬರನ್ನು ಒಪ್ಪಿಸುವ ಜತೆಗೆ ಸಂಕೀರ್ಣ ಪ್ರಶ್ನೆಗಳನ್ನು ಕೇಳುವುದು. | * ಪಂಚತಂತ್ರದಲ್ಲಿನ ವಿವಿಧ ಪ್ರಾಣಿಗಳ ನಡುವಿನ ಸಂವಾದದ ಕಥೆಗಳು.<br>* ಮಕ್ಕಳ ವ್ಯಾಪ್ತಿಯೊಳಗಿನ ಸಂವಾದ.<br>* ಗದ್ಯಪಾಠ | * ಪಠ್ಯದಲ್ಲಿನ ಸಂವಾದವನ್ನು ಅರ್ಥಮಾಡಿಕೊಳ್ಳುವಂತೆ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.<br>* ಸಂವಾದದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವುದು.<br>* ಸಂವಾದದಲ್ಲಿ ಭಾಗವಹಿಸಿ ಅದರಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಲು ಅವಕಾಶ ಕಲ್ಪಿಸುವುದು.<br>* ಸಂವಾದದಲ್ಲಿ ಭಾಗವಹಿಸುವಾಗ ಸರದಿ ಅನುಸರಿಸುವ ಹಾಗೂ ಸರದಿಗಾಗಿ ಕಾಯುವ ಅವಶ್ಯಕತೆಯನ್ನು ತಿಳಿಸಿಕೊಡುವುದು.<br>* ಸಂವಾದವನ್ನು ಆಲಿಸಿ ಅದಕ್ಕೆ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಬೆಳೆಸುವುದು. | * ಪಠ್ಯಕ್ಕೆ ಸಂಬಂಧಿಸಿದಂತೆ ಸಾಮರ್ಥ್ಯವನ್ನು ಪರೀಕ್ಷಿಸಲು ಸೂಕ್ತ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.<br>* ಅಂತ್ಯಾಕ್ಷರಿ ಆಟವನ್ನು ಆಡಿಸುವುದು.<br>* ಶಾಲೆಯಲ್ಲಿ ಸಂವಾದಗಳನ್ನು ಶಾಲೆಯವರೊಂದಿಗೆ, ಹೊರಗಿನವರೊಂದಿಗೆ, ಪ್ರಸಿದ್ಧ ವ್ಯಕ್ತಿಗಳೊಂದಿಗೆ, ರೈತರೊಂದಿಗೆ, ಕಾರ್ಮಿಕರೊಂದಿಗೆ ಏರ್ಪಡಿಸುವುದು.<br>* ಸಂವಾದ ನಡೆಯುವಾಗ ವಿದ್ಯಾರ್ಥಿಗಳ ಪ್ರತಿಕ್ರಿಯಿಸುವಿಕೆ ಮತ್ತು ಭಾಗವಹಿಸುವಿಕೆಯನ್ನು ಗಮನಿಸುವುದು.<br>**(ಅವಧಿ : ೨೧)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **5** | * ಗುಂಪಿನಲ್ಲಿ ಮಾತನಾಡುವಾಗ ಸರದಿ ಅನುಸರಿಸುವುದು. | * ಗುಂಪಿನಲ್ಲಿ ಅಥವಾ ಸಂವಾದ, ಚರ್ಚೆ, ಸಂಭಾಷಣೆ ಸಂದರ್ಭಗಳಲ್ಲಿ ಸರದಿಗಾಗಿ ಕಾಯುವ, ಸರದಿಯನ್ನು ಅನುಸರಿಸುವ ಗುಣ ಬೆಳೆಸುವುದು. | * ಮಗುವಿನ ಪರಿಸರದ ವ್ಯಾಪ್ತಿಗೊಳಪಟ್ಟು, ಗುಂಪಿನಲ್ಲಿ ಮಾತನಾಡುವಾಗ ಸರದಿ ಅನುಸರಿಸುವುದು.<br>* ಪ್ರಾಣಿಗಳ ಪಾತ್ರಗಳೊಂದಿಗೆ ಸರದಿಯಲ್ಲಿ ಮಾತನಾಡುವ ಸಂದರ್ಭಗಳನ್ನೊಳಗೊಂಡ ಕುತೂಹಲಭರಿತ ಕಥೆ.<br>* ಗದ್ಯಪಾಠ | * ಪಠ್ಯದಲ್ಲಿನ ಸಂಭಾಷಣೆಯನ್ನು ಶಿಕ್ಷಕರು ಸೂಕ್ತ ಸ್ವರ ಭಾರದೊಂದಿಗೆ ಹೇಳುವುದು.<br>* ಗುಂಪಿನಲ್ಲಿ ಮಾತನಾಡುವಾಗ ಏಕೆ ಸರದಿ ಅನುಸರಿಸಬೇಕೆಂಬುದನ್ನು ತಿಳಿಸುವುದು.<br>* ಮಕ್ಕಳಿಗೇ ವಿಷಯ ನೀಡಿ ಗುಂಪಿನಲ್ಲಿ ಮಾತನಾಡಲು ಅವಕಾಶ ನೀಡು ವುದು.<br>* ಅದೇ ವಿಷಯದ ಮೇಲೆ ಸರದಿಯನ್ನು ಅನುಸರಿಸಿ ಮಾತನಾಡಲು ಅವಕಾಶ ಕಲ್ಪಿಸಿಕೊಡುವುದು.<br>* ಮೇಲಿನೆರಡೂ ಸಂದರ್ಭ ನೀಡಿ ಯಾವುದು ಉತ್ತಮವೆಂದು ತೀರ್ಮಾನಿಸಲು ಮಕ್ಕಳಿಗೇ ಅವಕಾಶ ನೀಡುವುದು. | * ಸಾಮರ್ಥ್ಯವನ್ನಾಧರಿಸಿದ ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ವಿವಿಧ ಸಂದರ್ಭಗಳನ್ನು ನೀಡಿ, ಮಕ್ಕಳಿಗೆ ಮಾತನಾಡಲು ತಿಳಿಸಿ ಅವರು ಮಾತನಾಡುವ ರೀತಿಯನ್ನು ಗಮನಿಸುವುದು.<br>* ವಿವಿಧ ಸಹಜ ಸಂದರ್ಭಗಳಲ್ಲಿ ಮಕ್ಕಳು ಸರದಿ ಅನುಸರಿಸುವ ವಿಧಾನವನ್ನು ಗಮನಿಸುವುದು.<br><br>**(ಅವಧಿ : ೨೧)** |

ಓದುವುದು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1 | * ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | * ಮಗು ನಿತ್ಯ ನೋಡುವ ವಿವಿಧ ಸೂಚನಾಫಲಕ ಗಳಲ್ಲಿನ ಸೂಚನೆಗಳನ್ನು ಓದಿ ಅವುಗಳಿಗೆ ಸ್ಪಂದಿಸು ವುದು. | * ಸೂಚನಾ ಫಲಕಗಳು ಭಿತ್ತಿಪತ್ರ ಮತ್ತು ವಿಚಾರಗಳನ್ನು ಹೊಂದಿರುವ ಒಂದು ಸರಳ ಗದ್ಯ.<br>* ಇದರಲ್ಲಿ ಸ್ಥಳೀಯ ಪರಿಸರ. ಸನ್ನಿವೇಶಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು.<br>* ಗದ್ಯಪಾಠ | * ಪಠ್ಯದಲ್ಲಿ ಬಳಸಿದ ಸೂಚನಾ ಫಲಕ ಹಾಗೂ ಭಿತ್ತಿಪತ್ರಗಳ ಪರಿಚಯ ಮಾಡಿಕೊಡು ವುದು.<br>* ಭಿತ್ತಿಪತ್ರ, ಸೂಚನಾಫಲಕ ಗಳನ್ನು ಏಕೆ ಬಳಸುತ್ತಾರೆ ? ಅದರ ಉಪಯೋಗಗಳೇನು? ಎಂದು ತಿಳಿಸುವುದು.<br>* ಶಾಲೆಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಬಳಸಿದ ವಿವಿಧ ಭಿತ್ತಿಪತ್ರಗಳನ್ನು ಓದಲು ಅವಕಾಶ ಮಾಡಿಕೊಡುವುದು. | * ಸಾಮರ್ಥ್ಯದ ಕಲಿಕೆಯನ್ನು ಪರೀಕ್ಷಿಸುವಂತಹ ವಿವಿಧ ಸನ್ನಿವೇಶಗಳನ್ನು ನೀಡಿ ಅಲ್ಲಿನ ಸರಳ ಸೂಚನೆಗಳನ್ನು ಓದಿಸು ವುದು.<br><br>(ಅವಧಿ : ೨೧) |
| 2 | * ಸಹಪಾಠಿಗಳ ಬರೆವಣಿಗೆ ಯನ್ನು ಓದುವುದು. | * ಬೇರೆ ಮಕ್ಕಳ ಕೈಬರೆಹ ವನ್ನು (ತರಗತಿಯ) ಇತರ ಮಕ್ಕಳು ಓದಿ ಅರ್ಥಮಾಡಿ ಕೊಳ್ಳುವುದು. | * ತರಗತಿ (ಹೆಚ್ಚೆಂದರೆ ಶಾಲೆಯ ಇತರ) ಮಕ್ಕಳ ಬರೆವಣಿಗೆ ಯನ್ನು ಓದುವುದು.<br>* ಮಕ್ಕಳದ್ದೇ ಕೈಬರೆಹದಲ್ಲಿ ಮುದ್ರಿಸಿದ ಸರಳ ವಿಷಯವ ನ್ನೊಳಗೊಂಡ ಪತ್ರ.<br>* ಗದ್ಯಪಾಠ | * ಕೈಬರೆಹದ ಪತ್ರವನ್ನು ಶಿಕ್ಷಕರು ಮೊದಲು ಸ್ಪಷ್ಟವಾಗಿ ಓದಿ ತಿಳಿಸಿಕೊಡುವುದು.<br>* ಮಕ್ಕಳಿಗೆ ಬೇರೆ ಬೇರೆ ವಿಷಯ ನೀಡಿ ವಿವರಗಳನ್ನು ಬರೆಸಿ ನಂತರ ಅದನ್ನು ಪರಸ್ಪರ ಬದಲಿಸಿ ಅವರಿಂದಲೇ ಓದಿಸುವುದು.<br>* ಓದುವಾಗ ಆಗುವ ತಪ್ಪು ಗಳನ್ನು ತಿದ್ದಿ ಸರಿಪಡಿಸುವುದು. | * ಪಠ್ಯಕ್ಕೆ ಸಂಬಂಧಿಸಿದಂತೆ ಅಭ್ಯಾಸ ಮಾಡಿಸುವುದು.<br>* ಮಕ್ಕಳ ಬರೆವಣಿಗೆಯನ್ನು ಪರಸ್ಪರ ಬದಲಾಯಿಸಿ ಓದಿಸುವುದು.<br>* ಓದಿದ್ದನ್ನು ನಕಲು ಮಾಡಿಸಿ ಪರಿಶೀಲಿಸುವುದು.<br><br>(ಅವಧಿ : ೨೧) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **3** | * ಸರಳ ಕಥೆಪುಸ್ತಕ ಹಾಗೂ ಮಕ್ಕಳ ಪುಸ್ತಕಗಳನ್ನು ಓದುವುದು. | * ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವುದರ ಜತೆಗೆ ಓದಿದ್ದನ್ನು ಅರ್ಥಮಾಡಿಕೊಳ್ಳುವುದು. | * ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾದ ಸರಳ ಕಥೆ ಪುಸ್ತಕಗಳನ್ನು ಓದುವುದು.<br>* ಕುತೂಹಲಭರಿತ ಪ್ರಾಣಿಗಳನ್ನು ಪಾತ್ರವಾಗಿ ಹೊಂದಿರುವ ಸರಳಕಥೆ. ಉದಾ : ಪಂಚತಂತ್ರದ ಕಥೆ.<br>* ಗದ್ಯಪಾಠ | * ಪಠ್ಯದಲ್ಲಿನ ಕಥೆಯನ್ನು ಶಿಕ್ಷಕರು ರೋಚಕವಾಗಿ ಹೇಳುವುದು.<br>* ಅಂತಹ ಕಥೆಗಳು ಎಲ್ಲೆಲ್ಲಿ ದೊರೆಯುತ್ತವೆ ಎಂಬುದನ್ನು ತಿಳಿಸಿ ಓದುವ ಆಸಕ್ತಿಯನ್ನು ಬೆಳೆಸುವುದು.<br>* ಗ್ರಂಥಾಲಯದಿಂದ ಸರಳ ಕಥೆಪುಸ್ತಕಗಳನ್ನು ವಿತರಿಸಿ ಓದಿಸುವುದು. | * ಪಠ್ಯವನ್ನು ಆಧರಿಸಿದ ಸಾಮರ್ಥ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ಸರಳ ಕಥೆಪುಸ್ತಕ ಅಥವಾ ಮಕ್ಕಳ ಪುಸ್ತಕಗಳನ್ನು ನೀಡಿ (ವಯೋಮಾನಕ್ಕೆ ಸೂಕ್ತವಾದ) ಓದಲು ತಿಳಿಸಿ ನಂತರ ಓದಿದ್ದರ ಬಗ್ಗೆ ದೃಢಪಡಿಸಿಕೊಳ್ಳುವುದು.<br>**(ಅವಧಿ : ೨೧)** |
| **4** | * ಸುಮಾರು ೩೦೦೦ ಪದಗಳನ್ನು ಓದಿ ಗ್ರಹಿಸುವುದು. | * ಮಕ್ಕಳು ಈ ತರಗತಿ ಮುಗಿಸುವಷ್ಟರಲ್ಲಿ ಸುಮಾರು ಮೂರುಸಾವಿರ ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯ ಪಡೆಯುವುದು. | * ಮಕ್ಕಳ ಮಾನಸಿಕ ಮಟ್ಟಕ್ಕೆ ತಕ್ಕಂತ ಹಿಂದಿನ ತರಗತಿಯಲ್ಲಿ ಕಲಿತ ಪದಗಳಿಗೆ ಪೂರಕವಾದ ಹೊಸಪದಗಳನ್ನು ಓದಿ ಗ್ರಹಿಸುವುದು.<br>* ಹೆಚ್ಚು ಸಂಕೀರ್ಣವಲ್ಲದ ಆದರೆ ಈಗಾಗಲೇ ಪರಿಚಯವಾಗಿರದ ಹೆಚ್ಚು ಪದಗಳನ್ನು ಹೊಂದಿದ ವಿವರಣಾತ್ಮಕ ಗದ್ಯ. ಉದಾ: ವೀರ ಮಹಿಳೆಯರು<br>* ಗದ್ಯಪಾಠ | * ಪಠ್ಯದಲ್ಲಿನ ಹೊಸಪದಗಳನ್ನು ಅರ್ಥಸಹಿತ ಮಕ್ಕಳಿಗೆ ತಿಳಿಸಿಕೊಡುವುದು.<br>* ೩ನೇ ತರಗತಿಯಲ್ಲಿ ಹೊಸದಾಗಿ ಪರಿಚಯಿಸಿದ ಪದಗಳನ್ನು ಪುನರ್‌ಮನನ ಮಾಡಿಸುವುದು.<br>* ಹೊಸ ಪದಗಳನ್ನು ಸ್ವತಂತ್ರವಾಗಿ ಓದಿ ಗ್ರಹಿಸುವ ಸಾಮರ್ಥ್ಯ ಬೆಳೆಸುವುದು. | * ಹೊಸ ಪದಗಳನ್ನು ಗ್ರಹಿಸಿದ ಬಗ್ಗೆ ವಾಕ್ಯ ಮಾಡಿಸಿ ಅರ್ಥ ಹೇಳಿಸಿ ಬರೆಯುವುದು.<br>* ಹೊಸ ಪದಗಳನ್ನು ಪಠ್ಯದಲ್ಲಿ ಆರಿಸಿ ಬರೆಸಿ ಪರಿಶೀಲಿಸುವುದು.<br>* ಹೊಸ ಪದಗಳನ್ನು ಚೀಟಿಗಳಲ್ಲಿ ಬರೆದು ಡಬ್ಬಿಯಲ್ಲಿ ಹಾಕಿ ಮಕ್ಕಳಿಂದ ಚೀಟಿ ತೆಗೆಸಿ ಮಾತನಾಡಿಸುವುದು.<br>**ಅವಧಿ : ೨೧** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **5** | * ಪಠ್ಯವನ್ನು ಓದಿ ಮುಖ್ಯ ವಿಷಯವನ್ನು ಗುರುತಿಸಿ ಘಟನೆಗಳನ್ನು ಅನುಕ್ರಮ ವಾಗಿ ಹೇಳುವುದು. | * ಹಲವು ಘಟನೆಗಳ ಸುಳಿವನ್ನು ಕೊಟ್ಟಾಗ ಅವು ಗಳಲ್ಲಿನ ಅನುಕ್ರಮವನ್ನು ಗುರುತಿಸುವುದರ ಜತೆಗೆ ಓದಿದ ಪಠ್ಯದಲ್ಲಿನ ಮುಖ್ಯ ವಿಷಯವನ್ನು ಗುರುತಿಸು ವುದು. | * ಹಲವು ಸರಳ ಘಟನೆಗಳನ್ನು ಒಳಗೊಂಡ ಹಬ್ಬದ ಆಚರಣೆಗೆ ಸಂಬಂಧಿಸಿದ ಪದ್ಯ.<br>* ಮುಖ್ಯಾಂಶವನ್ನು ಹೊಂದಿರ ಬೇಕು.<br>* ಪದ್ಯಪಾಠ | * ಪದ್ಯವನ್ನು ಅರ್ಥೈಸಿ ಅದರಲ್ಲಿನ ವಿವಿಧ ಘಟನೆ ಗಳನ್ನು ಅನುಕ್ರಮವಾಗಿ ಪಟ್ಟಿ ಮಾಡಿಸುವುದು.<br>* ಅನುಕ್ರಮವಾಗಿ ಪಟ್ಟಿ ಮಾಡು ವುದರ ಅವಶ್ಯಕತೆಯನ್ನು ತಿಳಿಸಿಕೊಡುವುದು.<br>* ಪಠ್ಯವನ್ನು ಓದಿದ ನಂತರ ಅದರಲ್ಲಿ ಯಾವ ವಿಷಯಕ್ಕೆ ಪ್ರಾಧಾನ್ಯವನ್ನು ಕೊಡಬೇಕೆಂಬು ದನ್ನು ತಿಳಿಸಿಕೊಡುವುದು. | * ಪಠ್ಯವನ್ನಾಧರಿಸಿದ ಮೌಲ್ಯ ಮಾಪನ.<br>* ಒಂದು ಘಟನೆ ನೀಡಿ ಅದರಲ್ಲಿನ ವಿವಿಧ ವಿಷಯಗಳನ್ನು ಅನುಕ್ರಮ ವಾಗಿ ಜೋಡಿಸುವುದು.<br>* ಘಟನೆಗಳನ್ನು ಬರೆದಿರುವ ಮಿಂಚುಪಟ್ಟಿಗಳನ್ನು ನೀಡಿ ಅನುಕ್ರಮವಾಗಿ ಜೋಡಿಸುವಂತೆ ತಿಳಿಸುವುದು.<br>* ಮಗುವಿನ ಜೀವನದ ಘಟನೆ ಗಳನ್ನು ಅನುಕ್ರಮವಾಗಿ ಜೋಡಿಸಿ ಬರೆಸುವುದು.<br><br>**(ಅವಧಿ : ೧೫)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **6** | * ಪಠ್ಯವನ್ನು ಓದಿದ ಮೇಲೆ ಯಾರು ? ಯಾವಾಗ ? ಎಲ್ಲಿ? ಏಕೆ ? ಮತ್ತು ಏನು ?– ಪ್ರಶ್ನೆಗಳಿಗೆ ಉತ್ತರಿಸುವುದು. | * ಒಂದು ಪಠ್ಯವನ್ನು ಓದಿದ ನಂತರ ಅದರಲ್ಲಿ ಬರುವ ಯಾರು ? ಯಾವಾಗ ? ಎಲ್ಲಿ ? ಏಕೆ ? ಏನು ? – ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವುದು.<br>* ಪಠ್ಯವನ್ನು ಓದಿದ ನಂತರ ಅಲ್ಲಿನ ಘಟನೆಗಳಿಗೆ ಕಾರ್ಯಕಾರಣ ಸಂಬಂಧ ವನ್ನು ಹುಡುಕುವುದು.<br>* ಸರಳ ಪದ್ಯವನ್ನು ಓದಿದ ನಂತರ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಹೊಂದು ವುದು. | * ವಿವಿಧ ರೀತಿಯ ಪ್ರಶ್ನೆ ಗಳನ್ನು ರಚಿಸಲು ಅನು ಕೂಲಕರವಾದ ಸರಳ ವಿಷಯವನ್ನು ಹೊಂದಿದ ಒಂದು ಪದ್ಯ.<br>* ತಟ್ಟು ಚಪ್ಪಾಳೆ ಪುಟ್ಟಮಗು ಈ ಸಂಕಲನದಿಂದ ಆಯ್ದು ಕೊಳ್ಳಬಹುದು.<br>* ಪದ್ಯಪಾಠ | * ಪಠ್ಯವನ್ನು ಅರ್ಥೈಸುವುದು.<br>* ಪಠ್ಯವನ್ನು ಓದಲು ಅವಕಾಶ ಮಾಡಿಕೊಟ್ಟು ಅಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಯಾರು ? ಏನು ? ಮತ್ತು ಏಕೆ ? – ಪ್ರಶ್ನೆಗಳಿಗೆ ಉತ್ತರ ಪಡೆಯುವುದು. | * ಪಠ್ಯವನ್ನು ಓದಿದ ನಂತರ ಯಾರು ? ಯಾವಾಗ ? ಎಲ್ಲಿ? ಏಕೆ ? – ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>* ಯಾರು ? ಯಾವಾಗ ? – ಪ್ರಶ್ನೆಗಳನ್ನು ಮಗುವಿನ ನಿಜ ಜೀವನಕ್ಕೆ ಸಂಬಂಧಿಸಿದಂತೆ ಕೇಳಿ ಉತ್ತರವನ್ನು ಪಡೆಯುವುದು.<br>* ಮಕ್ಕಳಲ್ಲಿ ಎರಡು ತಂಡಗಳಾಗಿ ಮಾಡಿ ಪ್ರಶ್ನೆಗಳ ಆಟ ಆಡಿಸು ವುದು.<br>* ಹತ್ತು ಪ್ರಶ್ನೆಗಳ ಆಟ ಆಡಿಸುವುದು.<br>* ಸನ್ನಿವೇಶಗಳಿರುವ ಕಾರ್ಡ್ ಕೊಟ್ಟು ನಂತರ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.<br>* ಚಿತ್ರಗಳ ಗುಚ್ಛವನ್ನು ನೀಡಿ ಅದರಲ್ಲಿನ ಚಿತ್ರಗಳಿಗೆ ಸಂಬಂಧಿಸಿ ದಂತೆ ಪ್ರಶ್ನಿಸಿ ಉತ್ತರ ಪಡೆಯು ವುದು.<br><br>**(ಅವಧಿ : ೧೫)** |

**ಬರೆಯುವುದು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1 | * ಅಕ್ಷರ ಮತ್ತು ಪದಗಳನ್ನು ಸರಿಯಾದ ವಿನ್ಯಾಸ, ಅನುಕ್ರಮಣಿಕೆ ಹಾಗೂ ಸೂಕ್ತ ಅಂತರದೊಂದಿಗೆ ಬರೆಯುವುದು. | * ಆಕಾರ, ಗಾತ್ರ, ಸರಿಯಾದ ಅಂತರದಲ್ಲಿ ಬರೆಯುವುದು ಮತ್ತು ಪದಗಳನ್ನು ಬರೆಯುವಾಗ ಸರಿಯಾದ ವಿನ್ಯಾಸ ಮತ್ತು ಅನುಕ್ರಮವನ್ನು ಬಳಸಿ ಬರೆಯುವ ಕೌಶಲವನ್ನು ಬೆಳೆಸಿಕೊಳ್ಳುವುದು. | * ಸರಳ ವಿಷಯಗಳನ್ನು ಒಳಗೊಂಡ ಸ್ವತಂತ್ರ ಹೋರಾಟಗಾರರ ಜೀವನಚಿತ್ರಣ (ವ್ಯಕ್ತಿ ಚಿತ್ರ)<br>* ಗದ್ಯಪಾಠ | * ಪಠ್ಯವನ್ನು ಅರ್ಥೈಸಿ ಅಲ್ಲಿ ಅಕ್ಷರ-ಅಕ್ಷರ, ಪದ-ಪದ, ವಾಕ್ಯ-ವಾಕ್ಯಗಳ ನಡುವೆ ಅಂತರ ಏಕಿರಬೇಕು ? ಎಂಬುದನ್ನು ತಿಳಿಸುವುದು. ಅಕ್ಷರ ವಿನ್ಯಾಸದ ಜತೆಗೆ ಬರೆಯುವ ಸರಿಯಾದ ಕ್ರಮವನ್ನು ತಿಳಿಸಿಕೊಡುವುದು.<br>* ಕಾಪಿ ಬರೆಸುವುದು.<br>* ನಕಲು ಮಾಡಿಸುವುದು. | * ಉಕ್ತಲೇಖನ<br>* ವಾಕ್ಯಗಳನ್ನು ಬರೆಸುವುದು.<br>* ವಿವಿಧ ಮುಖ್ಯಾಂಶಗಳನ್ನು ಬರೆಸುವುದು.<br>* ಅಕ್ಷರ ಕೊಟ್ಟು ಪದ ರಚಿಸಲು ತಿಳಿಸುವುದು.<br>* ವಾಕ್ಯಗುಚ್ಛ ಹಾಗೂ ಪದಬಂಧ ರಚನೆ ಮಾಡಿಸುವುದು.<br>* ಕಾಪಿ ಬರೆಸಿ, ನಕಲು ಮಾಡಿಸಿ ಅಕ್ಷರ ವಿನ್ಯಾಸ, ಪದಗಳ ನಡುವಿನ ಅಂತರವನ್ನು ಗಮನಿಸುವುದು.<br>**(ಅವಧಿ : ೨೧)** |
| 2 | * ಉಕ್ತಲೇಖನದ ಮೂಲಕ ಅಪರಿಚಿತ ಪದಗಳನ್ನು ಬರೆಯುವುದು. | * ಉಕ್ತಲೇಖನವನ್ನು ತೆಗೆದುಕೊಳ್ಳುವಾಗ ಅಪರಿಚಿತ ಪದಗಳನ್ನು ಗುರುತಿಸುವ ಮತ್ತು ಬರೆಯುವ ಕೌಶಲವನ್ನು ಬೆಳೆಸಿಕೊಳ್ಳುವುದು.<br>* ಬರೆವಣಿಗೆಯ ಕೌಶಲವನ್ನು ಹೆಚ್ಚಿಸಿಕೊಳ್ಳುವುದು. | * ಹೆಚ್ಚು ಪರಿಚಿತವಲ್ಲದ ಪದಗಳನ್ನು ಒಳಗೊಂಡ ಸರಳ ಜನಪದ ಗೀತೆ.<br>* ಪದ್ಯಪಾಠ | * ಪಠ್ಯವನ್ನು ಅರ್ಥೈಸುವುದು.<br>* ಪದ್ಯದಲ್ಲಿನ ಹೊಸ ಪದಗಳನ್ನು ಪಟ್ಟಿ ಮಾಡಿಸುವುದು.<br>* ಪದಗಳ ಅರ್ಥ ತಿಳಿದು ಉಕ್ತಲೇಖನ ಬರೆಸುವುದು.<br>* ಮಗುವಿಗೆ ಗೊತ್ತಿರುವ ಎಲ್ಲ ಪದಗಳ ಪಟ್ಟಿಯನ್ನು ಅವರಿಂದಲೇ ಬರೆಸುವುದು.<br>* ಪರಸ್ಪರ ಪದ ಹೇಳಿಸಿ ಬರೆಯಿಸಿ ತಪ್ಪುಗಳನ್ನು ತಿದ್ದುವುದು.<br>* ಮಿಂಚು ಪಟ್ಟಿಯಲ್ಲಿ ಪದ ನೀಡಿ ನಕಲು ಮಾಡಿಸುವುದು. | * ಹೊಸ ಪದಗಳ ಉಕ್ತಲೇಖನ.<br>* ಪದಗಳನ್ನು ಮಕ್ಕಳಿಂದ ಪರಸ್ಪರ ಹೇಳಿಸಿ ಬರೆಯಿಸಿ ತಿದ್ದುವುದು.<br>* ಪರಿಚಿತ ಮತ್ತು ಅಪರಿಚಿತ ಪದಗಳನ್ನು ಹೇಳಿ ಬರೆಸುವುದು.<br>* ವಯೋಮಾನಕ್ಕೆ ತಕ್ಕ ಪದಗಳ ಪಟ್ಟಿ ತಯಾರಿಸಿ ಅವುಗಳನ್ನು ಉಕ್ತಲೇಖನ ಮಾಡಿಸುವುದು.<br>**(ಅವಧಿ : ೧೫)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3 | * ಸೂಚನೆಗಳನ್ನು ಅನುಸರಿಸಿ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. | * ಸೂಚನೆಗಳನ್ನು ನೀಡಿದಾಗ ಮಾರ್ಗದರ್ಶಿತ ರಚನೆಗಳನ್ನು ಬರೆಯುವುದರ ಜತೆಗೆ ತಾವೇ ವಾಕ್ಯಗಳನ್ನು ಬರೆಯಲು ಸಮರ್ಥರಾಗುವುದು.<br>* ವಾಕ್ಯ ಬರವಣಿಗೆಯಲ್ಲಿ ಸೂಚನೆಗಳ ಅವಶ್ಯಕತೆಗಳನ್ನು ಮನಗಾಣುವುದು. | * ಸೂಚನೆಗಳೊಂದಿಗೆ ವಿವರಣಾತ್ಮಕ ವಾಕ್ಯಗಳನ್ನು ಬರೆಯುವ ಚಟುವಟಿಕೆಗಳು.<br>* ಗ್ರಾಮೀಣ ಕಲೆ ಅಥವಾ ಉದ್ಯೋಗವನ್ನು ಪರಿಚಯಿಸುವಂತಹರೂ ಕುತೂಹಲ ಭರಿತವಾಗಿರಲಿ.<br>* ಗದ್ಯಪಾಠ. | * ಪಠ್ಯವನ್ನು ಅರ್ಥೈಸುವುದು.<br>* ಪಠ್ಯದಲ್ಲಿನ ಸೂಚನೆಗಳನ್ನು ಅರ್ಥೈಸುವುದು.<br>* ಸೂಚನೆಗಳನ್ನು ಅನುಸರಿಸಿ ವಿವರಣಾತ್ಮಕ ವಾಕ್ಯಗಳನ್ನು ಬರೆಯುವ ವಿಧಾನ ತಿಳಿಸುವುದು.<br>* ಸೂಚನೆಗಳ ಅವಶ್ಯಕತೆಗಳನ್ನು ಮನಗಾಣಿಸುವುದು. | * ಪಠ್ಯಕ್ಕೆ ಸಂಬಂಧಿಸಿದ ಮೌಲ್ಯಮಾಪನ.<br>* ಸೂಚನೆಗಳನ್ನು ನೀಡಿ ವಾಕ್ಯಗಳನ್ನು ರಚನೆ ಮಾಡಿಸುವುದು.<br>* ಒಂದು ಮಗು ಸೂಚನೆ ನೀಡಿ ಉಳಿದವರು ವಾಕ್ಯಗಳನ್ನು ಬರೆಯುವಂತೆ ಚಟುವಟಿಕೆ ಮಾಡಿಸುವುದು.<br>* ಪ್ರಬಂಧಗಳನ್ನು ಹೇಳಿ ಬರೆಯಿಸುವುದು. (ಅವಧಿ : ೨೧) |
| 4 | * ಕೊಟ್ಟಿರುವ ಪದಗಳ ಆಧಾರದಿಂದ ಅರ್ಥಪೂರ್ಣ ವಾಕ್ಯಗಳನ್ನು ರಚಿಸುವುದು. | * ಪದಪದಗಳ ನಡುವಿನ ಸಂಬಂಧ ಅರಿತು ಅರ್ಥಪೂರ್ಣ ವಾಕ್ಯವನ್ನು ರಚಿಸುವುದು. | * ಸರಳ ವಾಕ್ಯಗಳನ್ನು ಹೊಂದಿರುವ ಚಿತ್ರಕಥೆ.<br>* ಇಲ್ಲಿ ಪ್ರಾಣಿಗಳೇ ಪಾತ್ರಧಾರಿಗಳಾಗಿರಲಿ.<br>* ಪ್ರಾಣಿಗಳ ನಡುವಿನ ಸಂಭಾಷಣೆ ಇರಲಿ.<br>* ಗದ್ಯಪಾಠ | * ಪಠ್ಯವನ್ನು ಅರ್ಥೈಸುವುದು.<br>* ಪಠ್ಯದಲ್ಲಿ ಬರುವ ಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯ ರಚಿಸುವುದು.<br>* ವಾಕ್ಯಗಳ ಬಗ್ಗೆ ತಿಳಿಸಿ ಕೊಡುವುದು.<br>* ವಾಕ್ಯಗಳು ಹೇಗೆ ಪ್ರಾರಂಭವಾಗುತ್ತವೆ ? ಹೇಗೆ ಮುಕ್ತಾಯವಾಗುತ್ತವೆ ? ಎಂದು ತಿಳಿಸುವುದು. | * ಪಠ್ಯಾಧಾರಿತ ಮೌಲ್ಯಮಾಪನ.<br>* ಪದಗಳನ್ನು ಬರೆಯಿಸಿ ನಕಲು ಮಾಡಿಸುವುದು.<br>* ಪದ ನೀಡಿ ವಾಕ್ಯ ರಚನೆ ಮಾಡಿಸುವುದು.<br>* ಅಪೂರ್ಣವಾಕ್ಯ ನೀಡಿ ಪೂರ್ಣಗೊಳಿಸುವ ಚಟುವಟಿಕೆ ಮಾಡಿಸುವುದು.<br>(ಅವಧಿ : ೨೧) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **5** | * ಗುಂಪಿನಲ್ಲಿ ಮಾತನಾಡುವಾಗ ಸರದಿ ಅನುಸರಿಸುವುದು. | * ಗುಂಪಿನಲ್ಲಿ ಸಂವಾದ, ಚರ್ಚೆ, ಸಂಭಾಷಣೆ ನಡೆಸುವ ಸಂದರ್ಭಗಳಲ್ಲಿ ಸರದಿಗಾಗಿ ಕಾಯುವ, ಸರದಿಯನ್ನು ಅನುಸರಿಸುವ ಗುಣ ಬೆಳೆಸುವುದು. | * ಮಗುವಿನ ಪರಿಸರದ ವ್ಯಾಪ್ತಿಗೊಳಪಟ್ಟು. ಗುಂಪಿನಲ್ಲಿ ಮಾತನಾಡುವಾಗ ಸರದಿ ಅನುಸರಿಸುವುದು.<br>* ಪ್ರಾಣಿಗಳ ಪಾತ್ರಗಳೊಂದಿಗೆ ಸರದಿಯಲ್ಲಿ ಮಾತನಾಡುವ ಸಂದರ್ಭಗಳನ್ನೊಳಗೊಂಡ ಕುತೂಹಲಭರಿತ ಕಥೆ.<br>* ಗದ್ಯಪಾಠ | * ಪಠ್ಯದಲ್ಲಿನ ಸಂಭಾಷಣೆಯನ್ನು ಶಿಕ್ಷಕರು ಸೂಕ್ತ ಸ್ವರ ಭಾರದೊಂದಿಗೆ ಹೇಳುವುದು.<br>* ಗುಂಪಿನಲ್ಲಿ ಮಾತನಾಡುವಾಗ ಏಕೆ ಸರದಿ ಅನುಸರಿಸಬೇಕೆಂಬುವುದನ್ನು ತಿಳಿಸುವುದು.<br>* ಮಕ್ಕಳಿಗೆ ಒಂದು ವಿಷಯವನ್ನು ನೀಡಿ ಗುಂಪಿನಲ್ಲಿ ಮಾತನಾಡಲು ಅವಕಾಶ ನೀಡುವುದು.<br>* ಅದೇ ವಿಷಯದ ಮೇಲೆ ಸರದಿಯನ್ನು ಅನುಸರಿಸಿ ಮಾತನಾಡಲು ಅವಕಾಶ ನೀಡುವುದು.<br>* ಮಕ್ಕಳಿಗೆ ಮೇಲಿನೆರಡೂ ಸಂದರ್ಭ ನೀಡಿ ಯಾವುದು ಉತ್ತಮವೆಂದು ತೀರ್ಮಾನಿಸಲು ಅವಕಾಶ ನೀಡುವುದು. | * ಸಾಮರ್ಥ್ಯವನ್ನಾಧರಿಸಿದ ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ವಿವಿಧ ಸಂದರ್ಭಗಳನ್ನು ಮಕ್ಕಳಿಗೆ ನೀಡಿ ಮಾತನಾಡಲು ತಿಳಿಸಿ, ಗಮನಿಸುವುದು.<br>* ಮಾತನಾಡುವಾಗ ಸರದಿ ಅನುಸರಿಸುವರೋ ಇಲ್ಲವೋ ? ಎಂಬುದನ್ನು ಗಮನಿಸುವುದು.<br>* ವಿವಿಧ ಸಹಜ ಸಂದರ್ಭಗಳಲ್ಲಿ ಮಕ್ಕಳು ಸರದಿ ಅನುಸರಿಸುವ ವಿಧಾನವನ್ನು ಗಮನಿಸುವುದು.<br><br>**(ಅವಧಿ : ೨೧)** |

# ಪ್ರಥಮ ಭಾಷೆ – ಕನ್ನಡ ಪಠ್ಯವಸ್ತು

# ನಾಲ್ಕನೇ ತರಗತಿ

- ಪಠ್ಯಪುಸ್ತಕ ರಚನೆಗೆ ಮುನ್ನ ಗಮನಿಸಬೇಕಾದ ಅಂಶ
- ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ
- ಅವಧಿ ಹಂಚಿಕೆ ಕೋಷ್ಠಕ
- ಕ್ರೋಢೀಕೃತ ಸಾಮರ್ಥ್ಯ ಪಟ್ಟಿ
- ಸಾಮರ್ಥ್ಯವಾರು ಪಠ್ಯವಸ್ತು

## ೪ನೇ ತರಗತಿ ಪ್ರಥಮಭಾಷೆ ಕನ್ನಡ ಪಠ್ಯಪುಸ್ತಕ ರಚನೆಗೆ ಮುನ್ನ ಗಮನಿಸಬೇಕಾದ ಅಂಶ

ಒಟ್ಟು ಗದ್ಯ–ಪದ್ಯಗಳ ಸಂಖ್ಯೆ ೨೦ ಕ್ಕೆ ಸೀಮಿತಗೊಳಿಸಿ (ಸಾಮರ್ಥ್ಯಕ್ಕೆ ಒಂದರಂತೆ)

**ವಿಂಗಡಣೆ :**

| | | |
|---|---|---|
| ೧. | ಪದ್ಯ | – ೦೭ |
| ೨. | ಗದ್ಯ | – ೦೮ |
| ೩. | ನಾಟಕ | – ೦೨ |
| ೪. | ವಿನೋದ ಚಿತ್ರಕಥೆ | – ೦೧ |
| ೫. | ಪತ್ರ ಲೇಖನ | – ೦೧ |
| ೬. | ಸಂಭಾಷಣೆ | – ೦೧ |

**೧. ಪದ್ಯ**

೧. ನಾಡು–ನುಡಿಯ ಬಗ್ಗೆ ಅಭಿಮಾನ ಮೂಡುವ ಪದ್ಯಪಾಠ

೨. ಪರಿಸರ ಜಾಗೃತಿ ಮೂಡಿಸುವ ಪದ್ಯಪಾಠ

೩. ಜನಪದತ್ರಿಪದಿ + ಸರ್ವಜ್ಞ ತ್ರಿಪದಿ
(೩ನುಡಿ) (೩ನುಡಿ)

೪. ಅಕ್ಕಮಹಾದೇವಿ + ಬಸವಣ್ಣನವರ ವಚನ ಪದ್ಯಪಾಠ

೫. ದೇಶಭಕ್ತಿ, ಭಾವೈಕ್ಯತೆ ಪ್ರಧಾನ ಪದ್ಯಪಾಠ

೬. ಪ್ರಾಸಪ್ರಧಾನ ಪದ್ಯಪಾಠ

೭. ಕಲ್ಪನಾಲೋಕಕ್ಕೆ ಕೊಂಡೊಯ್ಯುವ, ಕನಸು ಕಾಣುವ, ಸೃಜನ ಶೀಲತೆಗೆ ಸಂಬಂಧಪಟ್ಟ ಕವಿತೆ

೮. ಪದ್ಯದ ಆಶಯ ನೀಡಬೇಕು

ಪದ್ಯಗಳು ಸಾಮಾನ್ಯ ಶಿಕ್ಷಕರು ಸಹ ತಕ್ಕಮಟ್ಟಿಗೆ ರಾಗವಾಗಿ ಹಾಡಲು ಸಾಧ್ಯವಾಗುವಂತಿರಲಿ. ಪ್ರತಿ ಪದ್ಯ ೪ ರಿಂದ ೬ ನುಡಿಗೆ ಸೀಮಿತವಾಗಿರಲಿ. ಇವುಗಳಲ್ಲಿ ಒಂದು ಕಥನಕವನವಿರಲಿ.

**೨. ಗದ್ಯ**

೧. ದೇಶಭಕ್ತಿ ಪ್ರತಿಬಿಂಬಿಸುವ ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗಳ ರಕ್ಷಣೆ ಕುರಿತ ಗದ್ಯಪಾಠ

೨. ಸ್ವಾತಂತ್ರ್ಯ ಹೋರಾಟ, ತ್ಯಾಗ, ಬಲಿದಾನ ಕುರಿತ ಗದ್ಯಪಾಠ

೩. ಸಾಹಸ ಮೆರೆದ ಬಾಲಕ/ಬಾಲಕಿಯರ ಅಥವಾ ದೊಡ್ಡವರ ಬಗೆಗಿನ ಗದ್ಯಪಾಠ

೪. ಭಾರತೀಯ ಕ್ರೀಡೆಗಳ ಬಗ್ಗೆ ಗದ್ಯಪಾಠ ಇರಬೇಕು

೫. ಪರಿಸರ ಕಾಳಜಿ, ಪರಿಸರ ಮಾಲಿನ್ಯ ಅದರ ಪರಿಣಾಮ ಕುರಿತ ಗದ್ಯಪಾಠ

೬. ಕೃಷಿ, ರೈತ, ಕೃಷಿಕಾರ್ಮಿಕರ ಬಗೆಗಿನ ಗದ್ಯಪಾಠ

೭. ವೀರಮಹಿಳೆಯರ ಗದ್ಯಪಾಠ

೮. ವ್ಯಕ್ತಿಚಿತ್ರಣದ ಗದ್ಯಪಾಠ

೯. ಐತಿಹಾಸಿಕ ಘಟನೆ, ಐತಿಹಾಸಿಕ ಸ್ಥಳಗಳ ಬಗ್ಗೆ ವಿವರ ಇರುವ ಗದ್ಯಪಾಠ

ಎಲ್ಲಾ ಪಾಠಗಳು ಗರಿಷ್ಠ ೨ ೧/೨ ಪುಟಗಳನ್ನು ಮೀರದಿರಲಿ. ಪ್ರತಿಪಾಠದಲ್ಲಿ ಕನಿಷ್ಠ ೨ ಅಥವಾ ೩ ಚಿತ್ರಗಳಿರಲಿ. ಗದ್ಯಗಳು ಗಾದೆ, ಒಗಟು, ನಾಣ್ನುಡಿಗಳನ್ನು ಒಳಗೊಂಡಿರಲಿ (ಸರಳವಾದ). ಚಿತ್ರದಲ್ಲಿ ಸಮಾನತೆಯನ್ನು ಕಾಯ್ದುಕೊಳ್ಳುವುದು.

**೩. ನಾಟಕ**

೧. ಪೌರಾಣಿಕ ೨. ಸಾಮಾಜಿಕ (ಸಾಮಾಜಿಕ ಪಿಡುಗು ಅಥವಾ ಹಾಸ್ಯ ಇರುವ ನಾಟಕ). ನಾಟಕ ೩ ಅಥವಾ ೪ ಪಾತ್ರಗಳಿಗೆ ಸೀಮಿತವಾಗಿದ್ದು ಹೆಚ್ಚು ಉದ್ದದ ಸಂಭಾಷಣೆ ಬೇಡ. ಗರಿಷ್ಠ ಒಂದು ಪಾತ್ರದ ಸಂಭಾಷಣೆ ೨ ರಿಂದ ೩ ವಾಕ್ಯಗಳ ಮಿತಿಯಲ್ಲಿ ಇರಲಿ; ೩ ಅಥವಾ ೪ ದೃಶ್ಯ ಇದ್ದು ಗರಿಷ್ಠ ೨ ರಿಂದ ೩ ಪುಟಗಳಿರಲಿ; ಚಿತ್ರಸಹಿತ ಮೂಡಿಬರಲಿ.

೪. **ವಿನೋದ ಚಿತ್ರಕಥೆ**

ಬಾಲಮಂಗಳ, ಚಂದಮಾಮ ಇತ್ಯಾದಿಗಳಲ್ಲಿ ಬರುವ ವಿನೋದ ಚಿತ್ರಕಥೆ ಇರಬೇಕು. ಇದರಲ್ಲಿ ಮನರಂಜನೆಗೆ ಅವಕಾಶವಿರಲಿ. ಜೊತೆಗೆ ನೀತಿಯೂ ಇರಲಿ.

೫. **ಚಿತ್ರಕಥೆ**

ನೀತಿಪ್ರಧಾನ ಕಥೆ ರಾಮಕೃಷ್ಣ ಪರಮಹಂಸರ, ವಿವೇಕಾನಂದರ ಅಥವಾ ಬುದ್ಧನ ಜೀವನಚರಿತ್ರೆ ಹಾಗೂ ಅವರ ಬೋಧನೆಗಳಿಗೆ ಸಂಬಂಧಪಟ್ಟ ಚಿತ್ರಕಥೆ ಇರಲಿ.

೬. **ಪತ್ರ ಲೇಖನ**

ಗರಿಷ್ಠ ಒಂದು ಪುಟದ ಪತ್ರ. ಪ್ರಸಿದ್ಧ ಕವಿಗಳ, ಸಾಧಕರ ಕೈಬರೆಹ ಇರಲಿ. ಇದರ ಜತೆಗೆ ಚಟುವಟಿಕೆಗಳಲ್ಲಿ ಪ್ರಸಿದ್ಧ ಗಣ್ಯವ್ಯಕ್ತಿಗಳು ಸಾರಿರುವ ಸಂದೇಶಗಳನ್ನು ಅವರ ಹೇಳಿಕೆಯಂತೆಯೇ ನೀಡಬೇಕು.

೭. **ಸಂಭಾಷಣೆ**

ಅಗ್ನಿದುರಂತ ಹಾಗೂ ದುರ್ಘಟನೆ ಸಂಭವಿಸಿದಾಗಿನ ಸೈನ್ಯದ ಸೇವೆ (ಉದಾ: ಪ್ರಕೃತಿ ವಿಕೋಪದಲ್ಲಿ ಸೈನ್ಯದ ಸಹಾಯ). ಪ್ರಥಮ ಚಿಕಿತ್ಸೆ, ರಸಗೊಬ್ಬರ, ಕೀಟನಾಶಕಗಳಿಂದಾಗುವ ದುಷ್ಪರಿಣಾಮ ಇತ್ಯಾದಿ ಬಗ್ಗೆ ಶಿಕ್ಷಕ ಹಾಗೂ ವಿದ್ಯಾರ್ಥಿಗಳ ನಡುವೆ ನಡೆಯುವ ಸಂಭಾಷಣೆ ನೀಡಬೇಕು (ಪ್ರವಾಸ, ಐತಿಹಾಸಿಕ ಸ್ಥಳಗಳಿಗೆ ಭೇಟಿ ಮುಂತಾದ ಸಂದರ್ಭ).

ಒಟ್ಟಾರೆ ಚಿತ್ರಗಳು ಸ್ಪಷ್ಟವಾಗಿದ್ದು ವರ್ಣರಂಜಿತವಾಗಿ ಮುದ್ರಿತವಾಗಬೇಕು.

೮. **ಮೌಲ್ಯಮಾಪನ**

ಪ್ರತಿ ಗದ್ಯ–ಪದ್ಯ ನಾಟಕಗಳಿಗೆ ಸಂಬಂಧಪಟ್ಟಂತೆ ಒಂದು ಪದ, ಒಂದು ವಾಕ್ಯ, ೨ ವಾಕ್ಯದ ಉತ್ತರವನ್ನು ಅಪೇಕ್ಷಿಸುವ ಪ್ರಶ್ನೆಗಳು, ಬಿಟ್ಟಸ್ಥಳ ತುಂಬಿ, ಹೊಂದಿಸಿ ಬರೆಯಿರಿ, ಗುಂಪಿಗೆ ಸೇರದ ಪದ ಹುಡುಕಿ, ೧ನೇ ಮತ್ತು ೨ನೇ ಪದಕ್ಕಿರುವ ಸಂಬಂಧ ಗುರ್ತಿಸಿ ೪ನೇ ಪದ ಬರೆಯಿರಿ. ಸಮನಾರ್ಥಕ, ವಿರುದ್ಧಾರ್ಥಕ ಪದಬಂಧ ಇತ್ಯಾದಿಗಳನ್ನು ಸಂದರ್ಭಕ್ಕೆ ತಕ್ಕಂತೆ ರೂಪಿಸುವುದು. ಇದಲ್ಲದೆ ಇಲ್ಲಿ ನಿಗದಿತ ಸಾಮರ್ಥ್ಯ ಬೆಳೆಸಲು ಹೆಚ್ಚುವರಿ ಚಟುವಟಿಕೆಗಳನ್ನು ನೀಡುವುದು.

೯. **ಧ್ವನಿಸುರಳಿ**

೪ನೇ ತರಗತಿಗೆ ಉತ್ತಮ ಭಾಷಾ ಕೌಶಲ ಬೆಳೆಸಬೇಕಾಗಿರುವುದರಿಂದ ಒಂದು ಧ್ವನಿಸುರುಳಿ ನೀಡಿದರೆ ಉತ್ತಮ. ಅದರಲ್ಲಿ ೨, ೩, ಪದ್ಯ, ಸಂಭಾಷಣೆ, ಭಾಷಣ, ಆಡುಭಾಷೆ ಬಳಕೆ ಇರುವ ಪ್ರಸಂಗ ಮತ್ತು ಪ್ರಸಿದ್ಧ ಕವಿಗಳ ಧ್ವನಿ ಇರುವುದು ಉಚಿತ.

## ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ

೧. ಪ್ರಸ್ತುತ ಪಠ್ಯವಸ್ತು ತಯಾರಿಸುವಾಗ ರಾಜ್ಯ ಪಠ್ಯಕ್ರಮ ೨೦೦೧-೨೦೦೨ ಮತ್ತು ಎನ್.ಸಿ.ಎಫ್. ೨೦೦೫ ಇವೆರಡನ್ನೂ ಗಮನಿಸಿದೆ

೨. ಮೂಲ ಕ.ಕ.ಮ. ಆಧಾರಿತ ಸಾಮರ್ಥ್ಯಗಳನ್ನು ಪ್ರಸ್ತುತ ಎನ್.ಸಿ.ಎಫ್ ೨೦೦೫ ರ ನೆಲೆಯಲ್ಲಿ ಪರಿಷ್ಕರಿಸಿದೆ

೩. ಪಠ್ಯವಸ್ತುವನ್ನು ಶಿಶುಕೇಂದ್ರಿತ, ಸಾಮರ್ಥ್ಯಾಧಾರಿತ, ಚಟುವಟಿಕೆ ಮತ್ತು ಸಂತಸದಾಯಕ ಸನ್ನಿವೇಶವನ್ನು ಆಧರಿಸಿ ರೂಪಿಸಿದೆ

೪. ಮಗುವಿನ ಮನೆಭಾಷೆ, ಸ್ಥಳೀಯ ಭಾಷೆಯನ್ನು ಯಥಾವತ್ತಾಗಿ ಸ್ವೀಕರಿಸಲು ಅವಕಾಶ ಮಾಡಿಕೊಟ್ಟಿದೆ

೫. ಮಗು ಶಾಲೆಯಲ್ಲಿ ಪಡೆದ ಜ್ಞಾನವನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ

೬. ರಾಷ್ಟ್ರೀಯ ಮೌಲ್ಯ ಮತ್ತು ಭಾವೈಕ್ಯತೆಗೆ ಸಂಬಂಧಿಸಿದ ಅಂಶಗಳನ್ನು ಪಠ್ಯವಸ್ತುವಿನಲ್ಲಿ ಅಳವಡಿಸಿದೆ

೭. ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಜೋಡಿಸಿದೆ

೮. ಪಠ್ಯವಸ್ತುವಿನಲ್ಲಿಯೇ ಮೌಲ್ಯಮಾಪನ ಹಾಗೂ ಪಠ್ಯದ ವಿಸ್ತಾರ ಎಷ್ಟಿರಬೇಕೆಂದು ವಿವರಿಸಿದೆ

೯. ಅವಧಿಯನ್ನು ನಿರ್ಧರಿಸಿ ಅವುಗಳಿಗೆ ತಕ್ಕಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೦. ಮಗು ಆಡುಭಾಷೆಯಿಂದ ಹಂತ ಹಂತವಾಗಿ ಗ್ರಾಂಥಿಕ ಭಾಷೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೧. ರಾಷ್ಟ್ರ, ಸಮಾಜ, ವೃತ್ತಿ ಅಪೇಕ್ಷಿತ ಹಾಗೂ ನಿರೀಕ್ಷಿತ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸಲು ಅವಕಾಶ ಮಾಡಿಕೊಟ್ಟಿದೆ

೧೨. ಭಾಷಾ ಅಭಿವೃದ್ಧಿಯೊಂದಿಗೆ ಭಾಷಾ ಕೌಶಲಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಕಲಿಕೆಯ ನಿರೀಕ್ಷಿತ ಫಲಗಳನ್ನು ಪರಿಗಣಿಸಿದೆ

೧೩. ಶೈಕ್ಷಣಿಕ ಕ್ಷೇತ್ರದಲ್ಲಿನ ಹೊಸಹೊಸ ಸಂಶೋಧನೆ, ಪ್ರಯೋಗ ಮತ್ತು ನವೀಕರಣದ ಫಲಿತಾಂಶಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

೧೪. ಭಾಷಾವಿಜ್ಞಾನದ ತಳಹದಿಯ ಮೇಲೆ ರೂಪಿತವಾಗಿದ್ದರೂ ಪ್ರಾದೇಶಿಕ ಭಾಷಾ ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿದೆ

೧೫. ರಾಷ್ಟ್ರೀಯ ಶಿಕ್ಷಣನೀತಿ ೧೯೮೬ರಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವವಿಕಸನದ ಅಗತ್ಯತೆಯ ತತ್ತ್ವಗಳನ್ನಾಧರಿಸಿ ಪಠ್ಯವಸ್ತುವನ್ನು ತಯಾರಿಸಿದೆ

೧೬. ನಗರ ಮತ್ತು ಗ್ರಾಮಾಂತರ ಶೈಕ್ಷಣಿಕ ಅಂತರವನ್ನು ಕಡಿಮೆಗೊಳಿಸಲು ಹೆಚ್ಚು ಒತ್ತು ನೀಡಿದೆ. ಮಕ್ಕಳ ಮನೋವಿಕಾಸ ಭೂಮಿಕೆಗೂ ಸಮಾನ ಪ್ರಾತಿನಿಧ್ಯ ನೀಡಿದೆ

೧೭. ಪರಿಣಾಮಕಾರಿ ಕಲಿಕೆಯಲ್ಲಿ, ಚಟುವಟಿಕೆ ಮತ್ತು ಇನ್ನಿತರ ಸಮಗ್ರ ವಿಧಾನಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

# ಅವಧಿ ಹಂಚಿಕೆ ಕೋಷ್ಟಕ

## ಕ್ಷೇತ್ರವಾರು ಅವಧಿ ಕೋಷ್ಟಕ

| ಕ್ಷೇತ್ರ | ನಿಗದಿಪಡಿಸಿದ ಅವಧಿ |
|---|---|
| ಆಲಿಸುವುದು | ೮೭ |
| ಮಾತನಾಡುವುದು | ೯೯ |
| ಓದುವುದು | ೧೧೪ |
| ಬರೆಯುವುದು | ೭೮ |
| ಸೇತುಬಂಧ | ೪೨ |
| **ಒಟ್ಟು** | **೪೨೦** |

## ಪಠ್ಯಪುಸ್ತಕ ರಚನಾಧಾರಿತ ಅವಧಿ ಕೋಷ್ಟಕ

| ಪಠ್ಯ ವಿಭಾಗ | ಸಂಖ್ಯೆ | ನಿಗದಿಪಡಿಸಿದ ಅವಧಿ |
|---|---|---|
| ಸಾಮರ್ಥ್ಯಾಧಾರಿತ ಗದ್ಯ | ೧೩ | ೨೭೩ |
| ಸಾಮರ್ಥ್ಯಾಧಾರಿತ ಪದ್ಯ | ೦೭ | ೧೦೫ |
| ಸೇತುಬಂಧ | | ೪೨ |
| | **ಒಟ್ಟು** | **೪೨೦** |

## ಪ್ರತಿ ಗದ್ಯ ಪದ್ಯಕ್ಕೆ ಅವಧಿ ಹಂಚಿಕೆ

| ಹಂತ | ಗದ್ಯ | ಪದ್ಯ |
|---|---|---|
| ಪೂರ್ವಸಿದ್ಧತೆ | ೦೨ | ೦೧ |
| ಕಲಿಕಾಪೂರಕ | ೦೮ | ೦೬ |
| ಪುನರ್ಬಲನ | ೦೫ | ೦೪ |
| ಮೌಲ್ಯಮಾಪನ | ೦೪ | ೦೩ |
| ಪರಿಹಾರ ಬೋಧನೆ | ೦೨ | ೦೧ |
| **ಒಟ್ಟು** | **೨೧** | **೧೫** |

**ಕ್ರೋಢೀಕೃತ ಸಾಮರ್ಥ್ಯ ವಿವರ ಪಟ್ಟಿ** **ತರಗತಿ : ೪**

| ಆಲಿಸುವುದು | ಮಾತನಾಡುವುದು | ಓದುವುದು | ಬರೆಯುವುದು |
|---|---|---|---|
| * ಪರಿಚಿತ ಸನ್ನಿವೇಶಗಳಲ್ಲಿ ಸರಳಭಾಷಣ ಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವುದು. | * ನಿರರ್ಗಳವಾಗಿ ಮಾತನಾಡುವುದು | * ವಿನೋದ ಚಿತ್ರಸರಣಿ ಮತ್ತು ಭಿತ್ತಿಪತ್ರಗಳನ್ನು ಓದುವುದು. | * ಅಚ್ಚುಕಟ್ಟಾಗಿ ಮತ್ತು ಸ್ಫುಟವಾಗಿ ಬರೆಯುವುದು. |
| * ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿ ಕೊಳ್ಳುವುದು. | * ಸಮರ್ಪಕವಾಗಿ ಕಂಠಪಾಠ ಒಪ್ಪಿಸು ವುದು. | * ಕೈಬರೆಹದ ಪತ್ರ ಮತ್ತು ಇತರರ ಬರೆವಣಿಗೆಯನ್ನು ಓದುವುದು. | * ಉಕ್ತಲೇಖನದ ಮೂಲಕ ಹೆಚ್ಚು ಬಳಕೆಯಲ್ಲಿರುವ ಲೇಖನ ಚಿಹ್ನೆಗಳನ್ನು ಬಳಸಿ ಬರೆಯುವುದು. |
| * ಆಟಗಳನ್ನು ಆಡುವ ಮತ್ತು ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥಮಾಡಿ ಕೊಳ್ಳುವುದು. | * ಅಪರಿಚಿತ ವಸ್ತುಗಳ ಬಗ್ಗೆ ವಿವರಿಸು ವುದು. | * ಮಕ್ಕಳ ನಿಯತ ಕಾಲಿಕೆಗಳನ್ನು ಓದುವುದು. | * ಸೂಚನೆಗಳನ್ನು ಅನುಸರಿಸಿ ಲೇಖನ ಚಿಹ್ನೆ ಸಹಿತ ಪರಿಚ್ಛೇದ(ಪ್ಯಾರಾಗ್ರಾಫ್ಸ್) ಗಳನ್ನು ಬರೆಯುವುದು. |
| * ಹೇಳಿದ ಪಠ್ಯದಲ್ಲಿನ ವಿಚಾರ ಸರಣಿ ಮತ್ತು ಘಟನಾವಳಿಗಳಲ್ಲಿರುವ ಸರಳ ಕಾರ್ಯಕಾರಣ ಸಂಬಂಧಗಳನ್ನು ಗುರ್ತಿಸುವುದು. | * ತರಗತಿಯಲ್ಲಿ ನಡೆಯುವ ಸರಳ ಸಂವಾದ ಮತ್ತು ಚರ್ಚೆಯಲ್ಲಿ ಭಾಗವಹಿಸುವುದು. | * ಸುಮಾರು 4000 ಪದ ಗಳನ್ನು ಓದಿ ಗ್ರಹಿಸುವುದು. | * ಸರಳ ಕ್ರಿಯಾತ್ಮಕ ನಿಯಮಗಳನ್ನು ಅರ್ಥ ಮಾಡಿಕೊಂಡು ವಾಕ್ಯಗಳನ್ನು ರಚಿಸು ವುದು. |
| * ಆಲಿಸಿದ ನಂತರ ಏಕೆ? ಹೇಗೆ ? – ಪ್ರಶ್ನೆಗಳಿಗೆ ಉತ್ತರಿಸುವುದು. | * ಆಡುಭಾಷೆ ಹಾಗೂ ಗ್ರಾಂಥಿಕ ಭಾಷೆಗಳ ನಡುವಿನ ವ್ಯತ್ಯಾಸವನ್ನು ಕಲಿಯುವುದು | * ಪಠ್ಯದಲ್ಲಿನ ವಿಚಾರಸರಣಿ ಮತ್ತು ಘಟನಾವಳಿಗಳಲ್ಲಿರುವ ಸರಳ ಕಾರ್ಯಕಾರಣ ಸಂಬಂಧಗಳನ್ನು ಹೇಳುವುದು. | |

**ಆಲಿಸುವುದು** **ಸಾಮರ್ಥ್ಯವಾರು ಪಠ್ಯವಸ್ತು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ಪರಿಚಿತ ಸನ್ನಿವೇಶಗಳಲ್ಲಿ ಸರಳಭಾಷಣಗಳನ್ನು ಆಲಿಸುವುದರ ಜತೆಗೆ ಅರ್ಥಮಾಡಿಕೊಳ್ಳುವುದು. | * ಭಾಷಣವನ್ನು ಆಲಿಸಿ ಅರ್ಥಗ್ರಹಿಸಿಕೊಳ್ಳುವುದು. * ಯಾರು ? ಯಾವಾಗ ? ಯಾವ ವಿಷಯ ಕುರಿತು ಭಾಷಣಮಾಡಿದರು ಎಂಬುದನ್ನು ಅರ್ಥೈಸುವುದು. | * ಶಾಲೆಯಲ್ಲಿ ಆಚರಿಸುವ 'ಸ್ವಾತಂತ್ರ್ಯ ದಿನಾಚರಣೆ' ಕುರಿತಾದ ಗದ್ಯ. * ಸಮಾರಂಭದ ಸನ್ನಿವೇಶದಲ್ಲಿ ಭಾಷಣಮಾಡುವಂತೆ ಗದ್ಯ ರೂಪಿಸುವುದು. * ಮುಖ್ಯ ಶಿಕ್ಷಕ / ಶಿಕ್ಷಕರು/ ಮುಖ್ಯ ಅತಿಥಿಗಳು ಮಾಡಿದ ಭಾಷಣದ ಹಾಗೆ ಇರಬೇಕು. * ಗದ್ಯಪಾಠ | * ಪಠ್ಯದಲ್ಲಿ ನೀಡಲಾದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾಡಿದ ಭಾಷಣವನ್ನು ಆಲಿಸಲು ಅವಕಾಶ ಕಲ್ಪಿಸುವುದು. * ಶಾಲೆಯಲ್ಲಿ ಆಚರಿಸುವ ರಾಷ್ಟ್ರೀಯ ಹಬ್ಬಗಳ ಕುರಿತು ಭಾಷಣಮಾಡುವುದು. * ಮಕ್ಕಳ ದಿನಾಚರಣೆ ಪರಿಸರ ದಿನಾಚರಣೆಗಳ ಬಗ್ಗೆ ಇರುವ ಭಾಷಣದ ಧ್ವನಿಸುರುಳಿ ಬಳಸಿ ವಿದ್ಯಾರ್ಥಿಗಳಿಗೆ ಆಲಿಸಲು ಅವಕಾಶ ಮಾಡಿಕೊಡುವುದು. | * ಪಠ್ಯದಲ್ಲಿ ನೀಡಿರುವ ಸ್ವಾತಂತ್ರ್ಯ ದಿನಾಚರಣೆ ಬಗೆಗಿನ ಭಾಷಣದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. * ಭಾಷಣದ ಸಾರಾಂಶ ಹೇಳಿಸುವುದು. * ಮಕ್ಕಳ ದಿನಾಚರಣೆ, ಪರಿಸರ ದಿನಾಚರಣೆ ಮುಂತಾದ ದಿನಾಚರಣೆಗಳ ಬಗೆಗಿನ ಧ್ವನಿಸುರಳಿಯಲ್ಲಿನ ಭಾಷಣ ಕೇಳಿಸಿ ಅದಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿ ಸಾಮರ್ಥ್ಯ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು. **(ಅವಧಿ : ೨೧)** |
| 2. | * ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು. | * ಏಕಕಾಲದಲ್ಲಿ ಇಬ್ಬರು ಅಥವಾ ಮೂವರು ನಡೆಸುವ ಸಂಭಾಷಣೆಯನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದು. * ಒಂದು ವಿಷಯದ ಬಗ್ಗೆ ನಡೆಯುವ ಸಂವಾದ ಆಲಿಸಿ ಅರ್ಥಮಾಡಿಕೊಳ್ಳುವುದು. | * ರೈಲು ನಿಲ್ದಾಣದಲ್ಲಿ ಪ್ರವಾಸ ಹೊರಟ ಪ್ರವಾಸಿಗರೊಂದಿಗೆ ನಡೆದ ಐತಿಹಾಸಿಕ ಸ್ಥಳಗಳ ಬಗ್ಗೆ ನಡೆದ ಸಂಭಾಷಣೆಯನ್ನು ಹೊಂದಿರಲಿ. * ಗದ್ಯಪಾಠ | * ಪಠ್ಯದಲ್ಲಿ ನೀಡಲಾದ ಪ್ರವಾಸ ಹೊರಟ ಪ್ರಯಾಣಿಕರೊಂದಿಗೆ ನಡೆದ ಐತಿಹಾಸಿಕ ಸ್ಥಳಗಳ ಬಗೆಗಿನ ಸಂಭಾಷಣೆಯನ್ನು ಶಿಕ್ಷಕರು ಓದಿ ವಿದ್ಯಾರ್ಥಿಗಳಿಗೆ ಆಲಿಸಲು ಅವಕಾಶ ಕಲ್ಪಿಸುವುದು. | * ಪಠ್ಯದಲ್ಲಿನ ಸಂಭಾಷಣೆಯ ಮುಖ್ಯಾಂಶಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಉದ್ದೇಶ ಈಡೇರಿದ ಬಗ್ಗೆ ದೃಢಪಡಿಸಿಕೊಳ್ಳುವುದು. * ಸಂಭಾಷಣೆಯಲ್ಲಿ ಯಾರು ಭಾಗವಹಿಸಿದರು, ಯಾವ ವಿಷಯದ ಬಗ್ಗೆ ಸಂಭಾಷಣೆ ನಡೆಸಿದರು ಎಂದು ಪ್ರಶ್ನಿಸುವುದು. |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | | * ಸಂಭಾಷಣೆ, ಸಂವಾದದಲ್ಲಿ ಯಾರು ಭಾಗವಹಿಸುವರು ಎಂಬುದನ್ನು ತಿಳಿದು ಕೊಳ್ಳುವುದು.<br>* ಸಂಭಾಷಣೆ, ಸಂವಾದಗಳ ಅಗತ್ಯತೆಯನ್ನು ತಿಳಿಯುವುದು. | | * ಸಂಭಾಷಣೆಯಲ್ಲಿನ ಮುಖ್ಯಾಂಶಗಳನ್ನು ಅರ್ಥೈಸುವುದು.<br>* ವಿದ್ಯಾರ್ಥಿಗಳಿಂದ ಜಾತ್ರೆ ಯಲ್ಲಿನ ವಿಶೇಷತೆಗಳ ಬಗ್ಗೆ ಸಂಭಾಷಣೆ ಏರ್ಪಡಿಸಿ ಇತರ ವಿದ್ಯಾರ್ಥಿಗಳಿಗೆ ಆಲಿಸಲು ಅವಕಾಶ ಕಲ್ಪಿಸುವುದು. | * ಸಂಭಾಷಣೆಯಲ್ಲಿನ ಮುಖ್ಯಾಂಶಗಳ ಬಗ್ಗೆ ಮೌಖಿಕ ಪ್ರಶ್ನೆ ಕೇಳಿ ಸಾಮರ್ಥ್ಯ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br><br>(ಅವಧಿ : ೨೧) |
| 3. | * ಆಟಗಳನ್ನು ಆಡುವ ಮತ್ತು ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥಮಾಡಿ ಕೊಳ್ಳುವುದು. | * ಸೂಚನೆಗಳ ಸರಣಿಯನ್ನು ಅನುಸರಿಸುವ ಅಗತ್ಯತೆ ಯನ್ನು ತಿಳಿಯುವುದು.<br>* ನೀಡಲಾದ ಸೂಚನೆಗಳನ್ನು ಅನುಸರಿಸಿ ಉದ್ದೇಶಿತ ಚಟುವಟಿಕೆಯನ್ನು ಕಾರ್ಯ ರೂಪಕ್ಕೆ ತರುವುದು. | * ಶಾಲಾ ವಾರ್ಷಿಕೋತ್ಸವದ ಸಿದ್ಧತೆ ಕುರಿತು ಶಾಲಾ ಆವರಣದ ಸ್ವಚ್ಛತೆ, ವೈಯಕ್ತಿಕ ಸ್ವಚ್ಛತೆ ಹಾಗೂ ಕಾರ್ಯಕ್ರಮದಲ್ಲಿ ಭಾಗ ವಹಿಸುವ ಬಗ್ಗೆ ಸೂಚನೆ ಗಳ ಸರಣಿಯನ್ನು ಒಳಗೊಂಡದ್ದು<br>* ಗದ್ಯಪಾಠ | * ಪಠ್ಯದಲ್ಲಿ ನೀಡಲಾದ ಶಾಲಾ ವಾರ್ಷಿಕೋತ್ಸವ ಸಿದ್ಧತೆ ಬಗೆಗಿನ ಸೂಚನೆ ಗಳನ್ನು ಓದಿ ವಿದ್ಯಾರ್ಥಿ ಗಳಿಗೆ ಅರ್ಥೈಸುವುದು.<br>* ಪ್ರಾಯೋಗಿಕವಾಗಿ ಶಾಲಾ ಆವರಣ, ವೈಯಕ್ತಿಕ ಸ್ವಚ್ಛತೆ ಬಗ್ಗೆ ಸೂಚನೆಗಳ ಸರಣಿ ಯನ್ನು ನೀಡಿ ಚಟುವಟಿಕೆಯ ಕಾರ್ಯನಿರ್ವಹಣೆ ಬಗ್ಗೆ ಅರಿವು ಮೂಡಿಸುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ಖಚಿತಪಡಿಸಿಕೊಳ್ಳುವುದು.<br>* ಸೂಚನೆಗಳ ಪಾಲನೆ ಎಷ್ಟರ ಮಟ್ಟಿಗೆ ಸಾಧಿಸಲ್ಪಟ್ಟಿದೆ ಎಂಬುದನ್ನು ಗಮನಿಸುವುದು.<br><br>(ಅವಧಿ : ೨೧) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 4. | * ಹೇಳಿದ ಪದ್ಯದಲ್ಲಿನ ವಿಚಾರ ಸರಣಿ ಮತ್ತು ಘಟನಾವಳಿಗಳಲ್ಲಿರುವ ಸರಳ ಕಾರ್ಯಕಾರಣ ಸಂಬಂಧಗಳನ್ನು ಗುರ್ತಿಸುವುದು. | * ಘಟನೆಯ ಕಾಲಾನು ಕ್ರಮಣಿಕೆಯನ್ನು ಅರಿಯುವುದು.<br>* ಆಲಿಸಿದ ನಂತರ ಆ ಘಟನೆ ನಡೆಯಲು ಕಾರಣ ವೇನು? ಅದರ ಪರಿಣಾಮ ಏನು? ಎಂಬುದನ್ನು ಅರಿಯುವುದು. | * ತನ್ನ ಪರಿಸರದಲ್ಲಿ ನಡೆಯುವ ಆಗು ಹೋಗುಗಳ ಮತ್ತು ತಿಳಿದ ವಿಚಾರಗಳ ನಡುವೆ ಕಾರ್ಯಕಾರಣ ಸಂಬಂಧವನ್ನು ಗುರ್ತಿಸುವುದು.<br>**ಉದಾ :** 'ಸಾಗರದ ನೀರು ಕಾದು ಆವಿಯಾಗಿ' ಈ ರೀತಿಯ ಪದ್ಯ (ನೀರಿನ ಚಕ್ರ)<br>* ಪದ್ಯಪಾಠ | * ಪದ್ಯದಲ್ಲಿ ನೀಡಲಾಗಿರುವ 'ಸಾಗರದ ನೀರು ಕಾದು ಆವಿಯಾಗಿ' – ಪದ್ಯವನ್ನು ವಾಚಿಸಿ ವಿದ್ಯಾರ್ಥಿಗಳು ಆಲಿಸಲು ಅವಕಾಶ ಮಾಡಿಕೊಡುವುದು.<br>* ಪದ್ಯದಲ್ಲಿನ ನೀರಿನ ಚಕ್ರ, ನೀರಿನ ವಿವಿಧ ರೂಪಗಳ ಬಗ್ಗೆ ತಿಳಿದುಕೊಳ್ಳುವುದು.<br>* ನೀರು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಬದಲಾಗಲು ಕಾರಣಗಳನ್ನು ಅರ್ಥೈಸುವುದು.<br>* ಶಿಕ್ಷಕರು ಕಾಲಗಳ ಬಗ್ಗೆ ತಿಳಿಸುವುದು. | * ಪದ್ಯದಲ್ಲಿ ನೀಡಿರುವ ಜಲಚಕ್ರ ಪದ್ಯವನ್ನು ಹೇಳಿಸುವುದು.<br>* ಮಂಜುಗಡ್ಡೆ ನೀರು ಆವಿ ಇತ್ಯಾದಿಗಳಾಗಲು ಕಾರಣಗಳೇನು ಎಂಬ ಪ್ರಶ್ನೆಗಳನ್ನು ಕೇಳುವುದರ ಮೂಲಕ ಸಾಮರ್ಥ್ಯ ಗಳಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಕಾಲ ಮತ್ತು ನಾವು ಧರಿಸುವ ಉಡುಪುಗಳ ಸಂಬಂಧದ ಬಗ್ಗೆ ಮೌಖಿಕ ಪ್ರಶ್ನೆಗಳನ್ನು ಕೇಳುವುದು.<br>* ಮಕ್ಕಳಿಂದ ದೈನಂದಿನ ಸಂದರ್ಭಗಳಲ್ಲಿನ ವಿವಿಧ ಘಟನೆಗಳಿಗೆ ಕಾರಣಗಳನ್ನು ಪತ್ತೆಹಚ್ಚಿಸುವುದು. ಉದಾ: ಈ ದಿನ ಮಧ್ಯಾಹ್ನ ವಾತಾವರಣ ತಂಪಾಗಿತ್ತು.<br><br>**(ಅವಧಿ : ೧೫)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 5. | ಆಲಿಸಿದ ನಂತರ ಏಕೆ? ಹೇಗೆ ? – ಪ್ರಶ್ನೆಗಳಿಗೆ ಉತ್ತರಿಸುವುದು. | * ಆಲಿಸಿದ ನಂತರ ಏಕೆ? ಹೇಗೆ ? – ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ನೀಡಲು ಸಮರ್ಥ ರಾಗುವುದು.<br>* ಸರಳ ಕಾರ್ಯಕಾರಣ ಸಂಬಂಧವನ್ನು ಗುರ್ತಿಸಿ (ಆಲಿಸಿ) ಉತ್ತರಿಸಲು ಸಮರ್ಥರಾಗುವುದು. | * ಒಂದು ಘಟನೆ ಸಂಭವಿಸಲು ಕಾರಣಗಳನ್ನು ಗುರ್ತಿಸುವುದು.<br>* ಕಥನ ಕವನವನ್ನು ಪದ್ಯದ ಮೂಲಕ ನೀಡುವುದು.<br>ಉದಾ: 'ತಿರುಕನ ಕನಸು' ಇತ್ಯಾದಿ<br>* ಪದ್ಯಪಾಠ | * ನೀಡಲಾದ ಪದ್ಯವನ್ನು ಶಿಕ್ಷಕರು ವಾಚಿಸುವುದು. (ರಾಗವಾಗಿ)<br>* ವಿದ್ಯಾರ್ಥಿಗಳಿಂದ ಕೂಡ ಪದ್ಯವನ್ನು ಹೇಳಿಸುವುದು.<br>* ಪದ್ಯದ ಮುಖ್ಯಾಂಶವನ್ನು ಅರ್ಥೈಸುವುದು.<br>* ಸಾಮರ್ಥ್ಯಕ್ಕೆ ಪೂರಕವಾದ ಕೆಲವು ಪ್ರಶ್ನೆಗಳನ್ನು ಕೇಳುವುದು. | * ಪದ್ಯದ ಕೆಲವು ಸಾಲುಗಳನ್ನು ಹೇಳಿಸುವುದು.<br>* ಪದ್ಯದಲ್ಲಿ ಬರುವ ಸಂದರ್ಭಕ್ಕೆ ತಕ್ಕಂತೆ ಏಕೆ ? ಹೇಗೆ ? – ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>* ಸಾಮರ್ಥ್ಯಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>ಉದಾ: 1) ಕಾಲಿಗೆ ಏಕೆ ಚಪ್ಪಲಿ ಧರಿಸಬೇಕು ?<br>2) ಬೆಳಗ್ಗೆ ಶಾಲೆಯಲ್ಲಿ ಏಕೆ ಪ್ರಾರ್ಥನೆ ಮಾಡಬೇಕು?<br>3) ಶಾಲೆಯಲ್ಲಿ ಕೈತೋಟ ಹೇಗೆ ಬೆಳೆಸಬಹುದು?<br><br>**(ಅವಧಿ : ೧೫)** |

## ಮಾತನಾಡುವುದು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ನಿರರ್ಗಳವಾಗಿ ಮಾತನಾಡುವುದು | * ಸ್ಪಷ್ಟ ಉಚ್ಚಾರದೊಂದಿಗೆ ನಿರರ್ಗಳವಾಗಿ ಮಾತನಾಡುವುದು.<br>* ಮಾತುಗಾರಿಕೆಯ ಮಹತ್ವ ಅರಿಯುವುದು.<br>* ಮಾತುಗಾರಿಕೆಯಲ್ಲಿನ ದೋಷಗಳನ್ನು ಗುರ್ತಿಸಿ ಸರಿಪಡಿಸಿಕೊಳ್ಳುವುದು. | * ತನ್ನ ಮನೆ, ಶಾಲೆ, ಸಮುದಾಯದಲ್ಲಿನ ಪರಿಸರಕ್ಕೆ ತಕ್ಕಂತೆ ನಿರರ್ಗಳವಾಗಿ ಮಾತನಾಡುವುದು.<br>* ಕೇಳಿದ, ಓದಿದ ತನ್ನ ಅನುಭವಕ್ಕೆ ಬಂದ ವಿಷಯಗಳ ಕುರಿತು ಧ್ವನಿ ಏರಿಳಿತ ಹಾಗೂ ಸರಿಯಾದ ಉಚ್ಚಾರದೊಂದಿಗೆ ಮಾತನಾಡುವುದು.<br>* ಸಾಮಾಜಿಕ ನಾಟಕ ನೀಡಿ. (ನಾಟಕವು ಹಾಸ್ಯ ಪ್ರಧಾನವಾಗಿದ್ದು 3–4 ದೃಶ್ಯಗಳಿಂದ ಕೂಡಿರಲಿ 3–4 ಪಾತ್ರಗಳನ್ನೊಳಗೊಂಡಿರಲಿ. | * ಮಾತಿನ ಮಹತ್ವ ತಿಳಿಸುವುದು.<br>* ಮಾತುಗಾರಿಕೆಯ ಕೆಲವು ಲಕ್ಷಣಗಳನ್ನು ತಿಳಿಸುವುದು.<br>* ನೀಡಿದ ಪಠ್ಯವನ್ನು (ನಾಟಕ) ಶಿಕ್ಷಕರು ಸ್ಪಷ್ಟ ಉಚ್ಚಾರ, ಧ್ವನಿ ಏರಿಳಿತಗಳೊಂದಿಗೆ ನಿರರ್ಗಳವಾಗಿ ಓದುವುದು–ವಿದ್ಯಾರ್ಥಿಗಳು ಅನುಕರಿಸುವುದು.<br>* ವಿದ್ಯಾರ್ಥಿಗಳಿಂದ ನಾಟಕ ಮಾಡಿಸುವುದು.<br>* ಆಶುಭಾಷಣ ಸ್ಪರ್ಧೆ ಏರ್ಪಡಿಸುವುದು.<br>* ವಸ್ತು, ಪ್ರಾಣಿ, ಪಕ್ಷಿಗಳು ತಾನೇ ಎಂದು ಭಾವಿಸಿ ಮಾತನಾಡುವುದು. | * ಪಠ್ಯದಲ್ಲಿನ ಕೆಲವು ಪಾತ್ರಗಳನ್ನು ಅಭಿನಯಿಸಲು ಹೇಳಿ ಪಾತ್ರ ಪರಿಚಯವಾಗಿದೆಯೇ ಎಂದು ದೃಢಪಡಿಸಿಕೊಳ್ಳುವುದು.<br>* ನಾಟಕದಲ್ಲಿನ ಮುಖ್ಯ ಅಂಶಗಳನ್ನು ಹೇಳಿಸುವುದು.<br>* ಪಾತ್ರದ ಮಾತುಗಳನ್ನು ಬರೆಸುವುದು.<br>* ಆಶುಭಾಷಣ ಸ್ಪರ್ಧೆಯಲ್ಲಿ ಮಕ್ಕಳ ಮಾತುಗಾರಿಕೆ ನಿರರ್ಗಳವಾಗಿತ್ತೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.<br>* ಹೇಳಿದ ಮಾತುಗಳು ನಿರರ್ಗಳವಾಗಿತ್ತೆ ಎಂದು ಖಚಿತಪಡಿಸಿಕೊಳ್ಳುವುದು.<br><br>(ಅವಧಿ : ೨೧) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 2. | * ಸಮರ್ಪಕವಾಗಿ ಕಂಠಪಾಠ ಒಪ್ಪಿಸುವುದು. | * ವಿಷಯವನ್ನು ನೆನಪಿಸಿ ಕೊಂಡು ಸಮರ್ಪಕವಾಗಿ ಕಂಠಪಾಠ ಒಪ್ಪಿಸುವುದು. | * ಕನಿಷ್ಠ 5–20 ಸಾಲುಗಳನ್ನು ನೆನಪಿಸಿಕೊಂಡು ಕಂಠಪಾಠ ಒಪ್ಪಿಸುವುದು.<br>* ಸರ್ವಜ್ಞನ ತ್ರಿಪದಿಗಳನ್ನು ನೀಡುವುದು.<br>* ಪದ್ಯಪಾಠ | * ಶಿಕ್ಷಕರು ಪದ್ಯಗಳನ್ನು ಸ್ವರ ಭಾರದೊಂದಿಗೆ ವಾಚಿಸುವುದು.<br>* ಮಕ್ಕಳು ಆಲಿಸಿ ಅನುಕರಿಸುವುದು.<br>* ಪ್ರತಿಯೊಬ್ಬರೂ ಪಠ್ಯವನ್ನು ಪುನರುಚ್ಚರಿಸಲು ಅವಕಾಶ ನೀಡುವುದು.<br>* ಒಂದು ಘಟನೆಯನ್ನು ಹೇಳಿ – ಮಕ್ಕಳಿಂದ ಪುನರುಚ್ಚರಿಸಲು ತಿಳಿಸುವುದು. | * ಪಠ್ಯದಲ್ಲಿನ ಪದ್ಯಗಳನ್ನು ಪ್ರತಿಯೊಬ್ಬರಿಂದಲೂ ಹೇಳಿಸಿ ದೃಢಪಡಿಸಿಕೊಳ್ಳುವುದು.<br>* ಪದ್ಯದ ಮುಖ್ಯಾಂಶಗಳನ್ನು ಗುರ್ತಿಸಲು ತಿಳಿಸುವುದು.<br>* ಪದ್ಯದಲ್ಲಿನ ಸಾರಾಂಶ ತಿಳಿಯಪಡಿಸಲು ಅವಕಾಶ ಕಲ್ಪಿಸುವುದು.<br>* ಆಲಿಸಿದ ಒಂದು ಘಟನೆಯನ್ನು ಹೇಳಿಸುವುದು.<br>(ಅವಧಿ : ೧೫) |
| 3. | * ಅಪರಿಚಿತ ವಸ್ತುಗಳ ಬಗ್ಗೆ ವಿವರಿಸುವುದು. | * ಮಾಹಿತಿ ಸಂಗ್ರಹಿಸುವ ಕೌಶಲ ಬೆಳೆಸುವುದು.<br>* ತಾನು ಸಂಗ್ರಹಿಸಿದ ಮಾಹಿತಿಗಳನ್ನು ನಿರರ್ಗಳವಾಗಿ, ಸಮರ್ಪಕವಾಗಿ ವಿವರಿಸುವುದು. | * ತನ್ನ ಸುತ್ತಲಿನ ಅಪರಿಚಿತ ವಸ್ತುಗಳ ಬಗ್ಗೆ ಮಾಹಿತಿ ಹೇಳುವುದು.<br>ಉದಾ : ಟಿ.ವಿ., ರೇಡಿಯೋ ದೂರವಾಣಿ ಇತ್ಯಾದಿಗಳ ಬಗ್ಗೆ ಗದ್ಯವಿರಲಿ. ಅವುಗಳ ಉಪಯೋಗ ಮುಂತಾದ ವಿವರಗಳನ್ನು ಹೊಂದಿರಲಿ. (ಸಮೂಹ ಮಾಧ್ಯಮ)<br>* ಗದ್ಯಪಾಠ | * ನೀಡಲಾದ ಪಠ್ಯದಲ್ಲಿನ ವಸ್ತುಗಳನ್ನು ಪ್ರದರ್ಶಿಸಿ ಅವುಗಳ ಬಗೆಗಿನ ಮಾಹಿತಿ ಓದಿ ಹೇಳುವುದು.<br>* ಅವುಗಳನ್ನು ಮುಟ್ಟಲು ಸಾಧ್ಯವಾದರೆ ಉಪಯೋಗಿಸಲು ಅವಕಾಶ ಮಾಡಿಕೊಡುವುದು. | * ಪಠ್ಯಾಧಾರಿತ ವಸ್ತುಗಳ ಬಗ್ಗೆ ಮಾಹಿತಿ ಕೇಳಿ ಸಮರ್ಪಕ ಉತ್ತರ ಪಡೆಯುವುದು.<br>* ಕೆಲವು ವಸ್ತುಗಳನ್ನು ನೀಡಿ ಅದರ ಬಳಕೆ ಬಗ್ಗೆ ಪ್ರಶ್ನೆ ಕೇಳುವುದು.<br>(ಅವಧಿ : ೨೧) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **4.** | * ತರಗತಿಯಲ್ಲಿ ನಡೆಯುವ ಸರಳ ಸಂವಾದ ಮತ್ತು ಚರ್ಚೆಯಲ್ಲಿ ಭಾಗವಹಿಸುವುದು. | * ಸಂವಾದ ಮತ್ತು ಚರ್ಚೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು.<br>* ಸಂವಾದ, ಚರ್ಚೆಗಳ ಮುಖ್ಯಾಂಶಗಳನ್ನು ಅರಿಯುವುದು.<br>* ಮಾತುಗಾರಿಕೆಯನ್ನು ಉತ್ತಮಪಡಿಸಿಕೊಳ್ಳುವುದು. | * ದೈನಂದಿನ ಜೀವನದಲ್ಲಿ ನಡೆಯುವ ಸಂವಾದ ಮತ್ತು ಚರ್ಚೆಗಳಲ್ಲಿ ಭಾಗವಹಿಸುವುದು.<br>* ತೋಟಗಾರಿಕೆ ಬಗ್ಗೆ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸುವ ಗದ್ಯ ನೀಡುವುದು.<br>* ಗದ್ಯಪಾಠ | * ಪಠ್ಯದಲ್ಲಿ ನೀಡಲಾದ ಚರ್ಚೆಯ ಗದ್ಯವನ್ನು ಓದಿ ಅರ್ಥೈಸುವುದು.<br>* ತರಗತಿಯಲ್ಲಿ ತೋಟಗಾರಿಕೆ ಮತ್ತು ಇತರೆ ಬೆಳೆಗಳ ಬಗ್ಗೆ ಪ್ರಾಯೋಗಿಕ ಚರ್ಚೆ ಏರ್ಪಡಿಸುವುದು.<br>* ಅಂಚೆಕಚೇರಿ, ಬ್ಯಾಂಕ್‌ಗಳ ಬಗ್ಗೆ ಇಬ್ಬರು ಸಂವಾದ ನಡೆಸಲು ಹೇಳಿ ಇತರರಿಗೆ ಆಲಿಸಲು ಹೇಳುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ಮೌಖಿಕವಾಗಿ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.<br>* ಪಠ್ಯದಲ್ಲಿನ ವಿಷಯ ನೀಡಿ ವಿದ್ಯಾರ್ಥಿಗಳಿಂದ ಚರ್ಚೆ ಮಾಡಿಸುವುದು.<br>* ಆಲಿಸಿದ ಸಂವಾದವನ್ನು ವಿದ್ಯಾರ್ಥಿಗಳು ಯಥಾವತ್ತಾಗಿ ಸಂವಾದ ನಡೆಸುವುದು.<br>**(ಅವಧಿ : ೨೧)** |
| **5.** | * ಆಡುಭಾಷೆ ಹಾಗೂ ಗ್ರಾಂಥಿಕಭಾಷೆಗಳ ನಡುವಿನ ವ್ಯತ್ಯಾಸವನ್ನು ಕಲಿಯುವುದು | * ಆಡುಭಾಷಾ ಪದಗಳನ್ನು ಅರ್ಥೈಸುವುದು.<br>* ಗ್ರಾಂಥಿಕಭಾಷೆಯ ಲಕ್ಷಣ ಅರಿಯುವುದು.<br>* ಎಲ್ಲಿ ಯಾವ ಭಾಷೆಯನ್ನು ಬಳಸಬೇಕು ಎಂಬುದನ್ನು ತಿಳಿಯುವುದು. | * ಗ್ರಾಮೀಣ ಪ್ರದೇಶದ ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಗಳ ನಡುವಿನ ವ್ಯತ್ಯಾಸ.<br>* ಜನಪದ ತ್ರಿಪದಿ ನೀಡುವುದು. ಜನಪದ<br>* ಪದ್ಯಪಾಠ | * ಪಠ್ಯದಲ್ಲಿ ನೀಡಲಾದ ಜನಪದ ತ್ರಿಪದಿಗಳನ್ನು ಶಿಕ್ಷಕರು ರಾಗವಾಗಿ ಹಾಡುವುದು. ವಿದ್ಯಾರ್ಥಿಗಳು ಆಲಿಸುವರು.<br>* ವಿದ್ಯಾರ್ಥಿಗಳಿಂದ ಮನೆಯಲ್ಲಿ ನಡೆಯುವ ಸಂಭಾಷಣೆ ಮಾಡಿಸಿ ಅಲ್ಲಿ ಬರುವ ಆಡುಭಾಷೆಯ ಪದಗಳಿಗೆ ಗ್ರಾಂಥಿಕ ಪದಗಳನ್ನು ಪತ್ತೆಹಚ್ಚಲು ಹೇಳುವುದು. | * ಪಠ್ಯಾಧಾರಿತ ತ್ರಿಪದಿಗಳಲ್ಲಿನ ಆಡುಪದಗಳಿಗೆ ಗ್ರಾಂಥಿಕ ಪದಗಳನ್ನು ಹೇಳಿಸುವುದು.<br>* ಆಡುನುಡಿ–ಗ್ರಾಂಥಿಕನುಡಿಗಳ ನಡುವಿನ ವ್ಯತ್ಯಾಸ ಕೇಳುವುದು.<br>* ಆಲಿಸಿದ ಸಂಭಾಷಣೆಯನ್ನು ಪೂರ್ಣವಾಗಿ ಗ್ರಾಂಥಿಕ ಭಾಷೆಯಲ್ಲಿ ನಡೆಸಲು ತಿಳಿಸುವುದು.<br>* ಆಡುನುಡಿಗಳಿಗೆ–ಗ್ರಾಂಥಿಕ ರೂಪವನ್ನು ಬರೆಸುವುದು.<br>**(ಅವಧಿ : ೧೫)** |

## ಓದುವುದು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ವಿನೋದ ಚಿತ್ರಸರಣಿ ಮತ್ತು ಭಿತ್ತಿಪತ್ರಗಳನ್ನು ಓದುವುದು. | * ಓದುವ ಹವ್ಯಾಸ ಬೆಳೆಸಿಕೊಳ್ಳುವುದು.<br>* ಓದುವ ಮೂಲಕ ಮನರಂಜನೆ ಪಡೆಯುವುದು.<br>* ಚಿತ್ರಗಳ ಮೂಲಕ ಮಾಹಿತಿ ಸಂಗ್ರಹಿಸುವುದನ್ನು ಅರಿತುಕೊಳ್ಳುವುದು.<br>* ಚಿತ್ರ ನೋಡಿ ಊಹೆ ಮಾಡಿಕೊಳ್ಳುವುದು. | * ಪ್ರಚಲಿತವಿರುವ (ತೆನಾಲಿ ರಾಮುನ) ಚಿತ್ರಸಹಿತ ವಿನೋದ ಕಥೆ.<br>* ದೀರ್ಘವಲ್ಲದ ಕನಿಷ್ಠ 4 ರಿಂದ 6 ಚಿತ್ರಗಳಿರುವ ವಿನೋದ ಚಿತ್ರಕಥೆ<br>* ಗದ್ಯಪಾಠ | * ಶಿಕ್ಷಕರು ಪಠ್ಯದಲ್ಲಿ ನೀಡಲಾದ ಚಿತ್ರಸಹಿತ ವಿನೋದ ಕಥೆಯನ್ನು ಓದಿ ಅರ್ಥೈಸುವುದು.<br>* ಮಕ್ಕಳಿಂದ ಬಾಲಮಂಗಳ ಇತ್ಯಾದಿಗಳಲ್ಲಿ ಪ್ರಕಟವಾಗಿರುವ ವಿನೋದ ಚಿತ್ರಕಥೆಯನ್ನು ಓದಿಸುವುದು.<br>* ಇಲಾಖೆಯ ಭಿತ್ತಿಪತ್ರಗಳನ್ನು ಓದಿಸುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ಪಠ್ಯದಲ್ಲಿನ ವಿನೋದದ ಪ್ರಸಂಗವನ್ನು ಹೇಳಿಸುವುದು.<br>* ಚಟುವಟಿಕೆಯಲ್ಲಿ ನೀಡಲಾದ ವಿನೋದ ಚಿತ್ರಕಥೆಯ ಬಗ್ಗೆ ಮುಖ್ಯಾಂಶಗಳನ್ನು ಹೇಳಿಸುವುದು.<br>* ಭಿತ್ತಿ ಪತ್ರಗಳನ್ನು ಓದಿಸುವುದು.<br>(ಅವಧಿ : ೨೧) |
| 2. | ಕೈಬರೆಹದ ಪತ್ರ ಮತ್ತು ಇತರರ ಬರೆವಣಿಗೆಯನ್ನು ಓದುವುದು. | * ಕೈಬರೆಹದ ಪತ್ರಗಳನ್ನು ಓದುವುದು.<br>* ಉತ್ತಮ ಕೈಬರೆಹದ ಲಕ್ಷಣ ತಿಳಿಯುವರು.<br>* ಉತ್ತಮ ಕೈಬರೆಹವನ್ನು ರೂಢಿಸಿಕೊಳ್ಳಲು ಪ್ರಯತ್ನಿಸುವರು.<br>* ಪತ್ರಗಳನ್ನು ಓದುವ ಕೌಶಲ ಬೆಳೆಸಿಕೊಳ್ಳುವುದು. | * ಕೈಬರೆಹದಲ್ಲಿರುವ ಪತ್ರ.<br>* ವಿದ್ಯಾರ್ಥಿ ಸಹಪಾಠಿಗೆ ತಾನು ನೋಡಿದ ಪ್ರಾಣಿ ಸಂಗ್ರಹಾಲಯದ ಬಗೆಗಿನ ಪತ್ರ ನೀಡುವುದು.<br>* ಒಂದು ಪುಟವಿರಲಿ.<br>* ಗದ್ಯಪಾಠ | * ಪಠ್ಯದಲ್ಲಿ ನೀಡಿರುವ ಪತ್ರವನ್ನು ಶಿಕ್ಷಕರು ಓದಿ ಅರ್ಥೈಸುವುದು.<br>* ಉತ್ತಮ ಕೈಬರೆಹದ ಲಕ್ಷಣ ತಿಳಿಸುವುದು.<br>* ಪತ್ರಗಳ ಒಕ್ಕಣೆ ತಿಳಿಸುವುದು.<br>* ಉತ್ತಮ ಕೈಬರೆಹ ರೂಢಿಸಿಕೊಳ್ಳಲು ಪ್ರೇರಣೆ ನೀಡುವುದು.<br>* ಪ್ರಸಿದ್ಧ ಕವಿಗಳ ಬರೆಹಗಳನ್ನು ಓದಿಸುವುದು.<br>* ಸಹಪಾಠಿಗಳಿಂದ ಬರೆಸಿದ ವಿವಿಧ ಪತ್ರಗಳನ್ನು ಓದಿಸುವುದು. | * ಪಠ್ಯದಲ್ಲಿ ನೀಡಿದ ಪತ್ರವನ್ನು ಓದಿಸುವುದು.<br>* ಮುಖ್ಯಾಂಶಗಳನ್ನು ಪ್ರಶ್ನೆಗಳ ಮೂಲಕ ಹೇಳಿಸುವುದು.<br>* ಸ್ನೇಹಿತರ ಪತ್ರಗಳನ್ನು ಓದಿಸುವುದು.<br>* ಪ್ರಸಿದ್ಧ ವ್ಯಕ್ತಿಗಳ, ತಂದೆ ತಾಯಿಯರ ಕೈಬರೆಹ ಸಂಗ್ರಹಿಸಿ ತರಗತಿಯಲ್ಲಿ ಓದಿಸುವುದು.<br>(ಅವಧಿ : ೨೧) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಮಕ್ಕಳ ನಿಯತ ಕಾಲಿಕೆಗಳನ್ನು ಓದುವುದು. | * ನಿಯತಕಾಲಿಕೆಗಳಲ್ಲಿನ ಕಥೆ, ಲೇಖನ, ಪ್ರಾಸಗೀತೆಗಳನ್ನು ಓದುವುದು.<br>* ಓದುವುದರ ಮೂಲಕ ಮಾಹಿತಿ ಸಂಗ್ರಹಿಸುವುದು.<br>* ತಾನು ಓದಿದ ನಿಯತ ಕಾಲಿಕೆಗಳಲ್ಲಿನ ವಿಚಾರಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದು. | * ಮಕ್ಕಳ ಕಥೆ, ಪ್ರಾಸಗೀತೆ, ಮನರಂಜನೆಯ ಚಿತ್ರಕಥೆಗಳನ್ನು ಓದುವುದು.<br>* ಬಾಲಮಂಗಳ, ಬಾಲಮಿತ್ರ, ಪುಟಾಣಿ ವಿಜಯಗಳಲ್ಲಿ ಪ್ರಕಟಣಯಾದ ಮಕ್ಕಳ ಗೀತೆ.<br>* 14 ರಿಂದ 16 ಸಾಲು ಇರುವ ಮಕ್ಕಳಗೀತೆ.<br>* ಪದ್ಯಪಾಠ | * ಪಠ್ಯದಲ್ಲಿನ ಪಠ್ಯವನ್ನು ರಾಗವಾಗಿ ಹಾವಭಾವ ಸಹಿತ ವಾಚಿಸುವುದು ವಿದ್ಯಾರ್ಥಿಗಳು ಆರಿಸಿ ಅನುಕರಿಸಲು ತಿಳಿಸುವುದು.<br>* ಶಿಕ್ಷಕರು ನಿಯತಕಾಲಿಕೆಗಳಲ್ಲಿನ ಕಥೆ, ಹಾಸ್ಯ ಪ್ರಸಂಗಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳಿಂದ ಓದಿಸುವುದು. | * ಪಠ್ಯವನ್ನು ಹೇಳಿಸುವುದು.<br>* ಮುಖ್ಯಾಂಶಗಳನ್ನು ಹೇಳಿಸುವುದು.<br>* ಪ್ರಶ್ನೆ ಕೇಳಿ ಪದ್ಯದ ಸಾರಾಂಶ ಹೇಳಲು ತಿಳಿಸುವುದು.<br>* ಪದ್ಯದ ಕರ್ತೃ ಸಂದರ್ಭಗಳನ್ನು ಪ್ರಶ್ನೆ ಕೇಳಿ ಉತ್ತರ ಪಡೆಯುವುದು.<br>* ಆಲಿಸಿದ ಚಟುವಟಿಕೆಗಳಲ್ಲಿನ ಮುಖ್ಯಾಂಶಗಳನ್ನು ಪ್ರಶ್ನೆಗಳ ಮೂಲಕ ಉತ್ತರ ಪಡೆಯುವುದು.<br>* ಮಕ್ಕಳಿಂದ ನಿಯತಕಾಲಿಕೆಗಳಲ್ಲಿನ ಲೇಖನ ಸಂಗ್ರಹಿಸಿ ತರಗತಿಯಲ್ಲಿ ಓದಿಸುವುದು.<br>(ಅವಧಿ : ೧೫) |
| 4. | * ಸುಮಾರು 4000 ಪದಗಳನ್ನು ಓದಿ ಗ್ರಹಿಸುವುದು. | * ಪದ ಸಂಪತ್ತನ್ನು ವೃದ್ಧಿಸಿಕೊಳ್ಳುವುದು.<br>* ಕನಿಷ್ಠ 4000 ಪದ ಓದಿ ಗ್ರಹಿಸುವುದು.<br>* ಹೊಸ ಹೊಸ ಪದಗಳನ್ನು ಓದಿ ಗ್ರಹಿಸುವುದು. | * ಹೊಸ ಪದಗಳನ್ನೊಳಗೊಂಡಿರಲಿ<br>* ವಿಜಾತಿ ಸಂಯುಕ್ತಾಕ್ಷರ, ಇರುವ ಪದಗಳು ಇರಲಿ.<br>* ನಾಡು-ನುಡಿ ಮತ್ತು ಐತಿಹಾಸಿಕ ಘಟನೆಗಳಿರಲಿ<br>* ಗದ್ಯಪಾಠ. | * ಪಠ್ಯದಲ್ಲಿ ನೀಡಲಾದ ಗದ್ಯವನ್ನು ಓದಿ ಅರ್ಥೈಸುವುದು.<br>* ಸಮಾನಾರ್ಥಕ ಪದಗಳನ್ನು ಗುರ್ತಿಸಿ ಪರ್ಯಾಯ ಪದಗಳನ್ನು ನೀಡುವುದು. | * ಪಠ್ಯದಲ್ಲಿ ನೀಡಿದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.<br>* ಹೊಸ ಪದಗಳನ್ನು ಪಟ್ಟಿ ಮಾಡಿಸುವುದು. |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | | | | * ಮಕ್ಕಳ ಪುಸ್ತಕಗಳನ್ನು ಮಕ್ಕಳಿಗೆ ನೀಡಿ ಓದಿಸುವುದು. ಇತರರು ಆಲಿಸಲಿ.<br>* ಒಗಟು, ಗಾದೆಗಳನ್ನು ಮಕ್ಕಳಿಂದ ಸಂಗ್ರಹಿಸಿ ತರಗತಿಯಲ್ಲಿ ಓದಿಸುವುದು. | * ಮಕ್ಕಳು ಓದಿದ ಪುಸ್ತಕಗಳಲ್ಲಿನ ಸಾರಾಂಶವನ್ನು ಕೇಳುವುದು.<br>* ಮಕ್ಕಳು ಸಂಗ್ರಹಿಸಿದ ಒಗಟು, ಗಾದೆಗಳನ್ನು ಓದಿಸಿ ಅರ್ಥ ಕೇಳುವುದು.<br>* 3ನೇ ತರಗತಿಯಲ್ಲಿನ 5 ಅಕ್ಷರದ ಪದಗಳನ್ನು ಪಟ್ಟಿ ಮಾಡಿಸುವುದು.<br><br>(ಅವಧಿ : ೨೧) |
| 5. | * ಪಠ್ಯದಲ್ಲಿನ ವಿಚಾರಸರಣಿ ಮತ್ತು ಘಟನಾವಳಿಗಳಲ್ಲಿರುವ ಸರಳ ಕಾರ್ಯ ಕಾರಣ ಸಂಬಂಧಗಳನ್ನು ಹೇಳುವುದು. | * ಘಟನೆಗಳಿಗೆ ಕಾರಣ, ಪರಿಣಾಮಗಳನ್ನು ತಿಳಿಯುವುದು.<br>* ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದು. | * ದೈನಂದಿನ ಜೀವನದಲ್ಲಿ ನಡೆಯುವ ಸುತ್ತ ಮುತ್ತಲಿನ ಘಟನೆಗಳಿಗೆ ಕಾರಣ ಪರಿಣಾಮ ಗುರ್ತಿಸುವುದು.<br>* ಕಥನಕವನವಿರಲಿ<br>ಉದಾ : ಮಂಗನ ಮದುವೆ<br>* ಪದ್ಯಪಾಠ | * ಪಠ್ಯದಲ್ಲಿ ನೀಡಲಾದ ಪದ್ಯವನ್ನು ಹಾವಭಾವ ಸಹಿತ ರಾಗವಾಗಿ ವಾಚಿಸುವುದು ವಿದ್ಯಾರ್ಥಿಗಳು ಆಲಿಸುವುದು.<br>* ಅಪಘಾತ, ಪ್ರಥಮ ಚಿಕಿತ್ಸೆ ಇತ್ಯಾದಿ ಘಟನೆಗಳ ತರಗತಿಯಲ್ಲಿ ಅಣುಕು ಪ್ರದರ್ಶನ ಏರ್ಪಡಿಸಿ– ಕಾರ್ಯಕಾರಣ ಸಂಬಂಧವನ್ನು ಹೇಳಿಸುವುದು. | * ಪಠ್ಯದಲ್ಲಿನ ಕಾರ್ಯಕಾರಣ ಸಂಬಂಧದ ಬಗ್ಗೆ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.<br>* ನೋಡಿದ ಘಟನೆಗೆ ಕಾರಣ, ಪರಿಣಾಮಗಳನ್ನು ಗುರ್ತಿಸಲು ಹೇಳುವುದು.<br><br>(ಅವಧಿ : ೧೫) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 6. | ಪಠ್ಯವನ್ನು ಓದಿದ ಬಳಿಕ ಹೇಗೆ ? ಏಕೆ ? – ಪ್ರಶ್ನೆಗಳಿಗೆ ಉತ್ತರಿಸುವುದು. | * ವಿವರಣಾತ್ಮಕ ಉತ್ತರ ನೀಡುವುದು.<br>* ಓದಿದ ಘಟನೆಗೆ ಸಂಬಂಧ ಪಟ್ಟಂತೆ ಉಂಟಾಗುವ ಸಂದೇಹಗಳನ್ನು ಪರಿಹರಿಸಿ ಕೊಳ್ಳುವುದು. | * ಸಾಹಸ ಬಾಲಕರ / ಪರಮ ವೀರ ಚಕ್ರ ಪ್ರಶಸ್ತಿ ಪಡೆದವರ ಜೀವನ ಚರಿತ್ರೆ.<br>* ಪಠ್ಯದಲ್ಲಿ ಬರುವ ವಿಷಯ ಗಳಲ್ಲಿನ ಘಟನೆಗಳಿಗೆ ಸಂಬಂಧ ಗುರುತಿಸುವುದು<br>* ಏಕೆ ನಡೆಯಿತು<br>* ಹೇಗೆ ನಡೆಯಿತು ಇತ್ಯಾದಿ<br>* ಸಾಹಸ ಬಾಲಕರ ಜೀವನ ಚರಿತ್ರೆ<br>* ಗದ್ಯಪಾಠ | * ಪಠ್ಯದಲ್ಲಿ ನೀಡಲಾದ ಜೀವನ ಚರಿತ್ರೆ/ಯು ಘಟನೆಗಳ ಪಾಠವನ್ನು ಸ್ವರ ಭಾರದೊಂದಿಗೆ ಓದು ವುದು.<br>* ಪರಿಸರ ಮಾಲಿನ್ಯದ ಬಗ್ಗೆ ವಿಷಯ ತಿಳಿಸಿ ಏಕೆ ? ಹೇಗೆ?– ಪ್ರಶ್ನೆ ಕೇಳುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ಮುಖ್ಯಾಂಶಗಳನ್ನು ಪ್ರಶ್ನೆ ಕೇಳುವುದರ ಮೂಲಕ ಉತ್ತರ ಪಡೆಯುವುದು.<br>* ಆಲಿಸದ ವಿಷಯಕ್ಕೆ ಸಂಬಂಧ ಪಟ್ಟಂತೆ ಪ್ರಶ್ನೆಗಳನ್ನು ಕೇಳು ವುದು.<br><br>**(ಅವಧಿ : ೨೧)** |

ಬರೆಯುವುದು.

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ಅಚ್ಚುಕಟ್ಟಾಗಿ ಮತ್ತು ಸ್ಫುಟವಾಗಿ ಬರೆಯುವುದು. | * ಅಕ್ಷರ ಅಕ್ಷರಗಳ ನಡುವಿನ ಅಂತರ, ಪದ ಪದಗಳ ನಡುವಿನ ಅಂತರವನ್ನು ಬರವಣಿಗೆಯಲ್ಲಿ ಅಳವಡಿಸಿ ಕೊಳ್ಳುವುದು.<br>* ಸರಾಗವಾಗಿ ತಪ್ಪಿಲ್ಲದೆ ಬರೆಯುವುದು.<br>* ಅಕ್ಷರ ಬರವಣಿಗೆಯಲ್ಲಿನ ಲೋಪವನ್ನು ಗುರ್ತಿಸುವುದು. | * ನಾಡು-ನುಡಿ / ಕನ್ನಡ ಭಾಷೆಯ ಬಗ್ಗೆ ಅಭಿಮಾನ ವ್ಯಕ್ತಪಡಿಸುವ ಪದ್ಯ.<br>* ಗರಿಷ್ಠ 16-20 ಸಾಲು ಗಳಿರಲಿ<br>* ಸರಳ ಕನ್ನಡ ಭಾಷೆ ಯಲ್ಲಿರಲಿ<br>* ಪದ್ಯಪಾಠ | * ಪಠ್ಯದಲ್ಲಿ ನೀಡಲಾದ ಪದ್ಯವನ್ನು ರಾಗವಾಗಿ ಶಿಕ್ಷಕರು ವಾಚಿಸುವುದು ಮಕ್ಕಳು ಆಲಿಸುವರು.<br>* ಪದ್ಯದ ಕೆಲವು ಸಾಲನ್ನು ಕಪ್ಪುಹಲಗೆಯ ಮೇಲೆ ಸ್ಫುಟವಾಗಿ ಬರೆದು ಮಕ್ಕಳನ್ನು ನಕಲು ಮಾಡಲು ಹೇಳಿ.<br>* ತ, ಕ್ಷ, ಣ, ಛ, ವ - ಈ ಅಕ್ಷರಗಳ ಬರವಣಿಗೆಯ ಬಗ್ಗೆ ತಿಳಿಸಿ. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ.<br>* ಮಕ್ಕಳು ಬರೆದ ಬರವಣಿಗೆ ಯನ್ನು ಪರಿಶೀಲಿಸುವುದು.<br>* ವಿದ್ಯಾರ್ಥಿಗಳು ಬರೆದ ಬರವಣಿಗೆಯನ್ನು ವಿದ್ಯಾರ್ಥಿ ಗಳಿಂದಲೇ ಮೌಲ್ಯಮಾಪನ ಮಾಡಿಸುವುದು.<br>* ಮೇಲ್ಪಂಕ್ತಿ ಬರವಣಿಗೆ ಪರಿ ಶೀಲಿಸುವುದು.<br>* ತ, ಣ, ಕ, ಛ, ವ - ಈ ಅಕ್ಷರಗಳನ್ನು ಮಕ್ಕಳಿಂದ ಕಪ್ಪುಹಲಗೆಯ ಮೇಲೆ ಬರೆಸುವುದು.<br>**(ಅವಧಿ : ೧೫)** |
| 2. | ಉಕ್ತಲೇಖನದ ಮೂಲಕ ಹೆಚ್ಚು ಬಳಕೆಯಲ್ಲಿರುವ ಲೇಖನ ಚಿಹ್ನೆಗಳನ್ನು ಬಳಸಿ ಬರೆಯುವುದು. | * ಲೇಖನ ಚಿಹ್ನೆಗಳನ್ನು ಎಲ್ಲಾ ಸಂದರ್ಭಗಳಲ್ಲಿ ಸಮರ್ಪಕ ವಾಗಿ ಬಳಸುವುದು.<br>* ಲೇಖನಚಿಹ್ನೆಗಳನ್ನು ಗುರ್ತಿಸುವುದು.<br>* ಚಿಹ್ನೆಗಳನ್ನು ಬಳಸುವ ಸಂದರ್ಭ ತಿಳಿಯುವುದು.<br>* ಉಕ್ತಲೇಖನ ತಪ್ಪಿಲ್ಲದೆ ಬರೆಯುವುದು. | * ಹೆಚ್ಚು ಬಳಕೆಯಲ್ಲಿರುವ ಲೇಖನ ಚಿಹ್ನೆಗಳನ್ನು ಒಳಗೊಂಡ ಒಂದು ಪಾಠ.<br>ಉದಾ : ಪೌರಾಣಿಕ ನಾಟಕ.<br>* ಗದ್ಯಪಾಠ | * ಪಠ್ಯದಲ್ಲಿ ನೀಡಲಾದ ನಾಟಕವನ್ನು ಶಿಕ್ಷಕರು ವಾಚಿಸುವುದು.<br>* ಪಠ್ಯದಲ್ಲಿನ ಕೆಲವು ಪಾತ್ರ ಗಳ ಮಾತುಗಳನ್ನು ಉಕ್ತ ಲೇಖನ ಮಾಡಿಸುವುದು.<br>* ಉಕ್ತಲೇಖನದಲ್ಲಿ ಲೇಖನ ಚಿಹ್ನೆ ಬಳಕೆಯನ್ನು ದೃಢ ಪಡಿಸಿಕೊಳ್ಳುವುದು.<br>* ಒಂದು ಘಟನೆ ಆರಿಸಲು ಹೇಳಿ ಅದನ್ನು ಸಂವಾದದ ರೂಪದಲ್ಲಿ ಬರೆಸುವುದು. | * ಪಠ್ಯಾಧಾರಿತ ಪ್ರಶ್ನೆಗಳಿಗೆ ಉತ್ತರ ಬರೆಸುವುದು.<br>* ಪಾತ್ರಗಳನ್ನು ನೀಡಿ ಅವರ ಮಾತುಗಳನ್ನು ಬರೆಸುವುದು.<br>* ಲೇಖನಚಿಹ್ನೆ ಬಳಕೆಯ ಬಗ್ಗೆ ದೃಢಪಡಿಸಿಕೊಳ್ಳುವುದು.<br>* ಆಲಿಸಿದ ಘಟನೆಯನ್ನು ಸಂವಾದ ರೂಪದಲ್ಲಿರುವ ವಾಕ್ಯಗಳು ಸರಿಯಾಗಿದೆಯೇ ಎಂದು ಖಾತರಿಪಡಿಸಿ ಕೊಳ್ಳುವುದು.<br>**(ಅವಧಿ : ೨೧)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **3.** | * ಸೂಚನೆಗಳನ್ನು ಅನುಸರಿಸಿ ಲೇಖನಚಿಹ್ನೆ ಸಹಿತ ಪರಿಚ್ಛೇದ(ಪ್ಯಾರಾಗ್ರಾಫ್ಸ್) ಗಳನ್ನು ಬರೆಯುವುದು. | * ಒಂದು ವಿಷಯದ ಬಗ್ಗೆ ತಪ್ಪಿಲ್ಲದೆ ಲೇಖನ ಚಿಹ್ನೆ ಬಳಸಿ ಪರಿಚ್ಛೇದಗಳನ್ನು ಬರೆಯುವುದು. | * ಸಾಹಸ ಪ್ರಧಾನ ಒಂದು ಘಟನೆಯ ಗದ್ಯ.<br>ಉದಾ :<br>ಒನಕೆ ಓಬವ್ವನ ಬಲಿದಾನ<br>* ಗದ್ಯಪಾಠ | * ಶಿಕ್ಷಕರು ನೀಡಲಾದ ಪಠ್ಯವನ್ನು ಲೇಖನ ಚಿಹ್ನೆಗಳನ್ನು ಅನುಸರಿಸಿ ಓದುವುದು ವಿದ್ಯಾರ್ಥಿಗಳು ಆಲಿಸುವರು.<br>* ಶಿಕ್ಷಕರು ಕೆಲವು ವಸ್ತುಗಳನ್ನು ತೋರಿಸಿ ಮಾಹಿತಿ ಹೇಳಲಿ, ವಿದ್ಯಾರ್ಥಿಗಳು ಆಲಿಸಲಿ. ಅನಂತರ ಒಂದು ಪರಿಚ್ಛೇದ ದಷ್ಟು ಬರೆಸುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ಪಠ್ಯದಲ್ಲಿನ ಕೆಲವು ವಾಕ್ಯಗಳನ್ನು ಬರೆಸಿ ಲೇಖನ ಚಿಹ್ನೆಗಳನ್ನು ಬಳಸಿರುವ ಬಗ್ಗೆ ದೃಢಪಡಿಸಿಕೊಳ್ಳುವುದು.<br>* ಶಿಕ್ಷಕರು ಹೇಳಿದ ಮಾಹಿತಿಯನ್ನು ನೆನಪಿಸಿಕೊಂಡು ಒಂದು ಪರಿಚ್ಛೇದ ರಚಿಸುವುದು. ಶಿಕ್ಷಕರು ಪರಿಶೀಲಿಸುವುದು.<br>**(ಅವಧಿ : ೨೧)** |
| **4.** | * ಸರಳ ಕ್ರಿಯಾತ್ಮಕ ನಿಯಮಗಳನ್ನು ಅರ್ಥಮಾಡಿಕೊಂಡು ವಾಕ್ಯಗಳನ್ನು ರಚಿಸುವುದು. | * ಪದದ–ಪದಗಳ ನಡುವಿನ ಸಂಬಂಧ ಗುರ್ತಿಸುವುದು.<br>* ನಾಮಪದ ಕ್ರಿಯಾಪದಗಳನ್ನು ಅರ್ಥೈಸುವುದು. | * ದೇಶಭಕ್ತಿ ಸಾರುವ ಒಂದು ಪಾಠ.<br>ಉದಾ :<br>ಸುಭಾಸ್ ಚಂದ್ರಬೋಸ್ ಮುಂತಾದವರ ಪಾಠ<br>* ಗದ್ಯಪಾಠ | * ನೀಡಲಾದ ಪಠ್ಯವನ್ನು ಶಿಕ್ಷಕರು ಓದುವರು. ವಿದ್ಯಾರ್ಥಿಗಳು ಆಲಿಸುವರು.<br>* ಶಿಕ್ಷಕರು ಮಾದರಿ ವಾಕ್ಯ ರಚಿಸಿ ಅಭ್ಯಾಸ ಮಾಡಿಸುವುದು.<br>[ ರಮಾ \| ನೀರು \| ಕುಡಿದಳು ] | * ಪಠ್ಯಾಧಾರಿತ ಮೌಲ್ಯಮಾಪನ ಚಟುವಟಿಕೆಗಳು.<br>* ಪಠ್ಯದಲ್ಲಿ ಬಳಕೆ ಆಗಿರುವ ಪದಗಳನ್ನು ವಾಕ್ಯರಚನೆ ಮಾಡಿಸುವುದು.<br>* ಕೆಲವು ವಾಕ್ಯಗಳನ್ನು ರಚಿಸಿ ನಂತರ ಶಿಕ್ಷಕರು ಅವುಗಳನ್ನು ಕತ್ತರಿಸಿ ಜೋಡಿಸಲು ಹೇಳುವುದು.<br>ಉದಾ :<br>[ ಕಮಲ \| ಹಣ್ಣು \| ತಿಂದಳು ]<br>[ ನವೀನ \| ಶಾಲೆಗೆ \| ಹೋದನು ]<br>**(ಅವಧಿ : ೨೧)** |

# ಪ್ರಥಮ ಭಾಷೆ – ಕನ್ನಡ ಪಠ್ಯವಸ್ತು

## ಐದನೇ ತರಗತಿ

- ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ
- ಅವಧಿ ಹಂಚಿಕೆ ಕೋಷ್ಠಕ
- ಪಠ್ಯ ಬರೆಯಲು ಕೆಲವು ಸಾಮಾನ್ಯ ಸೂಚನೆ
- ಕ್ರೋಢೀಕೃತ ಸಾಮರ್ಥ್ಯ ಪಟ್ಟಿ
- ಸಾಮರ್ಥ್ಯವಾರು ಪಠ್ಯವಸ್ತು

# ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ

೧. ಪ್ರಸ್ತುತ ಪಠ್ಯವಸ್ತು ತಯಾರಿಸುವಾಗ ರಾಜ್ಯ ಪಠ್ಯಕ್ರಮ ೨೦೦೧-೨೦೦೨ ಮತ್ತು ಎನ್.ಸಿ.ಎಫ್. ೨೦೦೫ ಇವೆರಡನ್ನೂ ಗಮನಿಸಿದೆ

೨. ಮೂಲ ಕ.ಕ.ಮ. ಆಧಾರಿತ ಸಾಮರ್ಥ್ಯಗಳನ್ನು ಪ್ರಸ್ತುತ ಎನ್.ಸಿ.ಎಫ್. ೨೦೦೫ ರ ನೆಲೆಯಲ್ಲಿ ಪರಿಷ್ಕರಿಸಿದೆ

೩. ಪಠ್ಯವಸ್ತುವನ್ನು ಶಿಶುಕೇಂದ್ರಿತ, ಸಾಮರ್ಥ್ಯಾಧಾರಿತ, ಚಟುವಟಿಕೆ ಮತ್ತು ಸಂತಸದಾಯಕ ಸನ್ನಿವೇಶವನ್ನು ಆಧರಿಸಿ ರೂಪಿಸಿದೆ

೪. ಮಗುವಿನ ಮನೆಭಾಷೆ, ಸ್ಥಳೀಯ ಭಾಷೆಯನ್ನು ಯಥಾವತ್ತಾಗಿ ಸ್ವೀಕರಿಸಲು ಅವಕಾಶ ಮಾಡಿಕೊಟ್ಟಿದೆ

೫. ಮಗು ಶಾಲೆಯಲ್ಲಿ ಪಡೆದ ಜ್ಞಾನವನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ

೬. ರಾಷ್ಟ್ರೀಯಮೌಲ್ಯ ಮತ್ತು ಭಾವೈಕ್ಯತೆಗೆ ಸಂಬಂಧಿಸಿದ ಅಂಶಗಳನ್ನು ಪಠ್ಯವಸ್ತುವಿನಲ್ಲಿ ಅಳವಡಿಸಿದೆ

೭. ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಜೋಡಿಸಿದೆ

೮. ಪಠ್ಯವಸ್ತುವಿನಲ್ಲಿಯೇ ಮೌಲ್ಯಮಾಪನ ಹಾಗೂ ಪಠ್ಯದ ವಿಸ್ತಾರ ಎಷ್ಟಿರಬೇಕೆಂದು ವಿವರಿಸಿದೆ

೯. ಅವಧಿಯನ್ನು ನಿರ್ಧರಿಸಿಕೊಂಡು ಅದಕ್ಕೆ ತಕ್ಕಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೦. ಮಗು ಆಡುಭಾಷೆಯಿಂದ ಹಂತ ಹಂತವಾಗಿ ಗ್ರಾಂಥಿಕ ಭಾಷೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೧. ರಾಷ್ಟ್ರ, ಸಮಾಜ, ವೃತ್ತಿ ಅಪೇಕ್ಷಿತ ಹಾಗೂ ನಿರೀಕ್ಷಿತ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸಲು ಅವಕಾಶ ಮಾಡಿಕೊಟ್ಟಿದೆ

೧೨. ಭಾಷಾ ಅಭಿವೃದ್ಧಿಯೊಂದಿಗೆ ಭಾಷಾ ಕೌಶಲಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಕಲಿಕೆಯ ನಿರೀಕ್ಷಿತ ಫಲಗಳನ್ನು ಪರಿಗಣಿಸಿದೆ

೧೩. ಶೈಕ್ಷಣಿಕ ಕ್ಷೇತ್ರದಲ್ಲಿನ ಹೊಸಹೊಸ ಸಂಶೋಧನೆ, ಪ್ರಯೋಗ ಮತ್ತು ಸಮೀಕರಣದ ಫಲಿತಾಂಶಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

೧೪. ಭಾಷಾವಿಜ್ಞಾನದ ತಳಹದಿಯ ಮೇಲೆ ರೂಪಿತವಾಗಿದ್ದರೂ ಪ್ರಾದೇಶಿಕ ಭಾಷಾ ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿದೆ

೧೫. ರಾಷ್ಟ್ರೀಯ ಶಿಕ್ಷಣನೀತಿ ೧೯೮೬ರಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವವಿಕಸನದ ಅಗತ್ಯತೆಯ ತತ್ತ್ವಗಳನ್ನಾಧರಿಸಿ ಪಠ್ಯವಸ್ತುವನ್ನು ತಯಾರಿಸಿದೆ

೧೬. ನಗರ ಮತ್ತು ಗ್ರಾಮಾಂತರ ಶೈಕ್ಷಣಿಕ ಅಂತರವನ್ನು ಕಡಿಮೆಗೊಳಿಸಲು ಹೆಚ್ಚು ಒತ್ತುನೀಡಿದೆ. ಮಕ್ಕಳ ಮನೋವಿಕಾಸ ಭೂಮಿಕೆಗೂ ಸಮಾನ ಪ್ರಾತಿನಿಧ್ಯ ನೀಡಿದೆ

೧೭. ಪರಿಣಾಮಕಾರಿ ಕಲಿಕೆಯಲ್ಲಿ, ಚಟುವಟಿಕೆ ಮತ್ತು ಇನ್ನಿತರ ಸಮಗ್ರ ವಿಧಾನಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

# ಅವಧಿ ಹಂಚಿಕೆ ಕೋಷ್ಟಕ

## ಪ್ರತಿ ಗದ್ಯ / ಪದ್ಯ ಅವಧಿ ಹಂಚಿಕೆ

| ಹಂತ | ಗದ್ಯ | ಪದ್ಯ |
|---|---|---|
| ಪೂರ್ವಸಿದ್ಧತೆ | ೦೧ | ೦೧ |
| ಕಲಿಕಾಂಶ ಚಟುವಟಿಕೆ | ೦೬ | ೦೩ |
| ಅಭ್ಯಾಸ / ಬಳಕೆ ಚಟುವಟಿಕೆ | ೦೪ | ೦೩ |
| ಮೌಲ್ಯಮಾಪನ | ೦೨ | ೦೨ |
| ಪರಿಹಾರಬೋಧನೆ ಪುನರ್ಬಲನ | ೦೨ | ೦೨ |
| ಒಟ್ಟು | ೧೫ | ೧೧ |

## ಪಠ್ಯಪುಸ್ತಕ ರಚನಾಧಾರಿತ ಅವಧಿ ಕೋಷ್ಟಕ

| ಪಠ್ಯದ ವಿಭಾಗ | ಸಂಖ್ಯೆ | ನಿಗದಿಪಡಿಸಿದ ಅವಧಿ |
|---|---|---|
| ಸಾಮರ್ಥ್ಯಾಧಾರಿತ ಗದ್ಯಪಾಠ | ೧೧ | ೧೬೫ |
| ಸಾಮರ್ಥ್ಯಾಧಾರಿತ ಪದ್ಯಪಾಠ | ೦೬ | ೬೬ |
| ಸೇತುಬಂಧ | – | ೧೬ |
| ಪುನರ್‌ಬಲನ | – | ೧೬ |
| ಕಿರುಪರೀಕ್ಷೆ | – | ೦೪ |
| ಚತುರ್ಮಾಸ ಮೌಲ್ಯಮಾಪನ | – | ೦೮ |
| ಯೋಜನಾಕಾರ್ಯ | – | ೦೫ |
| | ಒಟ್ಟು | ೪೫೫ |

## ಅವಧಿ ಹಂಚಿಕೆ ವಿವರ

| | |
|---|---|
| ಶಾಲೆ ನಿರ್ವಹಿಸುವ ದಿನ | ೨೧೦ |
| ವಾರಕ್ಕೆ ಲಭ್ಯವಿರುವ ಅವಧಿ | ೦೮ |
| ಒಟ್ಟು ಲಭ್ಯವಿರುವ ಅವಧಿ | ೨೧೮ |

## ಐದನೇ ತರಗತಿಯ ಭಾಷೆ ಪಠ್ಯ ಒಳಗೊಂಡಿರಬೇಕಾದ ಅಂಶ

೧. ಗದ್ಯಪಾಠ ೧೧ ಇರಲಿ

೨. ಪದ್ಯ ಮತ್ತು ಕವನ ೦೬ ಇರಲಿ

೩. ಪಾಠಗಳಲ್ಲಿ ನಾಡು, ನುಡಿ, ಸಂಸ್ಕೃತಿ, ವ್ಯಕ್ತಿಪರಿಚಯ, ದೇಶಪ್ರೇಮ ಮೂಡಿಸುವ ಸಾಂಸ್ಕೃತಿಕ ಹಿನ್ನೆಲೆ ಇರಲಿ

೪. ಭಾಷಾ ವೈವಿಧ್ಯತೆ ಇರಬೇಕು

೫. ಮಕ್ಕಳು ಕವನ ಮತ್ತು ಪದ್ಯವನ್ನು ಸಾಧ್ಯವಾದಷ್ಟು ಅರ್ಥಮಾಡಿಕೊಂಡು, ತಮ್ಮ ಮಾತಿನಲ್ಲಿ ಬರೆಯುವಂತಿರಲಿ

೬. ಸಾಮರ್ಥ್ಯಕ್ಕೆ ಪೂರಕವಾಗಿ ಪಾಠ ರಚನೆ ಆಗಬೇಕು

೭. ಕವನಗಳಲ್ಲಿ, ವಚನ, ಜನಪದಕತೆ, ಹೊಸಗನ್ನಡ ಪದ್ಯ, ದಾಸರಪದಗಳು ಇರಬೇಕು

೮. ಗದ್ಯಪಾಠದಲ್ಲಿ ವೀರಮಹಿಳೆಯರ, ಸ್ವಾತಂತ್ರ್ಯ ಹೋರಾಟಗಾರರ, ಸಾಹಿತಿಗಳ ಪರಿಚಯವಿರಲಿ

೯. ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳಗಳ ಮಾಹಿತಿ ಇರಬೇಕು

೧೦. ಸ್ವಕಲಿಕೆಗೆ ಪೂರಕ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಅಭ್ಯಾಸ ಪ್ರಶ್ನೆಗಳಿರಲಿ

೧೧. ಕ್ರಿಯಾತ್ಮಕ ವ್ಯಾಕರಣಾಂಶಗಳನ್ನು ಒಳಗೊಂಡಿರಬೇಕು

೧೨. ಪಠ್ಯದ ಕೊನೆಗೆ, ಭಾಷಾ ಆಟ ಹಾಗೂ ಪೂರಕ ಚಟುವಟಿಕೆಗಳ ಮಾಹಿತಿ ಇರಲಿ

೧೩. ಅರ್ಥಸಹಿತ ಪದಕೋಶ ಇರಬೇಕು

೧೪. ಪ್ರತಿ ಪಾಠದ ಕೊನೆಗೆ ಓದಿ–ತಿಳಿ ಇರಲಿ

೧೫. ಪಾಠ ೨೫೦ ರಿಂದ ೪೦೦ ಪದಗಳನ್ನು ಹೊಂದಿರಲಿ

**ಕ್ರೋಢೀಕತ ಸಾಮರ್ಥ್ಯ ವಿವರ ಪಟ್ಟಿ** **ತರಗತಿ : ೫**

| ಆಲಿಸುವುದು | ಮಾತನಾಡುವುದು | ಓದುವುದು | ಬರೆಯುವುದು |
|---|---|---|---|
| * ಸಂವಾದ, ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವುದು. | * ಪರಿಚಿತ ವಿಷಯಗಳ ಬಗ್ಗೆ ನಿರರ್ಗಳವಾಗಿ ಮತ್ತು ಸಹಜವಾಗಿ ಮಾತನಾಡುವುದು. | * ಚಿತ್ರಕಥೆ, ಭಿತ್ತಿಪತ್ರಗಳನ್ನು ಓದುವುದು. | * ಸರಿಯಾದ ಕ್ರಮದಲ್ಲಿ ಸ್ಪಷ್ಟವಾಗಿ ವಾಕ್ಯಗಳನ್ನು ಬರೆಯುವುದು. |
| * ಅಪರಿಚಿತ ಸನ್ನಿವೇಶಗಳಲ್ಲಿ ನಡೆಯುವ ಸಂಭಾಷಣೆ, ಸಂವಾದ ಮತ್ತು ಚರ್ಚೆಗಳನ್ನು ಅರ್ಥಮಾಡಿಕೊಳ್ಳುವುದು. | * ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು. | * ಕೈಬರೆಹ ಮತ್ತು ಮುದ್ರಿತ ವಿಷಯಗಳನ್ನು ನಿರರ್ಗಳವಾಗಿ ಓದುವುದು | * ಉಕ್ತಲೇಖನದ ಮೂಲಕ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ವಾಕ್ಯಗಳನ್ನು ಬರೆಯುವುದು. |
| * ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥಮಾಡಿಕೊಂಡು ಗುಂಪು ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವುದು. | * ನಾಟಕ ಮತ್ತು ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುವುದು. | * ಪಠ್ಯಪುಸ್ತಕವನ್ನು ಓದಿದ ಬಳಿಕ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು. | * ಅನೌಪಚಾರಿಕ ಪತ್ರ ಮತ್ತು ಚಿಕ್ಕ ಪ್ರಬಂಧಗಳನ್ನು ಸ್ವತಂತ್ರವಾಗಿ ಬರೆಯುವುದು. |
| * ಆಲಿಸಿದ ವಿಷಯವನ್ನು ಗ್ರಹಿಸಿ ಹಾಗಾದರೆ ? ಹಾಗಾಗದಿದ್ದರೆ ? – ಪ್ರಶ್ನೆಗಳಿಗೆ ಉತ್ತರಿಸುವುದು. | * ಸನ್ನಿವೇಶಕ್ಕೆ ತಕ್ಕಂತೆ ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಯನ್ನು ಬಳಸುವುದು. | * ಪಠ್ಯದ ವಿಷಯಗಳನ್ನು ಓದಿ ತಾರ್ಕಿಕವಾಗಿ ತೀರ್ಮಾನಿಸುವುದು. | * ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬರೆವಣಿಗೆಯಲ್ಲಿ ಬಳಸುವುದು. |
| | | * ಸುಮಾರು ೫೦೦೦ ಪದಗಳನ್ನು ಓದಿ ಗ್ರಹಿಸುವುದು. | |

**ಆಲಿಸುವುದು** **ಸಾಮರ್ಥ್ಯವಾರು ಪಠ್ಯವಸ್ತು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1 | * ಸಂವಾದ, ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವುದು. | * ಸನ್ನಿವೇಶ : ಶಾಲೆಯಲ್ಲಿನ ವಿವಿಧ ಸಮಾರಂಭಗಳಲ್ಲಿ ನಡೆಯುವ ಸಂವಾದ, ಚರ್ಚೆ, ನಾಟಕಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವ ಕೌಶಲವನ್ನು ಬೆಳೆಸುವುದು. | * ಸಂಭಾಷಣೆ ಇರುವ ಗದ್ಯ ಭಾಗ ವಿಷಯಕ್ಕೆ ಅನುಗುಣವಾಗಿ ಇರುವ ಗದ್ಯ. (ಮಗುವಿನ ಮಟ್ಟಕ್ಕೆ ಅನುಗುಣವಾಗಿರಬೇಕು)<br>* ೩–೪ ಅಂಕಗಳಿರಲಿ<br>* ಪೌರಾಣಿಕ, ಸಾಂಸ್ಕೃತಿಕ ನೀತಿಪ್ರಧಾನ ಭಾಗ<br>* ಗದ್ಯಪಾಠ | * ರಾಷ್ಟ್ರನಾಯಕರ ಪಾತ್ರಗಳನ್ನು ಮಾಡಿಸಿ, ಸಂವಾದ ಏರ್ಪಡುವಂತಹ ಸನ್ನಿವೇಶಗಳನ್ನು ರೂಪಿಸುವುದು.<br>* ಆಲಿಸಿದ ವಿಷಯದ ಬಗ್ಗೆ ಮಕ್ಕಳಲ್ಲಿ ಚರ್ಚೆ ಏರ್ಪಡಿಸುವುದು. ಧ್ವನಿಸುರುಳಿ / ರೇಡಿಯೋದ ಸಹಾಯದಿಂದ ಆಲಿಸಿದ ಪೌರಾಣಿಕ ನಾಟಕಗಳನ್ನು ಅಭಿನಯಿಸುವಂತೆ ಮಕ್ಕಳನ್ನು ಸಿದ್ಧಗೊಳಿಸುವುದು.<br>* ಸಾಂಸ್ಕೃತಿಕ ಹಿನ್ನೆಲೆಯುಳ್ಳ ವೀರರ ಬಗ್ಗೆ ಏಕಪಾತ್ರಾಭಿನಯ ಮಾಡಿಸುವುದು. ಉಳಿದ ವಿದ್ಯಾರ್ಥಿಗಳು ಆಲಿಸುವುದು.<br>* ಮಕ್ಕಳಲ್ಲಿ ಒಂದು ವಿಷಯದ ಬಗ್ಗೆ ಸಂವಾದ ಏರ್ಪಡಿಸುವುದು. | * ಸಂವಾದ ನಡೆದ ನಂತರ ಆಲಿಸಿದ ಸಂವಾದದ ಬಗ್ಗೆ ಪೂರಕ ಪ್ರಶ್ನೆಗಳನ್ನು ಕೇಳುವುದು.<br>* ಚರ್ಚೆ ಆದ ನಂತರ ಆಲಿಸಿ ಚರ್ಚೆಯ ವಿಷಯದ ಮುಖ್ಯಾಂಶಗಳನ್ನು ಕೇಳುವುದು.<br>* ಸಂವಾದ, ಚರ್ಚೆ ಹಾಗೂ ನಾಟಕಗಳನ್ನು ಆಲಿಸಿದ ನಂತರ ಪೂರಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>* ರೇಡಿಯೋ ಮತ್ತು ಟೇಪ್ ರಿಕಾರ್ಡನ್ನು ಉಪಯೋಗಿಸಿ ಸಂವಾದ ಚರ್ಚೆಯನ್ನು ಆಲಿಸಲು ಅವಕಾಶ ಕಲ್ಪಿಸುವುದು.<br><br>**(ಅವಧಿ : ೧೫)** |
| 2 | * ಅಪರಿಚಿತ ಸನ್ನಿವೇಶಗಳಲ್ಲಿ ನಡೆಯುವ ಸಂಭಾಷಣೆ, ಸಂವಾದ ಮತ್ತು ಚರ್ಚೆಗಳನ್ನು ಅರ್ಥಮಾಡಿಕೊಳ್ಳುವುದು. | * ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ, ಸಂವಾದ, ಚರ್ಚೆಗಳನ್ನು ಅರ್ಥಮಾಡಿಕೊಳ್ಳುವ ಕೌಶಲವನ್ನು ಬೆಳೆಸುವುದು. | * ಅಪರಿಚಿತ ಸನ್ನಿವೇಶಗಳಲ್ಲಿ ನಡೆಯುವ ಚರ್ಚೆ, ಸಂವಾದ ಮತ್ತು ಸಂಭಾಷಣೆಗಳು. | * ಅಪರಿಚಿತ ಸನ್ನಿವೇಶದಲ್ಲಿ ನಡೆಯುವ ಸಂವಾದವನ್ನು ಕೇಳಿ ತಿಳಿದುಕೊಂಡು ಬರಲು ತಿಳಿಸುವುದು. | * ಲಭ್ಯವಿದ್ದಲ್ಲಿ ಬ್ಯಾಂಕಿಗೆ ಹೋಗಿ ಅಲ್ಲಿಯ ಸನ್ನಿವೇಶವನ್ನು ನೋಡಿ ಬಂದು ಹೇಳಲು ಅವಕಾಶ ಕಲ್ಪಿಸುವುದು. |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | | | * ವಿಮಾನ ನಿಲ್ದಾಣ. ಇಲ್ಲಿನ ಅಪರಿಚಿತ ಸನ್ನಿವೇಶಗಳಿಗೆ ಸಂಬಂಧಿಸಿರಲಿ.<br>* ಗದ್ಯಪಾಠ | * ಕೆಲವು ಅಪರಿಚಿತ ವಿಷಯಗಳನ್ನು ಹೇಳಿ ಮುಂದೆ ಆಗುವ ಚರ್ಚೆ ಏನು ಎಂದು ತೀರ್ಮಾನಿಸಲು ಮಕ್ಕಳಿಗೆ ಹೇಳುವುದು.<br>* ಒಂದು ವಿಷಯುವನ್ನು ಆಲಿಸಿ ಚರ್ಚೆಯ ಮೂಲಕ ತೀರ್ಮಾನಕ್ಕೆ ಬರಲು ತಿಳಿಸುವುದು. | * ಮಕ್ಕಳಿಂದ ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ, ಸಂವಾದಗಳನ್ನು ಮಾಡಿಸಿ ಆಲಿಸಲು ಅವಕಾಶ ಕಲ್ಪಿಸಿ ಪೂರಕ ಪಠ್ಯಗಳನ್ನು ಕೇಳುವುದರ ಮೂಲಕ ಉತ್ತರ ಪಡೆಯುವುದು.<br>**(ಅವಧಿ : ೧ಘ)** |
| **3.** | * ಆಲಿಸಿದ ವಿಷಯವನ್ನು ಗ್ರಹಿಸಿ, ಹಾಗಾದರೆ, ಹಾಗಾಗದಿದ್ದರೆ ? – ಪ್ರಶ್ನೆಗಳಿಗೆ ಉತ್ತರಿಸುವುದು. | * ವಿದ್ಯಾರ್ಥಿಗಳು ಯಾವುದೇ ವಿಷಯುವನ್ನು ಆಲಿಸಿದ ನಂತರ ಹಾಗಾದರೆ? ಹಾಗಾಗದಿದ್ದರೆ? – ಪ್ರಶ್ನೆಗಳಿಗೆ ಉತ್ತರಿಸುವ ಕೌಶಲವನ್ನು ಬೆಳೆಸುವುದು. | * ಹಾಗಾದರೆ ? ಹಾಗಾಗ ದಿದ್ದರೆ? ಎಂಬ ಕಾರ್ಯ ಕಾರಣ ಸಂಬಂಧವನ್ನು ಕಲ್ಪಿಸುವ ಗದ್ಯಭಾಗ.<br>* ಕಾರ್ಯಕಾರಣ ಸಂಬಂಧದ ವಿಷಯಕ್ಕೆ ಅನುಗುಣವಾದ ಪದ್ಯ ಅಥವಾ ಗದ್ಯಭಾಗ.<br>* ಪ್ರವಾಸ ಕಥನ<br>* ಗದ್ಯಪಾಠ | * ಒಂದು ವಿಷಯುವನ್ನು ಹೇಳಿದಾಗ ಆ ವಿಷಯವನ್ನು ಎಷ್ಟರಮಟ್ಟಿಗೆ ಮಗು ಆಲಿಸಿದೆ ಎಂದು ಪರೀಕ್ಷಿಸುವುದು.<br>* ವಿಷಯದ ಮುಖ್ಯಾಂಶಗಳನ್ನು ಕೇಳುವುದು.<br>* ಹಾಗಾದರೆ? ಹಾಗಾಗದಿದ್ದರೆ? – ಪ್ರಶ್ನೆಗಳನ್ನು ಕೇಳುವುದು.<br>* ಮಕ್ಕಳನ್ನು ಎರಡು ತಂಡಗಳನ್ನಾಗಿಸಿ ಒಂದು ತಂಡ ಹಾಗಾದರೆ ? ಎಂಬ ಪ್ರಶ್ನೆಗಳನ್ನು ಕೇಳಿದಾಗ ಇನ್ನೊಂದು ತಂಡ ಆ ಪ್ರಶ್ನೆಗೆ ಉತ್ತರಿಸಬೇಕು. ಉತ್ತರಿಸಿದ ತಂಡ ನಂತರ ಹಾಗಾಗದಿದ್ದರೆ? – ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. | * ಆಲಿಸಿದ ವಿಷಯುವನ್ನು ಗ್ರಹಿಸಿರುವರೇ ಎಂದು ತಿಳಿಯಲು ಚಟುವಟಿಕೆಗಳು.<br>* ಹಾಗಾದರೆ ? ಹಾಗಾಗದಿದ್ದರೆ – ಪ್ರಶ್ನೆಗಳು<br>* ಆಲಿಸಿದಂತಹ ಕಥೆಯಲ್ಲಿ ಬರುವ ಕಾರ್ಯಕಾರಣ ಸಂಬಂಧಗಳನ್ನು ಕೇಳಿ ತಿಳಿಯುವುದು.<br>**(ಅವಧಿ : ೧ಘ)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | | | | * ಕಾರ್ಯ–ಕಾರಣ ಸಂಬಂಧಗಳ ವಿಷಯವನ್ನು ಪರಿಚಯಿಸುವುದು. | |
| **4.** | * ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥ ಮಾಡಿಕೊಂಡು, ಗುಂಪು ಚಟುವಟಿಕೆಯನ್ನು ಕಾರ್ಯರೂಪಕ್ಕೆ ತರುವುದು. | * ಯಾವುದೇ ಮೌಖಿಕ ಸೂಚನೆಗಳನ್ನು ನೀಡಿದಾಗ ಅದನ್ನು ಅರ್ಥಮಾಡಿಕೊಂಡು ಕಾರ್ಯರೂಪಕ್ಕೆ ತರುವ ಸಾಮರ್ಥ್ಯವನ್ನು ಬೆಳೆಸುವುದು. | * ವಿದ್ಯಾರ್ಥಿಗಳ ನಿತ್ಯ ಜೀವನಕ್ಕೆ ಸಂಬಂಧಿಸಿದ ಸರಳ ಬಗೆಗಳನ್ನು ಕಾರ್ಯರೂಪಕ್ಕೆ ತರುವ ಗುಂಪಿನಲ್ಲಿ ಚಟುವಟಿಕೆಯನ್ನು ಕಾರ್ಯಗತಗೊಳಿಸುವ ಸೂಚನೆಗಳು.<br>* ಸೂಚನೆಗಳನ್ನು ಕಾರ್ಯಗತಗೊಳಿಸುವ ಒಳಾಂಗಣ–ಹೊರಾಂಗಣ ಆಟಗಳ ವಿವರಣೆಗಳಿರುವ ಗದ್ಯಭಾಗ.<br>* ಗದ್ಯಪಾಠ | * ಮಕ್ಕಳಿಗೆ ಕೆಲ ಮೌಖಿಕ ಸೂಚನೆಗಳನ್ನು ನೀಡುವುದು. ಮಗು ಅದನ್ನು ಅನುಸರಿಸಲು ತಿಳಿಸುವುದು.<br>* ಗುಂಪುಗಳಲ್ಲಿ ಏಕಕಾಲದಲ್ಲಿ ನೀಡಿದ ಮೌಖಿಕ ಸೂಚನೆಗಳನ್ನು ಮಗು ತಿಳಿದುಕೊಳ್ಳಲು ಸಾಧ್ಯವಾಗುವಂತೆ ಹೇಳುವುದು.<br>* ಹೊರಾಂಗಣ ಆಟಗಳಿಗೆ ಕರೆದುಕೊಂಡು ಹೋಗಿ ಸೂಚನೆಗಳ ಸರಣಿಯನ್ನು ಕೊಡುವುದು.<br>* ಸೂಚನೆಗಳ ಸರಣಿಯನ್ನು ಮೊದಲು ಶಿಕ್ಷಕರು ಹೇಳಬೇಕು. ನಂತರ ವಿದ್ಯಾರ್ಥಿಗಳಿಂದ ಸೂಚನೆಗಳ ಸರಣಿಯನ್ನು ಹೇಳಿಸಬೇಕು. | * ಸೂಚನೆಗೆ ಅನುಸಾರವಾಗಿ ಚಟುವಟಿಕೆಗಳ ನಿರ್ವಹಣೆ.<br>* ಸರಣಿ ಸೂಚನೆಗಳನ್ನು ಅರ್ಥೈಸಿಕೊಂಡು ನಿರ್ವಹಿಸಿದ ಚಟುವಟಿಕೆಗಳನ್ನು ಪರಿಚಯಿಸುವುದು.<br>* ಹೊರಾಂಗಣ ಮತ್ತು ಒಳಾಂಗಣ ಆಟಗಳಿಗೆ ಮೌಖಿಕ ಸೂಚನೆಗಳ ಸರಣಿ ಕೊಡುವುದು.<br>* ಮೌಖಿಕ ಸೂಚನೆಗಳ ಸರಣಿಗಳನ್ನು ಅರ್ಥೈಸಿಕೊಂಡು ಗುಂಪು ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವಂತಹ ಚಟುವಟಿಕೆಗಳನ್ನು ಮಾಡಿಸುವುದು.<br><br>**(ಅವಧಿ : ೧೫)** |

**ಮಾತಾನಾಡುವುದು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ಪರಿಚಿತ ವಿಷಯಗಳ ಬಗ್ಗೆ ನಿರರ್ಗಳ ಮತ್ತು ಸಹಜ ವಾಗಿ ಮಾತನಾಡುವುದು | * ಯಾವುದೇ ಪರಿಚಿತ ವಿಷಯ ಕುರಿತು ಸ್ಪಷ್ಟ ಸ್ವರ ಭಾರದ ಏರಿಳಿತದಿಂದ ನಿರರ್ಗಳ ಮತ್ತು ಸಹಜ ವಾಗಿ ಮಾತನಾಡುವುದು ಕೌಶಲವನ್ನು ಬೆಳೆಸುವುದು. | * ಲೇಖನ ಚಿಹ್ನೆಗಳ ಪ್ರಯೋಗ<br>* ಗಾದೆ ವಿಸ್ತರಣೆ<br>* ನುಡಿಗಟ್ಟುಗಳ ಪ್ರಯೋಗ<br>* ನೀತಿಬೋಧಕ ಪದ್ಯ<br>* ಪದ್ಯಪಾಠ | * ಪರಿಚಿತ ವಿಷಯವನ್ನು ಹೇಳಿ ಆ ವಿಷಯದ ಬಗ್ಗೆ ಮಾತನಾಡಲು ತಿಳಿಸುವುದು.<br>* ನಿರರ್ಗಳವಾಗಿ ಮಾತ ನಾಡುವ ಸ್ಪರ್ಧೆ ಏರ್ಪಡಿಸುವುದು.<br>* ಯಾವುದೇ ಗ್ರಾಂಥಿಕ ಭಾಷೆಗಳಲ್ಲದೇ ತಾಯಿ ಯಿಂದ ಯಾವುದೋ ಒಂದು ವಿಷಯದ ಬಗ್ಗೆ ಕೇಳಿ ತಿಳಿದುಕೊಂಡು ಬಂದು ಅದನ್ನು ತರಗತಿಯಲ್ಲಿ ಮಂಡಿಸಲು ತಿಳಿಸುವುದು.<br>* ಸಹಜ ಹಾಗೂ ನಿರರ್ಗಳ ವಾಗಿ ಓದಲು ಮಕ್ಕಳಲ್ಲಿ ವಿವಿಧ ಸ್ಪರ್ಧೆ ಏರ್ಪಡಿಸು ವುದು. ಉದಾ : ಹಾಡು ಹೇಳುವುದು<br>* ಅಕ್ಷರ ಪದ ಮಾಲೆ ಆಡುವುದು.<br>* ಕಾಗದದಲ್ಲಿ ಕೆಲವು ಪರಿಚಿತ ವಿಷಯಗಳನ್ನು ಬರೆದು ಮಡಿಸಿ ಡಬ್ಬದಲ್ಲಿ ಹಾಕಿ, ಮಗು ಒಂದನ್ನು ತೆಗೆದು ಆ ವಿಷಯದ ಬಗ್ಗೆ ತನಗೆ ತಿಳಿದುದ್ದನ್ನು ನಿರರ್ಗಳ ವಾಗಿ ಹೇಳಲಿ. | * ಪರಿಚಿತ ವಿಷಯಗಳನ್ನು ಕೊಟ್ಟಾಗ ಸರಾಗವಾಗಿ ಮಾತನಾಡುವುದನ್ನು ಪರೀಕ್ಷಿಸುವುದು.<br>* ನಿರರ್ಗಳವಾಗಿ ಮಾತನಾಡು ವುದನ್ನು ಬೆಳೆಸಲು ಚಟುವಟಿಕೆಗಳು.<br>* ಸಹಜವಾಗಿ ಮಗು ಅರ್ಥೈಸಿ ಕೊಳ್ಳುವಂತಹ ವಿಷಯ ಗಳನ್ನು ಕೊಡುವುದು.<br>* ವಿಚಾರ ಪ್ರಚೋದಕ ವಾದಂತಹ ಚಟುವಟಿಕೆ ಗಳಿಂದ ಮೌಲ್ಯಮಾಪನ ಮಾಡುವುದು.<br><br>**(ಅವಧಿ : ೧೧)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **2** | * ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು. | * ಮಗುವಿನ ಅನುಭವಕ್ಕೆ ಬಂದ ಸನ್ನಿವೇಶ/ಘಟನೆಯನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವ ಕೌಶಲವನ್ನು ಬೆಳೆಸುವುದು. | * ರಾಷ್ಟ್ರನಾಯಕರ ಮತ್ತು ದೇಶಪ್ರೇಮಿಗಳ ಜೀವನದ ಪ್ರಮುಖ ಸನ್ನಿವೇಶ/ಘಟನೆಯನ್ನು ಬಿಂಬಿಸುವಂತಹದು.<br>* ಪದ್ಯಪಾಠ. | * ದಿನನಿತ್ಯದ ಸನ್ನಿವೇಶಗಳಲ್ಲಿ ನಡೆಯುವ ಘಟನೆಗಳನ್ನು ವಿವರಿಸುವುದು.<br>* ಯಾವುದಾದರೊಂದು ಘಟನೆಯನ್ನು ಹೇಳಿ ಅದನ್ನು ವಿವರಿಸಲು ತಿಳಿಸುವುದು.<br>* ಘಟನೆಗಳನ್ನು ಹೇಳಿ ಅದರ ವಿಚಾರವಾಗಿ ಪ್ರಶ್ನೆಗಳನ್ನು ಕೇಳಿ ಮಗುವಿನ ವೈಚಾರಿಕ ಮನೋಭಾವನೆಯನ್ನು ಜಾಗೃತಗೊಳಿಸುವುದು.<br>ಉದಾ : ರಸ್ತೆಯಲ್ಲಿ ಬರುತ್ತಿರುವಾಗ ಅಂಧ ಬಾಲಕ ಹೋಗುತ್ತಿದ್ದರೆ, ಅವನಿಗೆ ನೀನು ಹೇಗೆ ಸಹಾಯ ಮಾಡುವೆ ? ಇಂತಹ ಪ್ರಶ್ನೆಗಳನ್ನು ಕೇಳುವುದು.<br>* ಪ್ರೇಕ್ಷಣೀಯ ಸ್ಥಳಕ್ಕೆ ಹೋಗಿದ್ದರೆ, ಆ ಸ್ಥಳದ ಬಗ್ಗೆ ವಿವರಿಸಲು ತಿಳಿಸುವುದು.<br>* ರಾಷ್ಟ್ರ ನಾಯಕರ ಜೀವನ ಚರಿತ್ರೆಯ ಮುಖ್ಯ ಘಟನೆಗಳನ್ನು ವಿವರಿಸಲು ತಿಳಿಸುವುದು. | * ಸನ್ನಿವೇಶ ಮತ್ತು ಘಟನೆಗೆ ಸಂಬಂಧಿಸಿದ ಪೂರಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>* ನೋಡಿದ ಸನ್ನಿವೇಶ ಹಾಗೂ ಘಟನೆಗಳ ಬಗ್ಗೆ ವಿವರಿಸಲು ತಿಳಿಸುವುದು.<br>* ರಾಷ್ಟ್ರನಾಯಕರ ಜೀವನದ ಪ್ರಮುಖ ಘಟನೆಗಳನ್ನು ಮುಖ್ಯಾಂಶವಾಗಿ ಬಿಂಬಿಸುವುದು.<br>* ದೇಶಪ್ರೇಮಿಗಳು ಹೇಗೆ ದೇಶಪ್ರೇಮಿಗಳೆಂದು ಅನಿಸಿಕೊಂಡರೆಂಬುದಕ್ಕೆ ಅವರ ಜೀವನದ ಘಟನೆಗಳನ್ನು ಸಾಕ್ಷೀಕರಿಸಲು ತಿಳಿಸುವುದು.<br>**(ಅವಧಿ : ೧೧)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **3.** | * ನಾಟಕ ಮತ್ತು ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವುದು. | * ನಿರರ್ಗಳವಾಗಿ ಮತ್ತು ಸಂದರ್ಭೋಚಿತವಾಗಿ ಮಾತನಾಡುವ ಕೌಶಲವನ್ನು ಬೆಳೆಸುವುದು. | * ಯಾವುದಾದರೂ ನಾಟಕಗಳ ದೃಶ್ಯಭಾಗ<br>* ವಿಷಯಕ್ಕೆ ಅನುಗುಣವಾದ ಚರ್ಚಾ ವಿಷಯ.<br>* ಭಾಷಾ ಸೃಜನಶೀಲತೆ, ಕ್ರಿಯಾಪದಗಳನ್ನು ಒಳಗೊಂಡಿರುವುದು. (ನಾಟಕದಲ್ಲಿ ೩–೪ ಪಾತ್ರಗಳು ಇರಲಿ)<br>* ಗದ್ಯಪಾಠ | * ಶಾಲಾ ಸಮಾರಂಭದ ನಾಟಕಗಳಲ್ಲಿ ಭಾಗವಹಿಸುವುದು.<br>* ಮಕ್ಕಳಲ್ಲಿ ಎರಡು ತಂಡ ಮಾಡಿ ತಂಡ ವಿಷಯದ ಮೇಲೆ ಒಂದು ತಂಡ ಪರವಾಗಿಯೂ ಇನ್ನೊಂದು ತಂಡ ವಿರೋಧವಾಗಿಯೂ ಚರ್ಚೆ ಮಾಡಲು ಹೇಳುವುದು.<br>* ಮಕ್ಕಳು ಪ್ರತ್ಯೇಕವಾಗಿ ಪಾಲ್ಗೊಂಡು ಮಾತನಾಡುವಂತೆ ಕಾರ್ಯಕ್ರಮ ನಿರೂಪಿಸುವುದು. | * ಚಿಕ್ಕ ಚಿಕ್ಕ ನಾಟಕಗಳ ದೃಶ್ಯಾವಳಿಯ ಮೂಲಕ ಮೌಲ್ಯಮಾಪನ ಮಾಡುವುದು.<br>* ವಿವಿಧ ವಿಷಯಗಳನ್ನು ಚರ್ಚಿಸಲು ಅವಕಾಶ ಕಲ್ಪಿಸುವುದು.<br><br>**(ಅವಧಿ : ೧೫)** |
| **4.** | * ಸನ್ನಿವೇಶಕ್ಕೆ ತಕ್ಕಂತೆ ಆಡು ಭಾಷೆ ಮತ್ತು ಗ್ರಾಂಥಿಕ ಭಾಷೆಯನ್ನು ಬಳಸುವುದು. | * ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಯ ನಡುವಿನ ವ್ಯತ್ಯಾಸ ಗುರುತಿಸಿ ಸಂದರ್ಭಕ್ಕೆ ತಕ್ಕ ಹಾಗೆ ಬಳಸುವ ಕೌಶಲವನ್ನು ಬೆಳೆಸುವುದು. | * ಪ್ರಬಂಧ, ಚಿತ್ರಕಥೆ, ಪತ್ರಲೇಖನ, ಕಥೆ, ಕವಿತೆ, ಘಟನೆ, ಕಿರುಟಿಪ್ಪಣಿ ರಚಿಸುವುದು. ವರದಿ ಹಾಗೂ ವಾಕ್ಯವೃಂದಗಳ ರಚನೆ, ಸೂಕ್ತ ಚಿಹ್ನೆಗಳ ಬಳಕೆ– ಇವುಗಳನ್ನು ಹೊಂದಿರಲಿ.<br>* ಆಡುಭಾಷೆಯ ಸಂಭಾಷಣೆಯನ್ನು ಒಳಗೊಂಡಿರುವ ಜನಪದ ಗೀತೆ<br>* ಪದ್ಯಪಾಠ | * ಆಡುಭಾಷೆಯ ಕೆಲವು ವಾಕ್ಯವೃಂದಗಳನ್ನು ಕೊಟ್ಟು ಅದನ್ನು ಗ್ರಾಂಥಿಕ ರೂಪಕ್ಕೆ ಬದಲಾಯಿಸಲು ಹೇಳುವುದು.<br>* ಗ್ರಾಂಥಿಕ ಪದಪುಂಜಗಳನ್ನು ಆಡುಭಾಷೆಯಲ್ಲಿ ಹೇಳಿಸುವುದು.<br>* ಗ್ರಾಂಥಿಕಪದ ಮತ್ತು ಆಡುಭಾಷೆಯ ಪದಗಳನ್ನು ಹೊಂದಿಸಿ ಬರೆಯುವುದು. | * ಆಡುಭಾಷೆಯ ವಾಕ್ಯವೃಂದಗಳನ್ನು ಕೊಡುವುದು.<br>* ಕೇಳಿದ ಅಥವಾ ನೋಡಿದ ನೈಜ ಸನ್ನಿವೇಶ ಹಾಗೂ ಘಟನೆಗಳನ್ನು ಮಕ್ಕಳೇ ವಿವರಿಸುವಂತೆ ಮಾಡುವುದು.<br>* ಆಡುಭಾಷೆ ಹಾಗೂ ಗ್ರಾಂಥಿಕ ಭಾಷೆಯ ನಡುವಿನ ವ್ಯತ್ಯಾಸ ತಿಳಿಸಲು ಕೇಳುವುದು.<br><br>**(ಅವಧಿ : ೧೧)** |

## ಓದುವುದು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1 | * ಚಿತ್ರಕಥೆ, ಭಿತ್ತಿಪತ್ರಗಳನ್ನು ಓದುವುದು | * ಕಲ್ಪನಾ ಶಕ್ತಿಯನ್ನು ಬೆಳೆಸುವುದು ಮತ್ತು ವಿವಿಧ ಭಿತ್ತಿಪತ್ರಗಳನ್ನು ವೀಕ್ಷಿಸಿ ಮಾಹಿತಿಯನ್ನು ಸಂಗ್ರಹಿಸುವ ಸಾಮರ್ಥ್ಯ ಬೆಳೆಸುವುದು.<br>* ಕ್ರಮಬದ್ಧವಾಗಿ ಭಿತ್ತಿಪತ್ರಗಳನ್ನು ಓದುವ ಸಾಮರ್ಥ್ಯ ಬೆಳೆಸುವುದು. | * ೮ ರಿಂದ ೧೦ ಚಿತ್ರಗಳಿರುವ ಕಥೆ<br>* ಎರಡರಿಂದ ಮೂರು ಭಿತ್ತಿಪತ್ರಗಳು (ಚಿತ್ರಗಳು ಮಕ್ಕಳ ಕಲ್ಪನೆಗೆ ಪೂರಕವಾಗಿರಲಿ)<br>* ಗದ್ಯಪಾಠ | * ಚಿತ್ರಕಥೆಗಳನ್ನು ಓದಿಸುವುದು.<br>* ಒಂದು ಚಿತ್ರಕಥೆಯನ್ನು ವಿಭಾಗಿಸಿ ಇಟ್ಟು ಅವುಗಳನ್ನು ಕ್ರಮಾನುಗತವಾಗಿ ಜೋಡಿಸಿ ಕಥೆಯನ್ನು ಓದಲು ಮಗುವಿಗೆ ತಿಳಿಸುವುದು.<br>* ಕೆಲವು ಭಿತ್ತಿಪತ್ರಗಳನ್ನು ಓದಲು ತಿಳಿಸುವುದು.<br>* ನಿಯತಕಾಲಿಕೆಗಳಲ್ಲಿ ಬರುವ ಚಿತ್ರಕಥೆಗಳನ್ನು ಓದಿಸುವುದು. | * ಚಿತ್ರಕಥೆಗಳನ್ನು ಓದಿಸುವುದು<br>* ಭಿತ್ತಿಪತ್ರಗಳನ್ನು ಓದಿಸುವುದು.<br>* ಮಗು ಸ್ವತಂತ್ರವಾಗಿ ಓದುವಂತೆ ಮಾಡುವುದು.<br>* ನಿಯತಕಾಲಿಕೆಗಳನ್ನು ಪೂರೈಸಿ ಓದಲು ತಿಳಿಸುವುದು.<br><br>**(ಅವಧಿ : ೧೫)** |
| 2 | * ಕೈಬರೆಹ ಮತ್ತು ಮುದ್ರಿತ ವಿಷಯಗಳನ್ನು ನಿರರ್ಗಳವಾಗಿ ಓದುವುದು. | * ಬೇರೆಯವರ ಕೈಬರೆಹ ಹಾಗೂ ಮುದ್ರಿತ ರಚನೆಗಳನ್ನು ಓದುವ ಕೌಶಲವನ್ನು ಬೆಳೆಸುವುದು ಹಾಗೂ ತಪ್ಪಿಲ್ಲದಂತೆ ಓದುವ ಸಾಮರ್ಥ್ಯ ಬೆಳೆಸುವುದು. | * ಹಿರಿಯ ಸಾಹಿತಿಗಳ ಕೈಬರೆಹವಿರುವ ಗದ್ಯಪಾಠ. (ಗದ್ಯಭಾಗವನ್ನು ಕೈಬರೆಹದಲ್ಲಿರುವಂತೆಯೇ ಮುದ್ರಿಸುವುದು.)<br>* ಗದ್ಯಪಾಠ | * ಕೈಬರೆಹದ ಬರೆವಣಿಗೆಗಳನ್ನು ಓದಿಸುವುದು.<br>* ಸ್ನೇಹಿತರ ಕೈಬರೆಹದ ಪುಸ್ತಕವನ್ನು ಅದಲು ಬದಲು ಮಾಡಿ ಓದಿಸುವುದು.<br>* ಲಗ್ನಪತ್ರಿಕೆ ಮತ್ತು ಸಮಾರಂಭಗಳ ಆಹ್ವಾನಪತ್ರಿಕೆಗಳನ್ನು ಓದಿಸುವುದು.<br>* ವಿವಿಧ ಮುದ್ರಿತ ವಿಷಯಗಳನ್ನು ಓದಿಸುವುದು. | * ಕೈಬರೆಹದ ಬರೆವಣಿಗೆಯನ್ನು ಕೊಡುವುದು.<br>* ಮುದ್ರಿತ ಕರಪತ್ರ ಹಾಗೂ ಲಗ್ನಪತ್ರಿಕೆಗಳನ್ನು ಓದಿಸುವುದು.<br>* ಶಿಶುಸಾಹಿತ್ಯವನ್ನು ಓದಲು ಕೊಡುವುದು.<br><br>**(ಅವಧಿ : ೧೫)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **3.** | * ಪಠ್ಯಪುಸ್ತಕವನ್ನು ಓದಿದ ಬಳಿಕ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು. | * ಓದಿದ್ದನ್ನು ಗ್ರಹಿಸಿ ಯಾವುದೇ ಪ್ರಶ್ನೆಗಳಿಗೆ ಉತ್ತರಿಸುವ ಕೌಶಲವನ್ನು ಅಭಿವೃದ್ಧಿಗೊಳಿಸುವುದು. | * ಆಸಕ್ತಿ ಮೂಡಿಸುವ ಹಾಗೂ ಕುತೂಹಲ ಉಂಟು ಮಾಡುವ ಅದ್ಭುತ ರಮ್ಯ ವಿಷಯಗಳು ಇರುವ ಪದ್ಯಭಾಗ.<br>* ಪದ್ಯಪಾಠ | * ಪದ್ಯವನ್ನು ಹೇಳುವುದು ನಂತರ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.<br>* ಕಥೆ ಹೇಳಿದ ನಂತರ ಪ್ರಶ್ನೆಗಳನ್ನು ಬರೆದು ಕಾಗದಗಳನ್ನು ಮಡಿಸಿ, ಮಕ್ಕಳ ದುರಿಗೆ ಹಾಕಿ ಒಬ್ಬೊಬ್ಬರನ್ನು ಕರೆದು ಒಂದೊಂದು ಕಾಗದವನ್ನು ತೆಗೆದುಕೊಂಡು ಅದರಲ್ಲಿಯ ಪ್ರಶ್ನೆಯನ್ನು ಓದಿ ಉತ್ತರ ಹೇಳಿಸುವುದು.<br>* ಒಂದು ಕಥೆಯನ್ನು ಎರಡು ಭಾಗ ಮಾಡಿ ವಿದ್ಯಾರ್ಥಿಗಳನ್ನು ಎರಡು ತಂಡವನ್ನಾಗಿಸಿ ಕಥೆಯ ಒಂದು ಭಾಗ ಒಂದು ತಂಡದವರು ಇನ್ನೊಂದು ಭಾಗವನ್ನು ಇನ್ನೊಂದು ತಂಡದವರು ಓದಲಿ.<br>* ನಂತರ ಒಂದು ತಂಡದವರು ಇನ್ನೊಂದು ತಂಡಕ್ಕೆ ಪ್ರಶ್ನೆ ಕೇಳಲಿ ಆ ತಂಡ ಉತ್ತರಿಸಲಿ. ಹೀಗೆಯೇ ಎರಡೂ ತಂಡ ಇದರಲ್ಲಿ ಭಾಗವಹಿಸುವುದು. | * ಓದಿದ ಪದ್ಯದ ಮೇಲೆ ಪೂರಕ ಪ್ರಶ್ನೆ ಕೇಳುವುದು.<br>* ಕಥೆಯನ್ನು ನಾಟಕ ರೂಪದಲ್ಲಿ ಅಭಿನಯಿಸಲು ತಿಳಿಸುವುದು.<br><br>(ಅವಧಿ : ೧೧) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| **4.** | * ಪಠ್ಯದ ವಿಷಯಗಳನ್ನು ಓದಿ ತಾರ್ಕಿಕವಾಗಿ ತೀರ್ಮಾನಿಸುವುದು. | * ಯಾವುದೇ ವಿಷಯವನ್ನು ಓದಿದ ನಂತರ ತಾರ್ಕಿಕ ವಾಗಿ ಯೋಚಿಸುವ ಧನಾತ್ಮಕವಾಗಿ ಚಿಂತಿಸುವ ಮತ್ತು ತೀರ್ಮಾನವನ್ನು ತೆಗೆದುಕೊಳ್ಳುವ ಕೌಶಲವನ್ನು ಅಭಿವೃದ್ಧಿಗೊಳಿಸುವುದು. | * ಹಾಗಾದರೆ? ಹಾಗಾಗದಿದ್ದರೆ? ಹೀಗಾದರೆ? ಹೀಗಾಗ ದಿದ್ದರೆ? – ಉತ್ತರಗಳು ಬರುವಂತಹದು<br>* ಪದ್ಯಪಾಠ. | * ಒಂದು ಪದ್ಯ ಅಥವಾ ಗದ್ಯವನ್ನು ಆಲಿಸಿದ ನಂತರ ವಿಷಯವನ್ನು ಇದು ಹೀಗೇಕೆ? ಏಕೆ ? ಹಾಗಾದರೆ ಏನಾಗುತ್ತಿತ್ತು ಎಂಬ ತಾರ್ಕಿಕ ಚಿಂತನೆ ಮಾಡಿ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರುವುದು. | * ಪಠ್ಯವನ್ನು ಕೊಟ್ಟು ಅದರ ಲ್ಲಿಯ ಕೆಲ ಅಂಶಗಳನ್ನು ಬರೆಸುವುದು. ನಂತರ ಹಾಗಾಗದಿದ್ದರೆ ಏನಾಗುತ್ತಿತ್ತು? ಎಂದು ಅಂತಿಮವಾಗಿ ಪ್ರಶ್ನೆ ಮಾಡಿ ಓದಲು ತಿಳಿಸುವುದು.<br>ಉದಾ : ರಾಮನು ಕಾಡಿಗೆ ಹೋದನು, ರಾಮನು ಕಾಡಿಗೆ ಹೋಗದಿದ್ದಲ್ಲಿ ಏನಾಗುತ್ತಿತ್ತು?<br>**(ಅವಧಿ : ೧೧)** |
| 5. | * ಸುಮಾರು ೫೦೦೦ ಪದ ಗಳನ್ನು ಓದಿ ಗ್ರಹಿಸುವುದು. | * ಗದ್ಯ–ಪದ್ಯಗಳಲ್ಲಿರುವ ಪದ ಮತ್ತು ಅವುಗಳಿಗಿರುವ ಸಮನಾರ್ಥಕ, ನಾನಾರ್ಥಕ, ವಿರುದ್ಧಾರ್ಥಕ, ಭಿನ್ನಾರ್ಥಕ ಪದ ಹಾಗೂ ಕ್ರಿಯಾತ್ಮಕ ಭಾಷಾಂಶಗಳ ನಿಯಮ ಗಳನ್ನು ಓದಿ ಗ್ರಹಿಸುವ ಕೌಶಲವನ್ನು ಬೆಳೆಸುವುದು. | * ಸಮನಾರ್ಥಕ, ವಿರುದ್ಧಾ ರ್ಥಕ ಪದ, ವಚನ, ಲಿಂಗ, ವರ್ಣಮಾಲೆ, ನಾಮಪದ, ಕ್ರಿಯಾತ್ಮಕ ಭಾಷಾ ರಚನೆ, ಭಿನ್ನಾರ್ಥಕ ಪದ, ಗಾದೆ ವಿಸ್ತರಣೆ, ನುಡಿಗಟ್ಟು ಇವು ಗಳನ್ನು ಒಳಗೊಂಡಿರು ವುದು. (೨೦–೨೨ ಸಾಲು)<br>* ಗದ್ಯಪಾಠ | * ಕೆಲವು ಪದಗಳ ಫ್ಲ್ಯಾಶ್ ಕಾರ್ಡ್‌ಗಳನ್ನು ಮಕ್ಕಳೆ ದುರಿಗೆ ಹಾಕಿ (ಸಮ ನಾರ್ಥಕ ಪದಗಳಿರುವ ಕಾರ್ಡ್‌ಗಳಿರಲಿ) ಸಮ ನಾರ್ಥಕ ಪದಗಳನ್ನು ಜೋಡಿಸಲು ಹೇಳುವುದು<br>ಉದಾ : ಸೂರ್ಯ – ಭಾಸ್ಕರ – ದಿನಕರ – ರವಿ ಇತ್ಯಾದಿ | * ಪ್ರಶ್ನೋತ್ತರ, ಕ್ರಿಯಾತ್ಮಕ ಭಾಷಾಂಶಗಳನ್ನು ಪ್ರಶ್ನಿಸುವ ಮೂಲಕ ಮೌಲ್ಯಮಾಪನ ಮಾಡುವುದು.<br>* ಅರ್ಥ ಹೇಳಿಸುವುದು.<br>* ಸ್ವಂತ ವಾಕ್ಯರಚನೆ ಮಾಡಿಸುವುದು.<br>* ಮುಖ್ಯಾಂಶಗಳನ್ನು ಹೇಳಿಸು ವುದು.<br>* ಪದಗಳ ಅಂತ್ಯಾಕ್ಷರಿ ಆಟ ಆಡಿಸುವುದು. |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | | | ↓ | * ಮಕ್ಕಳನ್ನು ಎರಡು ತಂಡಗಳನ್ನಾಗಿ ಮಾಡಿ, ಒಂದು ತಂಡ ಒಂದು ಪದ ಹೇಳಲಿ ಅದಕ್ಕಿರುವ ನಾನಾರ್ಥ. ಭಿನ್ನಾರ್ಥವನ್ನು ಇನ್ನೊಂದು ತಂಡದವರು ಹೇಳಲಿ.<br>ಉದಾ :<br>ಹೊಳೆ < ಪಳಪಳ ಹೊಳೆ / ನದಿ<br>ಹೀಗೆ ವಚನ ಹಾಗೂ ಲಿಂಗಗಳ ಬದಲಾವಣೆಗೂ ಈ ವಿಧಾನವನ್ನು ತಿಳಿಸಬಹುದಾಗಿದೆ. | * ಹೊಸ ಪದಗಳನ್ನು ಪಟ್ಟಿ ಮಾಡಿಸುವುದು.<br>ಪದಗಳ ಅಂತ್ಯಾಕ್ಷರಕ್ಕೆ<br>ಉದಾ :<br>ಗುಣವಂತ<br>↓<br>ತಂಗಿ<br>ಗಿಡ<br>ಡಮರುಗ<br>ಗರಗಸ<br>ಸರಳ<br>(ಅವಧಿ : ೧೫) |

**ಬರೆಯುವುದು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ಸರಿಯಾದ ಕ್ರಮದಲ್ಲಿ ಸ್ಪಷ್ಟವಾಗಿ ವಾಕ್ಯಗಳನ್ನು ಬರೆಯುವುದು | * ಆಕಾರ, ಗಾತ್ರ, ಸರಿಯಾದ ಅಂತರದಲ್ಲಿ ಸ್ಫುಟವಾಗಿ ಬರೆಯುವ ಕೌಶಲವನ್ನು ಬೆಳೆಸುವುದು. | * ಅಕ್ಷರ-ಅಕ್ಷರ ಪದ-ಪದ ಹಾಗೂ ವಾಕ್ಯ-ವಾಕ್ಯಗಳಿಗಿರುವ ಅಂತರ.<br>* ನುಡಿಗಟ್ಟು, ಗಾದೆಮಾತುಗಳಿರಲಿ.<br>* ಪದ್ಯಪಾಠ | * ವಾಕ್ಯಗಳನ್ನು ಹೇಳುವುದು. ಆ ವಾಕ್ಯಗಳನ್ನು ಬರೆಯಲು ತಿಳಿಸುವುದು. ನಂತರ, ಅಕ್ಷರ-ಅಕ್ಷರ ನಡುವೆ ಅಂತರ ಬಿಟ್ಟು ಬರೆದಿರುವುದನ್ನು ತೋರಿಸಿ ಮಾರ್ಗದರ್ಶಿಸುವುದು. | * ಪ್ರಶ್ನೋತ್ತರ ಬರೆವಣಿಗೆ<br>* ಉಕ್ತಲೇಖನ<br>* ಮುಖ್ಯಾಂಶ ಬರೆಯುವುದು.<br>* ಕಾಪಿ ಬರೆವಣಿಗೆ<br><br>**(ಅವಧಿ : ೧೧)** |
| | * ಉಕ್ತ ಲೇಖನದ ಮೂಲಕ ಸೂಕ್ತ ಚಿಹ್ನೆಗಳನ್ನು ಬಳಸಿ, ವಾಕ್ಯಗಳನ್ನು ಬರೆಯುವುದು | * ಲೇಖನ ಚಿಹ್ನೆಗಳನ್ನು ಬಳಸಿ ಸ್ವತಂತ್ರವಾಗಿ ಬರೆಯುವ ಕೌಶಲವನ್ನು ಬೆಳೆಸುವುದು. | * ಬರೆವಣಿಗೆಯ ಚಿಹ್ನೆಗಳನ್ನು ಬಳಸಿ ಬರೆಯುವುದು.<br>* ಪೂರ್ಣವಿರಾಮ, ಅಲ್ಪ ವಿರಾಮ, ಆಶ್ಚರ್ಯ ಸೂಚಕಚಿಹ್ನೆ ಮತ್ತು ಋಣಾತ್ಮಕಚಿಹ್ನೆ ಇವುಗಳನ್ನು ಒಳಗೊಂಡಿರುವ ಗದ್ಯ ಬರೆಹ.<br>* ಎಲ್ಲಾ ಲೇಖನ ಚಿಹ್ನೆಗಳನ್ನು ಒಳಗೊಂಡಿರುವ ಕಥೆ<br>* ಸಂಭಾಷಣೆ, ಚರ್ಚೆ, ಸಂವಾದಗಳೊಂದಿಗೆ ಹೆಚ್ಚು ಲೇಖನಚಿಹ್ನೆಗಳಿರಲಿ.<br>* ಗದ್ಯಪಾಠ | * ಲೇಖನಚಿಹ್ನೆ ಮತ್ತು ಅವುಗಳ ಹೆಸರನ್ನು ಹೊಂದಿಸಿ ಬರೆಯಲು ತಿಳಿಸುವುದು.<br>* ಫ್ಲ್ಯಾಶ್‌ಕಾರ್ಡ್‌ಗಳ ಮೂಲಕ, ಆಯಾ ಚಿಹ್ನೆಗಳ ಪರಿಚಯ ಮಾಡಿಕೊಡುವುದು. ನಂತರ ಮಕ್ಕಳೇ ಫ್ಲ್ಯಾಶ್ ಕಾರ್ಡ್ ಹಿಡಿದು ಚಿಹ್ನೆ ಯಾವುದು ಎಂದು ಹೇಳಲು ತಿಳಿಸುವುದು.<br>* ಕೆಲ ವಾಕ್ಯಗುಚ್ಛಗಳನ್ನು ಕೊಟ್ಟು ಅವುಗಳಿಗೆ ಸೂಕ್ತ ಲೇಖನಚಿಹ್ನೆಗಳನ್ನು ಬಳಸಿ ಬರೆಯಲು ತಿಳಿಸುವುದು. | * ಪದ, ವಾಕ್ಯ, ನುಡಿಗಟ್ಟು ಗಾದೆ ಮಾತು ಮತ್ತು ಸಂಭಾಷಣೆಗಳ ತುಣುಕುಗಳನ್ನು ಉಕ್ತ ಲೇಖನದ ಮೂಲಕ ಬರೆಯಿಸುವುದು.<br>* ಕಥೆ, ಕವನ ಸ್ಪರ್ಧೆಗಳನ್ನು ಏರ್ಪಡಿಸುವುದರ ಮೂಲಕ ಸಾಮರ್ಥ್ಯ ಸಾಧನೆಯಾಗಿದೆಯೇ ಎಂದು ತಿಳಿಯುವುದು.<br><br>**(ಅವಧಿ : ೧೫)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಅನೌಪಚಾರಿಕ ಪತ್ರ ಮತ್ತು ಚಿಕ್ಕ ಪ್ರಬಂಧಗಳನ್ನು ಸ್ವತಂತ್ರವಾಗಿ ಬರೆಯುವುದು | * ಬಂಧುಗಳಿಗೆ ಪತ್ರ ಮತ್ತು ಸ್ವತಂತ್ರವಾಗಿ ಚಿಕ್ಕ ಪ್ರಬಂಧ ಗಳನ್ನು ಬರೆಯುವ ಕೌಶಲವನ್ನು ಬೆಳೆಸುವುದು | * ಪತ್ರಗಳ ವಿಧಗಳು, ಪ್ರಬಂಧ ಗಳು, ತಂದೆ–ತಾಯಿಗೆ, ಗೆಳೆಯ ಗೆಳತಿಗೆ ಬರೆದ ಪತ್ರಗಳು.<br>* ಪ್ರವಾಸ ಕುರಿತು ಗೆಳೆಯ/ ಗೆಳತಿಗೆ ಬರೆದ ಪತ್ರ ಎರಡು ಪುಟಕ್ಕೆ ಸೀಮಿತವಾಗಿರಲಿ<br>* ತಂದೆ–ತಾಯಿಗೆ ಬಂಧು ಗಳಿಗೆ ಬರೆಯುವ ವಿಧಾನ ವನ್ನು ತಿಳಿಸುವುದು.<br>* ಕಿರು ಪ್ರಬಂಧ<br>* ಗದ್ಯಪಾಠ | * ಅನೌಪಚಾರಿಕ ಪತ್ರವನ್ನು ಬರೆಯಲು ತಿಳಿಸುವುದು<br>* ಚಿಕ್ಕ ಚಿಕ್ಕ ವಿಷಯಗಳನ್ನು ಕೊಟ್ಟು ಅದರ ಬಗ್ಗೆ ಅವರಿಗೆ ತಿಳಿದುದನ್ನು ಬರೆಯಲು ತಿಳಿಸುವುದು,<br>* ಪ್ರಬಂಧ ಬರೆಯುವ ಸ್ಪರ್ಧೆ ಏರ್ಪಡಿಸುವುದು.<br>* ಒಂದು ವಿಷಯ ಕೊಟ್ಟು ಅದರ ಬಗ್ಗೆ ಪ್ರಬಂಧ ಮಂಡಿಸಲು ಅವಕಾಶ ಕಲ್ಪಿಸುವುದು. | * ಅನೌಪಚಾರಿಕ ಪತ್ರ ಬರೆಸುವುದು.<br>* ಕಿರುಪ್ರಬಂಧ ಬರೆಸುವುದರ ಮೂಲಕ ಮೌಲ್ಯಮಾಪನ ಮಾಡುವುದು<br>* ಪ್ರವಾಸದ ಕುರಿತು ಪತ್ರ ಬರೆಸುವುದು<br>* ಪ್ರವಾಸ ಕುರಿತು ಪ್ರಬಂಧ ಬರೆಸುವುದು.<br>**(ಅವಧಿ : ೧೫)** |
| 4. | * ಸರಳ ಕ್ರಿಯಾತ್ಮಕ ಭಾಷಾಂಶ ನಿಯಮ ಗಳನ್ನು ಅರ್ಥಮಾಡಿ ಕೊಂಡು ಅವುಗಳನ್ನು ಬರವಣಿಗೆಯಲ್ಲಿ ಬಳಸುವುದು. | * ನುಡಿಗಟ್ಟು, ಗಾದೆಮಾತು ಮತ್ತು ಕ್ರಿಯಾತ್ಮಕ ಭಾಷಾಂಶ ನಿಯಮ ಗಳನ್ನು ಬರವಣಿಗೆಯಲ್ಲಿ ಬಳಸುವ ಕೌಶಲವನ್ನು ಅಭಿವೃದ್ಧಿ ಗೊಳಿಸುವುದು. | * ಸಮಾನಾರ್ಥಕ, ವಿರುದ್ಧಾರ್ಥಕ ವಚನಗಳು, ವರ್ಣಮಾಲೆ, ನಾಮಪದ, ಭಾಷೆಯಲ್ಲಿ, ಕ್ರಿಯಾತ್ಮಕತೆ ಗಾದೆ ವಿಸ್ತರಣೆ, ನುಡಿಗಟ್ಟು, ಕ್ರಿಯಾತ್ಮಕ ಭಾಷಾಂಶ ನಿಯಮಗಳನ್ನು ಒಳಗೊಂಡ ಗದ್ಯಭಾಗ.<br>* ಕ್ರಿಯಾತ್ಮಕ ಭಾಷಾಂಶ ಒಳಗೊಂಡಿರುವ ಗದ್ಯಭಾಗ (ಪ್ರಬಂಧ)<br>* ದೇಶಪ್ರೇಮವನ್ನು ವ್ಯಕ್ತ ಪಡಿಸುವ ಯಾವುದಾದ ರೊಂದು ಘಟನೆ.<br>* ಕಿರು ಪ್ರಬಂಧ ರಚನೆ<br>* ಗದ್ಯಪಾಠ | * ನುಡಿಗಟ್ಟುಗಳನ್ನು ಬರೆಸು ವುದು.<br>* ಗಾದೆಮಾತುಗಳನ್ನು ಬಳಸಿ ಸಂದರ್ಭಕ್ಕೆ ತಕ್ಕಂತೆ ಬಳಸು ವಂತೆ ಹೇಳಿ ಬರೆಯಿಸುವುದು.<br>* ಕ್ರಿಯಾತ್ಮಕ ಭಾಷಾಂಶದ ಬಗ್ಗೆ ತಿಳಿಸುವುದು. | * ಅರ್ಥಪೂರ್ಣ ವಾಕ್ಯಗಳನ್ನು ಬರೆಯಿಸಿ, ಪ್ರದರ್ಶಿಸುವುದು.<br>* ಕಿರುಪ್ರಬಂಧ ಬರೆಸುವುದು.<br>* ಪಾಠದ ಮುಖ್ಯಾಂಶ ಬರೆಸುವುದು<br>* ಕಿರುಟಿಪ್ಪಣಿ ಬರೆಸುವುದು.<br>**(ಅವಧಿ : ೧೫)** |

# ಪ್ರಥಮ ಭಾಷೆ – ಕನ್ನಡ ಪಠ್ಯವಸ್ತು

## ಆರನೇ ತರಗತಿ

- ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ
- ಅವಧಿ ಹಂಚಿಕೆ ಕೋಷ್ಠಕ
- ಕ್ರೋಢೀಕೃತ ಸಾಮರ್ಥ್ಯ ಪಟ್ಟಿ
- ಸಾಮರ್ಥ್ಯವಾರು ಪಠ್ಯವಸ್ತು

# ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ

೧. ಪ್ರಸ್ತುತ ಪಠ್ಯವಸ್ತು ತಯಾರಿಸುವಾಗ ರಾಜ್ಯ ಪಠ್ಯಕ್ರಮ ೨೦೦೧-೨೦೦೨ ಮತ್ತು ಎನ್.ಸಿ.ಎಫ್. ೨೦೦೫ ಇವೆರಡನ್ನೂ ಗಮನಿಸಿದೆ

೨. ಮೂಲ ಕ.ಕ.ಮ. ಆಧಾರಿತ ಸಾಮರ್ಥ್ಯಗಳನ್ನು ಪ್ರಸ್ತುತ ಎನ್.ಸಿ.ಎಫ್ ೨೦೦೫ ರ ನೆಲೆಯಲ್ಲಿ ಪರಿಷ್ಕರಿಸಿದೆ

೩. ಪಠ್ಯವಸ್ತುವನ್ನು ಶಿಶುಕೇಂದ್ರಿತ, ಸಾಮರ್ಥ್ಯಾಧಾರಿತ, ಚಟುವಟಿಕೆ ಮತ್ತು ಸಂತಸದಾಯಕ ಸನ್ನಿವೇಶವನ್ನು ಆಧರಿಸಿ ರೂಪಿಸಿದೆ

೪. ಮಗುವಿನ ಮನೆ ಮತ್ತು ಸ್ಥಳೀಯ ಭಾಷೆಯನ್ನು ಯಥಾವತ್ತಾಗಿ ಸ್ವೀಕರಿಸಲು ಅವಕಾಶ ಕಲ್ಪಿಸಿದೆ

೫. ಮಗು ಶಾಲೆಯಲ್ಲಿ ಪಡೆದ ಜ್ಞಾನವನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ

೬. ರಾಷ್ಟ್ರೀಯಮೌಲ್ಯ ಮತ್ತು ಭಾವೈಕ್ಯತೆಗೆ ಸಂಬಂಧಿಸಿದ ಅಂಶಗಳನ್ನು ಪಠ್ಯವಸ್ತುವಿನಲ್ಲಿ ಅಳವಡಿಸಿದೆ

೭. ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಜೋಡಿಸಿದೆ

೮. ಪಠ್ಯವಸ್ತುವಿನಲ್ಲಿಯೇ ಮೌಲ್ಯಮಾಪನ ಹಾಗೂ ಪಠ್ಯದ ವಿಸ್ತಾರ ಎಷ್ಟಿರಬೇಕೆಂದು ವಿವರಿಸಿದೆ

೯. ಅವಧಿಯನ್ನು ನಿರ್ಧರಿಸಿ ಅದಕ್ಕೆ ತಕ್ಕಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೦. ಮಗು ಆಡುಭಾಷೆಯಿಂದ ಹಂತ ಹಂತವಾಗಿ ಗ್ರಾಂಥಿಕ ಭಾಷೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೧. ರಾಷ್ಟ್ರ, ಸಮಾಜ, ವೃತ್ತಿ ಅಪೇಕ್ಷಿತ ಹಾಗೂ ನಿರೀಕ್ಷಿತ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸಲು ಅವಕಾಶ ಮಾಡಿಕೊಟ್ಟಿದೆ

೧೨. ಭಾಷಾ ಅಭಿವೃದ್ಧಿಯೊಂದಿಗೆ ಭಾಷಾ ಕೌಶಲಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಕಲಿಕೆಯ ನಿರೀಕ್ಷಿತ ಫಲಗಳನ್ನು ಪರಿಗಣಿಸಿದೆ

೧೩. ಶೈಕ್ಷಣಿಕ ಕ್ಷೇತ್ರದಲ್ಲಿನ ಹೊಸಹೊಸ ಸಂಶೋಧನೆ, ಪ್ರಯೋಗ ಮತ್ತು ಸಮೀಕರಣದ ಫಲಿತಾಂಶಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

೧೪. ಭಾಷಾವಿಜ್ಞಾನದ ತಳಹದಿಯ ಮೇಲೆ ರೂಪಿತವಾಗಿದ್ದರೂ ಪ್ರಾದೇಶಿಕ ಭಾಷಾ ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿದೆ

೧೫. ರಾಷ್ಟ್ರೀಯ ಶಿಕ್ಷಣನೀತಿ ೧೯೮೬ರಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವವಿಕಸನದ ಅಗತ್ಯತೆಯ ತತ್ತ್ವಗಳನ್ನಾಧರಿಸಿ ಪಠ್ಯವಸ್ತುವನ್ನು ತಯಾರಿಸಿದೆ

೧೬. ನಗರ ಮತ್ತು ಗ್ರಾಮಾಂತರ ಶೈಕ್ಷಣಿಕ ಅಂತರವನ್ನು ಕಡಿಮೆಗೊಳಿಸಲು ಹೆಚ್ಚು ಒತ್ತು ನೀಡಿದೆ. ಮಕ್ಕಳ ಮನೋವಿಕಾಸ ಭೂಮಿಕೆಗೂ ಸಮಾನ ಪ್ರಾತಿನಿಧ್ಯ ನೀಡಿದೆ

೧೭. ಪರಿಣಾಮಕಾರಿ ಕಲಿಕೆಯಲ್ಲಿ, ಚಟುವಟಿಕೆ ಮತ್ತು ಇನ್ನಿತರ ಸಮಗ್ರ ವಿಧಾನಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

# ಅವಧಿ ಹಂಚಿಕೆ ಕೋಷ್ಟಕ

* ಶಾಲಾ ಕೆಲಸದ ದಿನ : ೨೧೦
* ಒಂದು ವಾರಕ್ಕೆ ಅವಧಿ : ೦೭
* ಲಭ್ಯವಾಗುವ ಅವಧಿ : ೨೪೫

| | | |
|---|---|---|
| ಸೇತುಬಂಧ (ಮೊದಲನೆ ಚತುರ್ಮಾಸ) | ೧೮ | ಅವಧಿ |
| ಪುನರ್ಬಲನ (ಎರಡನೆ ಚತುರ್ಮಾಸ) | ೧೫ | ಅವಧಿ |
| ಕಿರುಪರೀಕ್ಷೆ | ೦೪ | ಅವಧಿ |
| ಚತುರ್ಮಾಸ ಮೌಲ್ಯಮಾಪನ(ಮೌಲ್ಯಮಾಪನದ ನಂತರ ಸಮಾಲೋಚನೆ ಸೇರಿ) | ೦೮ | ಅವಧಿ |
| ಯೋಜನೆ | ೦೮ | ಅವಧಿ |
| ಪರಿಹಾರ ಬೋಧನೆ (ಪ್ರತಿ ಸಾಮರ್ಥ್ಯಕ್ಕೆ ೦೨ ರಂತೆ) | ೩೬ | ಅವಧಿ |
| ಬೋಧನೆ | ೧೫೬ | ಅವಧಿ |
| **ಒಟ್ಟು** | **೨೪೫** | **ಅವಧಿ** |

### ಪ್ರತಿ ಗದ್ಯ-ಪದ್ಯಕ್ಕೆ ಅವಧಿ ಹಂಚಿಕೆ

| ಹಂತ | ಗದ್ಯ | ಪದ್ಯ |
|---|---|---|
| ಪೂರ್ವಸಿದ್ಧತೆ | ೦೧ | ೦೧ |
| ಕಲಿಕಾಂಶ | ೦೪ | ೦೩ |
| ಅಭ್ಯಾಸ / ಅನ್ವಯ | ೦೩ | ೦೨ |
| ಮೌಲ್ಯಮಾಪನ | ೦೨ | ೦೧ |
| **ಒಟ್ಟು** | **೧೦** | **೦೭** |

### ಸಾಮರ್ಥ್ಯವಾರು ಅವಧಿ ಹಂಚಿಕೆ

| ಕ್ಷೇತ್ರ | ಸಾಮರ್ಥ್ಯ | ಅವಧಿ | ಸಾಮರ್ಥ್ಯ | ಅವಧಿ | ಒಟ್ಟು ಅವಧಿ |
|---|---|---|---|---|---|
| ಆಲಿಸುವುದು | ೦೨ | ೨೦ | ೦೨ | ೧೪ | ೩೪ |
| ಮಾತನಾಡುವುದು | ೦೩ | ೩೦ | ೦೧ | ೦೭ | ೩೭ |
| ಓದುವುದು | ೦೨ | ೨೦ | ೦೩ | ೨೧ | ೪೧ |
| ಬರೆಯುವುದು | ೦೩ | ೩೦ | ೦೨ | ೧೪ | ೪೪ |
| **ಒಟ್ಟು** | **೧೦** | **೧೦೦** | **೦೮** | **೫೬** | **೧೫೬** |

* ಗದ್ಯಪಾಠಕ್ಕೆ ೧೦ ಅವಧಿಯಂತೆ ೧೦೦ ಅವಧಿ
* ಪದ್ಯಪಾಠಕ್ಕೆ ೦೭ ಅವಧಿಯಂತೆ ೫೬ ಅವಧಿ

**ಒಟ್ಟು ೧೫೬ ಅವಧಿ**

### ಪದ್ಯ-ಗದ್ಯಪಾಠ ಹಾಗೂ ಚತುರ್ಮಾಸ ಅವಧಿ ಹಂಚಿಕೆ

| ಚತುರ್ಮಾಸ | ಸಾಮರ್ಥ್ಯ | ಶೇಕಡಾವಾರು | ಗದ್ಯ | ಪದ್ಯ | ಅವಧಿ |
|---|---|---|---|---|---|
| ಮೊದಲನೆಯ ಚತುರ್ಮಾಸ | ೦೮ | ೪೫% | ೦೫ | ೦೩ | ೭೧ |
| ಎರಡನೆಯ ಚತುರ್ಮಾಸ | ೧೦ | ೫೫% | ೦೫ | ೦೫ | ೮೫ |
| **ಒಟ್ಟು** | **೧೮** | **೧೦೦%** | **೧೦** | **೦೮** | **೧೫೬** |

**ಕ್ರೋಢೀಕೃತ ಸಾಮರ್ಥ್ಯ ವಿವರ ಪಟ್ಟಿ** **ತರಗತಿ : ೬**

| ಆಲಿಸುವುದು | ಮಾತನಾಡುವುದು | ಓದುವುದು | ಬರೆಯುವುದು |
|---|---|---|---|
| * ಸಂವಾದ, ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವುದು. | * ಕೊಟ್ಟಿರುವ ವಿಷಯದ ಕುರಿತು ನಿರರ್ಗಳವಾಗಿ ಚರ್ಚಿಸುವುದು | * ಅಕ್ಷರಗಳ ಧ್ವನಿವ್ಯತ್ಯಾಸವನ್ನು ಅರ್ಥ ಮಾಡಿಕೊಂಡು ಓದುವುದು. | * ಪದಪುಂಜ, ನುಡಿಗಟ್ಟು ಮತ್ತು ಗಾದೆ ಮಾತುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸುವುದು. |
| * ಅಪರಿಚಿತ ಸನ್ನಿವೇಶ ಹಾಗೂ ಘಟನೆ ನಡೆದ ಸಂದರ್ಭದ ಸಂಭಾಷಣೆ ಮತ್ತು ಚರ್ಚೆಯನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದು. | * ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿಖರವಾಗಿ ಮಾತನಾಡುವುದು. | * ಪದಪುಂಜ, ನುಡಿಗಟ್ಟು ಮತ್ತು ನಾಣ್ನುಡಿಗಳನ್ನು ಓದಿ ಅರ್ಥಮಾಡಿಕೊಳ್ಳುವುದು. | * ಪಾಠದಲ್ಲಿ ಬರುವ ವಿಚಾರಗಳನ್ನು ಕಥೆ, ಸಂಭಾಷಣೆ, ಸಾರಾಂಶ ರೂಪದಲ್ಲಿ ಬರೆಯುವುದು. |
| * ಗುಂಪು ಚಟುವಟಿಕೆಯ ನಿರ್ದೇಶನಗಳನ್ನು ಆಲಿಸಿ ಕಾರ್ಯರೂಪಕ್ಕೆ ತರುವುದು. | * ಹೊಸ ವಿಷಯಗಳನ್ನು ಗಮನವಿಟ್ಟು ಆಲಿಸಿ, ಮಾತಿನಲ್ಲಿ ಸ್ಪಷ್ಟವಾಗಿ ಪ್ರಕಟಿಸುವುದು. | * ಮುದ್ರಿತ ಪಠ್ಯೇತರ ವಿಷಯಗಳನ್ನು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು. | * ಆಲಿಸಿದ ಮತ್ತು ಓದಿದ ವಿಷಯಗಳನ್ನು ಸೂಕ್ತ ಲೇಖನಚಿಹ್ನೆಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳಲ್ಲಿ ಬರೆಯುವುದು. |
| * ವಿಷಯವನ್ನು ಆಲಿಸಿದ ಬಳಿಕ ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ? – ಪ್ರಶ್ನೆಗಳಿಗೆ ಉತ್ತರಿಸುವುದು. | * ಇತರರೊಡನೆ ಮಾತನಾಡುವಾಗ ಗೌರವಸೂಚಕ ಪದಗಳನ್ನು ಬಳಸುವುದು. | * ಓದಿದ ವಿಷಯಗಳ ಬಗ್ಗೆ ಆಲೋಚಿಸಿ, ತಾರ್ಕಿಕವಾಗಿ ತೀರ್ಮಾನಿಸುವುದು. | * ವಿವಿಧ ನಮೂನೆಯ ಉಭಯ ಕುಶಲೋಪರಿ ಪತ್ರ ಮತ್ತು ಪ್ರವಾಸಲೇಖನಗಳನ್ನು ಬರೆಯುವುದು. |
| | | * ಸುಮಾರು ೬೦೦೦ ಪದಗಳನ್ನು ಸ್ವತಂತ್ರವಾಗಿ ಓದಿ ಗ್ರಹಿಸುವುದು. | * ಸರಳಕ್ರಿಯಾತ್ಮಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬರವಣಿಗೆಯಲ್ಲಿ ಬಳಸುವುದು. |
| | | | |

**ಆಲಿಸುವುದು** **ಸಾಮರ್ಥ್ಯವಾರು ಪಠ್ಯವಸ್ತು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1 | * ಸಂವಾದ, ಚರ್ಚೆ ಮತ್ತು ನಾಟಕಗಳನ್ನು ಆಲಿಸಿ ಅಭಿನಯಕ್ಕೆ ತಕ್ಕಂತೆ ಅರ್ಥ ಮಾಡಿಕೊಳ್ಳುವುದು. | * ಸಂವಾದ; ನಾಟಕ ಚರ್ಚೆಗಳಲ್ಲಿನ ಮುಖ್ಯಾಂಶಗಳನ್ನು ಅರ್ಥಮಾಡಿಕೊಳ್ಳುವುದು.<br>* ಧ್ವನಿ/ ಅಭಿನಯದ ಮೂಲಕ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದು.<br>* ಸಂವಾದ ಒಳಗೊಂಡ ವಿಷಯ ತಿಳಿಯುವುದು<br>* ದೈನಂದಿನ ದಿನಗಳಲ್ಲಿ ಸಂಭಾಷಣೆಯನ್ನು ಅರ್ಥ ಮಾಡಿಕೊಳ್ಳುವುದು. | * ೪–೫ ಪಾತ್ರಗಳಿರಬೇಕು.<br>* ೩ ರಿಂದ ೪ ಅಂಕಗಳಿರಬೇಕು<br>(೧/೨ ಯಿಂದ ೨ ಪುಟಕ್ಕೆ ಸೀಮಿತವಾಗಿರಬೇಕು)<br>ಉದಾ: ಅಂಗುಲಿಮಾಲ (ಮಕ್ಕಳ ನಾಟಕದ ಒಂದು ಭಾಗ)<br>* ಗದ್ಯಪಾಠ | * ವಿದ್ಯಾರ್ಥಿಗಳಿಗೆ ಪಾತ್ರ ಹಂಚಿಕೆ ಮಾಡಿ ಸಹ ವಿದ್ಯಾರ್ಥಿಗಳ ಸಮ್ಮುಖದಲ್ಲಿ ನಾಟಕಾಭಿನಯ ಮಾಡಿಸುವುದು. ಸಂಭಾಷಣೆಯನ್ನು ಉಳಿದ ಮಕ್ಕಳು ಆಲಿಸಲು ಅವಕಾಶ ಕಲ್ಪಿಸುವುದು.<br>* ವಿದ್ಯಾರ್ಥಿಗಳಲ್ಲಿ ಸಂವಾದ ಏರ್ಪಡಿಸುವುದು.<br>* ಒಂದು ವಿಷಯವನ್ನು ಕೊಟ್ಟು ಮಕ್ಕಳಲ್ಲಿ ಚರ್ಚೆ ಏರ್ಪಡಿಸುವುದು.<br>* ಚರ್ಚೆಯನ್ನು ಆಲಿಸಿದ ಮಕ್ಕಳಿಂದ ಮುಖ್ಯಾಂಶಗಳನ್ನು ಕೇಳುವುದು. | * ಸಂವಾದ ಚರ್ಚೆಗಳನ್ನು ನಡೆಸಿ ಮುಖ್ಯಾಂಶಗಳನ್ನು ಹೇಳಿಸುವುದು.<br>* ಆಲಿಸಿದ ವಿಷಯದ ಆಧಾರದ ಮೇಲೆ ಪ್ರಶ್ನೆಗಳನ್ನು ಕೇಳುವುದು.<br>* ಶಾಲೆಯ ಪ್ರಮುಖ ಸಮಾರಂಭಗಳಲ್ಲಿ ನಾಟಕವನ್ನು ಮಕ್ಕಳಿಂದ ಮಾಡಿಸುವುದು.<br>**(ಅವಧಿ : ೨೦)** |
| 2 | * ಅಪರಿಚಿತ ಸನ್ನಿವೇಶ ಹಾಗೂ ಘಟನೆಯ ಸಂದರ್ಭದ ಸಂಭಾಷಣೆ ಮತ್ತು ಚರ್ಚೆಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದು. | * ಅಪರಿಚಿತ ಸನ್ನಿವೇಶಗಳಲ್ಲಿಯ ಅಂಶಗಳನ್ನು ಪರಿಚಯಿಸಿಕೊಳ್ಳುವುದು.<br>* ಸಂಭಾಷಣೆಯು ಅರ್ಥವಾಗಲು ಕಾರಣವಾದ ಅಂಶವನ್ನು ಪಟ್ಟಿಮಾಡುವುದು.<br>* ದೈನಂದಿನ ಜೀವನದಲ್ಲಿ ಘಟಿಸುವ ಸಂಭಾಷಣೆ ಮತ್ತು ಚರ್ಚೆಗಳಲ್ಲಿ ಭಾಗವಹಿಸುವುದು. | * ಮಗುವಿಗೆ ಅಪರಿಚಿತವಾದ ಘಟನೆ, ಸಂಭಾಷಣೆ ಅಥವಾ ಚರ್ಚಿಸುವಂತಹ ವಿಷಯ ಇರಬೇಕು.<br>ಉದಾ: ಸಾಹಸಕಥೆಗಳು<br>* ಪದ್ಯಪಾಠ | * ಅಪರಿಚಿತ ಘಟನೆಗಳನ್ನು ಮಗುವಿಗೆ ಪರಿಚಯಿಸುವುದು.<br>* ಕೆಲವು ಪರಿಚಿತ ಮತ್ತು ಅಪರಿಚಿತ ಘಟನೆಗಳನ್ನು ಹೇಳಿ, ಅದರಲ್ಲಿ ಮಗುವಿಗೆ ಪರಿಚಿತ ಮತ್ತು ಅಪರಿಚಿತವಿರುವ ಘಟನೆಗಳನ್ನು ಗುರುತಿಸಲು ಹೇಳುವುದು.<br>* ಅಪರಿಚಿತ ಸನ್ನಿವೇಶಗಳಲ್ಲಿ ನಡೆಯುವ ಚರ್ಚೆ, ಸಂಭಾಷಣೆಗಳನ್ನು ಆಲಿಸಿ ಅರ್ಥಮಾಡಿಕೊಂಡು ಹೇಳಲು ತಿಳಿಸುವುದು. | * ಅಪರಿಚಿತ ಸನ್ನಿವೇಶಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿ ಆಲಿಸಿದ ವಿಷಯವನ್ನು ವಿವರಿಸಲು ಹೇಳುವುದು.<br>* ಅಪರಿಚಿತ ಘಟನೆಗಳನ್ನು ಪಟ್ಟಿಮಾಡಲು ಹೇಳು ವುದು.<br>* ಅಪರಿಚಿತ ಸನ್ನಿವೇಶ / ಘಟನೆಯ ಮುಖ್ಯಾಂಶಗಳನ್ನು ಕೇಳುವುದು.<br>**(ಅವಧಿ : ೧೦)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಗುಂಪು ಚಟುವಟಿಕೆ ನಿರ್ದೇಶನಗಳನ್ನು ಆಲಿಸಿ ಕಾರ್ಯರೂಪಕ್ಕೆ ತರುವುದು. | * ಗುಂಪುಗಳಲ್ಲಿ ಚಟುವಟಿಕೆಗಳನ್ನು ಮಾಡುವಾಗ ನಿರ್ದೇಶನಗಳನ್ನು ಆಲಿಸಿ ಅದನ್ನು ಕಾರ್ಯ ರೂಪಕ್ಕೆ ತರಲು ಸಮರ್ಥರನ್ನಾಗಿಸುವುದು.<br>* ಗುಂಪು ಚಟುವಟಿಕೆಯ ನಿರ್ದೇಶನಗಳನ್ನು ಅರ್ಥ ಮಾಡಿಕೊಳ್ಳುವುದು.<br>* ನಿರ್ದೇಶನದಂತೆ ಕಾರ್ಯ ನಿರ್ವಹಿಸುವುದು. | * ಗುಂಪು ಚಟುವಟಿಕೆಗಳನ್ನು ನಿರ್ವಹಿಸಲು ಸಾಧ್ಯವಾಗುವಂತ ಪಾಠ.<br>* ಸೂಕ್ತ ನಿರ್ದೇಶನಗಳನ್ನು ನೀಡಿದಾಗ ಆ ನಿರ್ದೇಶನಗಳು ಕಾರ್ಯರೂಪಕ್ಕೆ ಬರಬೇಕು.<br>ಉದಾ : ಹೊರಸಂಚಾರಕ್ಕೆ ಸಂಬಂಧಿಸಿದ ಗದ್ಯ.<br>* ಗದ್ಯಪಾಠ | * ಮಕ್ಕಳಿಗೆ ತರಗತಿಯಲ್ಲಿ ಕೆಲವು ನಿರ್ದೇಶನಗಳನ್ನು ಕೊಟ್ಟು ಎಷ್ಟರಮಟ್ಟಿಗೆ ಆ ನಿರ್ದೇಶನಗಳನ್ನು ಆಲಿಸಿ ಕಾರ್ಯರೂಪಕ್ಕೆ ತರುತ್ತಾರೆ ಎಂಬುದನ್ನು ವೀಕ್ಷಿಸಿ ಮಾರ್ಗದರ್ಶಿಸುವುದು.<br>* ಶಾಲೆಯ ಸಮಾರಂಭದಲ್ಲಿ ನಿರ್ದೇಶನಗಳನ್ನು ನೀಡಿ ಮಕ್ಕಳು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತರುತ್ತಿದ್ದಾರೆಂದು ತಿಳಿಯುವುದು.<br>* ದೈನಂದಿನ ಶಾಲಾ ಕೆಲಸಗಳನ್ನು ಮಕ್ಕಳಿಗೆ ಹಂಚಿ ಆಯಾ ಮಗು ಆಯಾ ನಿರ್ದೇಶನಕ್ಕನುಸಾರ ಹೇಗೆ ಕಾರ್ಯ ನಿರ್ವಹಿಸುವರು ಎಂದು ವೀಕ್ಷಿಸುವುದು.<br>* ಮಕ್ಕಳೇ ಪರಸ್ಪರ ನಿರ್ದೇಶನ ಕೊಟ್ಟು ತೆಗೆದುಕೊಂಡು ನಿರ್ವಹಿಸುವುದು. | * ವಿವಿಧ ನಿರ್ದೇಶನಗಳನ್ನು ಕೊಟ್ಟು, ಮಕ್ಕಳಿಗೆ ಪ್ರಶ್ನೆ ಕೇಳುವುದು.<br>* ನಿರ್ದೇಶನಗಳನ್ನು ಕೊಟ್ಟು ಆಟಗಳನ್ನು ಆಡಿಸುವುದು.<br>* ಅಲಿಸಿದ ನಿರ್ದೇಶನಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆಯೇ ? ಎಂದು ಗಮನಿಸುವುದು.<br>* ನಿರ್ದೇಶನಗಳ ಮಹತ್ವದ ಬಗೆಗೆ ಮಾತನಾಡಲು ಹೇಳುವುದು.<br><br>**(ಅವಧಿ : ೧೦)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 4. | * ವಿಷಯವನ್ನು ಆಲಿಸಿದ ಬಳಿಕ ಏಕೆ ? ಹೇಗೆ? ಹಾಗಾದರೆ? ಹಾಗಾಗ ದಿದ್ದರೆ ? – ಪ್ರಶ್ನೆಗಳಿಗೆ ಉತ್ತರಿಸುವುದು. | * ವಿಷಯವನ್ನು ಸ್ಪಷ್ಟವಾಗಿ ಆಲಿಸುವಂತೆ ಪ್ರೇರೇಪಿಸುವುದು.<br>* ಯಾವುದೇ ವಿಷಯವನ್ನು ಆಲಿಸಿದ ನಂತರ ಅಲ್ಲಿರುವ ವಿವಿಧ ಘಟನೆಗಳನ್ನು ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ? – ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವುದು. | * ಅದ್ಭುತ, ರಮ್ಯವಾಗಿರುವ ಗದ್ಯ ಪಾಠಗಳಿರಬೇಕು.<br>* ಏಕೆ ? ಹೇಗೆ ? ಎಂಬಿತ್ಯಾದಿ ಪ್ರಶ್ನೆಗಳು ಉದ್ಭವವಾಗುವ ಪಾಠವಿರಬೇಕು. ಉದಾ : ವೈಚಾರಿಕ ಕಥೆ.<br>* ಗದ್ಯಪಾಠ | * ಕಥೆ, ವಾಕ್ಯವೃಂದ, ಘಟನೆ, ಸನ್ನಿವೇಶ, ವ್ಯಕ್ತಿ ಚಿತ್ರಗಳನ್ನು ಓದುವುದು.<br>* ಓದಿದ ನಂತರ ಏಕೆ ? ಹೇಗೆ ? ಹಾಗಾದರೆ ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಕೇಳುವುದು.<br>* ಧ್ವನಿಸುರಳಿಯನ್ನು ಬಳಸಿ, ನಾಟಕದ ಸನ್ನಿವೇಶ ಮತ್ತು ಕಥೆ ಕೇಳಿಸುವುದು. ನಂತರ ಹಾಗಾದರೆ ? ಹಾಗಾಗ ದಿದ್ದರೆ ?– ಪ್ರಶ್ನೆಗಳಿಗೆ ಉತ್ತರ ಪಡೆಯವುದು.<br>* ಆಲಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸಂದರ್ಭೋಚಿತ ಪ್ರಶ್ನೆ ಕೇಳಿ ಉತ್ತರ ಪಡೆಯವುದು. | * ಮಗು ಆಲಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಏಕೆ? ಹೇಗೆ? ಹಾಗಾದರೆ? ಹಾಗಾಗ ದಿದ್ದರೆ? – ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>* ಕಥೆಯ ಪ್ರಾಮುಖ್ಯತೆಯ ಬಗೆಗೆ ಮಾತನಾಡಲು ತಿಳಿಸುವುದು.<br>* ಗೊತ್ತಿರುವ ಕಥೆಯನ್ನು ಹೇಳಿಸುವುದು.<br><br>**(ಅವಧಿ : ೧೦)** |

**ಮಾತನಾಡುವುದು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1 | * ಕೊಟ್ಟಿರುವ ವಿಷಯ ಕುರಿತು ನಿರರ್ಗಳವಾಗಿ ಚರ್ಚಿಸುವುದು. | * ಚರ್ಚೆಗಳಲ್ಲಿ ನಿರರ್ಗಳವಾಗಿ ಮಾತನಾಡುವ ಕೌಶಲ ಬೆಳೆಸುವುದು.<br>* ದೈನಂದಿನ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ಮಂಡಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.<br>* ವಿಷಯಕ್ಕೆ ತಕ್ಕಂತೆ ಸಂದರ್ಭೋಚಿತವಾಗಿ ಮಾತನಾಡುವ ಕೌಶಲವನ್ನು ಬೆಳೆಸುವುದು. | * ಸಾಮಾಜಿಕ ಸಮಸ್ಯೆಗಳನ್ನು ಕುರಿತಾದುದು.<br>* ಜನಸಂಖ್ಯಾಸ್ಫೋಟ, ಜೀವನ ಮೌಲ್ಯಗಳಿಗೆ ಸ್ಪಂದಿಸುವಂತಹುದು.<br>* ಗದ್ಯಪಾಠ | * ಪರಿಚಿತ ವಿಷಯಗಳನ್ನು ಕೊಟ್ಟು ಮಾತನಾಡಿಸುವುದು.<br>* ಯಾವುದಾದರೊಂದು ವಿಷಯ ಕುರಿತು ಅಭಿಪ್ರಾಯ ಮಂಡಿಸಲು ತಿಳಿಸುವುದು.<br>* ತಾನೇ ವಸ್ತುವಾಗಿ ವಿದ್ಯಾರ್ಥಿ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸುವಂತೆ ಮಾಡುವುದು.<br>* ಸಾಮಾಜಿಕ ಸಮಸ್ಯೆಗಳ ಕುರಿತು ಚರ್ಚೆಗೆ ಅವಕಾಶ ಕಲ್ಪಿಸುವುದು.<br>* ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸುವಿಕೆ ಚಟುವಟಿಕೆಯನ್ನು ರೂಪಿಸುವುದು.<br>* ವಿಷಯ ನೀಡಿ ಆಶು ಭಾಷಣ ಹಾಗೂ ಭಾಷಣ ಮಾಡಿಸುವುದು. | * ಚರ್ಚಾಸ್ಪರ್ಧೆ ಏರ್ಪಡಿಸಿ ವಿದ್ಯಾರ್ಥಿಗಳು ಮಾತನಾಡುವುದನ್ನು ವೀಕ್ಷಿಸುವುದು.<br>* ಯಾವುದಾದರೊಂದು ವಿಷಯ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟು ವಿದ್ಯಾರ್ಥಿಯ ಮಾತುಗಾರಿಕೆಯನ್ನು ಗಮನಿಸುವುದು.<br>* ಸಮಸ್ಯೆಯ ಪರಿಹಾರದ ಮಹತ್ವವನ್ನು ವಿವರಿಸಲು ತಿಳಿಸುವುದು.<br><br>(ಅವಧಿ : ೧೦) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 2 | * ಸನ್ನಿವೇಶ ಮತ್ತು ಘಟನೆಗಳ ಕುರಿತು ನಿಖರವಾಗಿ ಮಾತನಾಡುವುದು. | * ಸನ್ನಿವೇಶ ಮತ್ತು ಘಟನೆಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು.<br>* ಘಟನೆಗಳ ಕುರಿತು ಮಾಹಿತಿ ಸಂಗ್ರಹಿಸುವುದು.<br>* ಸನ್ನಿವೇಶದ ಸತ್ಯಾಸತ್ಯತೆಗಳನ್ನು ಅರಿಯುವುದು.<br>* ನಿಖರವಾಗಿ ಮಾತನಾಡುವ ಗುಣವನ್ನು ಬೆಳೆಸುವುದು. | * ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ಬಗ್ಗೆ, ಚಿತ್ರಕಥೆ ಪ್ರವಾಸಕಥನ, ಮಹಾನ್ ವ್ಯಕ್ತಿಗಳ ಜೀವನದಲ್ಲಿ ನಡೆದ ವಿಶೇಷ ಘಟನೆ.<br>* ಜಾತ್ರೆಯ ವಿಶೇಷ ಸನ್ನಿವೇಶಗಳು<br>* ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತಾದುದು<br>* ಗದ್ಯಪಾಠ. | * ಯಾವುದಾದರೊಂದು ಸನ್ನಿವೇಶದ ಚಿತ್ರಣವನ್ನು ನೀಡಿ ಮಾತನಾಡಲು ಅವಕಾಶ ಕಲ್ಪಿಸುವುದು.<br>* ಯಾವುದಾದರೊಂದು ಘಟನೆ ಕುರಿತು ಮಾತನಾಡಿಸುವುದು.<br>* ವಿದ್ಯಾರ್ಥಿಗಳು ನೋಡಿದ ಸನ್ನಿವೇಶ ಮತ್ತು ಘಟನೆ ಕುರಿತು ಮಾತನಾಡಲು ಅವಕಾಶ ಕಲ್ಪಿಸುವುದು.<br>* ಚರ್ಚಾಸ್ಪರ್ಧೆ, ಭಾಷಣ, ಆಶು–ಭಾಷಣ ಸ್ಪರ್ಧೆ ಏರ್ಪಡಿಸಿ. | * ಯಾವುದಾದರೊಂದು ಸನ್ನಿವೇಶ ನೀಡಿ ಮಾತನಾಡಿಸುವುದು.<br>* ವಿಷಯವನ್ನು ಕೊಟ್ಟು ಅದನ್ನು ಕುರಿತು ಮಾತನಾಡಿಸುವುದು.<br>* ಯಾವುದಾದರೊಂದು ಘಟನೆಯನ್ನು ಕುರಿತು ಮಾತನಾಡಿಸುವುದು.<br>* ಘಟನೆ ಮತ್ತು ಸನ್ನಿವೇಶಗಳನ್ನು ಓದುವುದರಿಂದಾಗುವ ಉಪಯೋಗವನ್ನು ತಿಳಿಸಲು ಹೇಳುವುದು.<br>**(ಅವಧಿ : ೧೦)** |
| 3. | * ಹೊಸ ವಿಷಯಗಳನ್ನು ಗಮನವಿಟ್ಟು ಆಲಿಸಿ ಮಾತಿನಲ್ಲಿ ಸ್ಪಷ್ಟವಾಗಿ ಪ್ರಕಟಿಸುವುದು. | * ಹೊಸ–ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಪ್ರೋತ್ಸಾಹ ನೀಡುವುದು.<br>* ಹೊಸ ವಿಷಯಗಳನ್ನು ತಿಳಿದುಕೊಂಡು ಅದನ್ನು ಸ್ಪಷ್ಟವಾಗಿ ಮಾತನಾಡಲು ಪ್ರೇರೇಪಿಸುವುದು.<br>* ಹೊಸ ವಿಷಯಗಳನ್ನು ಸಂಗ್ರಹಿಸುವ ಆಸಕ್ತಿ ಮತ್ತು ಅಭಿರುಚಿಯನ್ನು ಬೆಳೆಸುವುದು. | * ವೈಚಾರಿಕತೆ ಆಲೋಚನಾ ಶಕ್ತಿಗೆ ಅವಕಾಶ ಮಾಡಿ ಕೊಡುವುದು.<br>* 'ಭಾವಗೀತೆ' ಸರಳವಾದ ಪದಗಳಿಂದ ಕೂಡಿದ್ದು, ವಿದ್ಯಾರ್ಥಿಗಳು ಓದಿ ಅರ್ಥ ಮಾಡಿಕೊಳ್ಳುವಂತಿರಬೇಕು.<br>* ಪದ್ಯಪಾಠ | * ಮಕ್ಕಳಿಗೆ ವಿಷಯವನ್ನು ಆಲಿಸಲು ಅವಕಾಶ ಮಾಡಿ ಕೊಟ್ಟು ಅದನ್ನು ತಮ್ಮ ಮಾತಿನಲ್ಲಿ ಅಭಿವ್ಯಕ್ತಿ ಗೊಳಿಸಲು ಅವಕಾಶ ಮಾಡಿಕೊಡಬೇಕು.<br>* ಪದ್ಯವನ್ನು ಆಲಿಸಿದ ನಂತರ ಅದರ ಸಾರಾಂಶವನ್ನು ನಮ್ಮ ಮಾತುಗಳಲ್ಲಿ ಹೇಳಲು ಅವಕಾಶ ಕಲ್ಪಿಸಿಕೊಡಬೇಕು.<br>* ಧ್ವನಿ ಸುರುಳಿ ಬಳಸಿ ನಾಟಕ / ಸನ್ನಿವೇಶ / ಭಾಷಣವನ್ನು ಕೇಳಿಸುವುದು. ನಂತರ ಅದನ್ನು ಕುರಿತು ಮಾತನಾಡಿಸುವುದು. | * ಆಲಿಸಿದ ವಿಷಯದ ಕುರಿತು ಮಾತನಾಡಿಸುವುದು.<br>* ಆಲಿಸಿದ ಹೊಸ ವಿಷಯ ಕುರಿತು ಅಭಿಪ್ರಾಯ ಮಂಡಿಸಲು ಅವಕಾಶ ಮಾಡಿಕೊಡುವುದು.<br>* ಭಾವಗೀತೆಯನ್ನು ಸಂಗ್ರಹಿಸಲು ಹೇಳಿ ಅದನ್ನು ತರಗತಿಯಲ್ಲಿ ರಾಗವಾಗಿ ಹಾಡಲು ಹೇಳುವುದು.<br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 4. | * ಇತರರೊಡನೆ ಮಾತನಾಡುವಾಗ ಗೌರವಪೂರ್ವಕ ಪದಗಳನ್ನು ಬಳಸುವುದು. | * ಗೌರವಸೂಚಕ ಪದಗಳನ್ನು ಬಳಸಿಕೊಂಡು ಮಾತನಾಡುವ ಕೌಶಲ ಬೆಳೆಸುವುದು.<br>* ಉತ್ತಮ ಮೌಲ್ಯಗಳನ್ನು ಬೆಳೆಸುವುದು.<br>* ಹಿರಿಯರು, ಕಿರಿಯರೊಡನೆ ಮಾತನಾಡುವಾಗ ಸಂದರ್ಭೋಚಿತವಾಗಿ ಗೌರವಸೂಚಕ ಪದಗಳನ್ನು ಬಳಸುವ ಕೌಶಲವನ್ನು ಬೆಳೆಸುವುದು.<br>* ಸಹಜವಾಗಿ ಮಾತನಾಡುವ ಕೌಶಲವನ್ನು ಬೆಳೆಸುವುದು.<br>* ವಿನಯದಿಂದ ಮಾತನಾಡುವ ಕೌಶಲವನ್ನು ಬೆಳೆಸುವುದು. | * ಗೌರವಸೂಚಕ ಪದಗಳನ್ನು ಬಳಸಿ ಬರೆದಿರುವ ಗದ್ಯಪಾಠ.<br>* ಸಂಭಾಷಣೆ / ಪೌರಾಣಿಕ / ಐತಿಹಾಸಿಕ ನಾಟಕ ಸನ್ನಿವೇಶವಿರುವ ಗದ್ಯಭಾಗ.<br>* ಪೌರಾಣಿಕ ಕಥೆಯಲ್ಲಿ ಬರುವ ವೀರ ಬಾಲಕರನ್ನು ಕುರಿತು ರಚಿತವಾದ ನಾಟಕದ ಭಾಗ. 'ಗುರುಭಕ್ತಿ, ದೇಶಪ್ರೇಮ, ಮೂಡಿಸುವಂತಿರಲಿ.<br>* ಗದ್ಯಪಾಠ | * ಗೌರವಸೂಚಕ ಪದ ನೀಡಿ ಸಂಭಾಷಣೆ ರಚಿಸಲು ಹೇಳುವುದು. ನಂತರ ಅದನ್ನು ಮಾತಿನಲ್ಲಿ ವ್ಯಕ್ತಪಡಿಸಲು ತಿಳಿಸುವುದು.<br>* ಗುರು–ಶಿಷ್ಯರ ಸಂಭಾಷಣೆ ತಂದೆ–ಮಗ, ಡಾಕ್ಟರ್–ರೋಗಿ, ಈ ಸನ್ನಿವೇಶಗಳ ಅಣುಕು ಪ್ರದರ್ಶನ ಏರ್ಪಡಿಸುವುದು.<br>* ಗೌರವಸೂಚಕ ಪದಗಳನ್ನು ಬಳಸಿಕೊಂಡು ಮಾತನಾಡುವ ಅಭ್ಯಾಸವನ್ನು ಮಾಡಿಸುವುದು. | * ಸಮುದಾಯದೊಂದಿಗೆ ಮಾತನಾಡುವಾಗ ಗಮನಿಸುವುದು.<br>* ಗೌರವಸೂಚಕ ಪದಗಳನ್ನು ನೀಡಿ ಸಂಭಾಷಣೆ ಏರ್ಪಡಿಸುವುದು.<br>* ಪಠ್ಯಾಧಾರಿತ ಭಾಷಾಭ್ಯಾಸದ ಮೂಲಕ ಮೌಲ್ಯಮಾಪನ ಮಾಡುವುದು.<br>* ಗೌರವಸೂಚಕ ಪದಗಳನ್ನು ಪಟ್ಟಿ ಮಾಡಲು ಹೇಳಿ ಓದಿಸುವುದು.<br>**(ಅವಧಿ : ೧೦)** |

**ಓದುವುದು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | ೩.೬.೧<br>ಅಕ್ಷರಗಳ ಧ್ವನಿ ವ್ಯತ್ಯಾಸವನ್ನು ಅರ್ಥಮಾಡಿಕೊಂಡು ಓದುವುದು. | * ಅಕ್ಷರಗಳು ಪ್ರತಿಬಿಂಬಿಸುವ ಸ್ಪಷ್ಟಧ್ವನಿಯನ್ನು ಅರಿಯುವುದು.<br>* ಧ್ವನಿವ್ಯತ್ಯಾಸವನ್ನು ಗುರುತಿಸಿ ಓದುವುದು.<br>* ಧ್ವನಿ ಏರಿಳಿತದೊಂದಿಗೆ ಓದುವುದನ್ನು ರೂಢಿಸಿಕೊಳ್ಳುವುದು.<br>* ಪರಿಣಾಮಕಾರಿಯಾಗಿ ಓದುವುದನ್ನು ಅಭ್ಯಾಸ ಮಾಡುವುದು. | * ಧ್ವನಿವ್ಯತ್ಯಾಸಗಳನ್ನು ಒಳಗೊಂಡಿರುವ / ಗುರುತಿಸಲು ಸಾಧ್ಯವಾಗುವ ಸಾಲುಗಳನ್ನು ಹೊಂದಿರುವುದು.<br>* ಹೊಸಗನ್ನಡ ಪದ್ಯ<br>* ೧೬ ರಿಂದ ೨೦ ಸಾಲು<br>* ಚಿರಪರಿಚಿತ ಕವಿಗಳ ಕವನ<br>* ಪದ್ಯಪಾಠ | * ಕವಿತೆಯನ್ನು ಸ್ಪಷ್ಟವಾಗಿ ಅರ್ಥವತ್ತಾಗಿ ವಾಚಿಸುವುದು.<br>* ಧ್ವನಿವ್ಯತ್ಯಾಸದ ಪದಗಳನ್ನು ಪಟ್ಟಿ ಮಾಡುವುದು.<br>* ವಿಶಿಷ್ಟ ಪದಗಳನ್ನು ಉಚ್ಚರಿಸುವುದು.<br>* ಧ್ವನಿ ವ್ಯತ್ಯಾಸದೊಂದಿಗೆ ಪದಗಳನ್ನು ಹೇಳುವುದು.<br>* ಧ್ವನಿ ವ್ಯತ್ಯಾಸವಾದಾಗ ಆಗುವ ಪರಿಣಾಮದ ಬಗ್ಗೆ ವಿಶ್ಲೇಷಿಸುವುದು.<br>* ಪೂರಕ ಸಾಹಿತ್ಯವನ್ನು ಓದುವುದು.<br>* ನಿತ್ಯ ಬಳಕೆಯಲ್ಲಿರುವ ಪದಗಳ ಧ್ವನಿ ವ್ಯತ್ಯಾಸವನ್ನು ಗುರುತಿಸಿ ಹೇಳುವುದು. | * ಕವಿತೆಯನ್ನು ಓದಿಸಿ ಸ್ಪಷ್ಟತೆಯನ್ನು ವೀಕ್ಷಿಸುವುದು.<br>* ಪ್ರತಿಯೊಂದು ಅಕ್ಷರಗಳ ನಿಖರ ಧ್ವನಿಯನ್ನು ಹೇಳಿಸುವುದು.<br>* ವಿವಿಧ ಪ್ರಕಾರದ ಸಾಹಿತ್ಯವನ್ನು ಓದಿಸುವುದು.<br>* ಧ್ವನಿ ವ್ಯತ್ಯಾಸವಾದಾಗಿನ ಅರ್ಥ ಗ್ರಹಿಕೆಯನ್ನು ಹೇಳುವುದು.<br>* ಘಟನೆಗಳನ್ನು ವಿವರಿಸಲು ಹೇಳುವುದು.<br>* ಮಕ್ಕಳಸಾಹಿತ್ಯವನ್ನು ವಾಚಿಸಿ – ಅರ್ಥವನ್ನು ವಿವರಿಸಿ ಹೇಳಿಸುವುದು.<br>* ಧ್ವನಿ ವ್ಯತ್ಯಾಸದಿಂದ ಅರ್ಥ ಬದಲಾಗುವ ಪದಗಳನ್ನು ಪಟ್ಟಿಮಾಡಲು ಹೇಳಿ ಅವಲೋಕಿಸಿ.<br><br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 2. | * ೩.೬.೨ ಪದಪುಂಜ, ನುಡಿಗಟ್ಟು ಮತ್ತು ನಾಣ್ನುಡಿಗಳನ್ನು ಓದಿ ಅರ್ಥಮಾಡಿಕೊಳ್ಳು ವುದು. | * ನುಡಿಗಟ್ಟು, ನಾಣ್ನುಡಿ ಗಳನ್ನು ಗುರುತಿಸುವುದು.<br>* ಪದಪುಂಜಗಳನ್ನು ಸ್ಪಷ್ಟ ವಾಗಿ ತಪ್ಪಿಲ್ಲದಂತೆ ಓದು ವುದು.<br>* ನುಡಿಗಟ್ಟು ನಾಣ್ನುಡಿಗಳ ಅರ್ಥಗಳನ್ನು ತಿಳಿಯುವುದು.<br>* ಸ್ಪಷ್ಟವಾಗಿ ಓದುವುದನ್ನು ರೂಢಿಸಿಕೊಳ್ಳುವುದು.<br>* ಸರಾಗವಾಗಿ ಓದುವುದನ್ನು ಅಭ್ಯಾಸ ಮಾಡುವುದು.<br>* ನಿತ್ಯ ಬಳಕೆಯಲ್ಲಿರುವ ನುಡಿ ಗಟ್ಟು, ನಾಣ್ನುಡಿ ಗಳನ್ನು ಸಂಗ್ರಹಿಸುವ ಗುಣವನ್ನು ಬೆಳೆಸುವುದು. | * ನಾಣ್ನುಡಿ, ನುಡಿಗಟ್ಟು, ಪದಪುಂಜಗಳನ್ನು ಒಳ ಗೊಂಡಿರುವ ಗದ್ಯಪಾಠ<br>* ಆಕರ್ಷಕ ಮತ್ತು ಕುತೂಹಲ ಉಂಟುಮಾಡುವಂತಹ ಜನಪದ ಕಥೆ<br>* ೨ ರಿಂದ ೩ ಪುಟಗಳ ಮಿತಿಯಲ್ಲಿರಲಿ.<br>* ಮಗುವಿನ ಜೀವನದಲ್ಲಿ ಬಳಕೆಯಾಗುವ ನುಡಿಗಟ್ಟು ನಾಣ್ನುಡಿಗಳಿರಲಿ.<br>* ಗದ್ಯಪಾಠ | * ಗದ್ಯವನ್ನು ಸ್ಪಷ್ಟವಾಗಿ ವಾಚಿಸುವುದು.<br>* ನುಡಿಗಟ್ಟು, ನಾಣ್ನುಡಿ, ಪದಪುಂಜಗಳನ್ನು ಗುರುತಿಸಿ ಓದುವುದು.<br>* ಅವುಗಳ ಅರ್ಥವನ್ನು ವಿವರಿಸುವುದು.<br>* ನಿತ್ಯ ಬಳಕೆಯಲ್ಲಿರುವ ನಾಣ್ನುಡಿ–ನುಡಿಗಟ್ಟು ಗಳನ್ನು ಸಂಗ್ರಹಿಸಿ ಬಳಸು ವುದು.<br>* ಪೂರಕ ಸಾಹಿತ್ಯದಲ್ಲಿ ಇವುಗಳನ್ನು ಓದಿ ಅರ್ಥ ಗ್ರಹಿಸುವುದು. | * ಗದ್ಯಭಾಗವನ್ನು ಸ್ಪಷ್ಟವಾಗಿ ವಾಚಿಸಲು ಹೇಳಿ ವೀಕ್ಷಿಸುವುದು.<br>* ನಾಣ್ನುಡಿ, ನುಡಿಗಟ್ಟುಗಳನ್ನು ಗುರುತಿಸಲು ಹೇಳುವುದು.<br>* ಇವುಗಳ ಅರ್ಥವನ್ನು ಹೇಳಿಸುವುದು.<br>* ವಾಕ್ಯದಲ್ಲಿ ಬಳಸಿ ಮಾತನಾಡಿ ಸುವುದು.<br>* ಸಾಹಿತ್ಯದ ಇತರ ಪ್ರಕಾರ ಗಳನ್ನು ಓದಿಸುವುದು.<br>* ಭಾಷಾ ಆಟಗಳನ್ನು ಆಡಿಸುವುದು.<br>* ನಾಣ್ನುಡಿ ಮತ್ತು ನುಡಿಗಟ್ಟು ಹಾಗೂ ಪದಪುಂಜಗಳನ್ನು ಗುರುತಿಸಿ, ಪಟ್ಟಿಮಾಡಿ ಓದಲು ಹೇಳಿ ಪರಿಶೀಲಿಸಿ.<br><br>**(ಅವಧಿ : ೧೦)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| .3 | * ೩.೬.೩. ಮುದ್ರಿತ ಪಠ್ಯೇತರ ವಿಷಯಗಳನ್ನು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು. | * ಪಠ್ಯೇತರ ವಿಷಯಗಳನ್ನು ಓದುವ ಆಸಕ್ತಿಯನ್ನು ಹೆಚ್ಚಿಸುವುದು.<br>* ಓದಿರುವುದನ್ನು ಅರ್ಥ ಮಾಡಿಕೊಳ್ಳುವ ಕೌಶಲವನ್ನು ಬೆಳೆಸುವುದು.<br>* ಓದಿರುವ ವಿಷಯವನ್ನು ಪೂರ್ಣವಾಗಿ ಗ್ರಹಿಸಿಕೊಳ್ಳುವುದನ್ನು ಅಭ್ಯಾಸ ಮಾಡುವುದು.<br>* ಕೇಳಿದ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಉತ್ತರಿಸಲು ಸಮರ್ಥರಾಗುವುದು.<br>* ಉತ್ತರಿಸಲು ಸಹಾಯಕವಾಗುವಂತೆ ಮಾರ್ಗದರ್ಶನ ನೀಡುವುದು. | * ವ್ಯಕ್ತಿಚಿತ್ರಣವಿರುವ ಪದ್ಯಪಾಠ<br>* ಮಹಿಳೆಯರ ಕುರಿತಾದ ಗೀತೆ<br>* ೧೬ ರಿಂದ ೨೦ ಸಾಲು<br>* ವ್ಯಕ್ತಿಚಿತ್ರಣ ರಸವತ್ತಾಗಿರಲಿ.<br>* ಮಕ್ಕಳ ಮನಸ್ಸನ್ನು ಜಾಗೃತಗೊಳಿಸುವಂತಹುದು.<br>* ಸಾರಾಂಶವನ್ನು ಸರಳವಾಗಿ ಗುರುತಿಸುವಂತಿರಲಿ.<br>* ಪದ್ಯಪಾಠ | * ಪದ್ಯವನ್ನು ಸ್ಪಷ್ಟವಾಗಿ ವಾಚಿಸುವುದು.<br>* ಸಾರಾಂಶವನ್ನು ಹೇಳಿ ವಿಶ್ಲೇಷಿಸುವುದು.<br>* ಪ್ರಶ್ನೆಗಳನ್ನು ರಚಿಸುವುದು.<br>* ಪ್ರಶ್ನೆಗಳಿಗೆ ಉತ್ತರಿಸುವ ರೀತಿಯನ್ನು ವಿವರಿಸುವುದು.<br>* ವೃತ್ತಪತ್ರಿಕೆ ಹಾಗೂ ಬಾಲಸಾಹಿತ್ಯವನ್ನು ಪರಿಚಯಿಸುವುದು.<br>* ಕರಪತ್ರಗಳನ್ನು ಓದಿ ವಿಷಯ ತಿಳಿಸುವುದು. | * ಪದ್ಯವನ್ನು ಸ್ಪಷ್ಟವಾಗಿ ವಾಚಿಸಲು ಹೇಳುವುದು.<br>* ಪದ್ಯದ ಭಾವಾರ್ಥವನ್ನು ಹೇಳಿಸುವುದು.<br>* ಪದ್ಯದ ವಿಷಯ ಕುರಿತು ಪ್ರಶ್ನೆ ರಚಿಸಲು ಹೇಳುವುದು.<br>* ಪ್ರಶ್ನೆ ಕೇಳಿ ಉತ್ತರ ಪಡೆಯುವುದು.<br>* ವೃತ್ತಪತ್ರಿಕೆ–ಬಾಲಸಾಹಿತ್ಯವನ್ನು ಓದಲು ಹೇಳಿ ಪ್ರಶ್ನೆಗಳ ಮೂಲಕ ಉತ್ತರ ಪಡೆಯುವುದು.<br>* ದೈನಂದಿನ ಜೀವನದಲ್ಲಿಯ ಅಂಶಗಳನ್ನು ಕುರಿತಾದ ಪ್ರಶ್ನೆಗೆ ಉತ್ತರ ಪಡೆಯುವುದು.<br>* ಮಕ್ಕಳ ಮೇಲೆ ವೃತ್ತಪತ್ರಿಕೆ, ಬಾಲಸಾಹಿತ್ಯದ ಪ್ರಭಾವದ ವಿಚಾರವನ್ನು ಮಾತನಾಡಲು ಹೇಳುವುದು.<br><br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 4. | * ೩.೬.೪<br>ಓದಿದ ವಿಷಯಗಳ ಬಗ್ಗೆ ಆಲೋಚಿಸಿ ತಾರ್ಕಿಕವಾಗಿ ತೀರ್ಮಾನಿಸುವುದು. | * ಓದಿನಲ್ಲಿ ಅರ್ಥಗ್ರಹಿಕೆಯನ್ನು ಹೆಚ್ಚಿಸಿಕೊಳ್ಳುವುದು.<br>* ಆಲೋಚನಾಶಕ್ತಿಯನ್ನು ಬೆಳೆಸುವುದು.<br>* ಓದಿದ ವಿಷಯದ ಕಾರ್ಯಾಕಾರಣ ಸಂಬಂಧ ತಿಳಿಯುವುದು.<br>* ತರ್ಕಬದ್ಧವಾಗಿ ಯೋಚಿಸಲು ಪ್ರೇರೇಪಿಸುವುದು.<br>* ಖಚಿತ ತೀರ್ಮಾನಗಳನ್ನು ತೆಗೆದುಕೊಳ್ಳಲು ಅನುವಾಗುವುದು.<br>* ಆಲೋಚಿಸಿ ತೀರ್ಮಾನ ತೆಗೆದುಕೊಳ್ಳುವ ಕೌಶಲವನ್ನು ವೃದ್ಧಿಸುವುದು. | * ಆಲೋಚನಾಶಕ್ತಿಗೆ ಇಂಬು ನೀಡುವ ಪದ್ಯಪಾಠ.<br>* ಬೆಡಗಿನ ವಚನಗಳು<br>* ೧೪ ರಿಂದ ೧೫ ವಚನ<br>* ಇತ್ತೀಚಿನ ವಚನಕಾರರ ಕೃತಿ<br>* ಆಲೋಚನೆಗೆ, ತರ್ಕಕ್ಕೆ ಅವಕಾಶಗಳಿರುವ ಅಂಶಗಳಿರಲಿ.<br>* ಪದ್ಯಪಾಠ | * ವಚನಗಳನ್ನು ಅರ್ಥವತ್ತಾಗಿ ವಾಚಿಸುವುದು.<br>* ವಚನಗಳು ಪ್ರತಿಬಿಂಬಿಸುವ ಉತ್ತರವನ್ನು ಹುಡುಕುವುದು.<br>* ಆಲೋಚಿಸಿ ಅರ್ಥಗ್ರಹಿಕೆಗೆ ಅವಕಾಶ ಒದಗಿಸುವುದು.<br>* ತರ್ಕಿಸಿ ತೀರ್ಮಾನಕ್ಕೆ ಬರುವ ಕುರಿತು ಮಾರ್ಗದರ್ಶನ ನೀಡುವುದು.<br>* ನಿಜಜೀವನದಲ್ಲಿಯ ಅಂಶಗಳಿಗೆ ತೀರ್ಮಾನ ಕುರಿತು ಚರ್ಚಿಸುವುದು.<br>* ತೀರ್ಮಾನಗಳನ್ನು ತೆಗೆದುಕೊಂಡು ಇತರರೊಂದಿಗೆ ಚರ್ಚಿಸುವುದು. | * ವಚನವನ್ನು ವಾಚಿಸಲು ಹೇಳಿ ವೀಕ್ಷಿಸುವುದು.<br>* ವಿಷಯದ ಗ್ರಹಿಕೆಯ ಕುರಿತು ಉತ್ತರ ಪಡೆಯುವುದು.<br>* ವಿಷಯದ ಬಗ್ಗೆ ಆಲೋಚಿಸಿ ವಿವರಿಸಲು ಹೇಳುವುದು.<br>* ತಾರ್ಕಿಕ ಚಿಂತನೆಗಳನ್ನು ಹೇಳಿಸುವುದು.<br>* ವಿಷಯದ ಮೇಲಿನ ತೀರ್ಮಾನಗಳನ್ನು ಕೇಳಿ ಪಡೆಯುವುದು.<br>* ತೀರ್ಮಾನ ತೆಗೆದುಕೊಂಡಿದ್ದರ ಕುರಿತು ಸ್ಪಷ್ಟನೆ ಕೇಳಿ ಪಡೆಯುವುದು.<br>* ಸನ್ನಿವೇಶ / ಘಟನೆ / ಸನ್ನಿವೇಶ ಒದಗಿಸಿ ತೀರ್ಮಾನ ತೆಗೆದುಕೊಳ್ಳುವುದು.<br>* ಸಾಮಾಜಿಕ ಕಳಕಳಿಯ ವಚನಗಳನ್ನು ಸಂಗ್ರಹಿಸಿ ಓದಲು ಹೇಳಿ ಪರೀಕ್ಷಿಸಿ.<br><br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 5. | * ೩.೪.೫ ಸುಮಾರು ೬೦೦೦ ಪದಗಳನ್ನು ಸ್ವತಂತ್ರ ವಾಗಿ ಓದಿ ಗ್ರಹಿಸುವುದು. | * ಪದಸಂಪತ್ತನ್ನು ಹೆಚ್ಚಿಸುವುದು.<br>* ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸುವುದು.<br>* ಸ್ವತಂತ್ರವಾಗಿ ಓದುವ ಕೌಶಲವನ್ನು ಹೆಚ್ಚಿಸುವುದು.<br>* ಗ್ರಹಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದು. | * ಪರಿಚಿತ ಹಾಗೂ ಅಪರಿಚಿತ ಪದಗಳನ್ನು ಒಳಗೊಂಡಿರಲಿ.<br>* ಭಾವಗೀತೆ<br>* ಪ್ರಸಿದ್ಧ ಕವಿಗಳ ಕೃತಿ<br>* ೧೨ ರಿಂದ ೧೬ ಸಾಲು<br>* ಪದ್ಯಪಾಠ | * ಪದ್ಯವನ್ನು ಸ್ಪಷ್ಟವಾಗಿ ವಾಚಿಸುವುದು.<br>* ಪದಗಳ ಅರ್ಥವನ್ನು ವಿವರಿಸುವುದು.<br>* ಓದಲು ಅವಕಾಶ ನೀಡಿ ಗ್ರಹಿಸಿದ ಅಂಶಗಳನ್ನು ಕೇಳಿ ಪಡೆಯುವುದು.<br>* ಪೂರಕಸಾಹಿತ್ಯವನ್ನು ಬಿಂಬಿಸುವುದು.<br>* ವಾಚನಾಲಯದ ಬಳಕೆ ಮಾಡಿಕೊಳ್ಳುವುದು.<br>* ಓದಿನ ಮಹತ್ವವನ್ನು ವಿಶ್ಲೇಷಿಸುವುದು. | * ಪದ್ಯವನ್ನು ವಾಚಿಸಲು ಹೇಳಿ ವೀಕ್ಷಿಸುವುದು.<br>* ಪದಗಳ ಅರ್ಥ ಹೇಳಿಸುವುದು.<br>* ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಲು ಹೇಳುವುದು.<br>* ಕಿರುಟಿಪ್ಪಣಿ ಬರೆಸಿ ಪರಿಶೀಲಿಸುವುದು.<br>* ವಾಚಕಗಳನ್ನು ನೀಡಿ ಅರ್ಥ ವಿವರಣೆ ಪಡೆಯುವುದು.<br>* ಓದಿದ ದೈನಂದಿನ ವಿಷಯಗಳ ಕುರಿತು ಮಾಹಿತಿ ಪಡೆಯುವುದು.<br><br>**(ಅವಧಿ : ೭)** |

**ಬರೆಯುವುದು**

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 1. | * ಪದಪುಂಜ, ನುಡಿಗಟ್ಟು ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸುವುದು ಹಾಗೂ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯುವುದು. | * ಪದಪುಂಜ ಮತ್ತು ನುಡಿಗಟ್ಟು ಪದಗಳನ್ನು ಗ್ರಹಿಸಿ, ವಾಕ್ಯರಚನೆಯಲ್ಲಿ ಬಳಸುವುದು.<br>* ಗಾದೆಮಾತುಗಳನ್ನು ಸೂಕ್ತ ಸಂದರ್ಭಗಳಲ್ಲಿ ಬಳಸುವುದು ಮತ್ತು ವಿಸ್ತರಿಸಿ ಬರೆಯುವುದು.<br>* ವಾಕ್ಯರಚನೆಯನ್ನು ಶ್ರೀಮಂತಗೊಳಿಸಲು ಪ್ರೋತ್ಸಾಹಿಸುವುದು. | * ಜಾನಪದ ಕಥೆ<br>* ಕಥೆಯಲ್ಲಿ ಸಾಧ್ಯವಾದಷ್ಟು ಪದಪುಂಜ, ನುಡಿಗಟ್ಟು, ಗಾದೆಮಾತುಗಳ ಬಳಕೆ ಇರಲಿ.<br>* ಸಂಭಾಷಣೆ ಮಾದರಿಯಲ್ಲಿ ಗದ್ಯ ಇದ್ದರೆ ಒಳಿತು.<br>* ಗದ್ಯಪಾಠ. | * ಗದ್ಯಭಾಗವನ್ನು ಓದಿ ಅಲ್ಲಿರುವ ಪಠ್ಯಾಂಶವನ್ನು ಅರ್ಥೈಸುವುದು<br>* ಪಠ್ಯದಲ್ಲಿ ಬಂದಿರುವ ಪದಪುಂಜ, ನುಡಿಗಟ್ಟು ಮತ್ತು ಗಾದೆಮಾತುಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಅರ್ಥ ವಿವರಣೆ ನೀಡುವುದು ಮತ್ತು ಮಕ್ಕಳಿಂದ ನಕಲು ಮಾಡಿಸುವುದು.<br>* ಇವುಗಳನ್ನು ಬಳಸಿ ವಾಕ್ಯ ರಚನೆ ಮಾಡಿ ಹೇಳಿ.<br>* ಗಾದೆಗಳನ್ನು ವಿಸ್ತರಿಸಿ ಅದರ ಮಹತ್ವವನ್ನು ತಿಳಿಸಿ. | * ಪಠ್ಯಾಧಾರಿತ ಮೌಲ್ಯಮಾಪನ ಮಾಡಿ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು.<br>* ಮಗುವಿಗೆ ತಿಳಿದಿರುವ ನುಡಿಗಟ್ಟು ಪದಗಳನ್ನು ಹೇಳಿಸುವುದು ಮತ್ತು ವಾಕ್ಯ ರಚನೆಯಲ್ಲಿ ಬಳಸಿ ಬರೆಸುವುದು.<br>* ಗಾದೆಮಾತುಗಳನ್ನು ಹೇಳಿಸುವುದು ಮತ್ತು ವಿಸ್ತರಿಸಿ ಬರೆಸುವುದು.<br>* ಗಾದೆ ಮತ್ತು ನುಡಿಗಟ್ಟಿನ ಬಳಕೆಯ ಮಹತ್ವವನ್ನು ವಿವರಿಸಲು ತಿಳಿಸುವುದು.<br>**(ಅವಧಿ : ೧೦)** |
| 2. | * ಪಾಠದಲ್ಲಿ ಬರುವ ವಿಚಾರಗಳನ್ನು ಕಥೆ, ಸಂಭಾಷಣೆ, ಸಾರಾಂಶ ರೂಪದಲ್ಲಿ ಬರೆಯುವುದು. | * ಅರ್ಥೈಸಿಕೊಂಡ ವಿಚಾರಗಳನ್ನು ಕಥೆ, ಸಂಭಾಷಣೆ, ಸಾರಾಂಶ ರೂಪದಲ್ಲಿ ಬರೆಯುವುದು.<br>* ಸಾಹಿತ್ಯದ ವಿವಿಧ ಪ್ರಕಾರಗಳ ಬಗೆಗೆ ಆಸಕ್ತಿ ಬೆಳೆಸುವುದು.<br>* ಸೃಜನಾತ್ಮಕ ಬರೆವಣಿಗೆಗೆ ಪ್ರೇರಣೆ ನೀಡುವುದು. | * ಐತಿಹಾಸಿಕ ಘಟನೆಗಳನ್ನೊಳಗೊಂಡ ಲಾವಣಿ ಕಥೆ.<br>ಉದಾ :<br>ಸಂಗೊಳ್ಳಿ ರಾಯಣ್ಣ ಎಚ್ಚಮನಾಯಕ, ಒನಕೆ ಓಬವ್ವ, ಝಾನ್ಸಿರಾಣಿ ಲಕ್ಷ್ಮಿಬಾಯಿ, ಪಿರಿಯಾಪಟ್ಟಣದ ಕಾಳಗ ಇತ್ಯಾದಿ<br>* ಪದ್ಯಪಾಠ | * ಪಠ್ಯದಲ್ಲಿ ನೀಡಿದ ವಿಚಾರಗಳನ್ನು ಅರ್ಥೈಸುವುದು.<br>* ಆಲಿಸಿದ ವಿಚಾರಗಳನ್ನು ಕಥೆ, ಸಂಭಾಷಣೆ, ಸಾರಾಂಶ ರೂಪದಲ್ಲಿ ಬರೆಯುವ ಕ್ರಮವನ್ನು ಹೇಳಿಕೊಡುವುದು.<br>* ಬೇರೆ ಪದ್ಯ,ಗದ್ಯಗಳನ್ನು ಬೇರೆಬೇರೆ ಪ್ರಕಾರಗಳಲ್ಲಿ ಬರೆಯುವ ಕ್ರಮವನ್ನು ಹೇಳಿಕೊಡುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ವಿದ್ಯಾರ್ಥಿಗಳಿಗೆ ತಿಳಿದ ಕಥೆಗಳನ್ನು ಸಂಭಾಷಣಾ ರೂಪದಲ್ಲೂ ಸಂಭಾಷಣಾ ರೂಪದಲ್ಲಿರುವ ವಿಚಾರವನ್ನು ಕಥೆ ಅಥವಾ ಸಾರಾಂಶ ರೂಪದಲ್ಲೂ ಬರೆಸುವುದು.<br>* ಐತಿಹಾಸಿಕ ವಿಚಾರವನ್ನು ಅರಿಯುವುದರಿಂದಾಗುವ ಉಪಯೋಗದ ಬಗೆಗೆ ಮಾತನಾಡಲು ಹೇಳುವುದು.<br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 3. | * ಆಲಿಸಿದ ಮತ್ತು ಓದಿದ ವಿಷಯುವನ್ನು ಸೂಕ್ತ ಲೇಖನಚಿಹ್ನೆಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳಲ್ಲಿ ಬರೆಯುವುದು. | * ಬಳಸುವ ಲೇಖನಚಿಹ್ನೆ ಗಳ ಉಪಯುಕ್ತತೆಯನ್ನು ಅರಿಯುವುದು.<br>* ಕೊಟ್ಟ ವಾಕ್ಯಗಳಿಗೆ ಸೂಕ್ತ ಲೇಖನಚಿಹ್ನೆಗಳನ್ನು ಹಾಕುವ ಕೌಶಲ ಬೆಳೆಸುವುದು.<br>* ಸ್ವತಂತ್ರವಾಗಿ ಬರೆಯುವಾಗ ಅರ್ಥಪೂರ್ಣ ವಾಕ್ಯಗಳನ್ನಾಗಿ ಮಾಡಲು ಲೇಖನ ಚಿಹ್ನೆಗಳನ್ನು ಬಳಸುವುದು. | * ಸಂವಾದ ರೂಪದದಲ್ಲಿರಲಿ.<br>* ಹೆಚ್ಚು ಬಳಕೆಯಲ್ಲಿರುವ ಲೇಖನಚಿಹ್ನೆಗಳನ್ನು ಬಳಸುವುದು.<br>* ಹೆಚ್ಚು ಲೇಖನ ಚಿಹ್ನೆ ಬಳಕೆಯಾಗಿರುವ ಗದ್ಯಪಾಠ. | * ಪಠ್ಯದಲ್ಲಿರುವ ಲೇಖನ ಚಿಹ್ನೆಗಳನ್ನು ಹೆಸರಿಸುವುದು ಮತ್ತು ಬಳಸಿರುವ ಸಂದರ್ಭವನ್ನು ಅರ್ಥೈಸುವುದು.<br>* ಕೊಟ್ಟ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿಸುವ ಕೌಶಲ ಬೆಳೆಸುವುದು. | * ಲೇಖನಚಿಹ್ನೆಗಳ ಉಕ್ತ ಲೇಖನ ನೀಡುವುದು.<br>* ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ಸರಳವಾಕ್ಯಗಳನ್ನು ನೀಡಿ ಸೂಕ್ತ ಲೇಖನಚಿಹ್ನೆ ಹಾಕಿಸುವುದು.<br>* ಲೇಖನಚಿಹ್ನೆಗಳ ಬಳಕೆಯ ಪ್ರಾಮುಖ್ಯತೆಯ ಬಗೆಗೆ ಮಾತನಾಡಲು ಹೇಳಿ ಅವಲೋಕಿಸಿ.<br>(ಅವಧಿ : ೧೦) |
| 4. | * ವಿವಿಧ ನಮೂನೆಯ ಉಭಯಕುಶಲೋಪರಿ ಪತ್ರ ಮತ್ತು ಪ್ರವಾಸ ಲೇಖನಗಳನ್ನು ಬರೆಯುವುದು. | * ಪತ್ರ ಬರೆಯುವ ಅವಶ್ಯಕತೆಯನ್ನು ತಿಳಿಯುವುದು.<br>* ವಿವಿಧ ರೀತಿಯ ಪತ್ರಗಳನ್ನು ತಿಳಿಯುವುದು.<br>* ಯೋಗಕ್ಷೇಮ ಮತ್ತು ಪ್ರವಾಸದ ಅನುಭವ ಕುರಿತ ಲೇಖನಗಳನ್ನು ಬರೆಯುವ ಕ್ರಮವನ್ನು ಅರ್ಥೈಸುವುದು.<br>* ಸೃಜನಾತ್ಮಕ ಬರೆವಣಿಗೆಗೆ ಒತ್ತು ನೀಡುವುದು. | * ಪತ್ರಲೇಖನವಿರುವ ಗದ್ಯ.<br>* ಸ್ಥಳವನ್ನು ಕುರಿತು ಬರೆದ ಪ್ರವಾಸ ಲೇಖನ.<br>* ಗದ್ಯಪಾಠ. | * ಪಠ್ಯದಲ್ಲಿರುವ ಪ್ರವಾಸ ಲೇಖನವನ್ನು ಅರ್ಥೈಸುವುದು.<br>* ವಿವಿಧ ನಮೂನೆಯ ಪತ್ರಗಳನ್ನು ಬರೆಯುವ ಶೈಲಿಯನ್ನು ಕಲಿಸುವುದು.<br>* ಪತ್ರಲೇಖನ ಬರೆಯುವಾಗ ಬಳಸಬೇಕಾದ ಗೌರವ ಸೂಚಕ ಪದಗಳನ್ನು ತಿಳಿಸುವುದು. | * ಪಠ್ಯಾಧಾರಿತ ಮೌಲ್ಯಮಾಪನ ಮಾಡುವುದು.<br>* ವಿವಿಧ ಬಗೆಯ ಉಭಯ ಕುಶಲೋಪರಿ ಪತ್ರಗಳನ್ನು ಬರೆಸುವುದು.<br>* ಪತ್ರ ಬರೆಯುವ ವೈಖರಿಯನ್ನು ತಿಳಿಸಿಕೊಟ್ಟು ಪತ್ರ ಬರೆಯುವಂತೆ ತಿಳಿಸಿ ಪರೀಕ್ಷಿಸಿ.<br>(ಅವಧಿ : ೧೦) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| 5. | * ಸರಳ ಕ್ರಿಯಾತ್ಮಕ ವ್ಯಾಕರಣದ ನಿಯಮಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಬರೆವಣಿಗೆಯಲ್ಲಿ ಬಳಸುವುದು. | * ಪ್ರಾರಂಭದ ಗದ್ಯ/ಪದ್ಯಗಳ ಜತೆ–ಜತೆಯಾಗಿಯೇ ಸಾಂದರ್ಭಿಕ ಕ್ರಿಯಾತ್ಮಕ ಭಾಷಾಂಶದ ಒಂದೊಂದು ಅಂಶವನ್ನು ಅರ್ಥೈಸುವುದು.<br>* ಸಾಂದರ್ಭಿಕ ಕ್ರಿಯಾತ್ಮಕ ಭಾಷಾಂಶದ ನಿಯಮಗಳನ್ನು ಅರ್ಥೈಸಿಕೊಂಡು ಬರೆವಣಿಗೆಯಲ್ಲಿ ಬಳಸುವುದು. | * ವ್ಯಕ್ತಿ ಚಿತ್ರಣವಿರಲಿ.<br>* ಐದನೇ ತರಗತಿಯಲ್ಲಿ ನೀಡಿರುವ ಸಾಂದರ್ಭಿಕ ಕ್ರಿಯಾತ್ಮಕ ಭಾಷಾಂಶಗಳನ್ನು ಮುಂದುವರೆಸುವುದು.<br>* ಅವುಗಳ ಜತೆಗೆ ಸಂಧಿಗಳನ್ನು ಪರಿಚಯಿಸುವುದು. (ಒಂದೆರಡು ಸಂಧಿಗಳನ್ನು ಮಾತ್ರ)<br>* ಗದ್ಯಪಾಠ | * ಪ್ರತಿ ಪಠ್ಯವನ್ನು ಬೋಧಿಸುವ ಸಂದರ್ಭದಲ್ಲಿಯೇ ಗದ್ಯ / ಪದ್ಯ ಪಾಠದಲ್ಲಿ ನೀಡಿರುವ ಸಾಂದರ್ಭಿಕ ಕ್ರಿಯಾತ್ಮಕ ಭಾಷಾಂಶವನ್ನು ಅರ್ಥೈಸುವುದು.<br>* ಪ್ರತಿಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥೈಸಿ ಬರೆವಣಿಗೆಯಲ್ಲಿ ಬಳಸುವ ಕೌಶಲವನ್ನು ಬೆಳೆಸುವುದು. | * ಪ್ರತಿಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳಿಗೆ ಪೂರಕವಾಗಿ ಮೌಲ್ಯಮಾಪನ ಮಾಡುವುದು.<br>* ಉದಾಹರಣೆಗಳನ್ನು ನೀಡಿ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ಮೌಲ್ಯ ಮಾಪನ ಮಾಡುವುದು.<br>* ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶದ ವಿಶೇಷತೆಯನ್ನು ವಿವರಿಸಿ ಹೇಳಲು ತಿಳಿಸುವುದು.<br><br>(ಅವಧಿ : ೧೦) |

# ಪ್ರಥಮ ಭಾಷೆ – ಕನ್ನಡ ಪಠ್ಯವಸ್ತು

## ಏಳನೇ ತರಗತಿ

- ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ
- ಅವಧಿ ಹಂಚಿಕೆಯ ಪಟ್ಟಿ – ವಾರ್ಷಿಕ, ಪದ್ಯ–ಗದ್ಯ ಹಾಗೂ ಕ್ಷೇತ್ರವಾರು
- ಗದ್ಯ–ಪದ್ಯಗಳ ಅಪೇಕ್ಷಿತ ಲಕ್ಷಣ
- ಪಠ್ಯ ರಚನೆಗೆ ಸಾಮಾನ್ಯ ಸೂಚನೆ
- ಕ್ಷೇತ್ರವಾರು ಪಾಠಗಳ ವಿಂಗಡಣೆ ಹಾಗೂ ಅಪೇಕ್ಷಿತ ಸಾಹಿತ್ಯ ಪ್ರಕಾರಗಳ ವಿವರ
- ವ್ಯಾಕರಣಾಂಶ ವಿವರ
- ಕ್ರೋಢೀಕೃತ ಸಾಮರ್ಥ್ಯ ಪಟ್ಟಿ
- ಸಾಮರ್ಥ್ಯವಾರು ಪಠ್ಯವಸ್ತು

# ಪಠ್ಯವಸ್ತುವಿನ ಸಾಮಾನ್ಯ ರೂಪುರೇಷೆ

೧. ಪ್ರಸ್ತುತ ಪಠ್ಯವಸ್ತು ತಯಾರಿಸುವಾಗ ರಾಜ್ಯ ಪಠ್ಯಕ್ರಮ ೨೦೦೧-೨೦೦೨ ಮತ್ತು ಎನ್.ಸಿ.ಎಫ್. ೨೦೦೫ ಇವೆರಡನ್ನೂ ಗಮನಿಸಿದೆ

೨. ಮೂಲ ಕ.ಕ.ಮ. ಆಧಾರಿತ ಸಾಮರ್ಥ್ಯಗಳನ್ನು ಪ್ರಸ್ತುತ ಎನ್.ಸಿ.ಎಫ್ ೨೦೦೫ ರ ನೆಲೆಯಲ್ಲಿ ಪರಿಷ್ಕರಿಸಿದೆ

೩. ಪಠ್ಯವಸ್ತುವನ್ನು ಶಿಶುಕೇಂದ್ರಿತ, ಸಾಮರ್ಥ್ಯಾಧಾರಿತ, ಚಟುವಟಿಕೆ ಮತ್ತು ಸಂತಸದಾಯಕ ಸನ್ನಿವೇಶವನ್ನು ಆಧರಿಸಿ ರೂಪಿಸಿದೆ

೪. ಮಗುವಿನ ಮನೆ ಮತ್ತು ಸ್ಥಳೀಯ ಭಾಷೆಯನ್ನು ಯಥಾವತ್ತಾಗಿ ಸ್ವೀಕರಿಸಲು ಅವಕಾಶ ಕಲ್ಪಿಸಿದೆ

೫. ಮಗು ಶಾಲೆಯಲ್ಲಿ ಪಡೆದ ಜ್ಞಾನವನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ

೬. ರಾಷ್ಟ್ರೀಯಮೌಲ್ಯ ಮತ್ತು ಭಾವೈಕ್ಯತೆಗೆ ಸಂಬಂಧಿಸಿದ ಅಂಶಗಳನ್ನು ಪಠ್ಯವಸ್ತುವಿನಲ್ಲಿ ಅಳವಡಿಸಿದೆ

೭. ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಜೋಡಿಸಿದೆ

೮. ಪಠ್ಯವಸ್ತುವಿನಲ್ಲಿಯೇ ಮೌಲ್ಯಮಾಪನ ಹಾಗೂ ಪಠ್ಯದ ವಿಸ್ತಾರ ಎಷ್ಟಿರಬೇಕೆಂದು ವಿವರಿಸಿದೆ

೯. ಅವಧಿಯನ್ನು ನಿರ್ಧರಿಸಿ ಅದಕ್ಕೆ ತಕ್ಕಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೦. ಮಗು ಆಡುಭಾಷೆಯಿಂದ ಹಂತ ಹಂತವಾಗಿ ಗ್ರಾಂಥಿಕ ಭಾಷೆಯೆಡೆಗೆ ಸಾಗುವಂತೆ ಪಠ್ಯವಸ್ತುವನ್ನು ಸಿದ್ಧಗೊಳಿಸಿದೆ

೧೧. ಮಕ್ಕಳಲ್ಲಿ ರಾಷ್ಟ್ರ, ಸಮಾಜ, ವೃತ್ತಿ ಅಪೇಕ್ಷಿತ ಹಾಗೂ ನಿರೀಕ್ಷಿತ ಮೌಲ್ಯಗಳನ್ನು ಬೆಳೆಸಲು ಅವಕಾಶ ಮಾಡಿಕೊಟ್ಟಿದೆ

೧೨. ಭಾಷಾ ಅಭಿವೃದ್ಧಿಯೊಂದಿಗೆ ಭಾಷಾ ಕೌಶಲಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಕಲಿಕೆಯ ನಿರೀಕ್ಷಿತ ಫಲಗಳನ್ನು ಪರಿಗಣಿಸಿದೆ.

೧೩. ಶೈಕ್ಷಣಿಕ ಕ್ಷೇತ್ರದಲ್ಲಿನ ಹೊಸಹೊಸ ಸಂಶೋಧನೆ, ಪ್ರಯೋಗ ಮತ್ತು ನವೀಕರಣದ ಫಲಿತಾಂಶಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

೧೪. ಭಾಷಾವಿಜ್ಞಾನದ ತಳಹದಿಯ ಮೇಲೆ ರೂಪಿತವಾಗಿದ್ದರೂ ಪ್ರಾದೇಶಿಕ ಭಾಷಾ ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿದೆ

೧೫. ರಾಷ್ಟ್ರೀಯ ಶಿಕ್ಷಣನೀತಿ ೧೯೮೬ರಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವವಿಕಸನದ ಅಗತ್ಯತೆಯ ತತ್ತ್ವಗಳನ್ನಾಧರಿಸಿ ಪಠ್ಯವಸ್ತುವನ್ನು ತಯಾರಿಸಿದೆ

೧೬. ನಗರ ಮತ್ತು ಗ್ರಾಮಾಂತರ ಶೈಕ್ಷಣಿಕ ಅಂತರವನ್ನು ಕಡಿಮೆಗೊಳಿಸಲು ಹೆಚ್ಚು ಒತ್ತುನೀಡಿದೆ. ಮಕ್ಕಳ ಮನೋವಿಕಾಸ ಭೂಮಿಕೆಗೂ ಸಮಾನ ಪ್ರಾತಿನಿಧ್ಯ ನೀಡಿದೆ

೧೭. ಪರಿಣಾಮಕಾರಿ ಕಲಿಕೆಯಲ್ಲಿ, ಚಟುವಟಿಕೆ ಮತ್ತು ಇನ್ನಿತರ ಸಮಗ್ರ ವಿಧಾನಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ

# ಅವಧಿ ಹಂಚಿಕೆ ಕೋಷ್ಠಕ

* ಶಾಲಾ ಕೆಲಸದ ದಿನಗಳು : ೨೧೦

ವಾರದಲ್ಲಿ ಲಭ್ಯವಾಗುವ ಅವಧಿ :೦೭ ವಾರ್ಷಿಕವಾಗಿ ವಿವಿಧ ಅಂಶಗಳಿಗೆ ಅವಧಿ ಹಂಚಿಕೆ

| ಕ್ರ.ಸಂ. | ವಿವರ | ಅವಧಿ |
|---|---|---|
| ೧. | ಸೇತುಬಂಧ (ಮೊದಲನೆ ಚತುರ್ಮಾಸ) | ೧೮ |
| ೨. | ಪುನರ್ಬಲನ (ಎರಡನೆ ಚತುರ್ಮಾಸ) | ೧೫ |
| ೩. | ಕಿರುಪರೀಕ್ಷೆ | ೦೪ |
| ೪. | ಚತುರ್ಮಾಸ ಮೌಲ್ಯಮಾಪನ (ನಂತರ ಸಮಾಲೋಚನೆ ಸೇರಿ) | ೦೮ |
| ೫. | ಯೋಜನೆ | ೦೮ |
| ೬. | ಪರಿಹಾರ ಬೋಧನೆ (ಪ್ರತಿ ಸಾಮರ್ಥ್ಯಕ್ಕೆ ೦೨ ರಂತೆ) | ೩೬ |
| ೭. | ಬೋಧನೆ | ೧೫೬ |
| | ಒಟ್ಟು | ೨೪೫ |

### ಸಾಮರ್ಥ್ಯವಾರು ಅವಧಿ ಹಂಚಿಕೆ

| ಕ್ಷೇತ್ರ | ಗದ್ಯ | | ಪದ್ಯ | | ಒಟ್ಟು |
|---|---|---|---|---|---|
| | ಸಾಮರ್ಥ್ಯ | ಅವಧಿ | ಸಾಮರ್ಥ್ಯ | ಅವಧಿ | ಅವಧಿ |
| ಆಲಿಸುವುದು | ೦೨ | ೨೦ | ೦೨ | ೧೪ | ೩೪ |
| ಮಾತನಾಡುವುದು | ೦೩ | ೩೦ | ೦೧ | ೦೭ | ೩೭ |
| ಓದುವುದು | ೦೨ | ೨೦ | ೦೩ | ೨೧ | ೪೧ |
| ಬರೆಯುವುದು | ೦೩ | ೩೦ | ೦೨ | ೧೪ | ೪೪ |
| ಒಟ್ಟು | ೧೦ | ೧೦೦ | ೦೮ | ೫೬ | ೧೫೬ |

### ಬೋಧನಾ ಅವಧಿ ಹಂಚಿಕೆ

| ಹಂತ | ಪೂರ್ವಸಿದ್ಧತೆ | ಕಲಿಕಾಂಶ | ಅಭ್ಯಾಸ ಅನ್ವಯ | ಮೌಲ್ಯಮಾಪನ | ಒಟ್ಟು |
|---|---|---|---|---|---|
| ಗದ್ಯ | ೦೧ | ೦೪ | ೦೩ | ೦೨ | ೧೦ |
| ಪದ್ಯ | ೦೧ | ೦೩ | ೦೨ | ೦೧ | ೦೭ |

### ಚತುರ್ಮಾಸವಾರು ಪದ–ಗದ್ಯಪಾಠ ಮತ್ತು ಅವಧಿ ಹಂಚಿಕೆ

| ಚತುರ್ಮಾಸ | ಸಾಮರ್ಥ್ಯ | ಶೇಕಡಾ | ಗದ್ಯ | ಪದ್ಯ | ಅವಧಿ |
|---|---|---|---|---|---|
| ಮೊದಲನೆ | ೦೮ | ೪೫% | ೦೫ | ೦೩ | ೭೧ |
| ಎರಡನೆ | ೧೦ | ೫೫% | ೦೫ | ೦೫ | ೮೫ |
| ಒಟ್ಟು | ೧೮ | ೧೦೦% | ೧೦ | ೦೮ | ೧೫೬ |

* ಪ್ರತಿ ಗದ್ಯಪಾಠಕ್ಕೆ ೧೦ ಅವಧಿಯಂತೆ – ೧೦೦
* ಪ್ರತಿ ಪದ್ಯಪಾಠಕ್ಕೆ ೦೭ ಅವಧಿಯಂತೆ – ೫೬

ಒಟ್ಟು – ೧೫೬ ಅವಧಿ

# ಗದ್ಯ–ಪದ್ಯಗಳ ಲಕ್ಷಣಗಳು

* **ಪಠ್ಯವಸ್ತುವಿನಲ್ಲಿ ಸೂಚಿಸಿದ ವಿವರಗಳನ್ನು ಗಮನಿಸುವುದು–**

**ಗದ್ಯಪಾಠ**

☞ ಮಗುವಿನ ಹಂತಕ್ಕೆ ಮೀರದ ಪದಗಳಿರಲಿ
☞ ನಿತ್ಯಜೀವನಕ್ಕೆ ಅನ್ವಯವಾಗುವುದಕ್ಕೆ ಅವಕಾಶವಿರಲಿ
☞ ಉತ್ತಮ ಹವ್ಯಾಸಗಳನ್ನು ಬೆಳೆಸಲು ಪ್ರೇರೇಪಿಸುವಂತಿರಲಿ
☞ ಪೂರಕ ಸಾಹಿತ್ಯವನ್ನು ಓದಲು ಸೂಚಿಸುವಂತಿರಲಿ
☞ ಸಾಧ್ಯವಾದಷ್ಟು ವಿಭಿನ್ನ ಸಾಹಿತ್ಯ ಪ್ರಕಾರಗಳಿರಲಿ

**ಪದ್ಯಪಾಠ**

☞ ಲಯಬದ್ಧ ಪದ್ಯಗಳಿರಲಿ
☞ ಹಾಡಲು ಸಾಧ್ಯವಾಗುವಂತಿರಲಿ
☞ ಜನಪ್ರಿಯ ಪದ್ಯಗಳಿಗೆ ಅವಕಾಶವಿರಲಿ
☞ ಸಾಹಿತ್ಯದ ವಿವಿಧ ಪ್ರಕಾರದ ಪದ್ಯಗಳಿರಲಿ
☞ ಕವಿಯ–ಆಶಯವನ್ನು ಸರಳವಾಗಿ ಪ್ರತಿಬಂಬಿಸುವಂತಹ ಪದ್ಯಗಳಿರಲಿ
☞ ಮಕ್ಕಳ ಅನುಭವಕ್ಕೆ, ಕಲ್ಪನೆಗೆ ಹತ್ತಿರವಿರುವ ಸಮನ್ವಯವಾಗುವ ವಿಷಯ ವಸ್ತುವನ್ನು ಹೊಂದಿರಲಿ

**ಪಠ್ಯರಚನೆಗೆ – ಸಾಮಾನ್ಯ ಸೂಚನೆ**

* **ಪಾಠದ ಆರಂಭದಲ್ಲಿ ಇರಬೇಕಾದ ಅಂಶ**
    * ಪಾಠದ ಪ್ರಧಾನ ಆಶಯ
    * ಪ್ರಧಾನ ಸಾಮರ್ಥ್ಯ
    * ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ
* **ಚಿತ್ರಗಳು**
    * ಅರ್ಧಪುಟಕ್ಕೆ ಬರುವ ಚಿತ್ರಗಳಿರಲಿ
      ಗದ್ಯಪಾಠ : ಕನಿಷ್ಠ ೦೨ ಚಿತ್ರ
      ಪದ್ಯಪಾಠ : ಕನಿಷ್ಠ ೦೧ ಚಿತ್ರ
    * ಪುಟದಲ್ಲಿ ೧/೪ ಭಾಗಕ್ಕೆ ಬರುವ ಚಿತ್ರಗಳಾದರೆ
      ಗದ್ಯಪಾಠ : ಕನಿಷ್ಠ ೦೩ ಚಿತ್ರ
      ಪದ್ಯಪಾಠ : ಕನಿಷ್ಠ ೦೪ ಚಿತ್ರ
    * ಕವಿ – ಲೇಖಕರ ಪರಿಚಯ
      ಪಾಠದ ಆರಂಭದಲ್ಲಿ ಚಿತ್ರಸಹಿತ
      ಸಾಮಾನ್ಯ ಪರಿಚಯವಿರಲಿ

* **ಗಾತ್ರ – ವ್ಯಾಪ್ತಿ**
  ಗದ್ಯಪಾಠ : ೩೫೦ ರಿಂದ ೪೦೦ ಪದಗಳು
  ಪದ್ಯಪಾಠ : ಪಠ್ಯವಸ್ತು ವಿವರಣೆಯಲ್ಲಿ ನೀಡಿದೆ
* **ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ**
    * ೬ನೆ ತರಗತಿಯಲ್ಲಿ ಕೊಟ್ಟಿರುವ ಅಂಶಗಳನ್ನು ಗಮನಿಸುವುದು
    * ಕ್ರಿಯಾತ್ಮಕ ಭಾಷಾಂಶ ಪಟ್ಟಿಯನ್ನು ಗಮನಿಸಿ ಪಾಠ / ಸಾಮರ್ಥ್ಯಗಳಿಗೆ ಅನ್ವಯಿಸಿ ನೀಡುವುದು
    * ಸಾಮಾನ್ಯ (ಹಿಂದಿನ ತರಗತಿಯಲ್ಲಿ ಪರಿಚಿತ) ಅಂಶಗಳನ್ನು ಒಂದಕ್ಕಿಂತ ಹೆಚ್ಚು ಪಾಠಗಳ ಭಾಷಾಭ್ಯಾಸಗಳಲ್ಲಿ ನೀಡುವುದು
* **ಮೌಲ್ಯಮಾಪನ ಚಟುವಟಿಕೆ**
    * ಪ್ರಧಾನ ಸಾಮರ್ಥ್ಯವನ್ನು ದೃಷ್ಟಿಯಲ್ಲಿಟ್ಟುಕೊಳ್ಳುವುದು
    * ಇತರ ಸಾಮರ್ಥ್ಯಗಳ ಕುರಿತಾದ ಮೌಲ್ಯಮಾಪನ ಅಪೇಕ್ಷಣೀಯ
    * ಭಾಷಾ ಚಟುವಟಿಕೆಗಳು ಇರಲಿ
    * ಮೌಖಿಕ–ಲಿಖಿತ ವಿಭಾಗಕ್ಕೆ ಅವಕಾಶವಿರಲಿ
    * ಹೆಚ್ಚಿನ ಅಭ್ಯಾಸಕ್ಕಾಗಿ ಮಾಹಿತಿ ಇರಲಿ
    * ಹೊಸ ಪದಗಳ ಪರಿಚಯ ಮಾದರಿ ವಾಕ್ಯಗಳ ಸಮೇತ ಇರಲಿ

## ಕ್ಷೇತ್ರವಾರು ಪಾಠಗಳ ವಿಂಗಡಣೆ ಹಾಗೂ ಅಪೇಕ್ಷಿತ ಸಾಹಿತ್ಯ ಪ್ರಕಾರಗಳ ವಿವರ

| ಕ್ರ.ಸಂ. | ಗದ್ಯಪಾಠ | ಕ್ಷೇತ್ರ | ಸಾಮರ್ಥ್ಯ ಸಂಖ್ಯೆ |
|---|---|---|---|
| ೧. | ಪ್ರವಾಸಕಥನ | ಆಲಿಸುವುದು | ೧.೭.೨ |
| ೨. | ನಾಟಕ | ಆಲಿಸುವುದು | ೧.೭.೩ |
| ೩. | ಸಾಮಾಜಿಕ ಸಮಸ್ಯೆ | ಮಾತನಾಡುವುದು | ೨.೭.೧ |
| ೪. | ಐತಿಹಾಸಿಕ ಸನ್ನಿವೇಶ, ಘಟನೆ | ಮಾತನಾಡುವುದು | ೨.೭.೨. |
| ೫. | ನಾಯಕತ್ವ ಬೆಳೆವಣಿಗೆ | ಮಾತನಾಡುವುದು | ೨.೭.೩ |
| ೬. | ಆಡುಭಾಷೆಯ ಬಳಕೆ | ಓದುವುದು | ೩.೭.೧ |
| ೭. | ಸಾಹಿತ್ಯಾಭಿರುಚಿ ಬೆಳೆಸುವುದು | ಓದುವುದು | ೩.೭.೫ |
| ೮. | ಹಾಸ್ಯಸಾಹಿತ್ಯ | ಬರೆಯುವುದು | ೪.೭.೧ |
| ೯. | ನಾಡು–ನುಡಿಯ ಸೊಬಗು | ಬರೆಯುವುದು | ೪.೭.೩ |
| ೧೦. | ಜನಪದ ಕಥೆ | ಬರೆಯುವುದು | ೪.೭.೪ |

| ಕ್ರ.ಸಂ. | ಪದ್ಯಪಾಠ | ಕ್ಷೇತ್ರ | ಸಾಮರ್ಥ್ಯ ಸಂಖ್ಯೆ |
|---|---|---|---|
| ೧. | ನಾಡು–ನುಡಿ ಪದ್ಯ | ಆಲಿಸುವುದು | ೧.೭.೧ |
| ೨. | ವಚನಸಾಹಿತ್ಯ | ಆಲಿಸುವುದು | ೧.೭.೪ |
| ೩. | ಜನಪದಗೀತೆ | ಮಾತನಾಡುವುದು | ೨.೭.೪ |
| ೪. | ಭಾವಗೀತೆ | ಓದುವುದು | ೩.೭.೨ |
| ೫. | ದಾಸಸಾಹಿತ್ಯ | ಓದುವುದು | ೩.೭.೩ |
| ೬. | ಷಟ್ಪದಿ | ಓದುವುದು | ೩.೭.೪ |
| ೭. | ಕಲ್ಪನಾತ್ಮಕಗೀತೆ | ಬರೆಯುವುದು | ೪.೭.೨ |
| ೮. | ನಡುಗನ್ನಡಗೀತೆ | ಬರೆಯುವುದು | ೪.೭.೫ |

## ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ

*** ಪ್ರಧಾನ ಅಂಶ**

- ವರ್ಣಮಾಲೆ
- ಕತೃ – ಕರ್ಮ – ಕ್ರಿಯಾಪದ
- ನಾಮಪದ
- ಸಂಧಿ
- ಭಿನ್ನಾರ್ಥಕ – ನಾನಾರ್ಥಕ ಪದಗಳು
- ಸಮಾಸ
- ನುಡಿಗಟ್ಟು – ಗಾದೆ
- ದ್ವಿರುಕ್ತಿ
- ಧಾತು ಗುರುತಿಸುವುದು
- ಅಲಂಕಾರ
- ಮಾತ್ರಾಗಣ । ಅಂಶಗಣ
- ಛಂದಸ್ಸು

*** ಹಿಂದಿನ ತರಗತಿಯಿಂದ ಮುಂದುವರೆದ ಅಂಶ**

- ಲಿಂಗ
- ನಾಮಪದ
- ಸಮಾನಾರ್ಥಕ ಪದ
- ವಿರುದ್ಧಾರ್ಥಕ ಪದ
- ವಿಭಕ್ತಿಪ್ರತ್ಯಯ
- ಲೇಖನಚಿಹ್ನೆ
- ಜೋಡು–ನುಡಿ
- ಆಡುನುಡಿ – ಗ್ರಂಥಭಾಷೆ
- ವಾಕ್ಯಪ್ರಯೋಗ

**ಸೂಚನೆ**

☞ ಸಂಬಂಧಿಸಿದ ಪಾಠಗಳಿಗೆ ಅನ್ವಯವಾಗುವಂತೆ ನೀಡುವುದು.

☞ ಸಮಾಸದಂತಹ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶವನ್ನು ಎರಡು–ಮೂರು ಪಾಠಗಳಲ್ಲಿ ನೀಡುವುದು.

☞ ಸಾಮರ್ಥ್ಯಗಳನ್ನು ಗಮನಿಸಿ ಸಂಬಂಧಿಸಿದ ಸಾಮರ್ಥ್ಯಕ್ಕೆ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶವನ್ನು ಹೊಂದಾಣಿಕೆ ಮಾಡುವುದು.

**ಕ್ರೋಡೀಕೃತ ಸಾಮರ್ಥ್ಯ ವಿವರ ಪಟ್ಟಿ** **ತರಗತಿ : ೭**

| ಆಲಿಸುವ ಕ್ಷೇತ್ರ | ಮಾತನಾಡುವ ಕ್ಷೇತ್ರ | ಓದುವ ಕ್ಷೇತ್ರ | ಬರೆಯುವ ಕ್ಷೇತ್ರ |
|---|---|---|---|
| * ಕವಿತೆ, ಕಥೆ, ನಾಟಕ, ಪ್ರಬಂಧ, ಪ್ರಹಸನ ಮತ್ತು ವಿಚಾರಗೋಷ್ಠಿಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು. | * ವಿಷಯಾನುಸಾರ ಸಹಜ ಚರ್ಚೆ, ಸಂವಾದ, ವಿವರಣೆಗಳೊಂದಿಗೆ ಮಾತನಾಡುವುದು. | * ವಿವಿಧ ಪದಗಳ ಉಚ್ಚಾರಣೆಯಲ್ಲಿರುವ ಧ್ವನಿಸಾಮ್ಯತೆ ಮತ್ತು ಧ್ವನಿ ವ್ಯತ್ಯಾಸಗಳನ್ನು ಅರ್ಥಮಾಡಿ ಕೊಂಡು ಓದುವುದು. | * ಸಮಾನಾರ್ಥಕ ಮತ್ತು ಭಿನ್ನಾರ್ಥಕ ಪದ ಮತ್ತು ಪದಪುಂಜಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸುವುದು. |
| * ಅಪರಿಚಿತದ ಸನ್ನಿವೇಶದ ಘಟನೆ ಗಳನ್ನು ಆಲಿಸಿ ಅರ್ಥಮಾಡಿಕೊಂಡು ಅಭಿನಯಿಸುವುದು. | * ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿರರ್ಗಳ ಹಾಗೂ ಸ್ಪಷ್ಟವಾಗಿ ಮಾತನಾಡುವುದು. | * ಓದಿದ ವಿಷಯಗಳ ಬಗ್ಗೆ ಆಲೋಚಿಸಿ ತಾರ್ಕಿಕವಾಗಿ ತೀರ್ಮಾನಿಸುವುದು. | * ಕಥೆಗಳನ್ನು ನಾಟಕಗಳನ್ನಾಗಿ, ನಾಟಕ ಗಳನ್ನು ಕಥೆಗಳನ್ನಾಗಿ ಪರಿವರ್ತಿಸುವ ಹಾಗೂ ಕವಿತೆಗಳಿಗೆ ಸಾರಾಂಶ ಬರೆ ಯುವ ಸೃಜನಾತ್ಮಕತೆಯನ್ನು ಬೆಳೆಸುವುದು. |
| * ಗುಂಪು ಚಟುವಟಿಕೆಗಳ ನಿರ್ದೇಶನ ಗಳನ್ನು ಆಲಿಸಿ, ಅರ್ಥಮಾಡಿ ಕೊಂಡು ಆಂಗಿಕವಾಗಿ ಪ್ರತಿಕ್ರಿಯಿಸುವುದು. | * ಸಮಾರಂಭದ ಕಾರ್ಯಕ್ರಮಗಳನ್ನು ನಿರೂಪಣೆಮಾಡುವುದು. | * ಮುದ್ರಿತ ಪಠ್ಯೇತರ ವಿಷಯ ಮತ್ತು ಕೈಬರೆಹಗಳನ್ನು ಓದಿ ಕೇಳಿದ ಪ್ರಶ್ನೆ ಗಳಿಗೆ ಉತ್ತರಿಸುವುದು. | * ಪ್ರಬಂಧ, ಕಥೆ, ಕವಿತೆ, ಪತ್ರ, ಟಿಪ್ಪಣಿ, ಗಾದೆ ವಿಸ್ತರಣೆ ಮುಂತಾದುವನ್ನು ಸೂಕ್ತ ಲೇಖನಚಿಹ್ನೆಗಳೊಂದಿಗೆ ಸಮರ್ಥ ರೀತಿಯಲ್ಲಿ ಬರೆಯುವುದು. |
| * ವಿಷಯವನ್ನು ಆಲಿಸಿದ ಬಳಿಕ ಏಕೆ? ಹೇಗೆ ? ಹಾಗಾದರೆ ? ಹಾಗಾಗ ದಿದ್ದರೆ ? – ಪ್ರಶ್ನೆಗಳಿಗೆ ಕಾರಣ ಸಹಿತ ವಿಶ್ಲೇಷಿಸುವುದು. | * ನಾಣ್ಣುಡಿ, ನುಡಿಗಟ್ಟು ಮತ್ತು ಗಾದೆಗಳನ್ನು ಬಳಸಿ ಮಾತನಾಡುವುದು. | * ಲೇಖನಚಿಹ್ನೆ ಮತ್ತು ಛಂದೋ ವಿನ್ಯಾಸಗಳನ್ನು ಅರಿತು ಓದುವುದು, | * ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶದ ನಿಯಮಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಬರೆವಣಿಗೆಯಲ್ಲಿ ಬಳಸುವುದು. |
| | | * ಸುಮಾರು ೨೦೦೦ ಪದಗಳನ್ನು ಸ್ವತಂತ್ರವಾಗಿ ಓದಿ ಗ್ರಹಿಸುವುದು. | * 'ಛಂದಸ್ಸು' ಶಾಸ್ತ್ರದ ಪ್ರಾಸ, ಮಾತ್ರೆ, ಗಣ ಇವುಗಳ ಪರಿಚಯ ಮಾಡಿಕೊಳ್ಳುವುದು. |

## ಸಾಮರ್ಥ್ಯವಾರು ಪಠ್ಯವಸ್ತು

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೧.೭.೧ ಕವಿತೆ, ಕಥೆ, ನಾಟಕ, ಪ್ರಬಂಧ, ಪ್ರಹಸನ ಮತ್ತು ವಿಚಾರಗೋಷ್ಠಿಗಳನ್ನು ಆಲಿಸಿ ಅರ್ಥಮಾಡಿ ಕೊಳ್ಳುವುದು. | * ಕವಿತೆಗಳ ಸಾರಾಂಶವನ್ನು ಅರಿಯುವುದು.<br>* ಕಥೆ, ನಾಟಕ, ಪ್ರಬಂಧ ಪ್ರಹಸನಗಳ ಸಾಮಾನ್ಯ ಲಕ್ಷಣಗಳನ್ನು ತಿಳಿಯುವುದು.<br>* ವಿಚಾರಗೋಷ್ಠಿಗಳನ್ನು ಆಸಕ್ತಿಯಿಂದ ಆಲಿಸುವುದನ್ನು ರೂಢಿಸಿ ಕೊಳ್ಳುವುದು.<br>* ಕಥೆ, ನಾಟಕ, ಪ್ರಬಂಧ, ಪ್ರಹಸನಗಳನ್ನು ಆಲಿಸಿ ಮುಖ್ಯಾಂಶಗಳನ್ನು ಗುರುತಿಸುವುದು. | * ಕನ್ನಡ ನಾಡು-ನುಡಿಯ ಸೊಬಗು-ಸೌಂದರ್ಯ ಕುರಿತಾದ ಭಾಗ.<br>* ಪ್ರಸಿದ್ಧ ಕವಿಗಳ ಗೀತೆ.<br>* ಸಾಮೂಹಿಕವಾಗಿ ಹಾಡಲು ಬರುವಂತಿರಲಿ.<br>* ೨೦ ರಿಂದ ೨೪ ಸಾಲನ್ನು ಒಳಗೊಂಡಿರಲಿ<br>* ನಿರ್ದಿಷ್ಟ ವಿಷಯವನ್ನು ಹೊಂದಿರಲಿ.<br>* ಪದ್ಯಪಾಠ | * ಕವಿತೆಗಳನ್ನು ವಾಚಿಸಿ, ಹಾಡಿ, ಆಲಿಸಲು ಅವಕಾಶ ಕಲ್ಪಿಸುವುದು.<br>* ಧ್ವನಿಸುರುಳಿಗಳ ಸಹಾಯದಿಂದ ಕವಿತೆಗಳನ್ನು ಕೇಳಿಸುವುದು.<br>* ಕಥೆಗಳನ್ನು ಆಲಿಸಲು ಅವಕಾಶ ಕಲ್ಪಿಸುವುದು.<br>* ನಾಟಕಗಳನ್ನು ಇತರರು ಅಭಿನಯಿಸುವಾಗ ಪ್ರೇಕ್ಷಕರಾಗಿ ಭಾಗವಹಿಸುವುದು.<br>* ಪ್ರಹಸನಗಳನ್ನು ಕೇಳಿಸುವುದು.<br>* ವಿಚಾರ ಗೋಷ್ಠಿಗಳನ್ನು ಏರ್ಪಡಿಸಿ ಭಾಗವಹಿಸಲು ಅವಕಾಶ ಕಲ್ಪಿಸುವುದು. | * ಕವಿತೆಗಳನ್ನು ಆಲಿಸಿದ ನಂತರ ಮುಖ್ಯಾಂಶಗಳನ್ನು ಹೇಳಿಸುವುದು.<br>* ಕಥೆ, ನಾಟಕ, ಪ್ರಬಂಧ ಪ್ರಹಸನಗಳನ್ನು ಆಲಿಸಿ ಮುಖ್ಯಾಂಶಗಳನ್ನು ಗುರುತಿಸುವುದು.<br>* ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ನಂತರ ಅದರ ಮುಖ್ಯ ವಿಷಯವನ್ನು ಹೇಳಿಸುವುದು.<br><br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೧.೭.೨. ಅಪರಿಚಿತ ಸನ್ನಿವೇಶದ ಘಟನೆಗಳನ್ನು ಆಲಿಸಿ, ಅರ್ಥಮಾಡಿಕೊಂಡು ಅಭಿನಯಿಸುವುದು. | * ಅಪರಿಚಿತ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವುದು.<br>* ಘಟನೆಗಳ ಸಂದರ್ಭವನ್ನು ಅರಿಯುವುದು.<br>* ಅಪರಿಚಿತ ಸನ್ನಿವೇಶದ ಘಟನೆಗಳನ್ನು ನಿತ್ಯ ಜೀವನಕ್ಕೆ ಹೋಲಿಸುವುದು.<br>* ಘಟನೆಗಳ ಕಾರಣ–ಪರಿಣಾಮಗಳನ್ನು ತಿಳಿಯುವುದು.<br>* ಅಪರಿಚಿತ ಘಟನೆಗಳನ್ನು ಪರಿಚಿತವಾಗಿಸಿಕೊಳ್ಳುವುದು.<br>* ಘಟನೆಗಳನ್ನು ಆಲಿಸಿ ಅರ್ಥ ಮಾಡಿಕೊಂಡಿರುವುದನ್ನು ಅಭಿನಯಿಸುವುದು.<br>* ಅಭಿನಯ ಕೌಶಲಗಳನ್ನು ಹೆಚ್ಚಿಸಿಕೊಳ್ಳುವುದು. | * ಮಕ್ಕಳಿಗೆ ಅಪರಿಚಿತ ಪ್ರದೇಶದ ಕುರಿತಾಗಿ ಇರುವ ಪ್ರವಾಸಕಥನ.<br>* ಅಪರಿಚಿತ ಸನ್ನಿವೇಶದಲ್ಲಿ ನಡೆದ ಘಟನೆಗಳನ್ನು ಒಳಗೊಂಡಿರುವುದು.<br>* ಪ್ರವಾಸಕಥನವು ಆಕರ್ಷಕವಾಗಿರುವಂತಿದ್ದು ಘಟನೆಗಳು ಕುತೂಹಲವಾಗಿರಲಿ.<br>* ಎರಡರಿಂದ ಮೂರು ಪ್ರಮುಖ ಘಟನೆಗಳನ್ನು ಒಳಗೊಂಡಿರುವುದು.<br>* ಗದ್ಯಪಾಠ | * ಅಪರಿಚಿತ ಸನ್ನಿವೇಶವನ್ನು ಕುರಿತುವಿವರಣೆ ನೀಡುವುದು.<br>* ಅಲ್ಲಿಯ ಘಟನೆಗಳನ್ನು ಸಂದರ್ಭಕ್ಕೆ ಹೋಲಿಸಿ ವಿಶ್ಲೇಷಿಸುವುದು.<br>* ಘಟನೆಗಳ ಕಾರಣ ಹಾಗೂ ಪರಿಣಾಮಗಳನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸುವುದು.<br>* ಘಟನೆಗಳ ಮುಖ್ಯಾಂಶಗಳನ್ನು ಕ್ರಮವಾಗಿ ಹೇಳಿಸುವುದು.<br>* ಘಟನೆಗಳನ್ನು ಅಭಿನಯಿಸಲು ಅವಕಾಶ ಕಲ್ಪಿಸುವುದು.<br>* ಅಪರಿಚಿತ ಸನ್ನಿವೇಶದಲ್ಲಿಯ ಘಟನೆಗಳನ್ನು ಕುರಿತಾದ ದೃಶ್ಯಾವಳಿಗಳನ್ನು ತೋರಿಸುವುದು (ಸಿ.ಡಿ.ಗಳು). | * ಅಪರಿಚಿತ ಸನ್ನಿವೇಶಗಳ ಕುರಿತಾಗಿ ವಿವರಿಸಲು ಹೇಳುವುದು.<br>* ಘಟನೆಗಳನ್ನು ವಿಶ್ಲೇಷಣೆ ಮಾಡಿಸುವುದು.<br>* ಅಪರಿಚಿತ ಸನ್ನಿವೇಶದ ಘಟನೆಗಳ ಕುರಿತು ಪ್ರಶ್ನಿಸುವುದು.<br>* ಘಟನೆಗಳನ್ನು ಅಭಿನಯಿಸಲು ಹೇಳಿ ವೀಕ್ಷಿಸುವುದು.<br>* ಅಭಿನಯದಲ್ಲಿ ವೀಕ್ಷಿಸಿದ ಅಂಶಗಳ ಮುಖ್ಯಾಂಶಗಳನ್ನು ಹೇಳಿಸುವುದು.<br>* ಘಟನೆಗಳ ಕುರಿತಾದ ಅಂಶಗಳನ್ನೊಳಗೊಂಡ ಆಶುನಟನೆ ಚಟುವಟಿಕೆ ಮಾಡಿಸುವುದು.<br><br>**(ಅವಧಿ : ೧೦)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೧.೭.೩ ಗುಂಪು ಚಟುವಟಿಕೆಗಳ ನಿರ್ದೇಶನಗಳನ್ನು ಆಲಿಸಿ, ಅರ್ಥಮಾಡಿಕೊಂಡು ಆಂಗಿಕವಾಗಿ ಪ್ರತಿಕ್ರಿಯಿಸುವುದು. | * ಗುಂಪಿನಲ್ಲಿ ಚಟುವಟಿಕೆಗಳನ್ನು ನಿರ್ವಹಿಸಲು ಆಸಕ್ತಿಯನ್ನು ಹೆಚ್ಚಿಸಿಕೊಳ್ಳುವುದು.<br>* ಚಟುವಟಿಕೆಗಳನ್ನು ನಿರ್ವಹಿಸುವ ಮೊದಲು ನಿರ್ದೇಶನಗಳನ್ನು ಸರಿಯಾಗಿ ಆಲಿಸುವುದು.<br>* ನಿರ್ದೇಶನಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು.<br>* ನಿರ್ದೇಶನಗಳಿಗೆ ತಕ್ಕಂತೆ ಆಂಗಿಕವಾಗಿ ಪ್ರತಿಕ್ರಿಯಿಸುವುದು.<br>* ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸಿ ಆಂಗಿಕವಾಗಿ ಪ್ರತಿಕ್ರಿಯಿಸುವುದು. | * ಮಹಾಭಾರತದ ಒಂದು ಘಟನೆಯನ್ನು ಒಳಗೊಂಡ ನಾಟಕ.<br>* ೪ ರಿಂದ ೫ ದೃಶ್ಯಗಳಿರಲಿ.<br>* ೧೪ ರಿಂದ ೬ ಪ್ರಮುಖ ಪಾತ್ರಗಳಿರುವುದು.<br>* ಸನ್ನಿವೇಶಗಳನ್ನು ನೈಜವಾಗಿ ಸೃಷ್ಟಿಸಲು ಸಾಧ್ಯವಾಗುವಂತಹುದು (ಸಾಧ್ಯವಾದಷ್ಟು),<br>* ನಾಟಕ ನಿರ್ದಿಷ್ಟ ವಸ್ತುವನ್ನು ಒಳಗೊಂಡಿರುವುದು.<br>* ಗದ್ಯಪಾಠ. | * ಗುಂಪಿನಲ್ಲಿ ಚಟುವಟಿಕೆ ಮಾಡಿಸುವುದು.<br>* ನಿರ್ದೇಶನಗಳನ್ನು ಸ್ಪಷ್ಟವಾಗಿ ಹೇಳುವುದು.<br>* ನಿರ್ದೇಶನಗಳನ್ನು ಅರ್ಥ ಮಾಡಿಕೊಂಡ ನಂತರ ಹೇಳಿಸುವುದು.<br>* ನಿರ್ದೇಶನಗಳಿಗೆ ತಕ್ಕಂತೆ ಆಂಗಿಕವಾಗಿ ಪ್ರತಿಕ್ರಿಯಿಸಲು ಅವಕಾಶ ಕಲ್ಪಿಸುವುದು.<br>* ಆಂಗಿಕವಾಗಿ ಪ್ರತಿಕ್ರಯಿಸಲು ಸಾಧ್ಯವಾಗುವ ಚಲನೆ / ಚಟುವಟಿಕೆಗಳನ್ನು ಮಾಡಿಸುವುದು.<br>* ನಿತ್ಯಜೀವನದಲ್ಲಿ ನಿರ್ದೇಶನಗಳಿಗೆ ಆಂಗಿಕವಾಗಿ ಪ್ರತಿಕ್ರಿಯಿಸಲು ಸನ್ನಿವೇಶ ಕಲ್ಪಿಸುವುದು. | * ಗುಂಪಿನಲ್ಲಿ ಭಾಗವಹಿಸುವಾಗ ವೀಕ್ಷಣೆ ಮಾಡುವುದು.<br>* ನಿರ್ದೇಶನಗಳನ್ನು ಹೇಳಿಸುವುದು.<br>* ಗುಂಪು ಚಟುವಟಿಕೆ ಕುರಿತಾಗಿ ಚರ್ಚಿಸುವುದು.<br>* ನಿರ್ದೇಶನಗಳಿಗೆ ತಕ್ಕಂತೆ ಆಂಗಿಕವಾಗಿ ಪ್ರತಿಕ್ರಿಯಿಸಲು ಹೇಳುವುದು.<br>* ಮೂಕಾಭಿನಯ ಚಟುವಟಿಕೆಗಳನ್ನು ಮಾಡಿಸುವುದು.<br>* ಪಾತ್ರಗಳನ್ನು ಹಂಚಿ ನಾಟಕದ ಮೂಲಕ ಪ್ರತಿಕ್ರಿಯಿಸಲು ಹೇಳುವುದು.<br><br>(ಅವಧಿ : ೧೦) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೧.೭.೪ ವಿಷಯವನ್ನು ಆಲಿಸಿದ ಬಳಿಕ ಏಕೆ ? ಹೇಗೆ? ಹಾಗಾದರೆ ? ಹಾಗಾಗ ದಿದ್ದರೆ? –ಪ್ರಶ್ನೆಗಳಿಗೆ ಕಾರಣ ಸಹಿತ ವಿಶ್ಲೇಷಿಸುವುದು. | * ವಿಷಯವನ್ನು ಸ್ಪಷ್ಟವಾಗಿ ಆಲಿಸುವ ಕೌಶಲವನ್ನು ಹೆಚ್ಚಿಸಿಕೊಳ್ಳುವುದು.<br>* ಆಲಿಸಿದ ವಿಷಯುದಲ್ಲಿ ಪ್ರಭುತ್ವವನ್ನು ಹೊಂದುವುದು.<br>* ಆಲಿಸಿದ ವಿಷಯುವನ್ನು ತಾರ್ಕಿಕವಾಗಿ ಯೋಚಿಸುವುದು.<br>* ವಿಷಯುದಲ್ಲಿ ಕೇಳುವ ಪ್ರಶ್ನೆಗಳಿಗೆ ಕಾರಣಗಳನ್ನು ಕಂಡುಕೊಳ್ಳುವುದು.<br>* ಕಾರಣ ಸಹಿತ ವಿಶ್ಲೇಷಣೆ ಮಾಡಲು ಸಮರ್ಥರಾಗುವುದು. | * ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ?– ಪ್ರಶ್ನೆಗಳ ಚಿಂತನೆಗೆ ಅವಕಾಶವಿರುವ ಪದ್ಯ.<br>* ವಚನಸಾಹಿತ್ಯ<br>* ೧೨ನೆ ಶತಮಾನದ ವಚನಕಾರರ ವಚನಗಳು.<br>* ೦೩ ರಿದ ೦೪ ವಚನ.<br>* ಒಟ್ಟು ೧೬ ರಿಂದ ೧೮ ಸಾಲಿರಲಿ.<br>* ಪದ್ಯಪಾಠ | * ವಚನಗಳನ್ನು ಸ್ಪಷ್ಟವಾಗಿ ಆಲಿಸಿ, ವಾಚಿಸಲು, ಅವಕಾಶ ಕಲ್ಪಿಸುವುದು.<br>* ವಿಷಯದ ಮೇಲೆ (ಕುರಿತು) ಮಾತನಾಡಿಸುವುದು.<br>* ವಿಷಯದ ಕುರಿತು ಚರ್ಚೆ ನಡೆಸುವುದು.<br>* ಪ್ರಶ್ನೋತ್ತರ ವಿಧಾನದಿಂದ ವಿಷಯವನ್ನು ವಿವರಿಸುವುದು.<br>* ವಿಷಯದಲ್ಲಿಯ ಘಟನೆ ಮತ್ತು ಅಂಶಗಳನ್ನು ವಿಶ್ಲೇಷಿಸುವುದು.<br>* ವಿಷಯಕ್ಕೆ ಕಾರಣಗಳನ್ನು ಕಂಡುಹಿಡಿಯುವುದು.<br>* ಕಾರಣ ಸಹಿತ ವಿಶ್ಲೇಷಣೆ ಮಾಡುವುದು | * ಆಲಿಸಿದ ವಿಷಯದಲ್ಲಿ ಪ್ರಶ್ನೆ ರಚಿಸುವುದು.<br>* ಚರ್ಚೆಯಲ್ಲಿ ಭಾಗವಹಿಸಲು ಹೇಳಿ ವೀಕ್ಷಣೆ ಮಾಡುವುದು.<br>* ವಿಷಯುದ ಕುರಿತಾಗಿ ಮಾತನಾಡಿಸುವುದು.<br>* ಪ್ರಶ್ನೆಗಳಿಗೆ ಸಂಬಂಧಿಸಿದ ಕಾರಣ ಹೇಳಿಸುವುದು.<br>* ಭಾಷಾ ಆಟಗಳ ಮೂಲಕ ಚಟುವಟಿಕೆ ನೀಡುವುದು.<br>* ವಿಷಯದಲ್ಲಿಯ ಕಾರಣ ಸಹಿತ ವಿಶ್ಲೇಷಣೆ ಮಾಡಲು ಹೇಳುವುದು.<br>* ದೈನಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಕಾರಣ ಹೇಳಿಸುವುದು.<br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೨.೭.೧ ವಿಷಯಾನುಸಾರ ಸಹಜ ಚರ್ಚೆ, ಸಂವಾದ, ವಿವರಣೆಗಳೊಂದಿಗೆ ಮಾತನಾಡುವುದು. | * ಚರ್ಚೆ, ಸಂವಾದಗಳಲ್ಲಿ ಭಾಗವಹಿಸಲು ಆಸಕ್ತಿ ಹೊಂದುವುದು<br>* ಚರ್ಚೆ, ಸಂವಾದಗಳ ಸಾಮಾನ್ಯ ಲಕ್ಷಣಗಳನ್ನು ಗುರುತಿಸುವುದು.<br>* ಚರ್ಚೆ, ಸಂವಾದಗಳಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡುವುದು.<br>* ಚರ್ಚೆ, ಸಂವಾದಗಳ ಅಗತ್ಯತೆಯನ್ನು ಅರಿಯುವುದು.<br>* ವಿಷಯಕ್ಕೆ ಸಂಬಂಧಿಸಿದಂತೆ ವಿವರಣೆ ನೀಡುವುದು.<br>* ಚರ್ಚೆ, ಸಂವಾದಗಳಲ್ಲಿ ಸ್ಪಷ್ಟವಾಗಿ ಮಾತನಾಡುವುದು. | * ಚರ್ಚೆ ಮತ್ತು ಸಂವಾದಗಳಿಗೆ ಅವಕಾಶವಿರುವ ಗದ್ಯ<br>* ಸಾಮಾಜಿಕ ಸಮಸ್ಯೆಯನ್ನು ಒಳಗೊಂಡಿರುವುದು.<br>* ಮಗುವಿಗೆ ನಿತ್ಯಜೀವನದಲ್ಲಿನ ಸಮಸ್ಯೆಯ ಕುರಿತಾಗಿ ಪರಿಚಯವಿರುವ ಅಂಶವಿರುವುದು.<br>* ಸಮಸ್ಯೆಯ ನೈಜ ಪರಿಹಾರದ ಅರಿವು ಮೂಡುವಂತಹುದು.<br>* ಗದ್ಯಪಾಠ | * ವಿಷಯವನ್ನು ಸ್ಪಷ್ಟವಾಗಿ ವಿವರಿಸುವುದು.<br>* ಚರ್ಚೆ, ಸಂವಾದಗಳನ್ನು ಏರ್ಪಡಿಸುವುದು.<br>* ಚರ್ಚೆ–ಸಂವಾದಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು.<br>* ವಿವರಣೆಯೊಂದಿಗೆ ವಿಷಯದ ಕುರಿತು ಮಾತನಾಡುವುದು.<br>* ಚರ್ಚೆ–ಸಂವಾದಗಳ ಧ್ವನಿಸುರಳಿಗಳನ್ನು ಕೇಳಿಸಿ, ಅದರಂತೆ ಮಾತನಾಡುವುದು. | * ವಿಷಯದ ಕುರಿತಾಗಿ ಸಹಜವಾಗಿ ಮಾತನಾಡಿಸುವುದು.<br>* ಚರ್ಚೆ, ಸಂವಾದಗಳಲ್ಲಿ ಭಾಗವಹಿಸುವಿಕೆಯನ್ನು ವೀಕ್ಷಣೆ ಮಾಡುವುದು.<br>* ಗುಂಪು ವಿಧಾನದಲ್ಲಿ ಸಂವಾದ ನಡೆಸಲು ಹೇಳಿ ವೀಕ್ಷಿಸುವುದು.<br>* ವಿಷಯ ನೀಡಿ, ವಿವರಣೆಯೊಂದಿಗೆ ಮಾತನಾಡಲು ಹೇಳುವುದು.<br>* ವಿಷಯಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಟಿಪ್ಪಣಿ ಮೂಲಕ ದಾಖಲಿಸುವುದು.<br><br>(ಅವಧಿ : ೧೦) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೨.೭.೨. ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿರರ್ಗಳವಾಗಿ ಹಾಗೂ ಸ್ಪಷ್ಟವಾಗಿ ಮಾತನಾಡುವುದು. | * ಸನ್ನಿವೇಶಗಳನ್ನು ಕುರಿತು ಸ್ಪಷ್ಟವಾಗಿ ತಿಳಿದುಕೊಳ್ಳುವುದು.<br>* ಸನ್ನಿವೇಶದ ಚಿತ್ರಣವನ್ನು ಅರಿಯುವುದು.<br>* ಘಟನೆಗಳನ್ನು ಕುರಿತು ಆಲೋಚಿಸುವುದು.<br>* ಘಟನೆಗಳ ಕುರಿತಾಗಿ ಸ್ಪಷ್ಟ ಮಾಹಿತಿಯನ್ನು ಸಂಗ್ರಹಿಸುವುದು.<br>* ಸನ್ನಿವೇಶ ಮತ್ತು ಘಟನೆಗಳಿಗೆ ಸಂಬಂಧ ಕಲ್ಪಿಸುವುದು.<br>* ಮಾತಿನಲ್ಲಿ ನಿರರ್ಗಳತೆ ಹಾಗೂ ಸ್ಪಷ್ಟತೆಯನ್ನು ಹೆಚ್ಚಿಸಿಕೊಳ್ಳುವುದು. | * ಆಸಕ್ತಿದಾಯಕ ಹಾಗೂ ಕುತೂಹಲವುಳ್ಳ ಐತಿಹಾಸಿಕ ಘಟನೆಗಳನ್ನೊಳಗೊಂಡಿರಲಿ.<br>* ಸನ್ನಿವೇಶವನ್ನು ಒಳಗೊಂಡಿರುವಂತಹುದು.<br>* ಸನ್ನಿವೇಶ, ಮಕ್ಕಳ ಕಲ್ಪನಾ ಶಕ್ತಿ ಬೆಳೆಸುವಂತಹುದು.<br>* ಮಕ್ಕಳ ಅನುಭವಕ್ಕೆ ತರಬಹುದಾದ ಘಟನೆಗಳು.<br>* ಒಂದರಿಂದ ಎರಡು ಘಟನೆಗಳಿರುವುದು.<br>* ಗದ್ಯಪಾಠ | * ಸನ್ನಿವೇಶಗಳನ್ನು ಕುರಿತು ವಿವರಣೆ ನೀಡುವುದು.<br>* ಸನ್ನಿವೇಶದ ಕುರಿತಾದ ದೃಶ್ಯಗಳನ್ನು ಸಮೂಹ ಮಾಧ್ಯಮದ ಮೂಲಕ ತೋರಿಸುವುದು.<br>* ಘಟನೆಗಳನ್ನು ಮಾರ್ಮಿಕವಾಗಿ ವಿವರಿಸುವುದು.<br>* ಘಟನೆಗಳ ಕುರಿತು ಚರ್ಚಿಸುವುದು.<br>* ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ವಿವರಿಸುವುದು.<br>* ಘಟನೆಗಳನ್ನು ಅನ್ವಯಿಸಿಕೊಂಡು ಮಾತನಾಡುವುದು. | * ಸನ್ನಿವೇಶವನ್ನು ಕುರಿತು ವಿವರಿಸಲು ಹೇಳುವುದು.<br>* ಸನ್ನಿವೇಶದ ಹಾಗೂ ಘಟನೆಗಳ ಸಂಬಂಧವನ್ನು ಕುರಿತು ಮಾತನಾಡಿಸುವುದು.<br>* ಪ್ರಶ್ನೋತ್ತರ ವಿಧಾನದಲ್ಲಿ ಘಟನೆಗಳ ಕುರಿತು ಮಾಹಿತಿ ಪಡೆಯುವುದು.<br>* ಘಟನೆಗಳನ್ನು ಅನ್ವಯಿಸಿಕೊಂಡು ಮಾತನಾಡಲು ಹೇಳುವುದು.<br>* ಭಾಷಣ, ಆಶುಭಾಷಣ (ಸ್ಪರ್ಧೆ) ಚಟುವಟಿಕೆ ನಡೆಸುವುದು.<br>* ದೈನಂದಿನ ಘಟನೆಗಳನ್ನು ಕುರಿತು ಮಾತನಾಡಲು ಹೇಳುವುದು.<br><br>(ಅವಧಿ : ೧೦) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೨.೭.೩. ಸಮಾರಂಭದ ಕಾರ್ಯಕ್ರಮಗಳನ್ನು ನಿರೂಪಣೆ ಮಾಡುವುದು. | * ಸಮಾರಂಭದ ಉದ್ದೇಶವನ್ನು ಅರಿಯುವುದು.<br>* ಸಮಾರಂಭದ ಸಿದ್ಧತೆಯಲ್ಲಿ ಪಾಲ್ಗೊಳ್ಳುವುದು.<br>* ಸಮಾರಂಭದಲ್ಲಿ ಜವಾಬ್ದಾರಿಯನ್ನು ನಿರ್ವಹಿಸುವುದು.<br>* ಸಮಾರಂಭದ ಕಾರ್ಯಕ್ರಮಗಳ ಕುರಿತಾಗಿ ಕೆಲವು ಸಾಮಾನ್ಯ ವಿವರಗಳನ್ನು ತಿಳಿಯುವುದು.<br>* ನಿರೂಪಣಾ ವಿಧಾನವನ್ನು ಅರಿಯುವುದು.<br>* ನಿರೂಪಣಾ ಕೌಶಲವನ್ನು ಹೆಚ್ಚಿಸುವುದು.<br>* ಸಮಾರಂಭದಲ್ಲಿ ಭಾಗವಹಿಸಿ ಸ್ಪಷ್ಟವಾಗಿ ಮಾತನಾಡುವುದು. | * ಶಾಲೆಯಲ್ಲಿ ಆಯೋಜಿಸಲು ಅಥವಾ ಸಮಾರಂಭವನ್ನು ಚಿತ್ರಿಸುವ / ಬಿಂಬಿಸುವಂತಿರಲಿ.<br>* ಉದ್ದೇಶಿತ ಸಮಾರಂಭ ಹೊಂದಿರುವಂತಹುದು.<br>* ಮಗು ತನ್ನ ಶಾಲೆಯಲ್ಲಿ ಆಯೋಜಿಸುವಂತಹುದು.<br>* ನಾಯಕತ್ವ ಗುಣ ಬೆಳೆಸಲು ಅವಕಾಶವಿರುವಂತಹುದು.<br>* ಕಾರ್ಯಕ್ರಮ ರೂಪಿಸಲು, ನಿರೂಪಿಸಲು ಪ್ರೇರೇಪಿಸುವಂತಹುದು.<br>* ಗದ್ಯಪಾಠ | * ಸಮಾರಂಭದ ಉದ್ದೇಶ ಹಾಗೂ ಅಗತ್ಯತೆಗಳನ್ನು ವಿವರಿಸುವುದು.<br>* ಸಮಾರಂಭವನ್ನು ಹಮ್ಮಿಕೊಳ್ಳಲು ಸಿದ್ಧತೆ ನಡೆಸುವುದು.<br>* ಕಾರ್ಯಕ್ರಮಗಳ ಕ್ರಮಾನುಗತಿಯನ್ನು ಕುರಿತು ಹೇಳುವುದು.<br>* ಸಮಾರಂಭಗಳನ್ನು (ಪ್ರಾಯೋಗಿಕವಾಗಿ) ಏರ್ಪಡಿಸುವುದು.<br>* ನಿರೂಪಣಾ ಕೌಶಲವನ್ನು ಕುರಿತು ವಿವರಿಸುವುದು.<br>* ಕಾರ್ಯಕ್ರಮಗಳನ್ನು ನಿರೂಪಿಸಲು ಅವಕಾಶ ಕಲ್ಪಿಸುವುದು. | * ಸಮಾರಂಭದ ಉದ್ದೇಶಗಳನ್ನು ಹೇಳಿಸುವುದು.<br>* ಸಮಾರಂಭದ ಕಾರ್ಯಕ್ರಮಗಳನ್ನು ಕ್ರಮವಾಗಿ ಹೇಳಿಸುವುದು.<br>* ಕಾರ್ಯಕ್ರಮಗಳನ್ನು ಪಟ್ಟಿ ಮಾಡಿಸುವುದು.<br>* ನಿರ್ದಿಷ್ಟ ಕಾರ್ಯಕ್ರಮವನ್ನು ನಿರೂಪಿಸಲು ಹೇಳುವುದು.<br>* ನಿರೂಪಣಾ ಕೌಶಲವನ್ನು ವೀಕ್ಷಿಸುವುದು.<br>* ಪ್ರಾಯೋಗಿಕ ಕಾರ್ಯಕ್ರಮಗಳನ್ನು ನೀಡಿ ವೀಕ್ಷಿಸುವುದು.<br>* ಸಮಾರಂಭದಲ್ಲಿ ವಹಿಸುವ ಜವಾಬ್ದಾರಿಯನ್ನು ಗಮನಿಸುವುದು.<br><br>**(ಅವಧಿ : ೧೦)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೨.೭.೪. ನಾಣ್ನುಡಿ, ನುಡಿಗಟ್ಟು, ಗಾದೆಗಳನ್ನು ಬಳಸಿ ಮಾತನಾಡುವುದು. | * ನಾಣ್ನುಡಿ, ನುಡಿಗಟ್ಟು, ಗಾದೆಗಳನ್ನು ಗುರುತಿಸುವುದು.<br>* ಇವುಗಳ ಸಾಮಾನ್ಯ ಲಕ್ಷಣಗಳನ್ನು ತಿಳಿಯುವುದು.<br>* ಮಾತುಗಳನ್ನು ರಸವತ್ತಾಗಿ ಹೇಳುವುದು.<br>* ನಾಣ್ನುಡಿ, ನುಡಿಗಟ್ಟು, ಗಾದೆಗಳ ಒಳಾರ್ಥಗಳನ್ನು ಅರಿಯುವುದು.<br>* ಇವುಗಳನ್ನು ದೈನಂದಿನ ಜೀವನದಲ್ಲಿ ಬಳಸಿ ಮಾತನಾಡುವುದನ್ನು ಕಲಿಯುವುದು.<br>* ಇವುಗಳನ್ನು ಸಂದರ್ಭಾನುಸಾರ ಬಳಸಿ ಮಾತನಾಡುವುದು. | * ನಾಣ್ನುಡಿ, ನುಡಿಗಟ್ಟುಗಳನ್ನು ಒಳಗೊಂಡಿರುವ (ಜನಪ್ರಿಯ) ಜನಪದಗೀತೆ.<br>* ಜನಪದ ತ್ರಿಪದಿ<br>* ೬ ರಿಂದ ೮ ತ್ರಿಪದಿ<br>* ನಾಣ್ನುಡಿ ಅಥವಾ ನುಡಿಗಟ್ಟನ್ನು ಒಳಗೊಂಡಿರುವಂತಹುದು<br>* ತ್ರಿಪದಿಗಳ ನಡುವೆ ಸಾಮಾನ್ಯ ಸಂಬಂಧವಿರುವುದು.<br>* ಪದ್ಯಪಾಠ | * ತ್ರಿಪದಿಗಳನ್ನು ವಾಚಿಸುವುದು.<br>* ತ್ರಿಪದಿಗಳನ್ನು ವಿವಿಧ ರಾಗಗಳಲ್ಲಿ ಹಾಡುವುದು.<br>* ನಾಣ್ನುಡಿ, ನುಡಿಗಟ್ಟುಗಳನ್ನು ಗುರುತಿಸುವುದು.<br>* ನಾಣ್ನುಡಿ, ನುಡಿಗಟ್ಟು ಹಾಗೂ ಗಾದೆಗಳ ಒಳಾರ್ಥಗಳನ್ನು ವಿವರಿಸುವುದು.<br>* ಪ್ರಚಲಿತದಲ್ಲಿ ಬಳಕೆಯಲ್ಲಿರುವವುಗಳನ್ನು ಪಟ್ಟಿ ಮಾಡುವುದು (ಸಂಗ್ರಹಿಸುವುದು).<br>* ಇವುಗಳನ್ನು ಬಳಸಿ ಮಾತನಾಡುವುದು.<br>* ಸ್ವಂತ ವಾಕ್ಯರಚನೆಗಳಲ್ಲಿ ಇವುಗಳನ್ನು ಬಳಸುವುದು. | * ತ್ರಿಪದಿಗಳನ್ನು ಹಾಡಿಸುವುದು.<br>* ತ್ರಿಪದಿಗಳಲ್ಲಿ ಬರುವ ನಾಣ್ನುಡಿ, ನುಡಿಗಟ್ಟುಗಳನ್ನು ಗುರುತಿಸುವುದು.<br>* ನಾಣ್ನುಡಿ, ನುಡಿಗಟ್ಟುಗಳನ್ನು ಬಳಸಿ ವಾಕ್ಯ ರಚಿಸುವುದು.<br>* ಗಾದೆಗಳನ್ನು ಕುರಿತು ಮಾತನಾಡಲು ಹೇಳುವುದು.<br>* ಸಂದರ್ಭ ಒದಗಿಸಿ ನಾಣ್ನುಡಿ, ನುಡಿಗಟ್ಟು ಗಾದೆಗಳನ್ನು ಬಳಸಿ ಮಾತನಾಡಲು ಹೇಳುವುದು.<br>* ನಾಣ್ನುಡಿ, ನುಡಿಗಟ್ಟುಗಳ ಒಳಾರ್ಥವನ್ನು ಹೇಳಿಸುವುದು.<br><br>(ಅವಧಿ : ೭) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೩.೭.೧.<br>ವಿವಿಧ ಪದಗಳ ಉಚ್ಚಾರಣೆಯಲ್ಲಿರುವ ಧ್ವನಿಸಾಮ್ಯ ಮತ್ತು ಧ್ವನಿ ವ್ಯತ್ಯಾಸಗಳನ್ನು ಅರ್ಥಮಾಡಿಕೊಂಡು ಓದುವುದು. | * ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವುದು.<br>* ಪದಗಳ ಉಚ್ಚಾರಣೆಯನ್ನು ಸ್ಪಷ್ಟವಾಗಿ (ಓದುವುದು) ಹೇಳುವುದು.<br>* ಉಚ್ಚಾರಣಾ ಕೌಶಲವನ್ನು ಉತ್ತಮಪಡಿಸಿಕೊಳ್ಳುವುದು.<br>* ಉಚ್ಚಾರಣೆಯಲ್ಲಿ ಸ್ಪಷ್ಟತೆಯನ್ನು ಹೊಂದುವುದು.<br>* ಧ್ವನಿಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು.<br>* ಸ್ಪಷ್ಟವಾಗಿ ಓದುವುದನ್ನು ರೂಢಿಸಿಕೊಳ್ಳುವುದು. | * ಗ್ರಾಮ್ಯ / ಆಡು ಭಾಷೆಯನ್ನು ಒಳಗೊಂಡಿರುವ ಗದ್ಯ.<br>* ವೈವಿಧ್ಯ/ವಿಶಿಷ್ಟ ಪದಗಳನ್ನು ಒಳಗೊಂಡಿರುವಂತಹದು.<br>* ಧ್ವನಿಸಾಮ್ಯತೆ ಹಾಗೂ ವ್ಯತ್ಯಾಸ ಗುರುತಿಸಲು ಸಾಧ್ಯವಿರುವ ಪದಗಳಿರುವಂತಹದು.<br>* ಗ್ರಾಮೀಣದ ಸಂಭಾಷಣೆಯನ್ನು ಒಳಗೊಂಡಿರುವಂತಹದು.<br>* ಗದ್ಯಪಾಠ | * ಪಾಠವನ್ನು ಸ್ಪಷ್ಟವಾಗಿ ವಾಚಿಸಿ–ವಾಚಿಸಲು ಅವಕಾಶ ನೀಡುವುದು.<br>* ಗ್ರಾಮ್ಯ/ಆಡು ಮತ್ತು ಗ್ರಾಂಥಿಕ ರೂಪವನ್ನು ಹೇಳುವುದು (ಉಚ್ಚರಿಸುವುದು).<br>* ಉಚ್ಚರಿಸುವಾಗ ಧ್ವನಿ ಸಾಮ್ಯತೆ – ವ್ಯತ್ಯಾಸಗಳನ್ನು ವಿವರಿಸುವುದು.<br>* ಪದಗಳನ್ನು ಉಚ್ಚರಿಸುವ ವಿಧಾನ / ರೀತಿಯನ್ನು ಸ್ಪಷ್ಟಪಡಿಸುವುದು.<br>* ಮಗು ಬಳಸುವ ದೈನಂದಿನ ಪದಗಳಲ್ಲಿ ಸಾಮ್ಯ–ವ್ಯತ್ಯಾಸಗಳನ್ನು ಗುರುತಿಸುವುದು.<br>* ಗ್ರಾಮ್ಯ / ಆಡು ಪದಗಳ ಬಳಕೆಯಿರುವ ಕಥೆ, ನಾಟಕಗಳನ್ನು ಓದುವುದು. | * ಪಠ್ಯವನ್ನು ಓದಿಸುವುದು.<br>* ವಿಶಿಷ್ಟ ಪದಗಳನ್ನು ಪಟ್ಟಿ ಮಾಡಿಸುವುದು.<br>* ವಿಶಿಷ್ಟ ಪದಗಳನ್ನು ಉಚ್ಚರಿಸಲು ಹೇಳುವುದು.<br>* ಧ್ವನಿವ್ಯತ್ಯಾಸ ಹಾಗೂ ಸಾಮ್ಯತೆಯನ್ನು ಗುರುತಿಸಿ ಅರ್ಥ ಹೇಳಿಸುವುದು.<br>* ಆಡುಭಾಷೆಯ ಪದಗಳನ್ನು ಉಚ್ಚರಿಸಲು ಹೇಳುವುದು.<br>* ಗ್ರಾಮ್ಯ/ಆಡು ಭಾಷೆಯ ಪದಗಳಿರುವ ಕಥೆ ನಾಟಕಗಳನ್ನು ಓದಿಸುವುದು.<br>* ದೈನಂದಿನ ಜೀವನದಲ್ಲಿ ಬರುವ ವಿಶಿಷ್ಟ ಪದಗಳ ಸಾಮ್ಯತೆ–ವ್ಯತ್ಯಾಸವನ್ನು ಗುರುತಿಸಿ ಹೇಳಿಸುವುದು.<br><br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೩.೭.೨. ಓದಿದ ವಿಷಯಗಳ ಬಗ್ಗೆ ಆಲೋಚಿಸಿ ತಾರ್ಕಿಕವಾಗಿ ತೀರ್ಮಾನಿಸುವುದು. | * ಆಲೋಚನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು.<br>* ನಿರ್ದಿಷ್ಟ ವಿಷಯ ಕುರಿತು ಆಲೋಚಿಸುವುದು.<br>* ಆಲೋಚಿಸಿ ತರ್ಕಿಸುವ ಗುಣ ಬೆಳೆಸಿಕೊಳ್ಳುವುದು.<br>* ವಿಷಯ ಕುರಿತಾಗಿ ತೀರ್ಮಾನಕ್ಕೆ ಬರುವುದು.<br>* ತೀರ್ಮಾನಗಳನ್ನು ತರ್ಕ ಬದ್ಧವಾಗಿ ಕೈಗೊಳ್ಳುವುದು.<br>* ಕೈಗೊಂಡ ತೀರ್ಮಾನಗಳ ಕುರಿತು ಇತರರೊಂದಿಗೆ ಸಮಾಲೋಚಿಸುವುದು. | * ಆಲೋಚನೆಗೆ ಇಂಬು ನೀಡುವ, ತಾರ್ಕಿಕವಾಗಿ ಚಿಂತಿಸಲು ಅವಕಾಶವಿರಲಿ.<br>* ಭಾವಗೀತೆ<br>* ಜನಪ್ರಿಯ ಕವಿಗಳ ಕವಿತೆ.<br>* ೧೨ ರಿಂದ ೧೬ ಸಾಲು<br>* ರಾಗವನ್ನು ಸುಲಭವಾಗಿ ಸಂಯೋಜಿಸಲು ಸಾಧ್ಯವಾಗುವಂತಹುದು.<br>* ಪದ್ಯಪಾಠ | * ಕವಿತೆಯನ್ನು ರಸವತ್ತಾಗಿ ವಾಚಿಸುವುದು.<br>* ಕವಿಯ ಆಶಯವನ್ನು ಸ್ಪಷ್ಟಪಡಿಸುವುದು.<br>* ಕವಿತೆಯ ಭಾವಾರ್ಥವನ್ನು ಕುರಿತು ಚರ್ಚಿಸುವುದು.<br>* ಕವಿತೆಯಲ್ಲಿಯ ವಿಷಯದ ಬಗ್ಗೆ ಆಲೋಚಿಸಲು ಅವಕಾಶ ನೀಡುವುದು.<br>* ವಿಷಯಗಳ ಕುರಿತು ತರ್ಕ ಮಾಡುವುದು.<br>* ತೀರ್ಮಾನಗಳನ್ನು ಕೈಗೊಳ್ಳುವ ಕುರಿತಾಗಿ ಚರ್ಚಿಸುವುದು. | * ಕವಿತೆಯನ್ನು ವಾಚಿಸಲು ಹೇಳುವುದು.<br>* ಕವಿಯ ಆಶಯವನ್ನು ಹೇಳಿಸುವುದು.<br>* ಕವಿತೆಯ ಸಾರಾಂಶವನ್ನು ಹೇಳಿಸುವುದು.<br>* ಕವಿಯ ಆಶಯ ಕುರಿತಾಗಿ ಆಲೋಚನೆಗಳನ್ನುದ್ದೇಶಿಸುವುದು.<br>* ವಿಷಯ ಕುರಿತಾಗಿ ತಾರ್ಕಿಕ ಚಿಂತನೆಗಳನ್ನು ಹೇಳಿಸುವುದು.<br>* ತೀರ್ಮಾನಗಳನ್ನು ಹೇಳಿಸುವುದು.<br>* ನಿತ್ಯಜೀವನದ ವಿಷಯಗಳ ಕುರಿತು ತೀರ್ಮಾನಗಳನ್ನು ಹೇಳಿಸುವುದು.<br><br>**(ಅವಧಿ : ೮)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೩.೨.೩. ಮುದ್ರಿತ ಪಠ್ಯೇತರ ವಿಷಯಗಳು ಮತ್ತು ಕೈಬರೆಹಗಳನ್ನು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು. | * ಪಠ್ಯೇತರ ವಿಷಯಗಳನ್ನು ಓದಲು ಆಸಕ್ತಿ ಬೆಳೆಸಿಕೊಳ್ಳುವುದು.<br>* ಇತರರ ಕೈಬರೆಹಗಳನ್ನು ಓದಲು, ಓದಿ ಅರ್ಥೈಸಿಕೊಳ್ಳಲು ಸಮರ್ಥವಾಗುವುದು.<br>* ವೃತ್ತಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸುವುದು.<br>* ಪ್ರಶ್ನೆಗಳಿಗೆ ಉತ್ತರಿಸುವ ಕೌಶಲವನ್ನು ಅಭಿವೃದ್ಧಿಪಡಿಸುವುದು.<br>* ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ನೀಡುವುದನ್ನು ಹೆಚ್ಚಿಸಿಕೊಳ್ಳುವುದು. | * ಆಸಕ್ತಿದಾಯಕ ಹಾಗೂ ಚಿಂತನೆಗೆ ಅವಕಾಶ ನೀಡುವಂತಿರಲಿ.<br>* ದಾಸಸಾಹಿತ್ಯ<br>* ಜನಪ್ರಿಯ ದಾಸರ ಕೃತಿ.<br>* ಹಾಡಲು ಸುಲಭವಾಗಿರುವ ಲಯ ಹೊಂದಿರಲಿ.<br>* ೧೪ ರಿಂದ ೧೬ ಸಾಲು.<br>* ಪದ್ಯಪಾಠ | * ಪದ್ಯವನ್ನು ಭಾವಪೂರ್ಣವಾಗಿ ವಾಚಿಸುವುದು.<br>* ವೃಂದದಲ್ಲಿ ಹಾಡುವುದು<br>* ಪ್ರಶ್ನೆಗಳನ್ನು ರಚಿಸುವುದು.<br>* ಪ್ರಶ್ನೆ ಕೇಳಿ ಉತ್ತರ ಪಡೆಯುವುದು.<br>* ಕೈಬರೆಹದ ಪತ್ರ, ಲೇಖನಗಳನ್ನು ಓದಿಸುವುದು.<br>* ವೃತ್ತಪತ್ರಿಕೆ, ಪತ್ರಿಕೆಗಳನ್ನು ಓದುವುದು.<br>* ಓದಿದ ವಿಷಯದ ಮೇಲೆ ಪ್ರಶ್ನೆಕೇಳಿ ಉತ್ತರ ಪಡೆಯುವುದು.<br>* ಪರಸ್ಪರರು ಪ್ರಶ್ನೆಕೇಳಿ ಉತ್ತರ ಹೇಳುವುದು. | * ಪ್ರಶ್ನೆಗಳನ್ನು ರಚಿಸಲು ಹೇಳುವುದು.<br>* ಪ್ರಶ್ನೆಕೇಳಿ ಉತ್ತರ ಪಡೆಯುವುದು.<br>* ಇತರರ ಕೈಬರೆಹದ ಪತ್ರಗಳನ್ನು ಓದಿಸುವುದು.<br>* ವೃತ್ತಪತ್ರಿಕೆ ಓದಿಸಿ ಅದರಲ್ಲಿಯ ವಿಷಯದ ಮೇಲೆ ಪ್ರಶ್ನೆಕೇಳಿ ಉತ್ತರ ಪಡೆಯುವುದು.<br>* ಉತ್ತರಗಳನ್ನು ಸ್ಪಷ್ಟವಾಗಿ ಹೇಳುವಂತಹ ಪ್ರಶ್ನೆ ಕೇಳಲು ಹೇಳುವುದು.<br>* ಗುಂಪು ವಿಧಾನದಲ್ಲಿ ಪರಸ್ಪರರು ಪ್ರಶ್ನೆಕೇಳಿ ಉತ್ತರ ಪಡೆಯುವುದು.<br>(ಅವಧಿ : ೨) |
| | * ೩.೨.೪. ಲೇಖನಚಿಹ್ನೆ ಮತ್ತು ಛಂದೋವಿನ್ಯಾಸಗಳನ್ನು ಅರಿತು ಓದುವುದು. | * ಲೇಖನಚಿಹ್ನೆಗಳ ವೈಶಿಷ್ಟ್ಯವನ್ನು ಅರಿಯುವುದು.<br>* ಛಂಧೋವಿನ್ಯಾಸದ ಸಾಮಾನ್ಯ ಲಕ್ಷಣಗಳನ್ನು ತಿಳಿಯುವುದು.<br>* ಧ್ವನಿ ಏರಿಳಿತದೊಂದಿಗೆ ಓದುವುದನ್ನು ಅಭಿವೃದ್ಧಿಗೊಳಿಸುವುದು. | * ಲೇಖನಚಿಹ್ನೆ ಮತ್ತು ಛಂದೋವಿನ್ಯಾಸಗಳನ್ನು (ಬಳಕೆಯಾಗಿರುವ) ಒಳಗೊಂಡಿರಲಿ.<br>* ಅಲಂಕಾರ, ಪ್ರಾಸಗಳು ಇರುವಂತಹುದು.<br>* ೦೩ ರಿಂದ ೦೪ ಪದ್ಯ<br>* ಭಾಮಿನಿ ಷಟ್ಪದಿ<br>* ಪದ್ಯಪಾಠ | * ಪದ್ಯವನ್ನು ಸುಮಧುರವಾಗಿ ವಾಚಿಸುವುದು.<br>* ವೃಂದದಲ್ಲಿ ಗೀತೆಯನ್ನು ಹಾಡುವುದು.<br>* ಲೇಖನಚಿಹ್ನೆ ಹಾಗೂ ಛಂದೋವಿನ್ಯಾಸಗಳನ್ನು ಕುರಿತು ವಿವರಿಸುವುದು.<br>* ಲೇಖನಚಿಹ್ನೆ ಗಮನಿಸಿ ಓದುವುದು. | * ಲೇಖನಚಿಹ್ನೆಗಳ ವೈಶಿಷ್ಟ್ಯವನ್ನು ಹೇಳಿಸುವುದು.<br>* ಪದ್ಯವನ್ನು ವಾಚಿಸಲು ಹೇಳುವುದು.<br>* ಅಲಂಕಾರ, ಪ್ರಾಸಗಳನ್ನು ಕುರಿತು ವಿಶ್ಲೇಷಿಸಲು ಹೇಳುವುದು.<br>* ಇತರ ಷಟ್ಪದಿಗಳನ್ನು ಓದಿಸುವುದು. |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | | * ಪರಿಣಾಮಕಾರಿಯಾಗಿ ವಾಚನ ಮಾಡುವುದು.<br>* ಪದ್ಯದಲ್ಲಿರುವ ಪದಗಳನ್ನು ಬಿಡಿಸಿ, ಅರ್ಥವತ್ತಾಗಿ ಓದುವುದು.<br>* ಅಲಂಕಾರ, ಪ್ರಾಸಗಳ ಬಗ್ಗೆ ತಿಳಿಯುವುದು. | | * ಅಲಂಕಾರ, ಪ್ರಾಸಗಳ ಬಳಕೆಮಾಡಿ ವಾಚನ ಮಾಡುವುದು.<br>* ವಿವಿಧ ಕವಿತೆಗಳನ್ನು ವಾಚಿಸುವುದು.<br>* ಛಂದೋವಿನ್ಯಾಸಗಳನ್ನು ಗಮನಿಸಿ ಓದುವುದು. | * ಅಲಂಕಾರಗಳನ್ನು ಗುರುತಿಸಿ ಸಮನ್ವಯ ಗೊಳಿಸಲು ಹೇಳುವುದು.<br>* ಕಂದಪದ್ಯಗಳನ್ನು ವಾಚಿ ಸಲು ಹೇಳುವುದು.<br>* ವಾಚನದ ಗಮ್ಯತೆ, ನಿಲುಗಡೆಯನ್ನು ವೀಕ್ಷಿ ಸುವುದು.<br>(ಅವಧಿ : ೭) |
| | * ೩.೭.೫. ಸುಮಾರು ೭೦೦೦ ಪದಗಳನ್ನು ಸ್ವತಂತ್ರವಾಗಿ ಓದಿ, ಗ್ರಹಿಸುವುದು. | * ಪದಸಂಪತ್ತನ್ನು ಹೆಚ್ಚಿಸಿ ಕೊಳ್ಳುವುದು.<br>* ಓದುವ ಹವ್ಯಾಸವನ್ನು ಬೆಳೆಸುವುದು.<br>* ಓದಿ ಗ್ರಹಿಸುವ ಕೌಶಲವನ್ನು ಉತ್ತಮಗೊಳಿಸುವುದು.<br>* ಸ್ವ-ಕಲಿಕೆಯನ್ನು ಉತ್ತಮ ಪಡಿಸಿಕೊಳ್ಳುವುದು.<br>* ಪದಕೋಶ ಬಳಸುವುದನ್ನು ಅರಿಯುವುದು.<br>* ಬಳಕೆಯಲ್ಲಿರದ ಪದಗಳ ಅರ್ಥ ತಿಳಿಯುವುದು.<br>* ಪುಸ್ತಕಗಳನ್ನು ಪ್ರೀತಿಸುವ ಗುಣ ಬೆಳೆಸುವುದು. | * ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುವ ಪಾಠ.<br>* ಪರಿಚಿತ-ಪರಿಚಿತವಲ್ಲದ ಪದಗಳಿರುವುದು.<br>* ಪ್ರಹಸನ ಭಾಗ<br>* ಮಗುವಿನ ಜೀವನಕ್ಕೆ (ಅನುಭವಕ್ಕೆ) ಹತ್ತಿರವಿರುವ ವಸ್ತು ವಿಷಯವಿರುವುದು.<br>* ಗದ್ಯಪಾಠ | * ಪಠ್ಯವನ್ನು ಸ್ಪಷ್ಟವಾಗಿ ವಾಚಿಸುವುದು.<br>* ಸ್ವ ಓದಿಗೆ ಅವಕಾಶ ಕಲ್ಪಿಸುವುದು.<br>* ಪದಗಳ ಅರ್ಥಹೇಳುವುದು.<br>* ಪದಗಳನ್ನು ವಾಕ್ಯದಲ್ಲಿ ಬಳಕೆ ಮಾಡುವುದು.<br>* ಪತ್ರಿಕೆಗಳನ್ನು ಓದಿ ಅರ್ಥ ಗ್ರಹಿಸುವುದು.<br>* ಇತರ ಕಿರು ಪುಸ್ತಕಗಳನ್ನು ಓದುವುದು.<br>* ಪದಗಳನ್ನು ಸಂಗ್ರಹಿಸಿ ಅರ್ಥಹೇಳುವುದು.<br>* ಪದಕೋಶದ ನೆರವಿನಿಂದ ಪದದ ಅರ್ಥ ಕಂಡು ಕೊಳ್ಳುವುದು. | * ವಿಷಯವನ್ನು ವಾಚಿಸಲು ಹೇಳುವುದು.<br>* ಓದಿನ ಬಳಿಕ ಅದರ ಮುಖ್ಯಾಂಶಗಳನ್ನು ಹೇಳಿ ಸುವುದು.<br>* ಪೂರಕಸಾಹಿತ್ಯವನ್ನು ಓದಿಸುವುದು.<br>* ಪದಗಳಿಗೆ ಅರ್ಥ ಹೇಳಿಸುವುದು.<br>* ವಾಕ್ಯರಚನೆ, ಪ್ರಯೋಗ ಗಳನ್ನು ಮಾಡಿಸುವುದು.<br>* ಪದಗಳನ್ನು ಅರ್ಥಸಹಿತ ಸಂಗ್ರಹಿಸಲು ಹೇಳುವುದು.<br>* ಪದಕೋಶದ ಬಳಕೆಯನ್ನು ವೀಕ್ಷಿಸುವುದು.<br>(ಅವಧಿ : ೧೦) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೪.೭.೧. ಸಮಾನಾರ್ಥಕ ಭಿನ್ನಾರ್ಥಕ ಪದ ಮತ್ತು ಪದಪುಂಜವನ್ನು ಸ್ವಂತ ವಾಕ್ಯದಲ್ಲಿ ಬಳಸುವುದು. | * ಪದಗಳ ಲಕ್ಷಣ ಹಾಗೂ ವೈಶಿಷ್ಟ್ಯಗಳನ್ನು ಅರಿಯುವುದು.<br>* ಪದವು ವಿವಿಧ ಸಂದರ್ಭಗಳಲ್ಲಿ ಬಳಕೆಯಾದಾಗ ಕೊಡುವ ಅರ್ಥವನ್ನು ತಿಳಿಯುವುದು.<br>* ಸಮಾನಾರ್ಥಕ, ಭಿನ್ನಾರ್ಥಕ ಪದಗಳ ವ್ಯತ್ಯಾಸವನ್ನು ಅರಿಯುವುದು.<br>* ಪದ-ಪುಂಜಗಳ ಅರ್ಥವನ್ನು ಗ್ರಹಿಸುವುದು.<br>* ವಾಕ್ಯಗಳಲ್ಲಿ ಪದಗಳನ್ನೂ ಸಂದರ್ಭಕ್ಕನ್ನುಸಾರ ಬಳಸುವುದು.<br>* ಸ್ವಂತವಾಕ್ಯಗಳನ್ನು ರಚಿಸುವ ಕೌಶಲವನ್ನು ಹೆಚ್ಚಿಸಿಕೊಳ್ಳುವುದು. | * ಹಾಸ್ಯ ಪ್ರಸಂಗವನ್ನು ಒಳಗೊಂಡಂತೆ ಗದ್ಯ.<br>* ಸಮಾನಾರ್ಥಕ, ಭಿನ್ನಾರ್ಥಕ ಪದಗಳನ್ನು ಒಳಗೊಂಡಿರುವುದು.<br>* ಪದಪುಂಜಗಳಿಂದ ಕೂಡಿದ ವಾಕ್ಯಗಳನ್ನು ಹೊಂದಿರುವುದು.<br>* ಹಾಸ್ಯಪ್ರಸಂಗ ಯಾರ ಮನಸ್ಸಿಗೂ ನೋವುಂಟು ಮಾಡದಂತಹುದು.<br>* ನಿತ್ಯ ಜೀವನಕ್ಕೆ ಅನ್ವಯಿಸಿಕೊಳ್ಳುವ ಪ್ರಸಂಗವಾಗಿರಲಿ.<br>* ಗದ್ಯಪಾಠ | * ಪ್ರಸಂಗವನ್ನು ರಸವತ್ತಾಗಿ ವಿವರಿಸುವುದು.<br>* ಪದಗಳ ವೈಶಿಷ್ಟ್ಯವನ್ನು ವಿವರಿಸುವುದು.<br>* ಪದಗಳ ಭಿನ್ನಾರ್ಥಕ, ಸಮಾನಾರ್ಥಕಗಳನ್ನು ಗುರುತಿಸುವುದು.<br>* ಪದಗಳನ್ನು ಸಂದರ್ಭಕ್ಕನುಸಾರ ಬಳಸುವುದನ್ನು ರೂಢಿ ಮಾಡಿಸುವುದು.<br>* ಸ್ವಂತವಾಕ್ಯಗಳನ್ನು ರಚಿಸುವುದು.<br>* ಪದಗಳಿಗೆ ಸಮಾನಾರ್ಥಕ ಹಾಗೂ ಭಿನ್ನಾರ್ಥಕಗಳನ್ನು ಬರೆಯುವುದು. | * ಪದಗಳನ್ನು ಸ್ಪಷ್ಟವಾಗಿ ತಪ್ಪಿಲ್ಲದಂತೆ ಬರೆಸುವುದು.<br>* ಕೊಟ್ಟ ಪದಗಳಿಗೆ ಸಮಾನಾರ್ಥಕಗಳನ್ನು ಪಟ್ಟಿ ಮಾಡುವುದು.<br>* ಭಿನ್ನಾರ್ಥಕಗಳನ್ನು ಗುರುತಿಸಿ ವಾಕ್ಯ ರಚನೆ ಮಾಡುವುದು.<br>* ಸ್ವಂತವಾಕ್ಯಗಳನ್ನು ನೀಡಿ ಪದ-ಅರ್ಥ ಬರುವಂತೆ ಬರೆಯಲು ಹೇಳುವುದು.<br>* ಪದ-ಬಂಧ, ಭಾಷಾ-ಆಟಗಳನ್ನು ಆಡಿಸುವುದು.<br>* ನಿತ್ಯಜೀವನದಲ್ಲಿ ಬಳಸುವ ಪದಗಳನ್ನು ವಿವಿಧ ಸಂದರ್ಭಗಳಲ್ಲಿ ಬಳಕೆ ಮಾಡಿ ಬರೆಯಲು ಹೇಳುವುದು.<br><br>(ಅವಧಿ : ೧೦) |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೪.೭.೨.<br>ಕಥೆಗಳನ್ನು ನಾಟಕಗಳನ್ನಾಗಿ, ನಾಟಕಗಳನ್ನು ಕಥೆಗಳನ್ನಾಗಿ ಪರಿವರ್ತಿಸುವ ಹಾಗೂ ಕವಿತೆಗಳಿಗೆ ಸಾರಾಂಶ ಬರೆಯುವ ಸೃಜನಾತ್ಮಕತೆಯನ್ನು ಬೆಳೆಸುವುದು. | * ಕಥೆ, ನಾಟಕಗಳ ಸಾಮಾನ್ಯ ಲಕ್ಷಣಗಳನ್ನು ತಿಳಿಯುವುದು.<br>* ಕಥೆಯ ಸಾರಾಂಶವನ್ನು ಪೂರ್ಣ ಮತ್ತು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವುದು.<br>* ಸಾಹಿತ್ಯವನ್ನು ಇನ್ನೊಂದು ಪ್ರಕಾರಕ್ಕೆ ರೂಪಾಂತರಿಸಲು ಸಮರ್ಥರಾಗುವುದು.<br>* ಕವಿತೆಗಳಿಗೆ ಸಾರಾಂಶವನ್ನು ಬರೆಯುವುದು.<br>* ಸೃಜನಾತ್ಮಕತೆಯ ಕೌಶಲವನ್ನು ಹೆಚ್ಚಿಸುವುದು.<br>* ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತು ಅರಿಯುವುದು. | * ಸೃಜನಾತ್ಮಕತೆಯನ್ನು ಬೆಳೆಸಲು ಪ್ರೇರೇಪಿಸುವ ಕಲ್ಪನಾಶಕ್ತಿಗೆ ಇಂಬು ನೀಡುವಂತಿರಲಿ.<br>* ಹೊಸಗನ್ನಡ ಪದ್ಯ.<br>* ೧೪ ರಿಂದ ೧೮ ಸಾಲು.<br>* ನಿರ್ದಿಷ್ಟ ವಿಷಯ ವಸ್ತುವನ್ನು ಹೊಂದಿರುವುದು.<br>* ಮಕ್ಕಳು ಸಾರಾಂಶವನ್ನು ಅರಿಯಲು ಸಾಧ್ಯವಾಗುವಂತಹುದು.<br>* ಪದ್ಯವನ್ನು ವಿವಿಧ ದೃಷ್ಟಿಕೋನಗಳಿಂದ ನೋಡುವಂತಹದಿರಲಿ.<br>* ಪದ್ಯಪಾಠ | * ಕವಿತೆಯನ್ನು ರಸವತ್ತಾಗಿ ವಾಚಿಸುವುದು.<br>* ಕವಿತೆಯನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸುವುದು.<br>* ಕವಿತೆಗೆ ಸಾರಾಂಶವನ್ನು ಬರೆದು ಮಂಡಿಸುವುದು.<br>* ಸಾರಾಂಶವನ್ನು ನಿರೂಪಿಸುವುದು.<br>* ಕಥೆಗಳನ್ನು ನಾಟಕಗಳನ್ನಾಗಿ ನಾಟಕಗಳನ್ನು ಕಥೆಯನ್ನಾಗಿ ರೂಪಾಂತರಿಸುವಲ್ಲಿ ಗಮನಿಸುವ ಅಂಶಗಳನ್ನು ಹೇಳುವುದು.<br>* ಗುಂಪಿನಲ್ಲಿ ರೂಪಾಂತರಿಸಿ ಬರೆಸುವುದು.<br>* ನಿತ್ಯಜೀವನದಲ್ಲಿ ಕೇಳಿರುವ ಕಥೆಗಳನ್ನು ನಾಟಕ ರೂಪದಲ್ಲಿ ಬರೆಯುವುದು. | * ಕವಿತೆಯನ್ನು ಅರ್ಥಪೂರ್ಣವಾಗಿ ವಾಚಿಸಲು ಅವಕಾಶ ಕಲ್ಪಿಸಿ ವೀಕ್ಷಿಸುವುದು.<br>* ಕವಿತೆಗೆ ಸಾರಾಂಶವನ್ನು ಬರೆಸುವುದು.<br>* ಕವಿತೆಗಳಿಗೆ ಸಾರಾಂಶವನ್ನು ವಿವಿಧ ದೃಷ್ಟಿಕೋನಗಳಿಂದ ಆಲೋಚಿಸಿ ಬರೆಸುವುದು.<br>* ಕಥೆ ಹೇಳಿ ನಾಟಕ ರೂಪದಲ್ಲಿ ಬರೆಸುವುದು.<br>* ನಾಟಕವನ್ನು ಓದಿ ಕಥೆಯ ರೂಪದಲ್ಲಿ ಬರೆಯಲು ಹೇಳುವುದು.<br>* ಅನುಭವಕ್ಕೆ ಬಂದ ವಿಷಯಗಳನ್ನು ಕಥೆಯ ರೂಪದಲ್ಲಿ ಬರೆಸುವುದು.<br><br>**(ಅವಧಿ : ೭)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೪.೭.೩. ಪ್ರಬಂಧ, ಕಥೆ, ಕವಿತೆ, ಪತ್ರ, ಟಿಪ್ಪಣಿ, ಗಾದೆ ವಿಸ್ತರಣೆ ಮುಂತಾದವುಗಳನ್ನು ಸೂಕ್ತ ಲೇಖನ ಚಿಹ್ನೆಗಳೊಂದಿಗೆ ಸಮರ್ಥ ರೀತಿಯಲ್ಲಿ ಬರೆಯುವುದು. | * ಸಾಹಿತ್ಯದ ವಿವಿಧ ಪ್ರಕಾರಗಳನ್ನು ತಿಳಿಯುವುದು.<br>* ಲೇಖನಚಿಹ್ನೆಗಳನ್ನು ಬಳಸುವ ಸಂದರ್ಭಗಳನ್ನು ಅರಿಯುವುದು.<br>* ಬರೆವಣಿಗೆಯಲ್ಲಿ ಲೇಖನ ಚಿಹ್ನೆಗಳ ಅಗತ್ಯತೆಯನ್ನು ಕಂಡುಕೊಳ್ಳುವುದು.<br>* ಲೇಖನಚಿಹ್ನೆಗಳನ್ನು ಬಳಸಿ ಬರೆದಾಗ ವಾಕ್ಯಗಳು ನೀಡುವ ಅರ್ಥ-ವ್ಯತ್ಯಾಸಗಳನ್ನು ತಿಳಿಯುವುದು.<br>* ಲೇಖನಚಿಹ್ನೆ ವೈಶಿಷ್ಟ್ಯವನ್ನು ಗುರುತಿಸುವುದು. | * ರಮ್ಯವಾದ ವರ್ಣನೆ, ಸೊಬಗನ್ನು ಬಿಂಬಿಸುವ ನಾಡು-ನುಡಿಯ ಅಭಿಮಾನ ಬೆಳೆಸಲು ಪ್ರೇರೇಪಿಸುವ ನಾಡು-ನುಡಿ ವರ್ಣನೆ ಇರಲಿ.<br>* ಪ್ರಬಂಧ ರೂಪದ ಪಾಠವಾಗಿರುವುದು.<br>* ಹೆಚ್ಚು ಲೇಖನಚಿಹ್ನೆಗಳು ಬಳಕೆಯಾಗಿರುವುದು.<br>* ನಾಡು-ನುಡಿಯ ಬಗ್ಗೆ ಪ್ರೇಮ ಹೆಚ್ಚಾಗುವಂತಿರುವುದು.<br>* ಗದ್ಯಪಾಠ | * ಪಾಠವನ್ನು ಭಾವಪೂರ್ಣವಾಗಿ ವಾಚಿಸುವುದು.<br>* ಲೇಖನಚಿಹ್ನೆಗಳನ್ನು ಗಮನನಿಸಿ ವಾಚಿಸುವುದು.<br>* ಲೇಖನಚಿಹ್ನೆಗಳನ್ನು ಒಳಗೊಂಡಿರುವ ವಾಕ್ಯ ಗಳನ್ನು ಬರೆಸುವುದು.<br>* ಕಥೆ, ಟಿಪ್ಪಣಿ, ಗಾದೆ ಮುಂತಾದವನ್ನು ಸೂಕ್ತ ಲೇಖನಚಿಹ್ನೆ ಬಳಸಿ ಬರೆಯುವುದು.<br>* ಮಕ್ಕಳ ಪತ್ರಿಕೆಗಳಲ್ಲಿ ಸಂದರ್ಭಕ್ಕನುಸಾರ ಬಳಸಿದ ಚಿಹ್ನೆಗಳನ್ನು ಪರಿವೀಕ್ಷಿಸುವುದು. | * ಲೇಖನಚಿಹ್ನೆಗಳು ಬಳಕೆಯಾಗುವ ಸಂದರ್ಭಗಳನ್ನು ಹೇಳಿಸುವುದು.<br>* ಚಿಹ್ನೆಗಳನ್ನು ಗಮನಿಸಿ ವಾಚಿಸುವುದನ್ನು ಆಲಿಸುವುದು.<br>* ಗಾದೆಗಳನ್ನು ಬರೆಸಿ ಲೇಖನ ಚಿಹ್ನೆ ಹಾಕಿಸುವುದು.<br>* ವಿವಿಧ ಸಾಹಿತ್ಯ ಪ್ರಕಾರಗಳಿಗೆ ಸೂಕ್ತ ಲೇಖನಚಿಹ್ನೆ ಬಳಸಿ ಬರೆಯಲು ಹೇಳುವುದು.<br>* ಟಿಪ್ಪಣಿ ನೀಡಿ ಚಿಹ್ನೆ ಬಳಸಿ ಅವಲೋಕಿಸಿ. ಪತ್ರ ಬರೆಸುವುದು.<br>* ನಿರ್ದಿಷ್ಟ ವಿಷಯ ನೀಡಿ ಪ್ರಬಂಧ ಬರೆಸಿ.<br><br>**(ಅವಧಿ : ೧೦)** |

| | **ಸಾಮರ್ಥ್ಯ** | **ಉದ್ದೇಶ** | **ವ್ಯಾಪ್ತಿ ಮತ್ತು ಪ್ರಕಾರ** | **ವಿಧಾನ** | **ಮೌಲ್ಯಮಾಪನ** |
|---|---|---|---|---|---|
| | * ೪.೭.೪. ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಬರೆವಣಿಗೆಯಲ್ಲಿ ಬಳಸುವುದು. | * ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ಕೆಲವು ಅಂಶಗಳನ್ನು ಪರಿಚಯಿಸಿಕೊಳ್ಳುವುದು.<br>* ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಬಳಸಿ ಬರೆಯುವ ಕೌಶಲವನ್ನು ಬೆಳೆಸಿಕೊಳ್ಳುವುದು.<br>* ಬರೆವಣಿಗೆಯಲ್ಲಿ ಸ್ಪಷ್ಟತೆಯನ್ನು ಕಂಡುಕೊಳ್ಳುವುದು.<br>* ಬರೆವಣಿಗೆಯನ್ನು ಆಕರ್ಷಕವಾಗಿರುವಂತೆ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅನುಸರಿಸುವುದು.<br>* ಬರವಣಿಗೆಯ ಆಸಕ್ತಿಯನ್ನು ಹೆಚ್ಚಿಸುವುದು.<br>* ರಚನಾ ಕೌಶಲವನ್ನು ಅಭಿವೃದ್ಧಿಗೊಳಿಸುವುದು. | * ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥೈಸಲು ಅವಕಾಶವಿರುವ ಅಂಶ.<br>* ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ಅಂಶಗಳನ್ನು ಒಳಗೊಂಡ ಪಾಠ.<br>* ಜನಪದ ಕಥೆ<br>* ವಿಶಿಷ್ಟ ಪದಗಳು.<br>* ನುಡಿಗಟ್ಟು, ನಾಣ್ನುಡಿಗಳನ್ನು ಒಳಗೊಂಡಿರುವುದು.<br>* ಅಲಂಕಾರದ ಮಾತುಗಳು ಬಳಕೆಯಾದಂತಹುದು.<br>* ಗದ್ಯಪಾಠ. | * ಪಠ್ಯವನ್ನು ಅರ್ಥವತ್ತಾಗಿ ವಾಚಿಸುವುದು.<br>* ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶವನ್ನು ಪರಿಚಯಿಸುವುದು.<br>* ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ಅಂಶಗಳನ್ನು ವಿಶ್ಲೇಷಿಸುವುದು.<br>* ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಬಳಸಿ ಬರೆಯುವುದು.<br>* ಬರೆವಣಿಗೆಯಲ್ಲಿ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅಳವಡಿಸುವುದು.<br>* ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶಗಳ ನಿಮಯಗಳನ್ನು ಅನುಸರಿಸಿ ಬರೆಯುವುದು. | * ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಪಟ್ಟಿಮಾಡಿಸುವುದು.<br>* ನಿಯಮಗಳನ್ನು ಕ್ರಮಾನುಗತವಾಗಿ ಬರೆಸುವುದು.<br>* ನಿಯಮಗಳನ್ನು ಬರೆವಣಿಗೆಯಲ್ಲಿ ಬಳಸಿ ಬರೆಸುವುದು.<br>* ಭಾಷಾ ಆಟಗಳನ್ನು ಆಡಿಸುವುದು.<br><br>**(ಅವಧಿ : ೧೦)** |

| | ಸಾಮರ್ಥ್ಯ | ಉದ್ದೇಶ | ವ್ಯಾಪ್ತಿ ಮತ್ತು ಪ್ರಕಾರ | ವಿಧಾನ | ಮೌಲ್ಯಮಾಪನ |
|---|---|---|---|---|---|
| | * ೪.೭.೫. ಛಂದಸ್ಸುಶಾಸ್ತ್ರದ ಪ್ರಾಸ, ಮಾತ್ರೆ, ಗಣ ಇವುಗಳ ಪರಿಚಯ ಮಾಡಿಕೊಳ್ಳುವುದು. | * ಛಂದಸ್ಸಿನ ಬಗ್ಗೆ ಆಸಕ್ತಿಯನ್ನು ಬೆಳೆಸುವುದು.<br>* ಪ್ರಾಸ, ಮಾತ್ರೆ, ಗಣ ಇವುಗಳ ಸಾಮಾನ್ಯ ಲಕ್ಷಣಗಳನ್ನು ಅರಿಯುವುದು.<br>* ಪದ್ಯಗಳಲ್ಲಿನ ಪ್ರಾಸ ಬಳಕೆಯನ್ನು ಅರಿಯುವುದು.<br>* ಪದ್ಯಗಳಿಗೆ ಮಾತ್ರೆಹಾಕಿ ಗಣವಿಂಗಡಿಸುವುದು.<br>* ಗಣವಿಂಗಡಣೆಯ ವಿಧಾನವನ್ನು ಅರಿಯುವುದು.<br>* ಪದ್ಯರಚನೆಯ ಕುರಿತಾಗಿ ಆಸಕ್ತಿಯನ್ನು ಬೆಳೆಸಿಕೊಳ್ಳುವುದು. | * ಕವಿತೆಗಳ ಕುರಿತಾಗಿ, ಸಾಹಿತ್ಯದ ಬಗ್ಗೆ ಅಭಿರುಚಿಯನ್ನು ಹೆಚ್ಚಿಸುವ ನಡುಗನ್ನಡ ಪದ್ಯ.<br>* ಪ್ರಾಸ ಗುರುತಿಸಲು ಬರುವಂತಿರುವುದು.<br>* ಮಾತ್ರೆಹಾಕಿ, ಗಣ ವಿಂಗಡಿಸುವ ನಿಯಮವನ್ನು ಒಳಗೊಂಡಿರುವುದು.<br>* ಕಂದಪದ್ಯ<br>* ೧೨ ರಿಂದ ೧೬ ಸಾಲು<br>* ಛಂದಸ್ಸು ಶಾಸ್ತ್ರದ ಪರಿಚಯ ಮಾಡಲು ಪೂರಕವಾಗಿರುವುದು.<br>* ಪದ್ಯಪಾಠ | * ಪದ್ಯವನ್ನು ಲಯ–ಗತಿಗಳಿನುಸಾರ ವಾಚಿಸುವುದು.<br>* ಪ್ರಾಸಗಳನ್ನು ಗುರುತಿಸಿ ಬರೆಯುವುದು.<br>* ಮಾತ್ರೆಹಾಕುವುದನ್ನು ಅಭ್ಯಾಸ ಮಾಡುವುದು.<br>* ಗಣವಿಂಗಡಣೆ ಮಾಡುವುದು.<br>* ಛಂದಸ್ಸಿನ ನಿಯಮಗಳ ಕುರಿತು ವಿವರಿಸುವುದು.<br>* ಇತರ ಪ್ರಕಾರದ ಪದ್ಯಗಳಿಗೆ ಪ್ರಸ್ತಾರಹಾಕಿ ಗಣ ವಿಂಗಡಿಸುವುದು.<br>* ಗಣಗಳನ್ನು ವಿಂಗಡಿಸುವಲ್ಲಿ ಅನುಸರಿಸುವ ನಿಯಮಗಳನ್ನು ವಿವರಿಸುವುದು. | * ಪದ್ಯವನ್ನು ವಾಚಿಸಲು ಹೇಳುವುದು.<br>* ಪ್ರಾಸ ಗುರುತಿಸಿ ಬರೆಯಲು ಹೇಳುವುದು.<br>* ಪದ್ಯದ ಸಾಲುಗಳಿಗೆ ಮಾತ್ರೆ ಹಾಕಲು ಹೇಳುವುದು.<br>* ಗಣವಿಂಗಡಣೆ ಮಾಡಿಸುವುದು.<br>* ಪ್ರಸ್ತಾರ ಹಾಕಿ ಗಣ ವಿಂಗಡಿಸಲು ಹೇಳುವುದು.<br>* ತ್ರಿಪದಿ–ಷಟ್ಪದಿಗಳ ಗಣ ವಿಂಗಡಣೆ ಮಾಡಿಸುವುದು.<br><br>**(ಅವಧಿ : ೭)** |

# ಕನ್ನಡ ಭಾಷಾ

# ಪಠ್ಯವಸ್ತು

# ೮, ೯ ಮತ್ತು ೧೦

## ಪ್ರಥಮ ಭಾಷೆ

## ದ್ವಿತೀಯ ಭಾಷೆ

## ಮತ್ತು ತೃತೀಯ ಭಾಷೆ

# ಪಠ್ಯವಸ್ತು ರಚನಾ ಸಮಿತಿ

**ಅಧ್ಯಕ್ಷ**

**ಡಾ.ಸಿ.ಎಸ್. ರಾಮಚಂದ್ರ**

ಪ್ರವಾಚಕ ಕನ್ನಡ ಮತ್ತು ಭಾಷಾವಿಜ್ಞಾನ
ಭಾಷಾವಿಜ್ಞಾನ ಅಧ್ಯಯನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ
ಮೈಸೂರು – ೫೭೦ ೦೦೬

**ಸದಸ್ಯ – ನಿರ್ವಾಹಕ**

**ಬೆಳವಾಡಿ ಮಂಜುನಾಥ**

ಅಧ್ಯಾಪಕ
ಬಾಲಿಕಾ ಸರ್ಕಾರಿ ಪದವಿ ಪೂರ್ವ
ಕಾಲೇಜು
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ

**ಸದಸ್ಯರು**

**ಡಾ. ಮುಳುಕುಂಟೆ ರಮೇಶ್**

ಕನ್ನಡ ಅಧ್ಯಾಪಕ
ರಾಗೀಗುಡ್ಡ ಪ್ರೌಢಶಾಲೆ
ಜಯನಗರ ೯ನೇ ಬಡಾವಣೆ
ಬೆಂಗಳೂರು – ೫೬೦ ೦೬೯

**ಬಿ. ಬಾಲಕೃಷ್ಣಯ್ಯ**

ಕನ್ನಡ ಅಧ್ಯಾಪಕ
ಸರ್ಕಾರಿ ಪ್ರೌಢಶಾಲೆ
ದೇವಲಾಪುರ
ಮೈಸೂರು ತಾಲೂಕು

**ಎಚ್.ಎಸ್. ವಾಣಿ**

ಅಧ್ಯಾಪಕಿ
ಸರ್ಕಾರಿ ಪ್ರೌಢಶಾಲೆ
ಪಿ.ಎಚ್. ಕಾಲೋನಿ
ತುಮಕೂರು

## ಪ್ರಸ್ತಾವನೆ

ಕರ್ನಾಟಕದ ಪ್ರಾದೇಶಿಕ ಪರಿಸರದ ಭಾಷೆಯಾದ ಕನ್ನಡ, ಅನೇಕರ ಮಾತೃಭಾಷೆಯೂ ಹೌದು; ಶೈಕ್ಷಣಿಕ ಪ್ರಾಥಮಿಕ ಭಾಷೆಯೂ ಹೌದು. ಶೈಕ್ಷಣಿಕ ಕಲಿಕೆಯಲ್ಲಿ ಅದೊಂದು ಪ್ರಮುಖ ಅಂಗ. ಪ್ರೌಢಶಾಲಾ ಹಂತದವರೆಗೆ ಭಾಷಿಕವಾಗಿ ಕಲಿಯುವಿಕೆ ಮಹತ್ವದ್ದಾಗಿರುತ್ತದೆ. ಅಭಿವ್ಯಕ್ತಿ ಸಾಮರ್ಥ್ಯವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಗ್ರಹಿಸುವ, ಮಾತನಾಡುವ, ಓದುವ, ಬರೆಯುವ ಕೌಶಲಗಳು ಪ್ರಧಾನವಾಗಿರುತ್ತವೆ. ಕನ್ನಡನಾಡಿನಲ್ಲಿ ನೆಲೆಸಿರುವ ಜನರೆಲ್ಲ ಕನ್ನಡ ಭಾಷೆಯನ್ನು ಬಲ್ಲವರಾದರೆ, ಇಡೀ ನಾಡಿನ ಜನತೆ ಪರಸ್ಪರ ಸೌಹಾರ್ದದಿಂದ ವ್ಯವಹರಿಸಲು ಅನುಕೂಲವಾಗುತ್ತದೆ. ಆದುದರಿಂದ ಕನ್ನಡ ಮಾತೃಭಾಷೆ ಅಲ್ಲದವರಿಗೂ ಕನ್ನಡ ಕಲಿಸುವ ಮೂಲಕ ಅವರನ್ನು ರಾಜ್ಯಭಾಷೆಯ ಮುಖ್ಯವಾಹಿನಿಗೆ ತರುವ ಪ್ರಯತ್ನ ಇದಾಗಿದೆ. ಆದರೆ ಮಾತೃಭಾಷೆಯಾಗಿ ಅದೇ ಪರಿಸರದಲ್ಲಿದ್ದು ಶೈಕ್ಷಣಿಕವಾಗಿ ಕಲಿಯುವಿಕೆ ಒಂದು ಶ್ರೇಣಿಯದಾದರೆ, ಅಪರಿಚಿತ ಭಾಷಾವಲಯದಲ್ಲಿದ್ದು, ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಕನ್ನಡ ಕಲಿಯುವಿಕೆ ಪರಿಸರವನ್ನಾಧರಿಸಿರುತ್ತದೆ.

ಔಪಚಾರಿಕವಾಗಿ ಕಲಿಸುವ ಸಂದರ್ಭದಲ್ಲಿ ಪ್ರಾದೇಶಿಕ ಸಂಸ್ಕೃತಿಯ ಬಗೆಗೆ ಹೆಚ್ಚಿನ ಲಕ್ಷ್ಯವಹಿಸಿದೆ. ಭಾಷೆಯ ಮೂಲಕ ಸಂಸ್ಕೃತಿಯ ಅಂತಃಸತ್ವವನ್ನೂ ವರ್ತಮಾನದ ಗ್ರಹಿಕೆಯನ್ನೂ ಅರ್ಥ ಮಾಡಿಕೊಳ್ಳುವುದಾಗಿದೆ. ಭಾಷಾ ಬೆಳವಣಿಗೆಯ ಮಾಧ್ಯಮವಾಗಿ ಸ್ವಾಭಿಮಾನದ ಸಂಕೇತವಾಗಿರುವ ಗದ್ಯ-ಪದ್ಯಗಳ ಆಯ್ಕೆಗೆ ಆದ್ಯತೆ ನೀಡಿದೆ. ಭಾಷೆಯನ್ನು ರಚನಾತ್ಮಕವಾಗಿ ಸಾರ್ವತ್ರೀಕರಣಗೊಳಿಸುವ ಹಿನ್ನೆಲೆಯಲ್ಲಿ ಏಕರೂಪತೆಯನ್ನು ಕಾಯ್ದುಕೊಂಡಿದೆ. ಪಠ್ಯವಸ್ತು ಮೇಲ್ನೋಟಕ್ಕೆ ಸೀಮಿತ ವ್ಯಾಪ್ತಿಯದಾಗಿದೆ ಎನ್ನಿಸಿದರೂ ಸಾಮರ್ಥ್ಯ ಹಾಗೂ ಮಾನವೀಯ ಮೌಲ್ಯಗಳು ಅಂತರ್ಗತವಾಗಿದ್ದು; ಭಾಷೆ-ಸಾಹಿತ್ಯದ ಕಲಿಕೆಯ ಬಗೆಗೆ ಹೆಚ್ಚಿನ ಒಲವನ್ನು ಬೆಳೆಸಿಕೊಳ್ಳಲು ಅನುವಾಗುವಂತಿದೆ. ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಸ್ತರದಲ್ಲಿ ಕಲಿಕೆ ಮತ್ತು ಬೋಧನೆಯ ಗುಣಮಟ್ಟವನ್ನು ಮೌಲ್ವೀಕರಿಸುವ ಸದುದ್ದೇಶವಿದೆ. ನಿರಂತರ ಕಲಿಕಾ ಪ್ರಕ್ರಿಯೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ. ಮಕ್ಕಳ ಅಗತ್ಯತೆ ಮತ್ತು ಸಾಮರ್ಥ್ಯವನ್ನು ಆಧರಿಸಿ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಲಕ್ಷ್ಯದಲ್ಲಿರಿಸಿಕೊಂಡಿದೆ. ವೈಜ್ಞಾನಿಕ ಮತ್ತು ಶೈಕ್ಷಣಿಕ ಸಂಶೋಧನಾ ನೆಲೆಯಲ್ಲಿ ರಾಷ್ಟ್ರೀಯ ಶಿಕ್ಷಣನೀತಿ ಹಾಗೂ ೨೦೦೧ ಮತ್ತು ೨೦೦೫ರ ಪಠ್ಯವಸ್ತುವನ್ನು ಆಧರಿಸಿ ಪ್ರಕೃತ ಪಠ್ಯವಸ್ತುವನ್ನು ಪರಿಷ್ಕರಿಸಿ ವ್ಯವಸ್ಥಿತವಾಗಿ ಸಿದ್ಧಪಡಿಸಿದೆ.

ಕಲಿಕೆ ಚೇತೋಹಾರಿಯೂ ಉಲ್ಲಾಸದಾಯಕವೂ ಆಗಿರುವಂತೆ ಯೋಜಿಸಿ ಭಾಷಾ ಆಧುನೀಕರಣವನ್ನು ಸಮರ್ಪಕ ರೀತಿಯಲ್ಲಿ ಅನುಸರಿಸುವುದರ ಜತೆಗೆ ದೇಶಿ ಸೊಗಡನ್ನು ಉಳಿಸಿಕೊಂಡು ಶ್ರೇಣೀಕೃತ ಕಲಿಕೆಗೆ ಪೂರಕವಾಗುವಂತೆ ಸಿದ್ಧಗೊಳಿಸಿದೆ. ಪರಿಸರ ಹಾಗೂ ಪ್ರಕೃತ ವಿದ್ಯಮಾನಗಳನ್ನು ಸಮರ್ಥ ರೀತಿಯಲ್ಲಿ ಗ್ರಹಿಸುವಂತೆ ಪಠ್ಯವಸ್ತುವನ್ನು ಅಣಿಗೊಳಿಸಿದೆ. ಪೂರಕ ಅಧ್ಯಯನ ಮತ್ತು ರಚನಾತ್ಮಕ ವಿಸ್ತೃತ ಚಟುವಟಿಕೆಗಳಿಂದ ಕಲಿಕೆಯನ್ನು ದೃಢಗೊಳಿಸಿದೆ. ಸಾಮಾಜಿಕ ಶಾಂತಿಗೆ ಭಂಗ ಬಾರದಂತೆ ಎಚ್ಚರಿಕೆಯಿಂದ ಪಠ್ಯವಸ್ತುವಿನ ರಚನೆ ಮಾಡಿದೆ. ಕಾವ್ಯಭಾಗದಲ್ಲಿ ವಿಶೇಷವಾಗಿ ಕ್ರಿಯಾತ್ಮಕ ಛಂದಸ್ಸು ಮತ್ತು ಅಲಂಕಾರ ಭಾಗಗಳ ದೃಢೀಕರಣಕ್ಕೆ ಅವಕಾಶ ಒದಗಿಸಿದೆ. ಕಾವ್ಯ ಪ್ರಕಾರಗಳನ್ನು ಪರಿಚಯಿಸುತ್ತಲೇ ಕನ್ನಡ ಸಾಂಸ್ಕೃತಿಕ ಬೆಳವಣಿಗೆಯ ಹಂತಗಳನ್ನು ಅಳವಡಿಸಿದೆ. ಪ್ರತಿ ಪಾಠಗಳಲ್ಲಿ ಕರ್ತೃ ಪರಿಚಯ, ಆಶಯ ಭಾಗ, ಅಗತ್ಯ ಪೂರಕ ಟಿಪ್ಪಣಿ, ಹೊಸ ಪದಗಳ ಬಳಕೆಯ ಅರ್ಥ, ವಿವಿಧ ಸ್ತರಗಳ ಸಾಂದರ್ಭಿಕ ಭಾಷಾಭ್ಯಾಸಗಳ ಮೂಲಕ ನಿರ್ದಿಷ್ಟ ಪಠ್ಯವನ್ನು ಸಮರ್ಪಕವಾಗಿ ಗ್ರಹಿಸುವಂತೆ ಪೋಷಕವಾಗಿ ನೀಡಿದೆ. ಪದ ಭಂಡಾರವನ್ನು ಹೆಚ್ಚಿಸುವ ಉದ್ದೇಶದಿಂದ ಅರ್ಥಸಹಿತ ಪದಕೋಶವನ್ನು ಅಕಾರಾದಿಯಾಗಿ ಪಟ್ಟಿಸಿದೆ. ಪರಿಸರ ಮತ್ತು ನೈತಿಕ ಪ್ರಜ್ಞೆಯ ಬೆಳವಣಿಗೆಗೆ ವಿಶೇಷ ಆದ್ಯತೆ ನೀಡಿದೆ.

ದ್ವಿತೀಯ ಭಾಷಾ ಬೋಧನಾ ಉದ್ದೇಶಗಳು ತೃತೀಯ ಭಾಷಾ ಬೋಧನೆಯ ಉದ್ದೇಶಗಳೇ ಆಗಿರುತ್ತವೆ. ದ್ವಿತೀಯ ಹಾಗೂ ಭಾಷೆಯ ಪಠ್ಯವಸ್ತು, ಪ್ರಥಮ ಭಾಷೆ ಪಠ್ಯವಸ್ತುವಿಗಿಂತ ಸುಲಭವೂ ಸರಳವೂ ಆಗಿದ್ದು ದ್ವಿತೀಯ ಭಾಷಾ ಪಠ್ಯವಸ್ತು ತೃತೀಯ ಭಾಷಾ ಪಠ್ಯವಸ್ತುವಿಗಿಂತ ಪ್ರೌಢವಾಗಿರಲಿ. ಭಾಷಾಶೈಲಿಯ ದೃಷ್ಟಿಯಿಂದ ಸಮನ್ವಯ ಅನಿವಾರ್ಯ. ಕನ್ನಡ ಭಾಷೆಯ ಪರಿಚಯವಿರುವ ಪರಿಸರದ ಮಕ್ಕಳೂ ವ್ಯಾಸಂಗ ಮಾಡುವುದರಿಂದ ಸುಲಭ ಗ್ರಾಹ್ಯವಾಗುವಂತೆ ಪಠ್ಯದ ಆಯ್ಕೆ ಇರಬೇಕು.

# ಪ್ರಥಮ ಭಾಷೆ – ಕನ್ನಡ

(೮, ೯ ಮತ್ತು ೧೦ನೆಯ ತರಗತಿ)

**ಉದ್ದೇಶ**

೧. ಆಲಿಸುವ, ಗ್ರಹಿಸುವ, ನಿರರ್ಗಳ ಹಾಗೂ ಸ್ಪಷ್ಟವಾಗಿ ಸ್ವರಭಾರದೊಂದಿಗೆ ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.

೨. ಸೃಜನಶೀಲ ಅಭಿವ್ಯಕ್ತಿ [ಮೌಖಿಕ – ಲಿಖಿತ] ಸಾಮರ್ಥ್ಯವನ್ನು ಬೆಳೆಸುವುದು.

೩. ಭಾಷೆಯನ್ನು ದೋಷರಹಿತ ಮತ್ತು ಪರಿಣಾಮಕಾರಿಯಾಗಿ ಬಳಸುವ ಪ್ರೌಢಿಮೆಯನ್ನು ಬೆಳೆಸುವುದು.

೪. ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ, ಅಲಂಕಾರ ಮತ್ತು ಛಂದೋ ಪ್ರಕಾರಗಳನ್ನು ಹಂತಹಂತವಾಗಿ ಸರಳ ರೀತಿಯಲ್ಲಿ ಪರಿಚಯಿಸುವುದು.

೫. ಭಾಷೆಯ ಸ್ಪಷ್ಟತೆ ಹಾಗೂ ತಾತ್ವಿಕವಾಗಿ ಗ್ರಹಿಸುವ ಹಿನ್ನೆಲೆಯಲ್ಲಿ ಭಾಷಾಂಶ, ಛಂದಸ್ಸು, ಅಲಂಕಾರಗಳನ್ನು ಆಯಾ ಪಾಠಬೋಧನಾ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ ಕಲಿಸುವುದು.

೬. ಪದಭಂಡಾರವನ್ನು ಹೆಚ್ಚಿಸಿಕೊಂಡು, ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯಬಂಧಗಳನ್ನು ಅರ್ಥ ಮಾಡಿಕೊಳ್ಳುವುದು.

೭. ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ, ಚಿಂತನೆ ಮತ್ತು ಆನಂದಕ್ಕಾಗಿ ಸ್ವತಂತ್ರವಾಗಿ ಓದಲು ಸಮರ್ಥರಾಗುವಂತೆ ಮಾಡುವುದು.

೮. ಸೌಂದರ್ಯ/ಪ್ರಜ್ಞೆ, ಕಲ್ಪನೆ ಮತ್ತು ಸೃಜನಾತ್ಮಕ ಭಾವನೆಗಳನ್ನು ಜೀವಂತವಾಗಿರಿಸುವುದು.

೯. ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆತ್ಮೀಯ ಅಭಿಮಾನವನ್ನು ವೃದ್ಧಿಗೊಳಿಸುವುದು.

೧೦. ಕೃತಿ–ಕರ್ತೃವಿನ ವಿಶಿಷ್ಟ ಪರಿಚಯವಾಗುವ ರೀತಿಯಲ್ಲಿ ಸಾಹಿತ್ಯದ ಮುಖ್ಯ ಪ್ರಕಾರಗಳನ್ನು ಪರಿಚಯಿಸುವುದು.

೧೧. ರಾಷ್ಟ್ರೀಯ ಪ್ರಜ್ಞೆ, ಪ್ರಜಾಪ್ರಭುತ್ವ ಹಾಗೂ ಜೀವನ ಮೌಲ್ಯಗಳನ್ನು ಮುಖ್ಯವಾಗಿ ಗಮನಿಸುವುದು.

೧೨. ಲಿಂಗಸಮಾನತೆ, ಜಾತ್ಯತೀತತೆ, ವಿಶ್ವಶಾಂತಿ, ಸಹಬಾಳ್ವೆ, ಸ್ವಾವಲಂಬನೆ, ಆತ್ಮಗೌರವ ಮೊದಲಾದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಪ್ರೇರೇಪಿಸುವುದು.

೧೩. ಪರಿಸರ ಸಂರಕ್ಷಣೆ, ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸಾಹಿತ್ಯದ ಮೂಲಕ ಪರಿಚಯಿಸುವುದು.

೧೪. ಸಮಕಾಲೀನ ಸಮಸ್ಯೆಗಳನ್ನು ಕುರಿತು ಚಿಂತಿಸಿ ಕಾರಣ ಮತ್ತು ಪರಿಹಾರವನ್ನು ಹುಡುಕುವ ಸಾಮರ್ಥ್ಯವನ್ನು ಬೆಳೆಸುವುದು.

೧೫. ಮಹಿಳಾ ಮತ್ತು ಮಕ್ಕಳ ಹಕ್ಕುಗಳನ್ನು ಅರಿಯುವ ಮತ್ತು ಸೌಲಭ್ಯಗಳನ್ನು ಪಡೆಯುವ ಸಾಮರ್ಥ್ಯವನ್ನು ಬೆಳೆಸುವುದು.

೧೬. ಗ್ರಾಮೀಣ ಜೀವನ, ಪ್ರಾದೇಶಿಕತೆ ಹಾಗೂ ಕಲೆಗಳ ಬಗ್ಗೆ ಅರಿವು ಮೂಡಿಸುವುದು.

೧೭. ಪಠ್ಯಪುಸ್ತಕದಲ್ಲಿ ಬರುವ ಸಾಮಾಜಿಕ ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವುದು.

# ೮ ರಿಂದ ೧೦ನೆಯ ತರಗತಿ ಭಾಷಾ ಅಧ್ಯಯನ

## ವಿವರ ಮತ್ತು ಅವಧಿ ಹಂಚಿಕೆ

**ಪ್ರಥಮ ಭಾಷೆ** : [ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿದೆ]

**ಕನ್ನಡ, ತಮಿಳು, ತೆಲುಗು, ಸಂಸ್ಕೃತ, ಹಿಂದಿ, ಮರಾಠಿ, ಉರ್ದು, ಇಂಗ್ಲಿಷ್**

**ದ್ವಿತೀಯ ಭಾಷೆ** : [ಪ್ರಥಮ ಭಾಷೆಯಾಗಿ ಆಯ್ಕೆ ಮಾಡಿಕೊಂಡಿರುವ ಭಾಷೆಯನ್ನು ಹೊರತುಪಡಿಸಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿದೆ]

**ಕನ್ನಡ, ಇಂಗ್ಲಿಷ್**

**ತೃತೀಯ ಭಾಷೆ** : [ಪ್ರಥಮ ಮತ್ತು ದ್ವಿತೀಯ ಭಾಷೆಯಾಗಿ ಆಯ್ಕೆ ಮಾಡಿಕೊಂಡಿರುವ ಎರಡೂ ಭಾಷೆಗಳನ್ನು ಹೊರತುಪಡಿಸಿ ಉಳಿದ ಯಾವುದಾದರೂ ಒಂದು ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ]

**ಕನ್ನಡ, ತಮಿಳು, ತೆಲುಗು, ಸಂಸ್ಕೃತ, ಹಿಂದಿ, ಮರಾಠಿ, ಉರ್ದು, ಇಂಗ್ಲಿಷ್, ಅರೆಬಿಕ್**

**ಸೂಚನೆ**

* ತ್ರಿಭಾಷಾ ಸೂತ್ರದನ್ವಯ **ಪ್ರಥಮ, ದ್ವಿತೀಯ** ಹಾಗೂ **ತೃತೀಯ** ಭಾಷೆಗಳಲ್ಲಿ ಯಾವುದಾದರು ಒಂದು ಭಾಷೆಯಾಗಿ ಕನ್ನಡ ಭಾಷಾ ಕಲಿಕೆ ಕಡ್ಡಾಯವಾಗಿರುತ್ತದೆ.
* ಪ್ರಥಮ ಭಾಷೆಗೆ ವಾರಕ್ಕೆ **೪೫** ನಿಮಿಷಗಳ **೦೬** ಅವಧಿಯಂತೆ ವಾರ್ಷಿಕವಾಗಿ **೨೧೦** ಅವಧಿ. ದ್ವಿತೀಯ ಭಾಷೆಗೆ ವಾರಕ್ಕೆ **೦೫** ಅವಧಿಯಂತೆ ವಾರ್ಷಿಕ **೧೭೫** ಅವಧಿ. ತೃತೀಯ ಭಾಷೆಗೆ ವಾರಕ್ಕೆ **೦೪** ಅವಧಿಯಂತೆ **೧೪೦** ಅವಧಿ ಲಭ್ಯವಿದೆ.

### ಅವಧಿ ಹಂಚಿಕೆ

| ವಿಷಯ | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ |
|---|---|---|---|
| ಗದ್ಯ-ಪದ್ಯ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ, ಛಂದಸ್ಸು | ೧೫೦ | ೧೨೦ | ೧೦೦ |
| ಪತ್ರಲೇಖನ, ಪ್ರಬಂಧ | ೩೫ | ೩೦ | ೨೦ |
| ಪರಿಹಾರ ಬೋಧನೆ, ಪರೀಕ್ಷೆ | ೨೫ | ೨೫ | ೨೦ |
| **ಒಟ್ಟು** | **೨೧೦** | **೧೭೫** | **೧೪೦** |

ಕಲಿಕೆಯಲ್ಲಿ ನಿಧಾನಿಸಿದ ಮಕ್ಕಳ ದೃಷ್ಟಿಯಿಂದ ಪರಿಹಾರ ಬೋಧನೆ ಅನಿವಾರ್ಯವಾಗಿದ್ದು, ಪ್ರತೀ ಘಟಕದ ಬೋಧನೆಯ ನಂತರ ಮೌಲ್ಯಮಾಪನ ಮಾಡಿ, ದೋಷ ನಿವಾರಣೆಗೆ ಸೂಕ್ತಕ್ರಮ ಅನುಸರಿಸುವುದು.

**ಪರೀಕ್ಷೆ**

೮ ಮತ್ತು ೯ನೆಯ ತರಗತಿಗೆ ಸೆಮಿಸ್ಟರ್ ಶಿಕ್ಷಣ ಪದ್ಧತಿಗನುಗುಣವಾಗಿ ಪಠ್ಯವಸ್ತು ಹಾಗೂ ಪರೀಕ್ಷಾ ಕ್ರಮವನ್ನು ಯೋಜಿಸಿದೆ. ೧೦ನೆಯ ತರಗತಿಗೆ ವಾರ್ಷಿಕ ಪರೀಕ್ಷಾ ಕ್ರಮವಿದ್ದು, ಅದರಂತೆ ಪಠ್ಯವಸ್ತು ಹಾಗೂ ಪರೀಕ್ಷಾ ಕ್ರಮವನ್ನು ರೂಪಿಸಲಾಗಿದೆ.

೮ ಮತ್ತು ೯ನೆಯ ತರಗತಿಗಳಿಗೆ ಪ್ರತಿ ಸೆಮಿಸ್ಟರ್ ಪೂರ್ವದಲ್ಲಿ ಒಂದು ಕಿರುಪರೀಕ್ಷೆ ನಡೆಸುವುದು ಕಡ್ಡಾಯ. ೧೦ನೆಯ ತರಗತಿಗೆ ೦೪ ಕಿರುಪರೀಕ್ಷೆ, ಅರ್ಧವಾರ್ಷಿಕ ಪರೀಕ್ಷೆ ಹಾಗೂ ಪೂರ್ವ ಸಿದ್ಧತಾ ಪರೀಕ್ಷೆ ಕಡ್ಡಾಯವಾಗಿರುತ್ತದೆ.

**ಅಂಕ**

೮ ಮತ್ತು ೯ ನೆಯ ತರಗತಿಗಳ ಲಿಖಿತ ಮೌಲ್ಯಮಾಪನಕ್ಕೆ ೪೦ ಅಂಕ ಹಾಗೂ ಮೌಖಿಕ ಮೌಲ್ಯಮಾಪನಕ್ಕೆ ೧೦ ಅಂಕವನ್ನು ಮೊದಲ ಸೆಮಿಸ್ಟರ್‌ನಲ್ಲಿ ನಿಗದಿಗೊಳಿಸಿದೆ. ಎರಡನೆ ಸೆಮಿಸ್ಟರ್‌ನಲ್ಲಿ ೮ನೆಯ ತರಗತಿಗೆ ೪೦ ಅಂಕಗಳ ಲಿಖಿತ ಮೌಲ್ಯಮಾಪನ ಹಾಗು ೧೦ ಅಂಕಗಳ ಮೌಖಿಕ ಮೌಲ್ಯಮಾಪನ ಇರುತ್ತದೆ. ೯ನೆಯ ತರಗತಿಗೆ ಮಾತ್ರ ೫೦ ಅಂಕಗಳ ಲಿಖಿತ ಮೌಲ್ಯಮಾಪನ ಇರುತ್ತದೆ. ೧೦ನೆಯ ತರಗತಿಗೆ ವಾರ್ಷಿಕ ಪರೀಕ್ಷೆಯಾಗಿದ್ದು ಪ್ರಥಮ ಭಾಷೆಗೆ ೧೨೫ ಅಂಕ, ದ್ವಿತೀಯ ಮತ್ತು ತೃತೀಯ ಭಾಷೆಯಾಗಿದ್ದಲ್ಲಿ ೧೦೦ ಅಂಕವನ್ನು ನಿಗದಿಗೊಳಿಸಿದೆ. ೮ ಮತ್ತು ೯ನೆಯ ತರಗತಿಗಳಿಗೆ ಪರೀಕ್ಷಾ ಅವಧಿ ಗರಿಷ್ಠ ೯೦ ನಿಮಿಷಗಳಾಗಿದ್ದು, ೧೦ನೆಯ ತರಗತಿ ಪ್ರಥಮ ಭಾಷೆಗೆ ೧೮೦ ನಿಮಿಷಗಳು, ದ್ವಿತೀಯ ಹಾಗೂ ತೃತೀಯ ಭಾಷೆಯಾಗಿದ್ದಲ್ಲಿ ೧೫೦ ನಿಮಿಷಗಳ ಅವಧಿಯ ಪ್ರಶ್ನೆಪತ್ರಿಕೆ ಇರುತ್ತದೆ.

# ಪ್ರಥಮ ಭಾಷೆ – ಕನ್ನಡ

**೮ನೆಯ ತರಗತಿ**

[ವಾರಕ್ಕೆ ೦೬ ಅವಧಿಯಂತೆ ವರ್ಷದಲ್ಲಿ ಒಟ್ಟು ೨೧೦ ಅವಧಿ]

## ಗದ್ಯಭಾಗ

ವಿವಿಧ ಗ್ರಂಥಗಳಿಂದ ಆಯ್ಕೆ ಮಾಡಲಾದ ಕನಿಷ್ಠ ೦೮ – ಗರಿಷ್ಠ ೧೦ ಗದ್ಯಪಾಠಗಳಿರುವುದು.

**ಸೂಚನೆ**

ಪಠ್ಯಪುಸ್ತಕ ಜಿಲ್ಲೆ, ಜನಾಂಗ, ಲಿಂಗಸಮಾನತೆ, ಪ್ರಾದೇಶಿಕವಾರು ಮತ್ತು ಭಾಷಾ ಶೈಲಿಯ ವೈವಿಧ್ಯತೆಯನ್ನು ಒಳಗೊಂಡಂತೆ ಗದ್ಯಭಾಗದಲ್ಲಿ ಸುಮಾರು ೭೦ ಪುಟಗಳಷ್ಟು ವ್ಯಾಪ್ತಿಯನ್ನು ಹೊಂದಿರಬೇಕು. ಪ್ರತಿಪಾಠವೂ ಕನಿಷ್ಠ ೦೨ ಪುಟಗಳಿದ್ದು ಗರಿಷ್ಠ ೦೩ ಪುಟಗಳನ್ನು ಮೀರಬಾರದು.

**ಸಾಹಿತ್ಯ ಪ್ರಕಾರ**

ಪಠ್ಯಪುಸ್ತಕ, ಕಥೆ, ವರ್ಣನೆ, ನಿರೂಪಣೆ, ನಾಟಕ/ಸಂಭಾಷಣೆ, ಲಲಿತ ಪ್ರಬಂಧ, ವ್ಯಕ್ತಿಚಿತ್ರ / ಜೀವನಚರಿತ್ರೆ, ಪ್ರವಾಸಕಥನ, ಜನಪದ, ಪರಿಸರ, ಕಲೆಗಳ ಪರಿಚಯ, ಹಳಗನ್ನಡ ಪರಿಚಯ, ಪತ್ರಲೇಖನ – ಇತ್ಯಾದಿಯನ್ನು ಒಳಗೊಂಡಿರಬೇಕು.

## ಪದ್ಯಭಾಗ

೨೫೦ ಸಾಲುಗಳಷ್ಟು ಪದ್ಯಭಾಗವಿದ್ದು ಕನಿಷ್ಠ – ೦೮ ಗರಿಷ್ಠ – ೧೦ ಪದ್ಯಗಳ ಶೀರ್ಷಿಕೆಯಲ್ಲಿ ಇರತಕ್ಕದ್ದು.

| | | | |
|---|---|---|---|
| * ಆಧುನಿಕ ಕವನ | – – – – | ೧೦೦ | ಸಾಲು |
| * ನಡುಗನ್ನಡ ಕಾವ್ಯಭಾಗ (ಷಟ್ಪದಿ) | – – – – | ೦೫೦ | ಸಾಲು |
| * ವಚನ, ತ್ರಿಪದಿ | – – – – | ೦೪೦ | ಸಾಲು |
| * ದಾಸರಪದ | – – – – | ೦೪೦ | ಸಾಲು |
| * ಜನಪದ / ಹಳಗನ್ನಡ | – – – – | ೦೨೦ | ಸಾಲು |
| | **ಒಟ್ಟು** | **೨೫೦** | **ಸಾಲು** |

**ಸೂಚನೆ**

೧. ನಾಡಿನ ಎಲ್ಲಾ ಭಾಗದ ಕವಿ/ಕವಯತ್ರಿಯರಿಗೆ ಸಮಾನ ಆದ್ಯತೆ ನೀಡುವುದು.

೨. ನಡುಗನ್ನಡ ಮತ್ತು ಆಧುನಿಕ ಕನ್ನಡಕ್ಕೆ ಆದ್ಯತೆ ನೀಡುವುದು.

೩. ಶೀರ್ಷಿಕೆಗಳ ದೃಷ್ಟಿಯಿಂದ ಗದ್ಯ – ಪದ್ಯಗಳೆರಡೂ ಸಮಾನ ಸಂಖ್ಯೆಯಲ್ಲಿರಲಿ.

**ಕಂಠಪಾಠ**

ಒಟ್ಟು ೫೦ ಸಾಲು ಮಾತ್ರ

| | | |
|---|---|---|
| ನಡುಗನ್ನಡ – ದಾಸರಪದ, ವಚನ, ತ್ರಿಪದಿ | – | ೩೦ ಸಾಲು |
| ಆಧುನಿಕ ಕನ್ನಡ | – | ೨೦ ಸಾಲು |
| **ಒಟ್ಟು** | – | **೫೦ ಸಾಲು** |

**ರಚನೆ**

**೧. ಪ್ರಬಂಧ**

ಸ್ವರೂಪ, ಲಕ್ಷಣ, ಪ್ರಬಂಧರಚನಾವಿಧಾನ, ಸಾಮಾನ್ಯ ವಿಷಯಗಳ ಮೇಲಿನ ಪ್ರಬಂಧಗಳು (ಪರಿಸರ, ಮಾಧ್ಯಮಗಳು, ಆರೋಗ್ಯ – ನೈರ್ಮಲೀಕರಣ, ಪ್ರಕೃತಿ ವಿಕೋಪ)

**೨. ಪತ್ರ ಲೇಖನ**

ಸ್ವರೂಪ – ಸಾಮಾನ್ಯ ರೂಪ – ವಿಧಗಳು

ವೈಯಕ್ತಿಕ ಪತ್ರ (i) ಸಂಬಂಧಿಗಳಿಗೆ ಪತ್ರ

(i) ರಜೆಯ ಪತ್ರ

**೩. ಪದ್ಯಗಳ ಭಾವಾರ್ಥ**

*. ಪಠ್ಯಭಾಗದ ಆಯ್ದ ಪದ್ಯಗಳು

*. ಪಠ್ಯೇತರ ಪದ್ಯಭಾಗಗಳ ಪರಿಚಯ

**೪. ಗಾದೆ ಮಾತಿನ ವಿಸ್ತರಣೆ**

ಜನಪ್ರಿಯ ಗಾದೆ

ನುಡಿಗಟ್ಟುಗಳ ಪ್ರಯೋಗ

**೫. ವರ್ಣನೆ**

ಪ್ರವಾಸಕಥನ, ಅನುಭವ, ವೀಕ್ಷಣಾ ಅಂಶಗಳು

ಸೃಜನಶೀಲತೆ, ಸ್ವಂತವಾಗಿ ವಾಕ್ಯರಚನೆ

ಸಣ್ಣಕಥೆ, ಕವಿತೆ, ಪ್ರಬಂಧಗಳ ರಚನೆ

**ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶಗಳು**

**೧. ವರ್ಣಮಾಲೆ**

ವರ್ಣಮಾಲೆಯ ಸ್ವರ, ವ್ಯಂಜನ, ಯೋಗವಾಹ – ಇವುಗಳ ಒಳಪ್ರಭೇದಗಳನ್ನು ಪರಿಚಯಿಸುವುದು.

ಗುಣಿತಾಕ್ಷರಗಳ ಪರಿಚಯ

**೨. ಸಂಯುಕ್ತಾಕ್ಷರಗಳ ಪರಿಚಯ**

**೩. ಸಂಧಿ – ಸಂಕ್ಷಿಪ್ತ ಪರಿಚಯ, ಸಂಧಿಗಳ ವಿಧಗಳು – ಲೋಪ, ಆಗಮ ಮತ್ತು ಆದೇಶ**

**೪. ಪದಗಳು : ಕನ್ನಡ – ಸಂಸ್ಕೃತ**

ದೇಶ್ಯ – ಅನ್ಯದೇಶ್ಯ

ಪ್ರಕೃತಿಭಾವ – ನಾಮಪದ

ಲಿಂಗ – ವಚನ – ಸರ್ವನಾಮ

**೫. ವಿಭಕ್ತಿ – ಪ್ರತ್ಯಯಗಳು**

ವಾಚಕಗಳು

ವಾಕ್ಯ ರಚನೆ – ವಾಕ್ಯ ಪ್ರಭೇದಗಳು

**೬. ಸಮಾಸ – ಪರಿಚಯ, ವಿಧಗಳು**

**೭. ಛಂದಸ್ಸು**

ಛಂದಸ್ಸಿನ ಸ್ವರೂಪ – ಪರಿಚಯ

ಮಾತ್ರೆ – ಗಣ – ಪ್ರಾಸ

ಮಾತ್ರಾ ಛಂದಸ್ಸಿನ ಪರಿಚಯ

ಕಂದಪದ್ಯ

ಷಟ್ಪದಿಗಳ ಪರಿಚಯ

(ಭಾಮಿನಿ ಷಟ್ಪದಿ)

**೮. ಅಲಂಕಾರ**

ಅಲಂಕಾರಗಳ ಪರಿಚಯ

ಶಬ್ದಾಲಂಕಾರ – ಅರ್ಥಾಲಂಕಾರ

ಉಪಮಾಲಂಕಾರ

ಉದಾಹರಣೆ

ಪಠ್ಯಪುಸ್ತಕದ ಕೊನೆಯಲ್ಲಿ **ಅರ್ಥಸಹಿತ ಪದಕೋಶ** – ಅಕಾರಾದಿ ಪದಗಳ ಸಂಖ್ಯೆ – ಸುಮಾರು – **೪೦೦** ಇರಲಿ.

ಪಠ್ಯಪುಸ್ತಕ **ಗದ್ಯ–ಪದ್ಯ ಭಾಷಾಭ್ಯಾಸವೂ** ಸೇರಿದಂತೆ ಒಟ್ಟು **೧೧೦ ಪುಟಗಳನ್ನು** ಮೀರದಂತಿರಲಿ.

## ಪ್ರಥಮ ಭಾಷೆ – ಕನ್ನಡ

**೯ನೆಯ ತರಗತಿ**

(ವಾರಕ್ಕೆ ೦೬ ಅವಧಿಯಂತೆ ವರ್ಷಕ್ಕೆ ೨೧೦ ಅವಧಿ)

### ಗದ್ಯಭಾಗ

**ಸೂಚನೆ**

೮ನೆಯ ತರಗತಿಯ ಗದ್ಯಭಾಗದ ಮುಂದುವರೆದ ಭಾಗದಂತೆ ಭಾಷಾಶೈಲಿ ಇರಬೇಕು. ಒಟ್ಟಾರೆ ೮ನೆಯ ತರಗತಿಗಿಂತ ಸುಮಾರು ೦೮ ರಿದ ೧೦ ಪುಟಗಳಷ್ಟು ಗದ್ಯಭಾಗದ ಪ್ರಮಾಣ ಹೆಚ್ಚು ಇರಬೇಕು. ಪ್ರತಿಪಾಠವೂ ಕನಿಷ್ಠ ೦೩ ಪುಟಗಳಿದ್ದು ಗರಿಷ್ಠ ೦೪ ಪುಟಗಳನ್ನು ಮೀರಬಾರದು. ಕನಿಷ್ಠ ೦೮ ಶೀರ್ಷಿಕೆಗಳ ಗದ್ಯಭಾಗವಿದ್ದು ೧೦ ಶೀರ್ಷಿಕೆಯನ್ನು ಮೀರದಂತಿರಬೇಕು. ಪ್ರೌಢವಿಷಯದ ಜತೆಗೆ ಭಾಷಾಶೈಲಿಯ ವೈವಿಧ್ಯತೆ, ಲಿಂಗ ಮತ್ತು ಪ್ರಾದೇಶಿಕ ಸಮಾನತೆ, ಸಾಹಿತ್ಯ ಪ್ರಕಾರಗಳ ಹಂತಗಳು, ಪ್ರಕೃತ ವಿದ್ಯಮಾನಗಳನ್ನೊಳಗೊಂಡ ಪಾಠಗಳಾಗಿರಬೇಕು. ಕನಿಷ್ಠ ೦೩ ಪುಟಗಳ ಹಳಗನ್ನಡ, ೦೪ ಪುಟಗಳನ್ನು ಮೀರದಂತೆ ನಡುಗನ್ನಡ ಪಾಠಗಳಿರಬೇಕು. ಸುಮಾರು ೮೦ ಪುಟಗಳನ್ನು ಮೀರದಂತೆ ಪಠ್ಯಪುಸ್ತಕದಲ್ಲಿ ಗದ್ಯಭಾಗವಿರಬೇಕು.

ಪಾಠಗಳು – ನಿರೂಪಣೆ, ವರ್ಣನೆ, ನಾಟಕ, ಪ್ರಬಂಧ, ಪತ್ರ, ಪ್ರವಾಸಕಥನ, ಹಾಸ್ಯಸಾಹಿತ್ಯ, ವಿಜ್ಞಾನಸಾಹಿತ್ಯ, ಜೀವನಚಿತ್ರ. ಐತಿಹಾಸಿಕ ವಿಚಾರಗಳಿಂದ ಕೂಡಿರಬೇಕು. ಗದ್ಯಪ್ರಕಾರದಲ್ಲಿ ವೈವಿಧ್ಯತೆಗೆ ಅವಕಾಶವಿರಲಿ.

### ಪದ್ಯಭಾಗ

೩೦೦ ಸಾಲುಗಳಷ್ಟು ಪದ್ಯ ಭಾಗವಿದ್ದು, ಕನಿಷ್ಠ ೦೮ ಗರಿಷ್ಠ ೧೦ ಪದ್ಯಗಳ ಶೀರ್ಷಿಕೆಯಲ್ಲಿ ಇರತಕ್ಕದ್ದು.

| | | |
|---|---|---|
| * ಆಧುನಿಕ ಕನ್ನಡಕಾವ್ಯ (ನವೋದಯ – ನವ್ಯ – ದಲಿತ – ಬಂಡಾಯ) | – – – – – | ಸುಮಾರು ೧೦೦ ಸಾಲು |
| * ನಡುಗನ್ನಡ (ವಚನ – ರಗಳೆ – ಷಟ್ಪದಿ – ಕೀರ್ತನೆ) | – – – – – | ಸುಮಾರು ೧೦೦ ಸಾಲು |
| * ಹಳಗನ್ನಡ – ಚಂಪೂಕಾವ್ಯ (ವೃತ್ತ ಮತ್ತು ಕಂದ ಪದ್ಯ) | – – – – – | ಸುಮಾರು ೧೦೦ ಸಾಲು |
| | **ಒಟ್ಟು** | **೩೦೦ ಸಾಲು** |

**ಸೂಚನೆ**

೧. ನಾಡಿನ ಎಲ್ಲಾ ಭಾಗದ ಭಾಷಾ ಶೈಲಿಯ ಕವಿ/ಕವಯತ್ರಿಯರಿಗೆ ಪ್ರಕಾರವಾರು ಆದ್ಯತೆ ನೀಡಬೇಕು.

೨. ಹಳಗನ್ನಡ, ನಡುಗನ್ನಡ ಹಾಗೂ ಆಧುನಿಕ ಕನ್ನಡಕ್ಕೆ ಸೂಚಿತ ಪ್ರಮಾಣದಲ್ಲಿ ಸಮಾನತೆಯನ್ನು ಕಾಪಾಡಿಕೊಳ್ಳಬೇಕು.

೩. ಶೀರ್ಷಿಕೆಯ ದೃಷ್ಟಿಯಿಂದ ಗದ್ಯಪಾಠಗಳ ಸಂಖ್ಯೆಗೆ ಪದ್ಯಪಾಠಗಳು ಸಮನಾಗಿರಬೇಕು.

೪. ಪದ್ಯಭಾಗದ ಆರಂಭದಲ್ಲಿ ಆಧುನಿಕ ಕನ್ನಡಕಾವ್ಯಗಳಿದ್ದು ನವೋದಯ, ನವ್ಯ, ದಲಿತ, ಬಂಡಾಯ ಘಟ್ಟಗಳಿಗೆ ಸಂಬಂಧಿಸಿದ ಆಯ್ದ ಪದ್ಯ ಭಾಗವನ್ನು ಮೇಲೆ ತಿಳಿಸಿರುವ ಅನುಕ್ರಮದಂತೆ ಅನುಸರಿಸುವುದು.

೫. ನಡುಗನ್ನಡದಲ್ಲಿ ರಗಳೆ ಪ್ರಕಾರ ಕಡ್ಡಾಯವಾಗಿದ್ದು (ಛಂದಸ್ಸಿನ ದೃಷ್ಟಿಯಿಂದ) ವಚನ, ರಗಳೆ, ಷಟ್ಪದಿ, ಕೀರ್ತನೆಗಳ ಅನುಕ್ರಮವನ್ನು ಅನುಸರಿಸುವುದು.

೬. ಪದ್ಯಭಾಗದಲ್ಲಿ ಚಂಪೂಕಾವ್ಯ ಪ್ರಕಾರದ ಕಾವ್ಯಭಾಗಗಳಿರತಕ್ಕದ್ದು.

**ಕಂಠಪಾಠ : (ಒಟ್ಟು ೬೦ ಸಾಲು ಮಾತ್ರ)**

| | | |
|---|---|---|
| ಆಧುನಿಕ ಕನ್ನಡ | – – – – | ಸುಮಾರು ೩೬ ಸಾಲು |
| ನಡುಗನ್ನಡ | – – – – | ಸುಮಾರು ೨೦ ಸಾಲು |
| ಹಳಗನ್ನಡ | – – – – | ಸುಮಾರು ೦೪ ಸಾಲು |
| | **ಒಟ್ಟು** | **೬೦ ಸಾಲು** |

**ಸೂಚನೆ**

**ಕಂಠಪಾಠದ** ಪದ್ಯಭಾಗಗಳು ನೀತಿ **ಪ್ರಾಧಾನ್ಯತೆ,** ಗೇಯತೆ ಮತ್ತು **ರಸವತ್ತತೆಯನ್ನು** ಆಧರಿಸಿರಬೇಕು.

**ರಚನೆ**

೧. **ಪ್ರಬಂಧಗಳ ಸ್ವರೂಪ ಲಕ್ಷಣಗಳ ಪುನರಾವರ್ತನೆ**
ಪ್ರಕೃತ ಸಾಮಾಜಿಕ ಸಮಸ್ಯೆಗಳು – ಜನಸಂಖ್ಯೆ, ನಿರುದ್ಯೋಗ, ಬಾಲಕಾರ್ಮಿಕರು, ಬಾಲ್ಯವಿವಾಹ, ಬಡತನ, ವರದಕ್ಷಿಣೆ, ಸಾವಯವ ಕೃಷಿ, ಮಳೆಕೊಯ್ಲು, ಕೃಷಿಕ್ಷೇತ್ರದ ಸಮಸ್ಯೆಗಳು

೨. **ಪತ್ರಲೇಖನ**
ಮನವಿ ಪತ್ರ
ನಾಗರಿಕ ಸೌಲಭ್ಯಗಳನ್ನು ಕೋರಿ ಬರೆವ ಪತ್ರ
ವರದಿ ತಯಾರಿಕೆ

೩. **ಪಠ್ಯೇತರ ಆಯ್ದ ಪದ್ಯಗಳ ಭಾವಾರ್ಥ**
ಸೃಜನಶೀಲ ಅಭಿವ್ಯಕ್ತಿಗೆ ಅವಕಾಶ,
ವಿಶೇಷವಾಗಿ ಸ್ವಂತ ಅನುಭವಗಳನ್ನು ದಾಖಲಿಸುವುದು

೪. **ಗಾದೆ ಮಾತಿನ ವಿಸ್ತರಣೆ**

**ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶಗಳು**

ಹಿಂದಿನ ತರಗತಿಯಲ್ಲಿ ಕಲಿಸಿದ ಭಾಷಾಂಶಗಳ ಪುನರಾವರ್ತನೆ.

೧. **ಕ್ರಿಯಾಪದ** – ಧಾತು, ಸಕರ್ಮಕ – ಅಕರ್ಮಕ, ಕರ್ತರಿ – ಕರ್ಮಣಿ ಪ್ರಯೋಗಗಳು, ವಿಧ್ಯರ್ಥಕ, ನಿಷೇಧಾರ್ಥಕ, ಸಂಭವನಾರ್ಥಕ ರೂಪಗಳು.

೨. **ಕಾಲ** : ಭೂತ, ವರ್ತಮಾನ, ಭವಿಷ್ಯತ್, ಕಾಲಪಲ್ಲಟ.

೩. **ವಿಭಕ್ತಿ ಪಲ್ಲಟ** – ಹಳಗನ್ನಡ ವಿಭಕ್ತಿ ಪ್ರತ್ಯಯಗಳ ಪರಿಚಯ

೪. **ಸಂಧಿಗಳು** – ಸವರ್ಣದೀರ್ಘ, ಗುಣ, ವೃದ್ಧಿ, ಯಣ್, ಶ್ಚುತ್ವ, ಜಶ್ತ್ವ, ಅನುನಾಸಿಕ

೫. **ಸಮಾಸಗಳು** : ತತ್ಪುರುಷ, ಕರ್ಮಧಾರೆಯ ಕ್ರಿಯಾ, ದ್ವಿಗು, ಅಂಶಿ, ಬಹುವ್ರೀಹಿ, ಗಮಕ ಪರಿಚಯ.

೬. **ಛಂದಸ್ಸು** – ರಗಳೆಗಳ ಪರಿಚಯ, ಉತ್ಸಾಹ, ಮಂದಾನಿಲ, ಲಲಿತ.

೭. **ಷಟ್ಪದಿ** – ವಾರ್ಧಕ ಷಟ್ಪದಿ
ಖ್ಯಾತಕರ್ನಾಟಕ ವೃತ್ತಗಳ ಪರಿಚಯ – ಪಠ್ಯಪುಸ್ತಕದಲ್ಲಿ ಬರುವ ವೃತ್ತಗಳಿಗೆ ಪ್ರಸ್ತಾರ, ಗಣವಿಂಗಡಣೆಯೊಂದಿಗೆ ಗುರುತಿಸುವುದು.

೮. **ಅಲಂಕಾರ** : ಉಪಮಾಲಂಕಾರ, ಲುಪ್ತೋಪಮೆ, ರೂಪಕ, ದೃಷ್ಟಾಂತ.
ಪಠ್ಯಪುಸ್ತಕದ ಕೊನೆಯಲ್ಲಿ **ಅರ್ಥಸಹಿತ ಪದಕೋಶ** – ಅಕಾರಾದಿ ಪದಗಳ ಸಂಖ್ಯೆ ಸುಮಾರು – **೬೦೦** ಪಠ್ಯಪುಸ್ತಕ **ಗದ್ಯ–ಪದ್ಯ ಭಾಷಾಭ್ಯಾಸವೂ** ಸೇರಿದಂತೆ ಒಟ್ಟು **೧೩೦** ಪುಟಗಳನ್ನು ಮೀರದಂತಿರಲಿ.

# ಕನ್ನಡ (ಪ್ರಥಮ ಭಾಷೆ)

**೧೦ನೆಯ ತರಗತಿ**

(ವಾರಕ್ಕೆ ೦೬ ಅವಧಿಯಂತೆ ವರ್ಷಕ್ಕೆ ೨೧೦ ಅವಧಿ)

## ಗದ್ಯಭಾಗ

**ಸೂಚನೆ**

೮ ಮತ್ತು ೯ನೆಯ ತರಗತಿಗಳ ಗದ್ಯಪಾಠಗಳ ಮುಂದುವರೆದ ಭಾಗದಂತೆ ಭಾಷಾ ಶೈಲಿ ಇರಬೇಕು. ೯ನೆಯ ತರಗತಿಗಿಂತ ಸುಮಾರು ೮ ರಿಂದ ೧೦ ಪುಟಗಳು ಗದ್ಯದ ಪ್ರಮಾಣ ಹೆಚ್ಚು ಇರಬೇಕು. ಪ್ರತಿಪಾಠವೂ ೪ ರಿಂದ ೫ ಪುಟಗಳನ್ನು ಮೀರದಂತಿರಲಿ.

೧೦ ಶೀರ್ಷಿಕೆಗಳಲ್ಲಿ ಗದ್ಯಪಾಠ ಅಳವಡಿಸಲ್ಪಡುವಂತಿರಲಿ. ಪ್ರೌಢ ವಿಷಯದ ಜತೆ ಪ್ರಾದೇಶಿಕ ಶೈಲಿಯ ವೈವಿಧ್ಯತೆ ಲಿಂಗ-ಸಮಾನತೆ, ಸಾಹಿತ್ಯ ಪ್ರಕಾರ, ಹಂತಗಳ ಅನ್ವಯ ಹಾಗೂ ಪ್ರಕೃತ ವಿದ್ಯಮಾನಗಳನ್ನು ಒಳಗೊಂಡಿರಬೇಕು.

ಕನಿಷ್ಠ ೦೩ ಪುಟಗಳ ನಡುಗನ್ನಡ, ೦೨ ರಿಂದ ೦೩ ಪುಟಗಳ ಹಳಗನ್ನಡ ಗದ್ಯಭಾಗವಿದ್ದು ಒಟ್ಟಾರೆ ಭಾಷಾಭ್ಯಾಸ ಸಹಿತ ಗದ್ಯಪಾಠಗಳ ಭಾಗ ೯೦ ಪುಟವನ್ನು ಮೀರದಂತಿರಲಿ.

ಗದ್ಯಪಾಠಗಳು ವರ್ಣನೆ, ಪ್ರಬಂಧ, ಕಥೆ, ಜೀವನಚರಿತ್ರೆ / ಆತ್ಮಕಥನ, ಪತ್ರ, ಸಂಭಾಷಣೆ / ನಾಟಕ, ಜನಪ್ರಿಯ ವಿಜ್ಞಾನಸಾಹಿತ್ಯ – ಇವುಗಳಿಂದ ಕೂಡಿರಬೇಕು.

## ಪದ್ಯಭಾಗ

ಸುಮಾರು ೩೦೦ ಸಾಲುಗಳಷ್ಟು ಪದ್ಯಭಾಗವಿದ್ದು ಕನಿಷ್ಠ ೦೮ ರಿಂದ ೧೦ ಶೀರ್ಷಿಕೆಗಳಲ್ಲಿ ಪದ್ಯಪಾಠಗಳಿರಲಿ.

| | | |
|---|---|---|
| ಹಳಗನ್ನಡ<br>(ಚಂಪೂ – ಶಾಸನ – ಜನಪದ) | – – – – – | ೦೬೦ ಸಾಲು |
| ನಡುಗನ್ನಡ<br>(ವಚನ, ದಾಸಸಾಹಿತ್ಯ, ಷಟ್ಪದಿ, ಸಾಂಗತ್ಯ) | – – – – – | ೧೦೦ ಸಾಲು |
| ಆಧುನಿಕ ಕನ್ನಡ ಕಾವ್ಯ<br>(ನವೋದಯ, ನವ್ಯ, ದಲಿತ, ಬಂಡಾಯ, ಸ್ತ್ರೀವಾದಿ ಸಾಹಿತ್ಯ) | – – – – – | ೧೪೦ ಸಾಲು |
| | **ಒಟ್ಟು** | **೩೦೦ ಸಾಲು** |

**ಸೂಚನೆ**

೧) ಗದ್ಯ-ಪದ್ಯಪಾಠಗಳ ಆಯ್ಕೆಯಲ್ಲಿ ಪ್ರಾದೇಶಿಕತೆ, ಲಿಂಗಸಮಾನತೆ, ಜಾತ್ಯತೀತತೆಯನ್ನು ಜತನವಾಗಿ ಪಾಲಿಸುವುದು.

೨) ಶೀರ್ಷಿಕೆಯ ದೃಷ್ಟಿಯಿಂದ ಗದ್ಯ-ಪದ್ಯ ಪಾಠಗಳು ಸಮನಾಗಿರಲಿ.

**ಕಂಠಪಾಠ :** ಒಟ್ಟು ೭೫ ಸಾಲು ಮಾತ್ರ

| | | |
|---|---|---|
| ಆಧುನಿಕ ಕನ್ನಡ ಕಾವ್ಯ | ಸುಮಾರು | ೦೪೦ ಸಾಲು |
| ನಡುಗನ್ನಡ | ಸುಮಾರು | ೦೨೫ ಸಾಲು |
| ಹಳಗನ್ನಡ | ಸುಮಾರು | ೦೧೦ ಸಾಲು |
| | **ಒಟ್ಟು** | **೦೭೫ ಸಾಲು** |

**ಸೂಚನೆ**

ಕಂಠಪಾಠಕ್ಕೆ ಆರಿಸುವ ಪದ್ಯಭಾಗ ನೀತಿ ಪ್ರಾಧಾನ್ಯತೆ, ಗೇಯತೆ ಮತ್ತು ರಸವತ್ತತೆಯನ್ನು ಆಧರಿಸಿರಬೇಕು.

**ರಚನೆ**

೧. **ಪ್ರಬಂಧಗಳ ಸ್ವರೂಪ – ಲಕ್ಷಣ**
ರಾಷ್ಟ್ರೀಯ ಹಬ್ಬ, ಭಾವೈಕ್ಯತೆ
ಸಾಮಾಜಿಕ ಸಮಸ್ಯೆ
ಆಧುನಿಕವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮ ಸ್ವರಾಜ್ಯ, ಲಲಿತಕಲೆ – ತ್ಯಾಜ್ಯವಸ್ತು ನಿರ್ವಹಣೆ

೨. **ಗಾದೆ ಮಾತಿನ ವಿಸ್ತರಣೆ**

೩. **ಪತ್ರ ಲೇಖನ**
ವೈಯಕ್ತಿಕಪತ್ರ
ವ್ಯಾವಹಾರಿಕಪತ್ರ
ಮನವಿಪತ್ರ
ವರದಿತಯಾರಿಕೆ

೪. **ಪಠ್ಯೇತರ ಆಯ್ದ ಕಾವ್ಯ ಭಾಗಗಳ ಭಾವಾರ್ಥ, ಸೃಜನಶೀಲ ಅಭಿವ್ಯಕ್ತಿಗೆ ಅವಕಾಶ**

## ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶಗಳು

ಹಿಂದಿನ ತರಗತಿಯಲ್ಲಿ ಕಲಿಸಿದ ಭಾಷಾಂಶಗಳ ಪುನರಾವರ್ತನೆ.

೧. **ದ್ವಿರುಕ್ತಿ, ಜೋಡುನುಡಿ, ಅನುಕರಣಾವ್ಯಯಗಳ ಪರಿಚಯ**

೨. **ಸಂಧಿ – ಸಮಾಸ** (ಪುನರಾವರ್ತನೆಯೊಂದಿಗೆ ಪೂರ್ಣವಿವರ)

೩. **ಕೃದಂತ – ತದ್ಧಿತಾಂತ**

೪. **ವಾಕ್ಯರಚನೆ – ಲೇಖನಚಿಹ್ನೆ**

೫. **ಛಂದಸ್ಸು**
ಷಟ್ಪದಿ, ಕಂದಪದ್ಯ, ಖ್ಯಾತ ಕರ್ನಾಟಕ ವೃತ್ತಗಳು, ಪ್ರಸ್ತಾರ, ಗಣವಿಂಗಡಣೆ, ಛಂದಸ್ಸಿನ ಪ್ರಕಾರವನ್ನು ಗುರುತಿಸುವುದು.

೬. **ಅಲಂಕಾರ**

ಉಪಮೆ, ರೂಪಕ, ದೃಷ್ಟಾಂತ, ಶ್ಲೇಷೆ, ಅರ್ಥಾಂತರನ್ಯಾಸ, ಅಲಂಕಾರಗಳ ಸಮನ್ವಯ ಹಾಗೂ ಹೆಸರಿಸುವಿಕೆ.

ಪಠ್ಯಪುಸ್ತಕವನ್ನಾಧರಿಸಿದ **ಅರ್ಥಸಹಿತ ಪದಕೋಶ** – ಅಕಾರಾದಿ ಪದಗಳ ಸಂಖ್ಯೆ.

ಸುಮಾರು **೮೦೦** ಇರಲಿ

ಪಠ್ಯಪುಸ್ತಕ **ಗದ್ಯ – ಪದ್ಯ ಭಾಷಾಭ್ಯಾಸವೂ** ಸೇರಿದಂತೆ ಒಟ್ಟು **೧೫೦** ಪುಟಗಳನ್ನು ಮೀರದಂತಿರಲಿ.

# ದ್ವಿತೀಯ ಭಾಷೆ – ಕನ್ನಡ

**(೮, ೯ ಮತ್ತು ೧೦ನೆಯ ತರಗತಿ)**

**ಉದ್ದೇಶ**

೧. ಆಲಿಸುವ, ಗ್ರಹಿಸುವ, ನಿರರ್ಗಳ ಮತ್ತು ಸ್ಪಷ್ಟವಾಗಿ ಸ್ವರಭಾರದೊಂದಿಗೆ, ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.

೨. ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ, ಚಿಂತನೆ ಮತ್ತು ಆನಂದಕ್ಕಾಗಿ ಸ್ವತಂತ್ರವಾಗಿ ಓದಲು ಸಮರ್ಥರಾಗುವಂತೆ ಮಾಡುವುದು.

೩. ಪದಭಂಡಾರವನ್ನು ಹೆಚ್ಚಿಸಿಕೊಂಡು, ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯಬಂಧಗಳನ್ನು ಅರ್ಥ ಮಾಡಿಕೊಳ್ಳುವುದು.

೪. ಸೃಜನಶೀಲ ಅಭಿವ್ಯಕ್ತಿ (ಮೌಖಿಕ – ಲಿಖಿತ) ಸಾಮರ್ಥ್ಯವನ್ನು ಬೆಳೆಸುವುದು.

೫. ಭಾಷೆಯನ್ನು ದೋಷರಹಿತ ಮತ್ತು ಪರಿಣಾಮಕಾರಿಯಾಗಿ ಬಳಸುವ ಪ್ರೌಢಿಮೆಯನ್ನು ಬೆಳೆಸುವುದು.

೬. ಸೌಂದರ್ಯಪ್ರಜ್ಞೆ, ಕಲ್ಪನೆ ಮತ್ತು ಸೃಜನಾತ್ಮಕ ಭಾವನೆಗಳನ್ನು ಜೀವಂತವಾಗಿರಿಸುವುದು.

೭. ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆತ್ಮೀಯ ಅಭಿಮಾನವನ್ನು ವೃದ್ಧಿಗೊಳಿಸುವುದು.

೮. ಕೃತಿ–ಕರ್ತೃವಿನ ವಿಶಿಷ್ಟ ಪರಿಚಯವಾಗುವ ರೀತಿಯಲ್ಲಿ ಸಾಹಿತ್ಯದ ಮುಖ್ಯ ಪ್ರಕಾರಗಳನ್ನು ಪರಿಚಯಿಸುವುದು.

೯. ರಾಷ್ಟ್ರೀಯ ಪ್ರಜ್ಞೆ, ಪ್ರಜಾಪ್ರಭುತ್ವ ಹಾಗೂ ಜೀವನ ಮೌಲ್ಯಗಳನ್ನು ಮುಖ್ಯವಾಗಿ ಗಮನಿಸುವುದು.

೧೦. ಲಿಂಗಸಮಾನತೆ, ಜಾತ್ಯತೀತತೆ, ವಿಶ್ವಶಾಂತಿ, ಸಹಬಾಳ್ವೆ, ಸ್ವಾವಲಂಬನೆ, ಆತ್ಮಗೌರವ ಮೊದಲಾದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಪ್ರೇರೇಪಿಸುವುದು.

೧೧. ಪರಿಸರ ಸಂರಕ್ಷಣೆ, ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸಾಹಿತ್ಯದ ಮೂಲಕ ಪರಿಚಯಿಸುವುದು.

೧೨. ಸಮಕಾಲೀನ ಸಮಸ್ಯೆಗಳನ್ನು ಕುರಿತು ಚಿಂತಿಸಿ ಕಾರಣ ಮತ್ತು ಪರಿಹಾರವನ್ನು ಹುಡುಕುವ ಸಾಮರ್ಥ್ಯವನ್ನು ಬೆಳೆಸುವುದು.

೧೩. ಮಹಿಳೆ ಮತ್ತು ಮಕ್ಕಳ ಹಕ್ಕುಗಳನ್ನು ಅರಿಯುವ ಮತ್ತು ಸೌಲಭ್ಯಗಳನ್ನು ಪಡೆಯುವ ಸಾಮರ್ಥ್ಯವನ್ನು ಬೆಳೆಸುವುದು.

೧೪. ಗ್ರಾಮೀಣ ಜೀವನ, ಪ್ರಾದೇಶಿಕತೆ ಹಾಗೂ ಕಲೆಗಳ ಬಗ್ಗೆ ಅರಿವು ಮೂಡಿಸುವುದು.

೧೫. ಪಠ್ಯಪುಸ್ತಕದಲ್ಲಿ ಬರುವ ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವುದು.

೧೬. ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ, ಅಲಂಕಾರ ಮತ್ತು ಛಂದೋ ಪ್ರಕಾರಗಳನ್ನು ಸರಳವಾಗಿ ಪರಚಯಿಸುವುದು.

೧೭. ಭಾಷೆಯ ಸ್ಪಷ್ಟತೆ ಹಾಗೂ ತಾತ್ವಿಕವಾಗಿ ಗ್ರಹಿಸುವ ಹಿನ್ನೆಲೆಯಲ್ಲಿ ಭಾಷಾಂಶಗಳು, ಛಂದಸ್ಸು, ಅಲಂಕಾರಗಳನ್ನು ಆಯಾ ಪಾಠಬೋಧನಾ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ ಕಲಿಸುವುದು.

# ದ್ವಿತೀಯ ಭಾಷೆ – ಕನ್ನಡ

**೮ನೆಯ ತರಗತಿ**

ವಾರಕ್ಕೆ ೦೫ ಅವಧಿಯಂತೆ ವರ್ಷಕ್ಕೆ ಒಟ್ಟು ೧೭೫ ಅವಧಿ

| | | ಅವಧಿ ಹಂಚಿಕೆ |
|---|---|---|
| ಗದ್ಯ–ಪದ್ಯ ಬೋಧನೆಗೆ ಒಟ್ಟು | – – – – | ೧೦೦ ಅವಧಿ |
| ಪತ್ರಲೇಖನ – ಪ್ರಬಂಧ | – – – – | ೦೩೦ ಅವಧಿ |
| ಭಾಷಾಂಶ – ಛಂದಸ್ಸು | – – – – | ೦೨೦ ಅವಧಿ |
| ಪರಿಹಾರ ಬೋಧನೆ – ಕಿರುಪರೀಕ್ಷೆ | – – – – | ೦೨೫ ಅವಧಿ |
| | **ಒಟ್ಟು** | **೧೭೫ ಅವಧಿ** |

[ವಾರಕ್ಕೆ ೦೫ ಅವಧಿಯಂತೆ ವರ್ಷಕ್ಕೆ ಒಟ್ಟು ೧೭೫ ಅವಧಿ]

## ಗದ್ಯಭಾಗ

ಪ್ರತಿಗದ್ಯ ಪಾಠವೂ ೦೨ ರಿಂದ ೦೩ ಪುಟಗಳನ್ನು ಮೀರದಂತಿರಲಿ. ಶೀರ್ಷಿಕೆಗಳು ೦೭ ರಿಂದ ೦೮ ಸಂಖ್ಯೆಯನ್ನು ಮೀರದಿರಲಿ. ಭಾಷಾ ಶೈಲಿಯ ವೈವಿಧ್ಯತೆ, ಪ್ರಾದೇಶಿಕತೆ, ಲಿಂಗ ಸಮಾನತೆಯೊಂದಿಗೆ ಎಲ್ಲ ಸಾಹಿತಿಗಳಿಗೆ ಅವಕಾಶವಿರಲಿ.

ಲಲಿತಪ್ರಬಂಧ, ಸಣ್ಣಕತೆ, ಜನಪದಸಾಹಿತ್ಯ, ಆತ್ಮಕಥನ / ಜೀವನಚರಿತ್ರೆ, ಐತಿಹಾಸಿಕ ವಿಚಾರ, ಸಾಮಾಜಿಕವಿಚಾರ, ಸಾಹಸ, ಕ್ರೀಡೆ ಮೊದಲಾದ ವಿಷಯಗಳನ್ನು ಒಳಗೊಂಡಿರಲಿ. ಆಯ್ಕೆಯಲ್ಲಿ ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಮಾತ್ರ ಪರಿಗಣಿಸುವುದು.

ಲೇಖಕರ ಪರಿಚಯ, ಆಶಯ ನುಡಿ ಹಾಗೂ ಅಭ್ಯಾಸ ಚಟುವಟಿಕೆ ಭಾಗಗಳನ್ನು ಹೊರತುಪಡಿಸಿದ ಗದ್ಯಭಾಗ ೫೦ ಪುಟಗಳನ್ನು ಮೀರದಂತಿರಲಿ.

## ಪದ್ಯಭಾಗ

ಹೊಸಗನ್ನಡ ಮತ್ತು ಜನಪದ ಸಾಹಿತ್ಯದಿಂದ ಆಯ್ದ ಸುಮಾರು ೧೦೦ ಸಾಲುಗಳಷ್ಟು ಪದ್ಯಭಾಗಕ್ಕೆ ಅವಕಾಶವಿರಲಿ. ಕವಿಪರಿಚಯ ಸಹಿತ ೦೭ ರಿಂದ ೦೮ ಶೀರ್ಷಿಕೆಗಳನ್ನು ಅಳವಡಿಸುವುದು.

| | | |
|---|---|---|
| ಹೊಸಗನ್ನಡ | – – – – – | ಸುಮಾರು ೮೦ ಸಾಲು |
| ಜನಪದ | – – – – – | ಸುಮಾರು ೨೦ ಸಾಲು |
| | **ಒಟ್ಟು** | **೧೦೦ ಸಾಲು** |

ಕಂಠಪಾಠಕ್ಕೆ ೦೫ ಪದ್ಯಗಳಿಗೆ ಅವಕಾಶವಿದ್ದು ಸುಮಾರು ೩೦ ಸಾಲುಗಳನ್ನು ಮೀರದಂತಿರಲಿ. ಕರ್ನಾಟಕದ ಎಲ್ಲಾ ಭಾಗದ ಕವಿ/ಕವಯತ್ರಿಯರಿಗೆ ಅವಕಾಶವಿರಲಿ.

## ರಚನೆ

೧. **ಪ್ರಬಂಧ ರಚನಾ ವಿಧಾನವನ್ನು ಪರಿಚಯಿಸುವುದು.** ಪ್ರಬಂಧದ ಹಂತಗಳು, ಬಾಯ್ದೆರೆ ಪ್ರಬಂಧದ ವಿಧಗಳು (ಪ್ರವಾಸಕಥನ, ಘಟನೆ, ವರ್ಣನೆ ಹಾಗೂ ಸಾಮಾನ್ಯ ವಿಷಯವನ್ನು ಕುರಿತ ಪ್ರಬಂಧ ರಚನೆ)

೨. **ಗಾದೆ – ನುಡಿಗಟ್ಟುಗಳ ಅಭಿಪ್ರಾಯ ವಿಸ್ತರಣೆ** ಸಾಮಾಜಿಕ ಸಮಸ್ಯೆಗಳನ್ನು ಕುರಿತು ಸೃಜನಾತ್ಮಕವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯ ಬೆಳೆಸುವುದು.

೩. **ಪತ್ರಲೇಖನ**

ಪತ್ರ ರಚನಾ ಸ್ವರೂಪ ಮತ್ತು ಸಾಮಾನ್ಯ ಹಂತಗಳು, ರಜೆ ಮತ್ತು ವೈಯಕ್ತಿಕ ಪತ್ರ.

೪. **ಪಠ್ಯಪುಸ್ತಕದ ಆಯ್ದ ಪದ್ಯಗಳ ಭಾವಾರ್ಥ**

## ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ

೧. ವರ್ಣಮಾಲೆಯ ಪರಿಚಯ

೨. ಗುಣಿತಾಕ್ಷರಗಳು, ಸಂಯುಕ್ತಾಕ್ಷರಗಳು

೩. ನಾಮಪದ, ಲಿಂಗ, ವಚನ, ವಿಭಕ್ತಿ, ಕಾಲ

೪. ಪದಗಳು ಕನ್ನಡ – ಸಂಸ್ಕೃತ

೫. ವಾಕ್ಯರಚನೆ – ಕರ್ತೃ, ಕರ್ಮ, ಕ್ರಿಯಾಪದ

೬. ಸಂಧಿ – ಪ್ರಕೃತಿ ಭಾವ – ಲೋಪ – ಆಗಮ – ಆದೇಶ

೭. ಪಠ್ಯಪುಸ್ತಕವನ್ನಾಧರಿಸಿದ **ಅರ್ಥಸಹಿತ ಪದಕೋಶ** – ಅಕಾರಾದಿ ಪದಗಳ ಸಂಖ್ಯೆ ಸುಮಾರು **೨೦೦** ಇರಲಿ.

೮. ಪಠ್ಯಪುಸ್ತಕ **ಗದ್ಯ–ಪದ್ಯ ಭಾಷಾಭ್ಯಾಸವೂ** ಸೇರಿದಂತೆ ಒಟ್ಟು **೮೦** ಪುಟಗಳಿರಲಿ.

# ದ್ವಿತೀಯ ಭಾಷೆ – ಕನ್ನಡ

**೯ನೆಯ ತರಗತಿ**

[ವಾರಕ್ಕೆ ೦೫ ಅವಧಿಯಂತೆ ಒಟ್ಟು ೧೭೫ ಅವಧಿ]

## ಗದ್ಯಭಾಗ

ಪ್ರತಿ ಗದ್ಯಪಾಠವೂ ೦೨ ರಿಂದ ೦೩ ಪುಟಗಳನ್ನು ಮೀರದಂತೆ ಶೀರ್ಷಿಕೆ ೦೭ ರಿಂದ ೦೮ಕ್ಕೆ ಸೀಮಿತವಾಗಿರಲಿ. ಭಾಷಾಶೈಲಿಯ ವೈವಿಧ್ಯತೆ – ಪ್ರಾದೇಶಿಕ ಹಾಗೂ ಲಿಂಗ ಸಮಾನತೆಯೊಂದಿಗೆ ಎಲ್ಲ ಸಾಹಿತಿಗಳಿಗೆ ಅವಕಾಶವಿರಲಿ.

ಕತೆ/ನೀತಿ – ಪೌರಾಣಿಕ, ನಾಟಕ/ಸಂಭಾಷಣೆ ಸಾಧಕರ ಜೀವನಚರಿತ್ರೆ, ಮಾದಕವಸ್ತು ಬಹಿಷ್ಕಾರ, ಪರಿಸರ ಮಾಲಿನ್ಯ, ಸಾಮಾಜಿಕ ಸಮಸ್ಯೆಗಳು, ಅರಣ್ಯ ಸಂರಕ್ಷಣೆ, ಸಾಹಸ ಮೊದಲಾದ ವಿಷಯಗಳನ್ನು ಒಳಗೊಂಡಂತಿರಲಿ.

ಲೇಖಕರ ಪರಿಚಯ, ಆಶಯನುಡಿ ಹಾಗೂ ಅಭ್ಯಾಸ ಚಟುವಟಿಕೆಯ ಭಾಗಗಳನ್ನು ಹೊರತುಪಡಿಸಿ ಗದ್ಯಭಾಗ ೬೦ ಪುಟಗಳನ್ನು ಮೀರದಂತಿರಲಿ.

## ಪದ್ಯಭಾಗ

ಹೊಸಗನ್ನಡ, ನಡುಗನ್ನಡ ಮತ್ತು ಜನಪದ ಸಾಹಿತ್ಯದಿಂದ ಆಯ್ದ ಸುಮಾರು ೧೨೦ ಸಾಲುಗಳಷ್ಟು ಪದ್ಯಭಾಗಕ್ಕೆ ಅವಕಾಶವಿರಲಿ, ಕವಿ ಪರಿಚಯದೊಂದಿಗೆ ೦೭ ರಿಂದ ೦೮ ಶೀರ್ಷಿಕೆಗಳಲ್ಲಿ ಪದ್ಯ ಭಾಗವನ್ನು ಅಳವಡಿಸುವುದು.

| | | |
|---|---|---|
| ಹೊಸಗನ್ನಡ | – – – – | ಸುಮಾರು ೮೦ ಸಾಲು |
| ನಡುಗನ್ನಡ<br>(ವಚನ – ದಾಸರ ಪದ) | – – – – | ಸುಮಾರು ೨೫ ಸಾಲು |
| ಜನಪದ ಸಾಹಿತ್ಯ | – – – – | ಸುಮಾರು ೧೫ ಸಾಲು |
| | **ಒಟ್ಟು** | **೧೨೦ ಸಾಲು** |

ಕಂಠಪಾಠದಲ್ಲಿ ೦೫ ಪದ್ಯಗಳಿಗೆ ಅವಕಾಶವಿದ್ದು ಸುಮಾರು ೪೦ ಸಾಲುಗಳನ್ನು ಮೀರದಂತಿರಲಿ. ನಾಡಿನ ಎಲ್ಲಾ ಭಾಗದ ಸಾಹಿತಿಗಳಿಗೂ ಆದ್ಯತೆ ಇರಲಿ.

## ರಚನೆ

೧. **ಪ್ರಬಂಧ ರಚನಾ ವಿಧಾನದ ಹಂತ**

* ಪ್ರಬಂಧದ ವಿಧಗಳು
* ಪ್ರಬಂಧವು ಸಾಂಸ್ಕೃತಿಕ, ವೈಜ್ಞಾನಿಕ, ಸಾಮಾಜಿಕ ಸಮಸ್ಯೆಗಳು, ಹವ್ಯಾಸ, ಕ್ರೀಡೆ ನವ ಸಮಾಜ ನಿರ್ಮಾಣ, ಪ್ರಕೃತಿ ಸೌಂದರ್ಯ ಮೊದಲಾದ ಅಂಶಗಳನ್ನು ಒಳಗೊಂಡಿರಲಿ.
* ಸೃಜನಾತ್ಮಕವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸುವುದು.

೨. **ಗಾದೆ, ನುಡಿಗಟ್ಟುಗಳ ವಿಸ್ತರಣೆ**

೩. **ಪತ್ರಲೇಖನ**

ವೈಯಕ್ತಿಕ ಪತ್ರ

ಮನವಿ ಪತ್ರ

೪. **ಪಠ್ಯೇತರ ವಸ್ತುಗಳನ್ನು ಆಧರಿಸಿದ ಸಾರಾಂಶ ವಿಸ್ತಾರ**

## ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ

೧. ಜೋಡಿಪದ, ದ್ವಿರುಕ್ತಿ, ಅನುಕರಣಾವ್ಯಯಗಳ ಪರಿಚಯ.

೨. ಗ್ರಾಂಥಿಕ ರೂಪ – ಆಡುನುಡಿ

೩. ಕ್ರಿಯಾಪದದ ವಿಧಗಳು – ಸಕರ್ಮಕ – ಅಕರ್ಮಕ ಧಾತುಗಳು

೪. ವಾಚಕಗಳು

೫. ಕಾಲುಗಳು – ಕಾಲಪಲ್ಲಟ

೬. ವಿಭಕ್ತಿ

೭. ಸಂಧಿಗಳು – ಪುನರಾವರ್ತನೆ, ಸವರ್ಣದೀರ್ಘ, ಗುಣ, ವೃದ್ಧಿಸಂಧಿ

೮. ಪದಗಳು – ದೇಶ್ಯ – ಅನ್ಯದೇಶ್ಯ

ಪಠ್ಯಪುಸ್ತಕವನ್ನಾಧರಿಸಿದ **ಅರ್ಥಸಹಿತ ಪದಕೋಶಿ** – ಅಕಾರಾದಿ ಪದಗಳ ಸಂಖ್ಯೆ ಸುಮಾರು **೩೦೦** ಇರಲಿ

ಪಠ್ಯಪುಸ್ತಕ **ಗದ್ಯ–ಪದ್ಯ, ಭಾಷಾಭ್ಯಾಸವೂ** ಸೇರಿದಂತೆ ಒಟ್ಟು **೧೦೦** ಪುಟಗಳಿರಲಿ

# ದ್ವಿತೀಯ ಭಾಷೆ – ಕನ್ನಡ

**೧೦ನೆಯ ತರಗತಿ**

[ವಾರಕ್ಕೆ ೦೫ ಅವಧಿಯಂತೆ ಒಟ್ಟು ೧೭೫ ಅವಧಿ]

## ಗದ್ಯಭಾಗ

ಸರಳವೂ ಸುಲಭವೂ ಆದ ಗದ್ಯಭಾಗಗಳಿಗೆ ಹೆಚ್ಚಿನ ಅವಕಾಶವಿರಲಿ. ಪಾಠಗಳ ಸಂಖ್ಯೆ ೦೮ನ್ನು ಮೀರದಂತಿರಲಿ. ಪ್ರತಿಪಾಠವೂ ೦೪ ಪುಟಗಳಿಗಿಂತ ಹೆಚ್ಚು ಇರಬಾರದು. ಪಾಠಗಳ ಆಯ್ಕೆಯಲ್ಲಿ ಪ್ರಾದೇಶಿಕತೆ, ಲಿಂಗಸಮಾನತೆ ಹಾಗೂ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಒಳಗೊಂಡಿರಬೇಕು.

ಜೀವನಚಿತ್ರ/ಆತ್ಮಕಥನ, ಸಣ್ಣಕತೆ (ಶಿಷ್ಟ/ಜನಪದ), ಪ್ರಬಂಧ, ಸಾಹಸ, ಪೌರಾಣಿಕ/ನೀತಿಕತೆ, ಐತಿಹಾಸಿಕ/ಚಾರಿತ್ರ್ಯ ನಿರ್ಮಾಪಕರ ದೃಷ್ಟಾಂತ, ವೈಜ್ಞಾನಿಕ ಅಂಶ, ಹಾಸ್ಯಸಾಹಿತ್ಯ ಮೊದಲಾದ ಅಂಶಗಳನ್ನು ಒಳಗೊಂಡಂತೆ ಹೊಸಗನ್ನಡ ಸಾಹಿತ್ಯ ಹೆಚ್ಚಿನ ಪ್ರಮಾಣದಲ್ಲಿರಲಿ. ನಡುಗನ್ನಡ ಗದ್ಯ ಭಾಗಕ್ಕೆ ಅವಕಾಶವಿದ್ದು ಒಂದು ಗದ್ಯಪಾಠವನ್ನು ಅಳವಡಿಸಬಹುದು. ಆಯ್ಕೆ ಮಕ್ಕಳ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿರಬೇಕು. ಲೇಖಕರ ಪರಿಚಯ, ಪಾಠದ ಆಶಯ, ಅಭ್ಯಾಸ ಚಟುವಟಿಕೆಯ ಭಾಗಗಳನ್ನು ಹೊರತುಪಡಿಸಿ ಸುಮಾರು ೭೦ ಪುಟಗಳ ಮಿತಿಯಲ್ಲಿರಲಿ. ನಾಡಿನ ಎಲ್ಲಾ ಭಾಗದ ಲೇಖಕರಿಗೆ ಅವಕಾಶ ಒದಗಿಸುವುದು.

## ಪದ್ಯಭಾಗ

ಹೊಸಗನ್ನಡ, ನಡುಗನ್ನಡ, ಜನಪದ ಸಾಹಿತ್ಯವನ್ನು ಒಳಗೊಂಡಂತೆ ಸುಮಾರು ೧೫೦ ಸಾಲುಗಳಿದ್ದು ೦೮ ಶೀರ್ಷಿಕೆಗಳಲ್ಲಿ ಕವಿ ಪರಿಚಯ ಸಹಿತ ಅಳವಡಿಸುವುದು.

| | | |
|---|---|---|
| ಹೊಸಗನ್ನಡ | – – – – | ಸುಮಾರು ೯೦ ಸಾಲು |
| ನಡುಗನ್ನಡ | – – – – | ಸುಮಾರು ೪೦ ಸಾಲು |
| (ಶಿವಶರಣರ ವಚನ / ಸರ್ವಜ್ಞನ ವಚನ, ಕೀರ್ತನೆ, ಷಟ್ಪದಿ) | | |
| ಜನಪದಗೀತೆ / ರಂಗಗೀತೆ | – – – – | ಸುಮಾರು ೨೦ ಸಾಲು |
| | **ಒಟ್ಟು** | **೧೫೦ ಸಾಲು** |

ಕಂಠಪಾಠಕ್ಕೆ ೦೫ ಪದ್ಯಗಳಿಗೆ ಅವಕಾಶವಿದ್ದು ಸುಮಾರು ೫೦ ಸಾಲುಗಳನ್ನು ಮೀರದಂತಿರಲಿ.

**ಸೂಚನೆ**

ನಾಡಿನ ಎಲ್ಲಾ ಭಾಗದ ಕವಿ–ಕವಯತ್ರಿಯರಿಗೆ ಮತ್ತು ಸಾಹಿತ್ಯ ಪ್ರಕಾರಗಳಿಗೆ ಅವಕಾಶವಿರಲಿ.

## ರಚನೆ

**ಪತ್ರಲೇಖನ** – ವೈಯಕ್ತಿಕ ಪತ್ರ, ಮನವಿ ಪತ್ರ

**ಪ್ರಬಂಧ** – ರಚನಾ ವಿಧಾನ

ಸಾಮಾಜಿಕ, ಆರ್ಥಿಕ ಸಮಸ್ಯೆ, ಸಾಂಸ್ಕೃತಿಕ ಮತ್ತು ವೈಜ್ಞಾನಿಕ ವಿಷಯವನ್ನೊಳಗೊಂಡ ಪ್ರಬಂಧ ಜ್ವಲಂತ ಸಮಸ್ಯೆ, ಹವ್ಯಾಸ, ಕ್ರೀಡೆ, ಜನಪದ ಸಾಹಿತ್ಯ ಮತ್ತು ಕಲೆ, ರಾಷ್ಟ್ರೀಯ ಹಬ್ಬ, ಭಾವೈಕ್ಯತೆ ಮತ್ತು

ಸಮೂಹ ಮಾಧ್ಯಮ ಮೊದಲಾದ ವಿಷಯವನ್ನೊಳಗೊಂಡ ಪ್ರಬಂಧ ರಚನೆಗೆ ಅವಕಾಶವಿರಲಿ. ಅಭ್ಯಾಸಕ್ಕಾಗಿ ವರ್ಣನೆ ಮತ್ತು ವಿವರಣೆಯನ್ನೊಳಗೊಂಡ ಸೃಜನಶೀಲ ಪ್ರಬಂಧಗಳಿಗೆ ಅವಕಾಶವಿರಲಿ.

**೩. ಗಾದೆ ಮತ್ತು ನುಡಿಗಟ್ಟು ವಿಸ್ತರಣೆ**

ಪಠ್ಯ ಮತ್ತು ಪಠ್ಯೇತರ ಕಾವ್ಯ ಭಾಗಗಳ ಸಾರಾಂಶ ವಿಸ್ತಾರಕ್ಕೆ ಅವಕಾಶ ನೀಡುವುದು

**೪. ಛಂದಸ್ಸು**

ಮಾತ್ರಾಗಣದ ಪರಿಚಯ – ರಚನಾತ್ಮಕವಾಗಿ ದೃಢೀಕರಣ

ಷಟ್ಪದಿ – ವಿಧಗಳು : ಲಕ್ಷ್ಯಪದ್ಯದ ಪ್ರಯೋಗ

## ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ

ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ಬೋಧನಾ ಕ್ರಮವನ್ನು ಅಳವಡಿಸಿದ್ದು ಭಾಷಾಂಶ ಬೋಧನೆಗೆ ಪ್ರತ್ಯೇಕ ಅವಧಿ ಇರುವುದಿಲ್ಲ. ಒಟ್ಟಾರೆ ಭಾಷಾಂಶ ಭಾಗವನ್ನು ಪ್ರತಿಪಾಠಗಳ ಅಭ್ಯಾಸ ಭಾಗದಲ್ಲಿ ವಿತರಿಸಿದ್ದು, ಉದಾಹರಣೆಗಳಿಂದ ಸುಲಭಗ್ರಾಹ್ಯವಾಗುವಂತೆ ಕಲಿಸುವುದು ಅಗತ್ಯ. ಪದ್ಯಭಾಗದಲ್ಲಿ ವಿಶೇಷವಾಗಿ ಅಲಂಕಾರ ಮತ್ತು ಛಂದಸ್ಸುಗಳ ಕಲಿಕೆ ಮತ್ತು ಕಲಿತ ವಿಷಯಗಳ ದೃಢೀಕರಣಕ್ಕೆ ಅವಕಾಶವಿರಲಿ.

| | | |
|---|---|---|
| ೧. ವಿಭಕ್ತಿ | – | ವಿಭಕ್ತಿ ಪಲ್ಲಟ |
| ೨. ಕಾಲ | – | ಕಾಲಪಲ್ಲಟ |
| ೩. ಸರ್ವನಾಮ | – | ವಿಧಗಳು |
| ೪. ವಾಚಕಗಳು | – | ಗುಣವಾಚಕ, ಸಂಖ್ಯಾವಾಚಕ, ದಿಗ್ವಾಚಕ |
| ೫. ಸಂಧಿಗಳು | – | ಪುನರಾವರ್ತನೆಯೊಂದಿಗೆ ಸವರ್ಣದೀರ್ಘ, ಗುಣ, ವೃದ್ಧಿ, ಯಣ್.... ಇತ್ಯಾದಿ |
| ೬. ಕ್ರಿಯಾಪದ | – | ಧಾತು, ದ್ವಿರುಕ್ತಿ, ಜೋಡುನುಡಿ, ಅನುಕರಣಾವ್ಯಯಗಳ ಪರಿಚಯ |
| | – | ಪ್ರಯೋಗ |
| ೭. ಸಮಾಸ | – | ಪರಿಚಯ |
| ೮. ಅಲಂಕಾರ | – | ಉಪಮಾ, ರೂಪಕ |

ಪಠ್ಯಪುಸ್ತಕವನ್ನಾಧರಿಸಿದ **ಅರ್ಥಸಹಿತ ಪದಕೋಶ** – ಅಕಾರಾದಿ ಪದಗಳ ಸಂಖ್ಯೆ ಸುಮಾರು **೪೦೦** ಇರಲಿ.

ಪಠ್ಯಪುಸ್ತಕ **ಗದ್ಯ–ಪದ್ಯ ಭಾಷಾಭ್ಯಾಸವೂ** ಸೇರಿದಂತೆ ಒಟ್ಟು **೧೨೦** ಪುಟಗಳಿರಲಿ.

# ತೃತೀಯ ಭಾಷೆ – ಕನ್ನಡ

(೮, ೯ ಮತ್ತು ೧೦ನೆಯ ತರಗತಿ)

**ಪ್ರಸ್ತಾವನೆ**

ಕನ್ನಡ, ಕರ್ನಾಟಕದ ರಾಜ್ಯ ಭಾಷೆ ; ಅನೇಕರ ಮಾತೃಭಾಷೆಯೂ ಹೌದು. ನಾಡಿನ ಸಾಂಸ್ಕೃತಿಕ ಸ್ವರೂಪವೇ ಕನ್ನಡ. ಇಲ್ಲಿ ನೆಲೆಸಿರುವ ಜನರೆಲ್ಲ ಕನ್ನಡ ಭಾಷೆಯನ್ನು ಬಲ್ಲವರಾದರೆ, ಇಡೀ ರಾಜ್ಯದ ಜನತೆ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದಿಂದ ಬಾಳಲು ಅನುಕೂಲವಾಗುತ್ತದೆ. ಆದುದರಿಂದ ಕನ್ನಡ ಮಾತೃಭಾಷೆ ಅಲ್ಲದವರು ಸಹ, ಕನ್ನಡವನ್ನು ಕಲಿಯುವುದು ಅನಿವಾರ್ಯ ಹಾಗೂ ಅತ್ಯಗತ್ಯ. ಇಂಥವರು ಕನ್ನಡವನ್ನು ಪ್ರಥಮ ಭಾಷೆಯಾಗಿ ಅಧ್ಯಯನ ಮಾಡುವುದಾದರೆ ರಾಜ್ಯಭಾಷಾ ಮುಖ್ಯ ವಾಹಿನಿಗೆ ಬರುವುದರಲ್ಲಿ ಸಂದೇಹವಿಲ್ಲ. ಕಾರಣಾಂತರದಿಂದ ಅದು ಸಾಧ್ಯವಾಗದಿದ್ದಾಗ ಸರಳ, ಸುಲಭವಾಗಿ ತೃತೀಯ ಭಾಷೆಯನ್ನಾಗಿಯಾದರೂ ಅಭ್ಯಸಿಸಬೇಕು.

ಸಂಕೋಚವಿಲ್ಲದಂತೆ ಸಹಜವಾಗಿ ಕನ್ನಡದಲ್ಲಿ ವ್ಯವಹರಿಸಲು ಶಕ್ತರಾಗುವಂತೆ ಮಾಡುವ ಉದ್ದೇಶದಿಂದ ಪಠ್ಯವಸ್ತುವನ್ನು ತಯಾರಿಸಿದೆ. ಕನ್ನಡ ಭಾಷೆ – ಸಾಹಿತ್ಯದಲ್ಲಿ ಆಸಕ್ತಿ ಮೂಡುವಂತೆಯೂ ಆಲಿಸುವ, ಗ್ರಹಿಸುವ, ಮಾತನಾಡುವ, ಓದುವ, ಬರೆಯುವ ಕೌಶಲವನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಈ ಪಠ್ಯವಸ್ತುವಿಗೆ ಆದ್ಯತೆ ನೀಡಿದೆ.

ತೃತೀಯ ಭಾಷೆಯ ಪಠ್ಯವಸ್ತು ಕಲಿಕೆಯ ದೃಷ್ಟಿಯಿಂದ ಸುಲಭವೂ ಸರಳವೂ ಆಗಿರುವುದು ಅಗತ್ಯ. ಕನ್ನಡ ಭಾಷಾ ಪರಿಸರದಲ್ಲಿ ಬೆಳೆದ ಮಕ್ಕಳೊಂದಿಗೆ ಇದುವರೆಗೆ ಕನ್ನಡ ಪರಿಸರದ ಅರಿವೇ ಇರದ ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕಾದ ಕಾರಣ ಪಠ್ಯ ಹೊರೆಯೆನಿಸದಂತೆ ಸರಳವೂ ಆಕರ್ಷಕವೂ ಆದ ಗದ್ಯ–ಪದ್ಯಗಳ ಆಯ್ಕೆ ಇರಲಿ.

**ಆಶಯ**

* ಕನ್ನಡ ಭಾಷಾ ಪಠ್ಯಪುಸ್ತಕ ಸರಳ, ಸುಲಭ ಹಾಗೂ ಆಕರ್ಷಣೀಯವಾಗಿದ್ದು ನಾಡು–ನುಡಿಯ ಹಿರಿಮೆಯನ್ನು ಅರಿಯುವಂತಿರಲಿ.
* ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಅಭಿರುಚಿಯನ್ನು ಬೆಳೆಸಿಕೊಳ್ಳುವಂತಿರಲಿ.
* ಸಾಮಾಜಿಕ, ಸಾಂಸ್ಕೃತಿಕ, ವ್ಯಾವಹಾರಿಕ, ವೈಜ್ಞಾನಿಕ ಪರಿಸರಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವಂತಿರಲಿ.
* ಕನ್ನಡದ ಸರಳ ರಚನೆಗಳನ್ನು ಓದಿ ಅರ್ಥೈಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವಂತಿರಲಿ.
* ಕನ್ನಡ ಭಾಷೆಯಲ್ಲಿ ದೋಷರಹಿತ, ಕ್ರಮಬದ್ಧ ಹಾಗೂ ಆತ್ಮವಿಶ್ವಾಸದಿಂದ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳವಂತಿರಲಿ.
* ಕನ್ನಡದ ನುಡಿಗಟ್ಟು, ಗಾದೆ ಹಾಗೂ ಪರಿಕಲ್ಪನೆಗಳನ್ನು ಸಂದರ್ಭಾನುಸಾರ ಅರ್ಥವತ್ತಾಗಿ ಪ್ರಯೋಗಿಸುವ ಸಾಮರ್ಥ್ಯವನ್ನು ಬೆಳೆಸುವುದು.
* ಸಾಹಿತ್ಯದ ವಿವಿಧ ಪ್ರಕಾರಗಳ ಪರಿಚಯದೊಂದಿಗೆ ರಸಾಸ್ವಾದನೆಯ ಮನೋಭಾವವನ್ನು ಬೆಳೆಸುವುದು.
* ಕನ್ನಡ ಭಾಷೆಯ ಭಾಷಾಂಶಗಳನ್ನು ಅರಿತು ಬಳಸುವುದನ್ನು ಕಲಿಸುವುದು.

**ಉದ್ದೇಶ**

೧. ಆಲಿಸುವ, ಗ್ರಹಿಸುವ, ನಿರರ್ಗಳ ಹಾಗೂ ಸ್ಪಷ್ಟವಾಗಿ ಸ್ವರಭಾರದೊಂದಿಗೆ, ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.

೨. ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ, ಚಿಂತನೆ ಮತ್ತು ಆನಂದಕ್ಕಾಗಿ ಸ್ವತಂತ್ರವಾಗಿ ಓದಲು ಸಮರ್ಥರಾಗುವಂತೆ ಮಾಡುವುದು.

೩. ಪದಭಂಡಾರವನ್ನು ಹೆಚ್ಚಿಸಿಕೊಂಡು, ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯಬಂಧಗಳನ್ನು ಅರ್ಥ ಮಾಡಿಕೊಳ್ಳುವುದು.

೪. ಸೃಜನಶೀಲ ಅಭಿವ್ಯಕ್ತಿ (ಮೌಖಿಕ – ಲಿಖಿತ) ಸಾಮರ್ಥ್ಯವನ್ನು ಬೆಳೆಸುವುದು.

೫. ಭಾಷೆಯನ್ನು ದೋಷರಹಿತ ಮತ್ತು ಪರಿಣಾಮಕಾರಿಯಾಗಿ ಬಳಸುವ ಪ್ರೌಢಿಮೆಯನ್ನು ಬೆಳೆಸುವುದು.

೬. ಸೌಂದರ್ಯ ಪ್ರಜ್ಞೆ, ಕಲ್ಪನೆ ಮತ್ತು ಸೃಜನಾತ್ಮಕ ಭಾವನೆಗಳನ್ನು ಜೀವಂತವಾಗಿರಿಸುವುದು.

೭. ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆತ್ಮೀಯ ಅಭಿಮಾನವನ್ನು ವೃದ್ಧಿಗೊಳಿಸುವುದು.

೮. ಕೃತಿ–ಕರ್ತೃವಿನ ವಿಶಿಷ್ಟ ಪರಿಚಯವಾಗುವ ರೀತಿಯಲ್ಲಿ ಸಾಹಿತ್ಯದ ಮುಖ್ಯ ಪ್ರಕಾರಗಳನ್ನು ಪರಿಚಯಿಸುವುದು.

೯. ರಾಷ್ಟ್ರೀಯ ಪ್ರಜ್ಞೆ, ಪ್ರಜಾಪ್ರಭುತ್ವ ಹಾಗೂ ಜೀವನ ಮೌಲ್ಯಗಳನ್ನು ಮುಖ್ಯವಾಗಿ ಗಮನಿಸುವುದು.

೧೦. ಲಿಂಗಸಮಾನತೆ, ಜಾತ್ಯತೀತತೆ, ವಿಶ್ವಶಾಂತಿ, ಸಹಬಾಳ್ವೆ, ಸ್ವಾವಲಂಬನೆ, ಆತ್ಮಗೌರವ ಮೊದಲಾದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಪ್ರೇರೇಪಿಸುವುದು.

೧೧. ಪರಿಸರ ಸಂರಕ್ಷಣೆ, ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸಾಹಿತ್ಯದ ಮೂಲಕ ಪರಿಚಯಿಸುವುದು.

೧೨. ಸಮಕಾಲೀನ ಸಮಸ್ಯೆಗಳನ್ನು ಕುರಿತು ಚಿಂತಿಸಿ ಕಾರಣ ಮತ್ತು ಪರಿಹಾರವನ್ನು ಹುಡುಕುವ ಸಾಮರ್ಥ್ಯವನ್ನು ಬೆಳೆಸುವುದು.

೧೩. ಮಹಿಳೆ ಮತ್ತು ಮಕ್ಕಳ ಹಕ್ಕುಗಳನ್ನು ಅರಿಯುವ ಮತ್ತು ಸೌಲಭ್ಯಗಳನ್ನು ಪಡೆಯುವ ಸಾಮರ್ಥ್ಯವನ್ನು ಬೆಳೆಸುವುದು.

೧೪. ಗ್ರಾಮೀಣ ಜೀವನ ಪ್ರಾದೇಶಿಕತೆ ಹಾಗೂ ಕಲೆಗಳ ಬಗ್ಗೆ ಅರಿವು ಮೂಡಿಸುವುದು.

೧೫. ಪಠ್ಯಪುಸ್ತಕದಲ್ಲಿ ಬರುವ ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವುದು.

೧೬. ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ, ಅಲಂಕಾರ ಮತ್ತು ಛಂದೋ ಪ್ರಕಾರಗಳನ್ನು ಸರಳವಾಗಿ ಪರಿಚಯಿಸುವುದು.

೧೭. ಭಾಷೆಯ ಸ್ಪಷ್ಟತೆ ಹಾಗೂ ತಾತ್ವಿಕವಾಗಿ ಗ್ರಹಿಸುವ ಹಿನ್ನೆಲೆಯಲ್ಲಿ ಭಾಷಾಂಶಗಳು ಛಂದಸ್ಸು, ಅಲಂಕಾರಗಳನ್ನು ಆಯಾ ಪಾಠ ಬೋಧನಾ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ ಕಲಿಸುವುದು.

# ತೃತೀಯ ಭಾಷೆ – ಕನ್ನಡ

**೮ನೆಯ ತರಗತಿ**

(ವಾರಕ್ಕೆ ೦೪ ಅವಧಿಯಂತೆ ೧೪೦ ಅವಧಿ)

## ಗದ್ಯಭಾಗ

* ಸರಳವೂ ಸುಲಭವೂ ಆದ ಪ್ರಕಾರಗಳಿಗೆ ಆಯ್ಕೆಯಲ್ಲಿ ಆದ್ಯತೆ ನೀಡಬೇಕು.
* ಪ್ರತಿಪಾಠವೂ ೦೨ ರಿಂದ ೦೩ ಪುಟಗಳನ್ನು ಮೀರಬಾರದು.
* ಶೀರ್ಷಿಕೆಗಳು ೦೭ ರಿಂದ ೦೮ರ ಸಂಖ್ಯೆಯನ್ನು ಮೀರದಿರಲಿ.
* ಭಾಷಾಶೈಲಿಯ ವೈವಿಧ್ಯತೆಯೊಂದಿಗೆ ಪ್ರಾದೇಶಿಕತೆ, ಲಿಂಗಸಮಾನತೆಯ ಸಾಹಿತ್ಯ ಪ್ರಕಾರಗಳಿಗೆ ಅವಕಾಶವಿರಲಿ. ವಿಶೇಷವಾಗಿ ಸಣ್ಣಕತೆ, ಸಾಹಸ, ಜೀವನಚರಿತ್ರೆ, ಸಂಭಾಷಣಾ ಭಾಗಗಳು, ಲಲಿತಪ್ರಬಂಧದ ತುಣುಕು, ಪ್ರೇಕ್ಷಣೀಯಸ್ಥಳದ ಪರಿಚಯ. ಕ್ರೀಡೆ ಮೊದಲಾದ ಅಂಶಗಳನ್ನು ಒಳಗೊಂಡಿರಬೇಕು. ಆಯ್ಕೆಯಲ್ಲಿ ಹೊಸಗನ್ನಡದ ಸಾಹಿತ್ಯ ಪ್ರಕಾರಗಳನ್ನು ಮಾತ್ರ ಪರಿಗಣಿಸುವುದು.

೧. ನಾಡಿನ ಎಲ್ಲಾ ಭಾಗದ ಲೇಖಕರಿಗೂ ಅವಕಾಶವಿರಲಿ.

೨. ಲೇಖಕರ ಪರಿಚಯ, ಅಭ್ಯಾಸ ಚಟುವಟಿಕೆಯ ಭಾಗಗಳನ್ನು ಹೊರತುಪಡಿಸಿ ಸುಮಾರು ೪೦ ಪುಟಗಳಷ್ಟು ಮಿತಿಯಲ್ಲಿರತಕ್ಕದ್ದು.

## ಪದ್ಯಭಾಗ

ಆಧುನಿಕ ಕನ್ನಡ ಮತ್ತು ಜನಪದ ಸಾಹಿತ್ಯದಿಂದ ಆಯ್ದ ಸುಮಾರು ೬೦ ಸಾಲುಗಳಷ್ಟು ಭಾಗಗಳು ಇರತಕ್ಕದ್ದು. ೦೬ ರಿಂದ ೦೭ ಶೀರ್ಷಿಕೆಗಳಲ್ಲಿ ಕಾವ್ಯಭಾಗವನ್ನು ಕವಿಪರಿಚಯ ಸಹಿತ ಅಳವಡಿಸುವುದು.

| | | |
|---|---|---|
| ಜನಪದ ಗೀತೆ | – – – – | ಸುಮಾರು ೧೫ ಸಾಲು |
| ಆಧುನಿಕ ಕನ್ನಡ | – – – – | ಸುಮಾರು ೪೫ ಸಾಲು |
| | **ಒಟ್ಟು** | **೬೦ ಸಾಲು** |

ಕಂಠಪಾಠಕ್ಕೆ ನಾಲ್ಕು ಅಥವಾ ಐದು ಪದ್ಯಗಳಿಗೆ ಅವಕಾಶವಿದ್ದು, ಒಟ್ಟು ೨೫ ಸಾಲನ್ನು ಮೀರದಿರಲಿ.

**ಸೂಚನೆ**

೧. ಪ್ರಾದೇಶಿಕವಾಗಿ ನಾಡಿನ ಎಲ್ಲಾ ಭಾಗದ ಕವಿ–ಕವಯತ್ರಿಯರಿಗೆ ಸಮಾನ ಅವಕಾಶವಿರಲಿ.

೨. ಶೀರ್ಷಿಕೆಯ ದೃಷ್ಟಿಯಿಂದ ಗದ್ಯಪಾಠಗಳ ಸಂಖ್ಯೆಗೆ ಪದ್ಯಪಾಠಗಳ ಸಂಖ್ಯೆ ಸಮನಾಗಿರಲಿ.

## ರಚನೆ

**೧. ಪ್ರಬಂಧಗಳ ಸ್ವರೂಪ ಮತ್ತು ಲಕ್ಷಣ**

**ರಚನಾಕ್ರಮ**

೧. ವಾಕ್ಯರಚನೆ

೨. ವಾಕ್ಯವೃಂದ

೩. ಸರಳ ಪ್ರಬಂಧಗಳ ನಿರೂಪಣೆ

೪. ಕೇಳಿದ ಮತ್ತು ನೋಡಿದ ಘಟನೆಯನ್ನು ದಾಖಲಿಸುವುದು

**೨. ಪತ್ರಲೇಖನ**

ರಚನಾ ವಿಧಾನ

ಪತ್ರ ರಚನೆಯ ವಿವಿಧ ಹಂತಗಳು

(೧) ರಜೆಯ ಪತ್ರ (೨) ವೈಯಕ್ತಿಕ ಪತ್ರಲೇಖನ

**೩. ಪಠ್ಯ ಪುಸ್ತಕದಲ್ಲಿನ ಆಯ್ದ ಪದ್ಯಗಳ ಭಾವಾರ್ಥ**

**೪. ಸ್ವಂತ ವಾಕ್ಯಗಳ ರಚನೆ**

ಉಕಲೇಖನ

ಅನುಭವಗಳ ದಾಖಲೆ

ಗಾದೆ ಮಾತಿನ ವಿಸ್ತರಣೆ

## ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ

೧. ವರ್ಣಮಾಲೆಯ ಪರಿಚಯ

೨. ಗುಣಿತಾಕ್ಷರ

೩. ಸಂಯುಕ್ತಾಕ್ಷರ

೪. ನಾಮಪದ – ವಿಧಗಳು

೫. ವಚನ

೬. ಲಿಂಗ

೭. ಕಾಲ

೮. ಸಮಾನಾರ್ಥಕ ಪದ

೯. ವಿರುದ್ಧಾರ್ಥಕ ಪದ

೧೦. ಪದಗಳನ್ನು ಬಿಡಿಸಿ ಬರೆಯುವುದು – ಕೂಡಿಸಿ ಬರೆಯವುದು.

ಪಠ್ಯಪುಸ್ತಕವನ್ನಾಧರಿಸಿದ **ಅರ್ಥಸಹಿತ ಪದಕೋಶ** – ಅಕಾರಾದಿ ಪದಗಳ ಸಂಖ್ಯೆ ಸುಮಾರು **೧೫೦** ಪದಗಳಿರಲಿ

ಪಠ್ಯಪುಸ್ತಕ **ಗದ್ಯ–ಪದ್ಯ ಭಾಷಾಭ್ಯಾಸವೂ** ಸೇರಿದಂತೆ ಒಟ್ಟು **೭೦** ಪುಟಗಳಿರಲಿ.

# ತೃತೀಯ ಭಾಷೆ – ಕನ್ನಡ

**೯ನೆಯ ತರಗತಿ**

(ವಾರಕ್ಕೆ ೦೪ ಅವಧಿಯಂತೆ ೧೪೦ ಅವಧಿ)

## ಗದ್ಯಭಾಗ

ಸರಳವೂ ಸುಲಭವೂ ಆದ ಗದ್ಯಭಾಗಗಳಿಗೆ ಪ್ರಾಧಾನ್ಯತೆ ಇರಲಿ. ಶೀರ್ಷಿಕೆಗಳು ೦೭ ರಿಂದ ೦೮ ಸಂಖ್ಯೆಯನ್ನು ಮೀರಬಾರದು. ಪ್ರತಿಪಾಠವೂ ೦೩ ರಿಂದ ೦೪ ಪುಟಗಳ ವ್ಯಾಪ್ತಿಯನ್ನು ಮೀರದಂತಿರಲಿ. ಭಾಷಾಶೈಲಿಯ ವೈವಿಧ್ಯತೆಯಲ್ಲಿ ಪ್ರಾದೇಶಿಕತೆ, ಲಿಂಗಸಮಾನತೆ ಮತ್ತು ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಅವಕಾಶವಿರಲಿ.

ಸಣ್ಣಕತೆ, ಜೀವನಚಿತ್ರ/ಆತ್ಮಕಥನ, ಸಾಹಸ, ಸಂಭಾಷಣೆ, ಪ್ರಬಂಧ, ಹಾಸ್ಯಸಾಹಿತ್ಯ ಮೊದಲಾದ ಅಂಶಗಳನ್ನು ಒಳಗೊಂಡಂತೆ ಹೊಸಗನ್ನಡ ಸಾಹಿತ್ಯಕ್ಕೆ ಆದ್ಯತೆ ಇರಲಿ. ಗದ್ಯಭಾಗದ ಆಯ್ಕೆಯಲ್ಲಿ ಭಾಷೆ ಸರಳವಾಗಿದ್ದು, ವಿದ್ಯಾರ್ಥಿಗಳ ಕಲಿಕಾ ಮಟ್ಟಕ್ಕೆ ಅನುಗುಣವಾಗಿರಲಿ. ಲೇಖಕರ ಪರಿಚಯ, ಆಶಯ ಅಭ್ಯಾಸ ಚಟುವಟಿಕೆಯ ಭಾಗಗಳನ್ನು ಹೊರತುಪಡಿಸಿ ಸುಮಾರು ೫೦ ಪುಟಗಳ ಮಿತಿಯಲ್ಲಿರಲಿ. ಪ್ರಾದೇಶಿಕ ವೈವಿಧ್ಯತೆಯೊಂದಿಗೆ ನಾಡಿನ ಎಲ್ಲಾ ಭಾಗದ ಲೇಖಕರಿಗೂ ಅವಕಾಶ ಒದಗಿಸುವುದು.

## ಪದ್ಯಭಾಗ

ಆಧುನಿಕ ಕನ್ನಡ, ನಡುಗನ್ನಡ ಹಾಗೂ ಜನಪದ ಸಾಹಿತ್ಯದಿಂದ ಆಯ್ದ ಸುಮಾರು ೭೦ ಸಾಲುಗಳಷ್ಟು ಪದ್ಯಭಾಗಕ್ಕೆ ಅವಕಾಶವಿರಬೇಕು. ೦೭ ರಿಂದ ೦೮ ಶೀರ್ಷಿಕೆಗಳಲ್ಲಿ ಕಾವ್ಯಭಾಗವನ್ನು ಕವಿ ಪರಿಚಯ ಸಹಿತ ಅಳವಡಿಸುವುದು.

| | | |
|---|---|---|
| ಹೊಸಗನ್ನಡ | – – – – | ಸುಮಾರು ೫೦ ಸಾಲು |
| ನಡುಗನ್ನಡ (ವಚನ / ಕೀರ್ತನೆ) | – – – – | ಸುಮಾರು ೧೦ ಸಾಲು |
| ಜನಪದ ಸಾಹಿತ್ಯ | – – – – | ಸುಮಾರು ೧೦ ಸಾಲು |
| | **ಒಟ್ಟು** | **೭೦ ಸಾಲು** |

ಕಂಠಪಾಠಕ್ಕೆ ಐದು ಪದ್ಯಗಳಿಗೆ ಅವಕಾಶವಿದ್ದು, ಸುಮಾರು ೨೫ ಸಾಲನ್ನು ಮೀರದಂತಿರಲಿ.

**ಸೂಚನೆ**

೧. ನಾಡಿನ ಎಲ್ಲಾ ಭಾಗದ ಕವಿಗಳಿಗೆ, ಸಾಹಿತ್ಯ ಪ್ರಕಾರಗಳಿಗೆ ಅವಕಾಶವಿರಲಿ

೨. ಕವಯತ್ರಿಯರ ಕಾವ್ಯಭಾಗಕ್ಕೂ ಅವಕಾಶವಿರಲಿ.

## ರಚನೆ

೧. **ಪ್ರಬಂಧಗಳ ರಚನಾ ವಿಧಾನವನ್ನು ಪರಿಚಯಿಸುವುದು**

ಪ್ರಬಂಧದ ಹಂತಗಳು

ಪ್ರಬಂಧ ರಚನೆ

ಸಾಮಾನ್ಯ ವಿಷಯಗಳನ್ನು ಕುರಿತು ಪ್ರಬಂಧ ರಚಿಸುವುದು

೨. **ಗಾದೆ – ನುಡಿಗಟ್ಟುಗಳ ಅಭಿಪ್ರಾಯ ವಿಸ್ತರಣೆ**

೩. **ಅನುಭವಗಳ ದಾಖಲೆ**

ಪ್ರವಾಸಿ ಕ್ಷೇತ್ರಗಳ ವೀಕ್ಷಣೆಯನ್ನು ದಾಖಲಿಸುವುದು

೪. **ಪತ್ರಲೇಖನ**

ಪತ್ರರಚನೆಯ ಸಾಮಾನ್ಯ ಹಂತಗಳು

೧. ಅರ್ಜಿ

೨. ಮನವಿ / ಕೋರಿಕೆ ಪತ್ರಗಳು

೫. **ವಾಕ್ಯ ಪ್ರಭೇದಗಳನ್ನು ಅರಿಯುವುದು**

ಘಟನೆ / ಸಂದರ್ಭ / ವಸ್ತು / ವಿಷಯಗಳನ್ನು ಕುರಿತ ವಾಕ್ಯ ಖಂಡಿಕೆಯ ರಚನೆ

## ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ

೧. ವರ್ಣಮಾಲೆ – ಹಂತಗಳ ಪರಿಚಯ

೨. ಗುಣಿತಾಕ್ಷರದ – ರಚನಾ ವಿಧಾನ

೩. ಸಂಯುಕ್ತಾಕ್ಷರದ – ವಿಧಗಳು

೪. ವಾಕ್ಯರಚನೆ – ಕರ್ತೃ – ಕರ್ಮ – ಕ್ರಿಯಾಪದ

೫. ಪದಗಳು ಕನ್ನಡ – ಸಂಸ್ಕೃತ (ತತ್ಸಮ – ತದ್ಭವ)

೬. ಸಂಧಿ – ಲೋಪ, ಆಗಮ, ಆದೇಶ

೭. ನಾಮಪದದ ವಿಧಗಳು

೮. ದ್ವಿರುಕ್ತಿ, ಜೋಡುನುಡಿ, ಅನುಕರಣಾವ್ಯಯ

೯. ಗ್ರಾಂಥಿಕ ಪದಗಳು – ಆಡುಭಾಷೆಯ ಪದಗಳು

ಪಠ್ಯಪುಸ್ತಕವನ್ನಾಧರಿಸಿದ **ಅರ್ಥಸಹಿತ ಪದಕೋಶ** – ಅಕಾರಾದಿ ಪದಗಳ ಸಂಖ್ಯೆ ಸುಮಾರು **೨೦೦** ಇರಲಿ

ಪಠ್ಯಪುಸ್ತಕ **ಗದ್ಯ–ಪದ್ಯ ಭಾಷಾಭ್ಯಾಸವೂ** ಸೇರಿದಂತೆ ಒಟ್ಟು **೯೦** ಪುಟಗಳಿರಲಿ.

# ತೃತೀಯ ಭಾಷೆ : ಕನ್ನಡ

**೧೦ನೆಯ ತರಗತಿ**

(ವಾರಕ್ಕೆ ೪ ಅವಧಿಯಂತೆ ಒಟ್ಟು ೧೪೦ ಅವಧಿ)

## ಗದ್ಯಭಾಗ

ಗದ್ಯಭಾಗ ಸರಳವೂ ಸುಲಭವೂ ಆಗಿರಲಿ. ಪ್ರತಿ ಪಾಠವೂ ೩ ರಿಂದ ೪ ಪುಟಗಳ ವ್ಯಾಪ್ತಿಯನ್ನು ಮೀರದಿರಲಿ. ಪ್ರಾದೇಶಿಕತೆ, ಲಿಂಗಸಮಾನತೆ, ಸಾಹಿತ್ಯದ ವಿವಿಧ ಪ್ರಕಾರಗಳನ್ನೊಳಗೊಂಡಂತೆ ಎಲ್ಲಾ ಲೇಖಕರಿಗೆ ಅವಕಾಶವಿರಲಿ.

ಗದ್ಯದ ಶೀರ್ಷಿಕೆಗಳು ೦೭ ರಿಂದ ೦೮ ಸಂಖ್ಯೆಯನ್ನು ಮೀರಬಾರದು.

ಸಣ್ಣಕತೆ, ಸಾಹಸ, ಸಂಭಾಷಣೆ, ಜೀವನಚರಿತ್ರೆ, ಪ್ರವಾಸಕಥನ, ಹಾಸ್ಯಸಾಹಿತ್ಯ ಮೊದಲಾದ ಅಂಶಗಳನ್ನೊಳಗೊಂಡಿರಲಿ, ಲೇಖಕರ ಪರಿಚಯ. ಪಾಠದ ಆಶಯನುಡಿ ಹಾಗೂ ಅಭ್ಯಾಸ ಚಟುವಟಿಕೆಯನ್ನು ಹೊರತುಪಡಿಸಿ ಸುಮಾರು ೬೦ ಪುಟಗಳ ಮಿತಿಯಲ್ಲಿರಲಿ.

## ಪದ್ಯಭಾಗ

ಆಧುನಿಕ ಕನ್ನಡ, ನಡುಗನ್ನಡ (ವಚನ – ದಾಸಸಾಹಿತ್ಯ) ಜನಪದ ಹಾಗೂ ನೀತಿಯುಕ್ತ ಕಾವ್ಯಗಳಿಂದ ಕೂಡಿರಲಿ. ಕವಿಪರಿಚಯ ಸಹಿತ ೦೭ ಅಥವಾ ೦೮ ಶೀರ್ಷಿಕೆಗಳಿರಲಿ. ಸುಮಾರು ೭೫ ಸಾಲುಗಳನ್ನು ಮೀರದಂತಿರಲಿ.

| | | |
|---|---|---|
| ಹೊಸಗನ್ನಡ | – – – – | ಸುಮಾರು ೪೦ ಸಾಲು |
| ನಡುಗನ್ನಡ (ವಚನ, ದಾಸರಪದಗಳು) | – – – – | ಸುಮಾರು ೧೫ ಸಾಲು |
| ಜನಪದಸಾಹಿತ್ಯ | – – – – | ಸುಮಾರು ೧೫ ಸಾಲು |
| ಹಳಗನ್ನಡ | – – – – | ಸುಮಾರು ೧೦ ಸಾಲು |
| | **ಒಟ್ಟು** | **೮೦ ಸಾಲು** |

ಹಳಗನ್ನಡ ಸಾಹಿತ್ಯ ಸರಳ ಹಾಗೂ ಪರಿಚಯಾತ್ಮಕ ನೆಲೆಯಲ್ಲಿ ಕಾವ್ಯ ಭಾಗವನ್ನು ಆಯ್ಕೆ ಮಾಡಬೇಕು.

ಕಂಠಪಾಠಕ್ಕೆ ೦೬ ಪದ್ಯಗಳಿಗೆ ಅವಕಾಶವಿದ್ದು ನಡುಗನ್ನಡ ಮತ್ತು ಆಧುನಿಕ ಕನ್ನಡದಲ್ಲಿ ಗರಿಷ್ಠ ೩೦ ಸಾಲನ್ನು ಮೀರಬಾರದು.

## ರಚನೆ

೧. **ಪ್ರಬಂಧಗಳ ಸ್ವರೂಪವನ್ನು ಪರಿಚಯಿಸುವುದು**

* ಪ್ರಕೃತ ಸಮಸ್ಯೆಗಳು
* ರಾಷ್ಟ್ರೀಯ ಭಾವೈಕ್ಯತೆ
* ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಾಮಾನ್ಯ ವಿಷಯಗಳನ್ನು ಕುರಿತಂತೆ ಪ್ರಬಂಧ ರಚನೆಗೆ ಅವಕಾಶವಿರಲಿ

೨. **ಗಾದೆ–ನುಡಿಗಟ್ಟುಗಳ ವಿಸ್ತರಣೆ**
೩. **ಅಭಿಪ್ರಾಯ ಅಭಿವ್ಯಕ್ತಿ**
೪. **ಅನುಭವಗಳ ದಾಖಲೆ**
೫. **ಪತ್ರಲೇಖನ** – ವೈಯಕ್ತಿಕ ಪತ್ರ – ಮನವಿ ಪತ್ರ – ವರದಿ ರಚನೆ – ಸುತ್ತೋಲೆ
೬. **ಪಠ್ಯಪುಸ್ತಕದ ಆಯ್ದ ಪದ್ಯಗಳ ಭಾವಾರ್ಥ**

## ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ

೧. ವಾಕ್ಯರಚನಾ ವಿಧಾನ ಮತ್ತು ವಿಧಗಳು
೨. ಲೇಖನ ಚಿಹ್ನೆಗಳು
೩. ಪದಗಳು ಕನ್ನಡ – ಸಂಸ್ಕೃತ
೪. ವಿಭಕ್ತಿ ಪ್ರತ್ಯಯಗಳು
೫. ಕಾಲಗಳು – ವಿಧಗಳು
೬. ಕ್ರಿಯಾಪದ – ಧಾತು
೭. ಸಂಧಿ – ಸಮಾಸ – ಪರಿಚಯ
೮. ಅಲಂಕಾರ – ಉಪಮಾ – ರೂಪಕ

ಪಠಪುಸ್ತಕವನ್ನಾಧರಿಸಿದ **ಅರ್ಥಸಹಿತ ಪದಕೋಶ** – ಅಕಾರಾದಿ ಪದಗಳ ಸಂಖ್ಯೆ ಸುಮಾರು **೩೦೦** ಇರಲಿ.

ಪಠ್ಯಪುಸ್ತಕ **ಗದ್ಯ–ಪದ್ಯ, ಭಾಷಾಭ್ಯಾಸವೂ** ಸೇರಿದಂತೆ ಒಟ್ಟು ೧೧೦ ಪುಟಗಳಿರಲಿ.

**ಪ್ರಶ್ನೆಪತ್ರಿಕೆ ಅಂಕ ವಿತರಣೆ**

**ವಿಭಾಗಾನುಸಾರ**

**ಸಾಂಪ್ರದಾಯಿಕ ಪ್ರಶ್ನೆಗಳು**

**ಭಾಗ – ಎ**

**ಬಹು ಆಯ್ಕೆ ಪ್ರಶ್ನೆಗಳು**

ಗದ್ಯ : 16
ಪದ್ಯ : 14 } 50 ಅಂಕಗಳು
ವ್ಯಾಕರಣ, ಛಂದಸ್ಸು, ಅಲಂಕಾರ ಸೇರಿದಂತೆ : 20

50 ಅಂಕಗಳು

ಸೂಚನೆ : (ಕೃತಿ, ಕರ್ತೃ ವಿಚಾರ, ಗದ್ಯ ಮತ್ತು ಪದ್ಯಭಾಗಗಳಿಂದ ತಲಾ ಮೂರು ಪ್ರಶ್ನೆಗಳನ್ನು ಮಾತ್ರ ಕೇಳತಕ್ಕದ್ದು)

| | ಗದ್ಯ ಅಂಕ X ಪ್ರಶ್ನೆಗಳು | ಪದ್ಯ ಅಂಕ X ಪ್ರಶ್ನೆಗಳು | ಛಂದಸ್ಸು ಅಲಂಕಾರ | ವಾಕ್ಯರಚನೆ |
|---|---|---|---|---|
| 1. ಎರಡು ವಾಕ್ಯದ ಉತ್ತರಗಳು | 2X6 = 12 | 2X4 = 08 | – | – |
| 2. ಸಂದರ್ಭ | 2X4 = 08 | 2X4 = 08 | – | – |
| 3. ಛಂದಸ್ಸು | – | – | 3X1 = 03 | – |
| 4. ಅಲಂಕಾರ | – | – | 3X1 = 03 | – |
| 5. ಗಾದೆ | – | – | – | 3X1 = 03 |
| 6. ಕಂಠಪಾಠ | – | 4X1 = 04 | – | – |
| 7. ಸಾರಾಂಶ | – | 4X1 = 04 | – | – |
| 8. ದೀರ್ಘ ಉತ್ತರಗಳು–1 | 4X2 = 08 | 4X1 = 04 | – | – |
| 9. ದೀರ್ಘ ಉತ್ತರಗಳು–2 | – | – | – | 5X2 = 10 |

ಸೂಚನೆ : ಅಭ್ಯಾಸ ಭಾಗದಲ್ಲಿನ ಸಂದರ್ಭಗಳನ್ನೊಳಗೊಂಡಂತೆ ಪದ್ಯ ಭಾಗದಲ್ಲಿ ಬರುವ ಇತರೆ ಯೋಗ್ಯ ಸಂದರ್ಭಗಳನ್ನೂ ಸಹ ಕೇಳಬಹುದು.

**ಭಾಗ – ಬಿ**

ಭಾಗ – 'ಎ' ಮತ್ತು 'ಬಿ' ಗೆ ಸೇರಿದಂತೆ ವ್ಯಾಕರಣಾಂಶಗಳು
ಭಾಗ – ಎ : 20 ಅಂಕಗಳು

ಭಾಗ – ಬಿ : 06 ಅಂಕಗಳು

ಒಟ್ಟು : 26 ಅಂಕಗಳು

1. ವರ್ಣಮಾಲೆ
2. ನಾಮಪದ
3. ಸರ್ವನಾಮಪದ
4. ಕ್ರಿಯಾಪದಗಳು – ರೂಪಗಳು
5. ವಿಭಕ್ತಿ ಪ್ರತ್ಯಯಗಳು
6. ಕನ್ನಡ ಸಂಧಿಗಳು
7. ಸಂಸ್ಕೃತ ಸಂಧಿಗಳು
8. ತತ್ಸಮ – ತದ್ಭವಗಳು
9. ಅನ್ಯದೇಶೀಯಗಳು
10. ಹೊಸ ಗನ್ನಡ ರೂಪ
11. ಗ್ರಾಂಥಿಕ ರೂಪ
12. ಅವ್ಯಯ, ವಿಧಗಳು
13. ಸಮಾಸಗಳು
14. ಲೇಖನ ಚಿಹ್ನೆಗಳು
15. ವಾಕ್ಯ ಪ್ರಭೇದಗಳು
16. ಕಠಿಣ ಪದಗಳ ಅರ್ಥ
17. ದ್ವಿರುಕ್ತಿ
18. ನುಡಿಗಟ್ಟುಗಳು
19. ಕೃದಂತಗಳು
20. ತದ್ಧಿತಾಂತಗಳು
21. ಛಂದಸ್ಸು – ವಿಧಗಳು
22. ಅಲಂಕಾರ – ವಿಧಗಳು